ಸಂವಾದ

ಮೇ ೨೦೧೮ ರೂ. ೨೦

ಜೈ ಹೋ ಪ್ರಜಾಪ್ರಭುತ್ವ!

ಚುನಾವಣಾ ಪ್ರಣಾಳಿಕೆ

ಹಾವು ಏಣಿ ಆಟ!

ವೈಚಾರಿಕ ಶೂನ್ಯ
ತುಂಬುತ್ತಿರುವ ಸಂವಾದ ಕ್ಕೆ

ತುಂಬು ಹೃದಯದ
ಶುಭ ಹಾರೈಕೆಗಳು

ಶ್ರೀ ಎಸ್. ಸೋಮಶೇಖರ್,
ಗುತ್ತಿಗೆದಾರರು, ಮೈಸೂರ್

ಏಳಕ್ಕೆ ಕಾಲಿಟ್ಟ ಸಂವಾದ ಕ್ಕೆ

ಶುಭ ಹಾರೈಸುವವರು

ಶ್ರೀ ಸಿ. ಎಸ್. ರಾಜೇಂದ್ರ,
ಗುತ್ತಿಗೆದಾರರು, ಕೆ.ಆರ್.ಎಸ್

ಸಂವಾದ

ಮಾಸ ಪತ್ರಿಕೆ

ಸಂಪುಟ ೭ ಸಂಚಿಕೆ ೭
ಮೇ ೨೦೦೯

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
© Editorial: 9448048306
© Circulation: 080-23480278, 9945264687
e-mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೪
❑ ಅಂತರಂಗ ೦೫
❑ ಸಂಪಾದಕರೊಂದಿಗೆ ಸಂವಾದ
○ ಜಯಪ್ರಕಾಶ ಶೆಟ್ಟಿ ಎಚ್ ೦೬
○ ಡಿ.ಎಸ್ ನಾಗಭೂಷಣ ೦೭
❑ ಭಾವುಕತೆಯಿಂದ ಅನುಷ್ಠಾನದೆಡೆಗೆ
○ ಡಾ. ಅಪ್ಪಗೆರೆ ಸೋಮಶೇಖರ್ ೦೮
❑ ಧರ್ಮ, ಆಧ್ಯಾತ್ಮ, ಗಾಂಧೀ ಮಹಾತ್ಮ, ಜೈಹೋ ಪ್ರಜಾಪ್ರಭುತ್ವ !
○ ಮುಸ್ತಾಫಾ ಆತೂರು ೧೦
❑ ಪ್ರಜಾತಂತ್ರವನ್ನೇ ಸೋಲಿಸುವ ಚುನಾವಣೆಗಳು!!
○ ಶಿವಸುಂದರ್ ೧೪

❑ ಚುನಾವಣಾ ಪ್ರಣಾಳಿಕೆ : ಹಾವು ಏಣಿ ಆಟ!
○ ನಾ ದಿವಾಕರ ೧೮
❑ ಜಾತಿ ವ್ಯವಸ್ಥೆ ಮತ್ತು ರಾಜಕಾರಣ
○ ಡಾ. ಜೆ ಸೋಮಶೇಖರ್ ೨೪
❑ ಕಥೆ : ಕಿಚ್ಚು ಆರಲೇ ಇಲ್ಲ
○ ಎಸ್ ಬಿ ಜೋಗುರ ೨೮
❑ ಹೊಸ ಚಿಂತನೆಯ ನೆಲೆಗಟ್ಟು
○ ಡಾ. ಬಿ ಎಸ್ ಶಾರದ ೩೨
❑ ಅರವತ್ತು ವರ್ಷಗಳ ಪಾಪ
○ ನಾಡಿ ಬಂಗಾರಪೇಟೆ ೩೪

❑ ಬೌದ್ಧ ಸೌಂದರ್ಯ ಮೀಮಾಂಸೆ - ೯ ಅಲ್ಲಮಪ್ರಭುವಿನ ವಚನಗಳಲ್ಲಿ ಪ್ರಕ್ರಿಯಾ ಮೀಮಾಂಸೆ
○ ಡಾ. ಎಸ್. ನಟರಾಜ್ ಬೂದಾಳು ೩೮
❑ ಧರೆ ಹತ್ತಿ ಉರಿದರೆ... ೧೦ ಹಂಗಿನ ಅಭಿವೃದ್ಧಿಯ ಚಿತಾವಣೆ
○ ಡಾ. ಟಿ. ಆರ್ ಚಂದ್ರಶೇಖರ್ ೪೨
❑ ದಲಿತ್ ಡೈರಿ
○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
❑ ಬುದ್ಧಾಯಣ ೫೦
○ ಸಿ.ಎಚ್. ರಾಜಶೇಖರ್

ಕವನಗಳು : ❑ ಕಾಲ ಕಣ್ಣು ೧೭

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಮತದಾರರೇ ಪಕ್ಷಾಂತರ ನಿಷೇಧಿಸಲಿ

ಮಾನ್ಯ ಸಂಪಾದಕರಿಗೆ,

ಭಾರತದಲ್ಲಿ ಸುಮಾರು 800 ವಿವಿಧ ರಾಜಕೀಯ ರಾಷ್ಟ್ರ ಮಟ್ಟದ ಮತ್ತು ರಾಜ್ಯ ಮಟ್ಟದ ಪಕ್ಷಗಳು ರಚನೆಯಾಗಿದ್ದು ಯಾವುದೇ ಪಕ್ಷಕ್ಕೆ ತನ್ನದೇ ಆದ ನಿಖರ ಹಾಗೂ ಕಡ್ಡಾಯ ತತ್ವಸಿದ್ಧಾಂತಗಳಾಗಲಿ, ನೀತಿನಿಯಮಗಳೇ ಸಿಗಲಿ ಇಲ್ಲದೆ ಒಂದು ದಶಕದಿಂದಲೂ ಸದಾ ಪಕ್ಷಾಂತರ ನಡೆಯುತ್ತಿರುವುದು ಮತದಾರರಿಗೆ ಗೊತ್ತಿರುವ ವಿಷಯ ಸರಿಯಷ್ಟೆ.

ಮಾಜಿಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಸಂಸತ್ ಸದನದಲ್ಲಿ ಒಂದು ಮತದ ಅಂತರದಿಂದ ಸೋಲನ್ನು ಅನುಭವಿಸಿ ಬಿಜೆಪಿ ಸರ್ಕಾರ ಪತನವಾದ ಹಿನೆಲೆಯಲ್ಲಿ ನೀತಿಗೆಟ್ಟ ಪಕ್ಷಾಂತರಕ್ಕೆ ಮಹತ್ವ ಬಂದಿದೆ. ಇಂದು ಪಕ್ಷಾಂತರವನ್ನ ತಡೆಗಟ್ಟಲು ಯಾವುದೇ ಪಕ್ಷ ಮುಂದಾಗದೆ ನಿರಂತರ ಪಕ್ಷಾಂತರ ಮಾಡುವುದು ಒಂದು ರಾಜಕೀಯ ಪಿಡುಗಾಗಿ ರೂಪಗೊಂಡಿದೆ. ಇಂದಿಗೆ ಬೇಕಾಗಿರುವುದು ದ್ವಿಪಕ್ಷೀಯ ಮತದಾನ ಪದ್ಧತಿ. ಆದರೆ ರಾಜಕೀಯ ಭ್ರಷ್ಟಚಾರ ಜಾಸ್ತಿಯಾಗಿ ದ್ವಿಪಕ್ಷೀಯ ಆಡಳಿತಕ್ಕೆ ಅವಕಾಶ ಇಲ್ಲದೆ ರಾಜಕೀಯ ಪಕ್ಷಗಳ ಮುಖಂಡರುಗಳು ಚುನಾವಣೆಯಲ್ಲಿ ಮತದಾರರ್ಗನ್ನು ಬ್ಲಾಕ್ ಮೇಲ್ ಮಾಡಿ ಆಸೆಗಳನ್ನು, ಟೊಳ್ಳು ಭರವಸೆಗಳನ್ನು ಕೊಟ್ಟು ವಂಚಿಸುವ ವಿಧಾನಗಳನ್ನು ಅನುಸರಿಸುತ್ತ ಚುನಾವಣೆಯಲ್ಲಿ ಗೆಲ್ಲಬೇಕೆಂಬ ಪಕ್ಷಾಂತರ ಅಭ್ಯರ್ಥಿಗಳ ಕುತಂತ್ರಕ್ಕೆ ಮತದಾರರು ಮರುಳಾಗಬಾರದು.

ಇಂದಿನ ರಾಜಕೀಯ ಕ್ಲಿಷ್ಟ ಪರಿಸ್ಥಿತಿಯಲ್ಲಿ ಪಕ್ಷಾಂತರ ನಿಷೇಧ ಕಾನೂನಿಗಿಂತಲೂ ಮತದಾರರ ಹೃದಯ ಪರಿವರ್ತನೆಯಿಂದ ಸಾಧ್ಯ. ಮತದಾರನ ಒಂದು ಅಮೂಲ್ಯ ಓಟುವ್ಯಾಪಾರದ ಒಂದು ವಸ್ತುವಾಗಿರುವುದರಿಂದ ರಾಜಕೀಯ ಪಕ್ಷಗಳು ಖರೀದಿಸುವಂಥಹ ದುಸ್ಥಿತಿಗೆ ಇಳಿದಿದೆ.

ಕರ್ನಾಟಕಲ್ಲಿ 2008ನೇ ವಿಧಾನ ಸಭಾ ಚುನಾವಣೆ ನಂತರ ನಡೆದ ಉಪ ಚುನಾವಣೆ ಮತ್ತು ಲೋಕಸಭಾ ಚುನಾವಣೆಯಲ್ಲಿ ವಿವಿಧ ಪಕ್ಷಗಳು ಅಭ್ಯರ್ಥಿಗಳನ್ನ ಆಯ್ಕೆ ಮಾಡಲು ಅನುಸರಿಸಿದ ಕೆಟ್ಟ ಪಕ್ಷಾಂತರ ಪದ್ಧತಿ ಕಳೆದ 60 ವರ್ಷಗಳ ಯಾವುದೇ ಚುನಾವಣೆಯಲ್ಲಿ ಕಂಡರಿಯದ ಅನುಭವ ಮತದಾರರಿಗೆ ಈಗಾಗಲೇ ಆಗಿದೆ.

ಸ್ಪರ್ಧಿಸುತ್ತಿರುವ ಪಕ್ಷಾಂತರ ಅಭ್ಯರ್ಥಿಗಳು ಹೇಳುವುದೆಲ್ಲಾ ಅಪ್ಪಟಸುಳ್ಳು ಮತ್ತು ಮತದಾರರಿಗೆ ಕೊಡುವ ಟೊಳ್ಳು ಭರವಸೆಗಳು ಮಾತ್ರ ಎಂಬುವುದು ಈಗಾಗಲೇ ರೈತರಿಗೆ ಸಮರ್ಪಕ ಉಚಿತ ವಿದ್ಯುತ್ ಸರಬರಾಜು, 2ರೂ.ಗೆ 1ಕೆಜಿ ಅಕ್ಕಿ ಮಾರಾಟ, ಯುವಕ ನಿರುದ್ಯೋಗಿಗಳಿಗೆ ಮಾಸಿಕ ಭತ್ಯೆ ನೀಡುವುದು, ಅಗತ್ಯ ಆಹಾರ ಪದಾರ್ಥಗಳ ಹಾಗೂ ಅಗತ್ಯವಸ್ತುಗಳ ಬೆಲೆ ನಿಯಂತ್ರಣ ಮಾಡುವುದು, ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯ ನಿರ್ಮಾಣ ಮಾಡುವುದು, ಉತ್ತಮ ಕುಡಿಯುವ ನೀರಿನ ವ್ಯವಸ್ಥೆ, ಕೆರೆಗಳ ಹೂಳೆತ್ತುವುದು, ಶಾಲಾ ಕಾಲೇಜು ಕಟ್ಟಡಗಳ ನಿರ್ಮಾಣ, ಸಮರ್ಪಕ ಸಾರಿಗೆ ವ್ಯವಸ್ಥೆ, ರಸ್ತೆಗಳ ದುರಸ್ತಿ, ಮಧ್ಯಾಹ್ನದ ಬಿಸಿಯೂಟ ಯೋಜನೆ ಅನುಷ್ಠಾನ, ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಣೆ, ಅಹಿಂದ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮಗಳು, ಇತರೆ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲಿಸಿ ವಿಮರ್ಶೆ ಮಾಡುವವರಿಗೆ ಟೊಳ್ಳು ಭರವಸೆಗಳ ಪ್ರಗತಿ ಏನೆಂದು ಅರ್ಥವಾಗುತ್ತದೆ.

ರಾಜ್ಯದಲ್ಲಿ ಹಿಂದಿನ ಎರಡು ಸಮ್ಮಿಶ್ರಸರ್ಕಾರಗಳು ಮತ್ತು ಇಂದಿನ ಆಪರೇಷನ್ ಕಮಲದ ಮೂಲಕ ರಚನೆಯಾಗಿರುವ ಬಿಜೆಪಿ ಸರ್ಕಾರದ ವೈಫಲ್ಯತೆಗೆ ಪಕ್ಷಾಂತರವೇ ಮೂಲಕಾರಣವೆಂಬುವುದು ಲೋಕಸಭಾ ಚುನಾವಣೆ ನಂತರ ರಾಜ್ಯದ ಜನತೆಗೆ ವ್ಯಕ್ತವಾಗುತ್ತದೆ. ಪಕ್ಷಾಂತರ ನಿಷೇಧಕ್ಕೆ ಮತದಾರರೇ ಮುಂದಾಗಿ ಪಕ್ಷಾಂತರಿಗಳಿಗೆ ಮತ ನೀಡದೆ ಚುನಾವಣೆ ಮಹತ್ವ ಮತ್ತು ಒಂದು ಮತದ ಮೌಲ್ಯ ಎನೆಂಬುದನ್ನು ಖಚಿತಪಡಿಸುವುದು ಮತದಾರರ ಮೂಲ ಗುರಿಯಾಗಬೇಕು.

ಲೋಕಸಭಾ ಚುನಾವಣೆಗೆ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು 2008ನೇ ವಿಧಾನಸಭೆ ಚುನಾವಣೆ ನಂತರ ಪಕ್ಷಾಂತರ ನೀತಿನಿಯಮಗಳನ್ನು ಗಾಳಿಗೆ ತೂರಿ ಅನುಸರಿಸುತ್ತಿರುವ ಹೊಸ ನೀತಿ ಚುನಾವಣೆ ಕಾಯ್ದೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಿಗೆ ವಿರೋಧವಾಗಿರುವುದನ್ನು ಮತದಾರರು ಮನಗಂಡು ಪಕ್ಷಾಂತರವನ್ನು ನಿಷೇಧಿಸುವ ಮಾರ್ಗ ಅನುಸರಿಸಿ, ಪಕ್ಷಾಂತರಿಗಳಿಗೆ ಮತ ಚಲಾಯಿಸದೆ ಮತದಾರರ ಹಕ್ಕಿಗೆ ಬದ್ಧವಾಗಬೇಕು. ಮತದಾರರು ಒಂದು ಭಾರಿ ಚುನಾಯಿಸಿದ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಅದೇ ಸ್ಥಾನಕ್ಕೆ ಮರು ಆಯ್ಕೆ ಬಯಸುವುದು ಮತ್ತು ಪಕ್ಷಾಂತರ ಮಾಡುವುದು ಮತದಾರರ ಹಕ್ಕಿಗೆ ಧಕ್ಕೆ ತರುವುದೇ ಅಲ್ಲದೆ ಮತದಾರರನ್ನೇ ವಂಚಿಸಿ ಅಧಿಕಾರ, ಹಣ, ಅಂತಸ್ತಿಗೆ ಮಾರುಹೋಗುವುದು, ಮತ್ತೆ ಮತ್ತೆ ಚುನಾವಣೆ, ಉಪ ಚುನಾವಣೆ, ಮರುಚುನಾವಣೆ ಮಾಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡುವುದು, ಪ್ರಜೆಗಳ ಮೇಲೆ ಹೆಚ್ಚುಹೆಚ್ಚು ತೆರಿಗೆ ಹೇರುವುದು, ಎಲ್ಲಾ ಅಗತ್ಯವಸ್ತುಗಳ ಬೆಲೆ-ದರದಲ್ಲಿ ಹೆಚ್ಚಳ, ಅಗತ್ಯ ವಸ್ತುಗಳ ಕೊರತೆಗೆ ರಾಜಕಾರಣಿಗಳು ಅವಕಾಶಮಾಡಿಕೊಡುವುದಕ್ಕೆ ಮತದಾರರು ಕಡಿವಾಣ ಹಾಕಬೇಕು-ಒಂದು ಮತದ ಮೌಲ್ಯವನ್ನು ಕಾಯ್ದುಕೊಳ್ಳುವುದು ಮತದಾರರ ಹಕ್ಕು ಆಗಬೇಕೇ ವಿನಃ ಪ್ರಜಾಪ್ರತಿ ನಿಧಿಯ ಹಕ್ಕು ಅಗಬಾರದು.

ಪಕ್ಷಾಂತರ ತಡೆಗಟ್ಟುವ/ನಿಷೇಧಿಸುವ ಅಧಿಕಾರ ಮತದಾರರಿಗೆ ಇರುವಾಗ ಪಕ್ಷಾಂತರ ಕಾಯ್ದೆ ತಿದ್ದುಪಡಿ ಮಾಡುವ ಅವಶ್ಯಕತೆ ಇಂದಿಗೆ ಇಲ್ಲ. ಸಮ್ಮಿಶ್ರಸರ್ಕಾರ ರಚನೆಗೆ ತನ್ನದೇ ಆದ ಸೂಕ್ತ ಕಾನೂನು ಇಲ್ಲದೆ ಇರುವುದನ್ನು ಮತದಾರರೇ ಅರಿತುಕೊಂಡು ನೀತಿಗೆಟ್ಟ ಪಕ್ಷಾಂತರಿಗಳಿಗೆ ಮತ ಹಾಕದೆ ಮತದಾರರೇ ಪಕ್ಷಾಂತರ ನಿಷೇಧಿಸುವ ಮಾರ್ಗ ಅನುಸರಿಸಬೇಕು. ಲೋಕಸಭಾ ಚುನಾವಣೆಯಲ್ಲಿ ಪಕ್ಷಭೇಧ ಮರೆತು ಮತದಾರರು ಪಕ್ಷಾಂತರ ಅಭ್ಯರ್ಥಿಗಳನ್ನು ಸೋಲಿಸುವ ಮೂಲಕ ಪಕ್ಷಾಂತರ ನಿಷೇಧಿಸಬೇಕು- ಒಂದು ಓಟಿನ(ಮತದ) ಮೌಲ್ಯ ಕಾಯ್ದುಕೊಳ್ಳಬೇಕು. ಪಕ್ಷಾಂತರಕ್ಕೆ ಬೆಂಬಲಿಸುವ ಇಂದಿನ ನೀತಿಗೆಟ್ಟ ರಾಷ್ಟ್ರೀಯ ಪಕ್ಷಗಳು ಬಹುಮತ ಪಡೆಯಲು ಸ್ವಂತ ಸಾಮರ್ಥ್ಯ ಇಲ್ಲದೆ ಮುಳುಗುವ ಹಡಗುಗಳಿಗೆ ಸರಿಸಮಾನವಾದವು.

ಎ.ಮಾದಯ್ಯ,
ಮೈಸೂರು

ಪತ್ರಾಗಾರ

ದೇಶಕ್ಕೆ ಅನ್ವಯಿಸುವ ಮಾತು

ಮಾನ್ಯ ಸಂಪಾದಕರಿಗೆ,

ಆತ್ಮೀಯರೇ, ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾದ ನಾ.ದಿವಾಕರ ಅವರ ಲೇಖನ ಒಬಾಮ ಮುಂದಿರುವ ಸವಾಲುಗಳು' ತುಂಬ ಅರ್ಥಪೂರ್ಣವಾಗಿದೆ ಮತ್ತು ಅತ್ಯಂತ ವಸ್ತುನಿಷ್ಠ ಸತ್ಯಕ್ಕೆ ಸಮೀಪವಾದುದಾಗಿದೆ.

ಜಗತ್ತಿನ ಭೌಗೋಲಿಕ ಚಿತ್ರಣ ಕಣ್ಮುಂದೆ ಕಟ್ಟಿದ ಹೊರತು, ಯಾವುದೇ ದೇಶದ ವ್ಯಷ್ಟಿ ಮತ್ತು ಸಮಷ್ಟಿಯ ಪ್ರಚಲಿತ ಜ್ಞಾನವನ್ನು ತಿಳಿದುಕೊಳ್ಳುವುದೂ ಕಷ್ಟ, ಬರೆಯುವುದೂ ಕಷ್ಟ. 'ಅಮೆರಿಕಾಸರ್ಕಾರ ಭಯೋತ್ಪಾದಕತೆಯ ನಿಗ್ರಹದ ನೆಪದಲ್ಲಿ ಅನೇಕ ಅಮಾಯಕರಿಗೆ ಚಿತ್ರಹಿಂಸೆ ನೀಡಿ ಅವರನ್ನು ಬಂಧಿಸುವ ಪರಂಪರೆಗೆ ಒಬಾಮ ಇತಿಶ್ರೀ ಹಾಡಲೇಬೇಕಾಗಿದೆ' ಎನ್ನುವ ಮಾತು ತುಂಬ ಗಟ್ಟಿಯಾದುದಾಗಿದೆ. ಇದು ಒಂದು ದೇಶಕ್ಕೆ ಅನ್ವಯಿಸುವ ಮಾತು. ಭಾರತಕ್ಕೂ ಹೆಚ್ಚು ಸೂಕ್ತ. ಭಾರತದ ಪೋಲೀಸ್ ಇಲಾಖೆಯಲ್ಲಿ ವಿವೇಚನಾ ಶಕ್ತಿಗೆ ಬೆಲೆಯೇ ಇಲ್ಲ. ವಿವೇಚನೆಯಿಲ್ಲದ ಸಂಸ್ಥೆ ಯಾವುದಾದರೂ ಅದು ಮೃಗತ್ವವನ್ನು ಹುಟ್ಟು ಹಾಕುತ್ತದೆ. ಮನುಷ್ಯತ್ವವನ್ನು ಕೊಲ್ಲುತ್ತದೆ. ಇಡೀ ಜಗತ್ತಿನ ವ್ಯವಸ್ಥೆ ಹದಗೆಡಲು ಇದುವೂ ಕಾರಣವಾಗಿದೆ.

ಅರ್ಜುನ ಕೋರಟಕರ
ಜಮಖಂಡಿ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಸಂಪಾದಕೀಯ

ಅಂತರಂಗ

ಸಾಮಾಜಿಕ ನ್ಯಾಯ ಎಲ್ಲಿ ಹೋಯಿತು?

ಭಾರತದಲ್ಲಿ ಜಾತಿ ಪದ್ಧತಿ ಅಕ್ಷರಶಃ ಜಾರಿಯಲ್ಲಿದೆ. ಜಾತಿ ವಿನಾಶ ಮಾಡಬೇಕು, ಸಮ ಸಮಾಜ ಕಟ್ಟಬೇಕು ಎಂಬ ನಿರಂತರ ಆದರ್ಶದ ನಡುವೆಯೂ ಜಾತಿ ತನ್ನ ಅಸ್ತಿತ್ವವನ್ನು ಗಟ್ಟಿಮಾಡಿಕೊಳ್ಳುತ್ತಲೇ ಹೋಗುತ್ತಿದೆ. ಸ್ವಾತಂತ್ರ್ಯಾನಂತರದ ಕೆಲವು ವರ್ಷಗಳ ಕಾಲ ಜಾತಿ ತನ್ನ ಪ್ರಾಬಲ್ಯವನ್ನು ಕಳೆದುಕೊಳ್ಳುವ ಲಕ್ಷಣಗಳು ಕಾಣಿಸುತ್ತಿದ್ದವು. ಆದರೆ ಕಳೆದ ಎರಡು ದಶಕಗಳಿಂದೀಚೆಗೆ ಜಾತಿ ತಾನೇ ತಾನಾಗಿ ಯಾವ ಎಗ್ಗೂ ಇಲ್ಲದೆ ಬೆಳೆಯುತ್ತಿದೆ. ಮೇಲ್ಜಾತಿಗಳಂತೂ ಇಡೀ ಸಮಾಜದ ಮೇಲೆ ತನ್ನ ಪ್ರಾಬಲ್ಯವನ್ನು ಸಾಧಿಸುವಲ್ಲಿ ಸಫಲವಾಗುತ್ತಿವೆ.

ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ವಿವಿಧ ಪಕ್ಷಗಳು ಟಿಕೆಟ್ ನೀಡಿಕೆಯಲ್ಲಿ ಪ್ರಭಲ ಜಾತಿಗಳಿಗಷ್ಟೇ ಮಣೆ ಹಾಕಿರುವುದು ಮೇಲಿನ ಮಾತುಗಳಿಗೆ ಮತ್ತಷ್ಟು ಪುಷ್ಠಿ ನೀಡಿದೆ. ವಿಚಿತ್ರವೆಂದರೆ ಬಿಜೆಪಿಯಂಥ ಬಲಪಂಥೀಯ ಪಕ್ಷದಿಂದ ಹಿಡಿದು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುವ ಬಹುತೇಕ ಎಲ್ಲ ಪಕ್ಷಗಳೂ (ಬಿಎಸ್ಪಿ ಹೊರತು ಪಡಿಸಿ) ಇದೇ ಹಾದಿ ತುಳಿದಿವೆ. ಕಾಂಗ್ರೆಸ್ ವೀರಪ್ಪ ಮೋಯ್ಲಿ ಹಾಗೂ ಕೋದಂಡರಾಮಯ್ಯ ಅವರಂಥ ಅತ್ಯಂತ ಅಲ್ಪ ಸಂಖ್ಯಾತ ದೇವಾಡಿಗ ಹಾಗೂ ಗೊಲ್ಲ ಜಾತಿಗಳಿಗೆ ಪ್ರಾತಿನಿಧ್ಯ ನೀಡುವ ಮೂಲಕ ಸ್ವಲ್ಪ ಮಟ್ಟಿಗಾದರೂ ತನ್ನ ಮಾತನ್ನು ಉಳಿಸಿಕೊಂಡಿದೆ.

ರಾಜ್ಯದಲ್ಲಿ ಹಿಂದಿನಿಂದಲೂ ಪ್ರಭಲಕೋಮುಗಳೇ ರಾಜಕೀಯವನ್ನು ನಿಯಂತ್ರಿಸುತ್ತಿದ್ದರೂ, ದೇವರಾಜ ಅರಸು ಅವರು ಮುಖ್ಯಮಂತ್ರಿಯದಾಗಿನಿಂದ ಪರಿಸ್ಥಿತಿ ಬದಲಾಗ ತೊಡಗಿತ್ತು. ಅತೀ ಹಿಂದುಳಿದ ಹಾಗೂ ಅಲ್ಪ ಸಂಖ್ಯಾತ ಜಾತಿಗಳನ್ನು ಗುರುತಿಸಿ, ಆಯಾ ಜಾತಿಗಳ ಮುಖಂಡರಿಗೆ ಪಕ್ಷದ ಟಿಕೆಟ್ ದೊರಕಿಸಿಕೊಟ್ಟು ಅವರನ್ನು ಗೆಲ್ಲಿಸಿ ವಿಧಾನ ಸೌಧಕ್ಕೆ ಕರೆ ತರುವವರೆಗೂ ಅರಸು ಶ್ರಮಿಸುತ್ತಿದ್ದರು. ಹಾಗಾಗಿಯೇ ರಾಜಕೀಯ ಹಾಗೂ ಸಾಮಾಜಿಕ ಅಸ್ತಿತ್ವಕ್ಕಾಗಿ ಪರದಾಡುತ್ತಿದ್ದ ಹಲವು ಜಾತಿಗಳು ರಾಜಕಾರಣದಲ್ಲಿ ಪಾಲು ಪಡೆಯಲು ಸಾಧ್ಯವಾಗಿತ್ತು.

ಆದರೆ ಅರಸು ಅವರ ನಂತರ ಮತ್ತೆ ರಾಜಕೀಯದಲ್ಲಿ ಹಿಂದುಳಿದ ಜನಾಂಗಗಳು ತಬ್ಬಲಿತನವನ್ನೇ ಅನುಭವಿಸಬೇಕಾಯಿತು. ಸಂಖ್ಯಾ ದೃಷ್ಟಿಯಿಂದ ಬಲಾಢ್ಯರಾಗಿರುವ ಕೆಲವು ಹಿಂದುಳಿದ ಜಾತಿಗಳು ಮೇಲ್ಜಾತಿ ಬಲಾಢ್ಯರಿಗೆ ಸೆಡ್ಡು ಹೊಡೆದು ತಮ್ಮ ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಂಡದಾದರೂ ಸಂಖ್ಯಾ ದೃಷ್ಟಿಯಲ್ಲಿ ಬಲಿಷ್ಠರಲ್ಲದ ಜಾತಿಗಳು ಅದನ್ನು ಕಳೆದುಕೊಳ್ಳಬೇಕಾಯಿತು. ಇವತ್ತು ಕುಂಬಾರ, ಮಡಿವಾಳ, ಉಪ್ಪಾರ, ಕ್ಷೌರಿಕ ಮುಂತಾದ ತಳ ಸಮುದಾಯದ ಜಾತಿಗಳ ಪ್ರತಿನಿಧಿಗಳನ್ನು ರಾಜಕೀಯವಾಗಿ ಸಂಪೂರ್ಣ ಉಪೇಕ್ಷಿಸಲಾಗಿದೆ.

90ರ ದಶಕದಿಂದೀಚೆಗೆ ಪ್ರಭಲವಾಗತೊಡಗಿದ ಕೋಮು ರಾಜಕಾರಣ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೇ ಬುಡ ಮೇಲು ಮಾಡಿದೆ. ಈ ಪ್ರಯತ್ನದಲ್ಲಿ ಭಾರತೀಯ ಜನತಾ ಪಕ್ಷದ್ದೇ ಸಿಂಹಪಾಲು. ಇದರಲ್ಲಿ ಮತ್ತೊಂದು ವಿಶೇಷವೆಂದರೆ ಆಯಾ ಜಾತಿಯೊಳಗಿನ ಉಪಜಾತಿಗಳನ್ನು ನಿರ್ಲಕ್ಷಿಸುವುದು. ಹಿಂದುಳಿದ ಜಾತಿಗಳಲ್ಲಿನ ಅಲ್ಪಸಂಖ್ಯಾತರನ್ನು ಒಂದು ಕಡೆ ಮೂಲೆ ಗುಂಪುಮಾಡಿದರೆ, ಮೇಲ್ಜಾತಿಗಳೊಳಗಿನ ದುರ್ಬಲ ಒಳಜಾತಿಗಳನ್ನು ಮತ್ತೊಂದು ಕಡೆ ನಿರ್ಲಕ್ಷಿಸಲಾಗುತ್ತಿದೆ. ಇದಕ್ಕೆ ಬಿಜೆಪಿ ಲಿಂಗಾಯಿತ ಒಳಪಂಗಡಗಳಿಗೆ ಮಾಡಿರುವ ಮೋಸ ಉತ್ತಮ ನಿದರ್ಶನ.

ಬಿಜೆಪಿ ಈ ಬಾರಿ 28 ಲೋಕಸಭಾ ಸೀಟುಗಳಲ್ಲಿ ಒಂಭತ್ತನ್ನು ಲಿಂಗಾಯಿತರಿಗೆ ನೀಡಿದೆ. ಆದರೆ ಲಿಂಗಾಯಿತರಲ್ಲಿ ಅಧಿಕ ಸಂಖ್ಯೆಯಲ್ಲಿದ್ದೂ, ರಾಜಕೀಯವಾಗಿ-ಆರ್ಥಿಕವಾಗಿ ಹಿಂದೆ ಉಳಿದಿರುವ ಪಂಚಮಸಾಲಿ ಜನಾಂಗಕ್ಕೆ ಕೇವಲ ಒಂದು ಟಿಕೆಟ್ ಮಾತ್ರ ನೀಡಿದೆ. ಅತ್ಯಂತ ಕಡಿಮೆ ಜನ ಸಂಖ್ಯೆ ಹೊಂದಿರುವ ಬಣಜಿಗ ಜನಾಂಗದ ಐವರಿಗೆ ಟಿಕೆಟ್ ನೀಡಿದೆ. ಹಾಗೇ ಬಣಜಿಗರಿಗಿಂತ ಹೆಚ್ಚು ಜನ ಸಂಖ್ಯೆ ಉಳ್ಳ ಸಾದರಿಗೂ ಕೇವಲ ಒಂದು ಟಿಕೆಟ್ ನೀಡಿದೆ. ಅಂದರೆ ಮುಖ್ಯಮಂತ್ರಿ ಯಡಿಯೂರಪ್ಪ ಬಣಜಿಗ ಜನಾಂಗದವರಾದ್ದರಿಂದ ಬಣಜಿಗರಿಗೆ ಹೆಚ್ಚು ಸ್ಥಾನವನ್ನು ನೀಡುವ ಮೂಲಕ ಇತರೆ ಲಿಂಗಾಯಿತ ಜನಾಂಗಗಳಿಗೆ ಅನ್ಯಾಯ ಮಾಡಲಾಗಿದೆ.

ಬಿಜೆಪಿಯ ಇನ್ನೊಂದು ವಿಶೇಷವೆಂದರೆ ಇರುವ ಒಟ್ಟು 28 ಸ್ಥಾನಗಳಲ್ಲಿ ಹದಿನೆಂಟು ಸ್ಥಾನಗಳನ್ನು ಕೇವಲ ಮೂರು ಜಾತಿಗಳಲ್ಲಿ ಹಂಚಿಕೊಂಡಿರುವುದು. (ಲಿಂಗಾಯಿತ-9, ಒಕ್ಕಲಿಗ-6 ಮತ್ತು ಬ್ರಾಹ್ಮಣ-3) ಹಿಂದುಳಿದ ವರ್ಗದ ಕುರುಬ, ಬಲಿಜಿಗ ಮತ್ತು ತೊಗಟವೀರ ಜಾತಿಗಳಿಗೆ ಮಾತ್ರ ತಲಾ ಒಂದು ಸ್ಥಾನ ನೀಡಿರುವುದನ್ನು ಬಿಟ್ಟರೆ ಇತರೆ ಯಾವ ವರ್ಗಕ್ಕೂ ಪ್ರಾತಿನಿಧ್ಯ ನೀಡಿಲ್ಲ. ಬಿಜೆಪಿಯ ಈ ಮನೋಭವ ನೋಡಿದರೆ ಪರಿಶಿಷ್ಠ ಜಾತಿ/ವರ್ಗಕ್ಕೆ ಸಾಂವಿಧಾನಿಕ ಮೀಸಲಾತಿ ಇಲ್ಲದಿದ್ದರೆ ಏನಾಗುತ್ತಿತ್ತು ಎಂದು ಊಹಿಸಿಕೊಳ್ಳಬಹುದಾಗಿದೆ. ಬಿಜೆಪಿ ತಾನೆಷ್ಟು ಮೇಲ್ವರ್ಗದ ಪಕ್ಷಪಾತಿ ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಿದೆ.

ಈ ವಿವರಗಳನ್ನು ನೋಡಿ; ಕರ್ನಾಟಕದ ಜನಸಂಖ್ಯೆಯ ಸುಮಾರು ಶೇ. 18.42 ರಷ್ಟಿರುವ ವೀರಶೈವ ಲಿಂಗಾಯಿತರಿಗೆ ಬಿಜೆಪಿ ಶೇ. 32 ರಷ್ಟು ಟಿಕೆಟ್ ನೀಡಿದ್ದರೆ, ಸುಮಾರು ಶೇ. 10.64 ರಷ್ಟಿರುವ ಒಕ್ಕಲಿಗರಿಗೆ ಶೇ. 22ರಷ್ಟು ಟಿಕೆಟ್ ನೀಡಿದೆ. ಹಾಗೇ ಶೇ. 3.81 ರಷ್ಟಿರುವ ಬ್ರಾಹ್ಮಣರಿಗೆ ಶೇ. 10.71 ಟಿಕೆಟ್ ನೀಡಿದೆ. ಆದರೆ ಸುಮಾರು ಶೇ. 36.23 ರಷ್ಟಿರುವ ಹಿಂದುಳಿದ ವರ್ಗದವರಿಗೆ ಕೇವಲ ಮೂರು ಟಿಕೆಟ್ ನೀಡಿದ್ದರೆ (ಶೇ. 10.7), ಶೇ. 12.23 ರಷ್ಟಿರುವ ಅಲ್ಪಸಂಖ್ಯಾತರಿಗೆ ಒಂದೇ ಒಂದು ಟಿಕೆಟ್ ಸಹ ನೀಡಿಲ್ಲ! ಇದು ಬಿಜೆಪಿಯ ಸಾಮಾಜಿಕ ನ್ಯಾಯ!!

ವಿಚಿತ್ರ ಹಾಗೂ ನೋವಿನ ಸಂಗತಿ ಎಂದರೆ ಬಿಜೆಪಿಯ ಕಾಲಾಳುಗಳಾಗಿ, ಆ ಪಕ್ಷಕ್ಕೆ ಹಗಲೂ ಇರುಳೂ ದುಡಿಯುತ್ತಿರುವ ಹಿಂದುಳಿದ ವರ್ಗಗಳಿಗೆ ಇದೊಂದು ಅನ್ಯಾಯದಂತೆ ಕಾಣಿಸುತ್ತಲೇ ಇಲ್ಲ! ಬಿಜೆಪಿಯ ಅಂಗ ಸಂಘಟನೆಗಳಾದ ಭಜರಂಗದಳ, ವಿಶ್ವ ಹಿಂದೂ ಪರಿಷತ್, ಒಳಗಿದ್ದೂ ಹೊರಗಿದ್ದಂತಿರುವ ಶ್ರೀರಾಮ ಸೇನೆ ಇವುಗಳ ಆಧಾರ ಸ್ಥಂಭಗಳೇ ಹಿಂದುಳಿದ ಜಾತಿಗಳು. ತಮ್ಮ ಮೇಲೆ ನಡೆಸುವ ನಿರಂತರ ಶೋಷಣೆ ದಬ್ಬಾಳಿಕೆಗಳನ್ನೇ ಕಾಣದ ಸಮೂಹ ಸನ್ನಿಗೆ ಈ ಜನಾಂಗಗಳು ಗುರಿಯಾಗಿರುವುದು ನಮ್ಮ ನಡುವಿನ ಘೋರ ದುರಂತ!

ಸಾಮಾಜಿಕ ಅನ್ಯಾಯದ ಪಟ್ಟಿಯಲ್ಲಿ ಬಿಜೆಪಿ ಅತ್ಯುನ್ನತ ಸ್ಥಾನ ಪಡೆದಿರುವುದರಿಂದ ಇಷ್ಟು ವಿವರಗಳನ್ನು ನೀಡಬೇಕಾಯಿತು. ಉಳಿದ ಪಕ್ಷಗಳು ಸಾಮಾಜಿಕ ನ್ಯಾಯಕ್ಕೆ ಪೂರ್ಣ ಬದ್ಧವಾಗಿಲ್ಲದಿರುವುದು ಕಂಡುಬಂದರೂ ಕನಿಷ್ಠ ಕಾಳಜಿಯನ್ನಾದರೂ ತೋರಿಸಿರುವುದು ಈ ದುರ್ಬರದಿನಗಳಲ್ಲಿ ಸಮಾಧಾನದ ವಿಷಯ. ಹಿಂದುಳಿದ ವರ್ಗಗಳ ನಾಯಕರಿಗೆ ಇನ್ನಾದರೂ ಜಾಗೃತಿ ಮೂಡಲಿ ಎಂದು 'ಸಂವಾದ' ಹಾರೈಸುತ್ತದೆ.

○ ಇಂದೂಧರ ಹೊನ್ನಾಪುರ

ಸಂಪಾದಕರೊಡನೆ ಸಂವಾದ

ಬೋಧನೆಯೆಂದರೆ ಮನಸ್ಸು ಕಟ್ಟುವ ಕೆಲಸ ಅಲ್ಲವೆ?

ಹೊಸಕಾಲ ಬಿಸಿನೆತ್ತರಿನ ಯುವಕರೆದುರು ಆಯ್ಕೆ ಮತ್ತು ಸವಾಲುಗಳೆರಡನ್ನೂ ಹರವಿಬಿಟ್ಟು ಗೊಂದಲ ಮತ್ತು ಆತಂಕವನ್ನು ಮೂಡಿಸುತ್ತಿದೆ. ಜಾಗತಿಕ ಮಟ್ಟದಲ್ಲಿ ನೋಡಿದಾಗ ಕುಟುಂಬದ ಸಾಂಸ್ಥಿಕ ಸ್ವರೂಪ ಹಿಂದಿನ ಬಿಗಿಯನ್ನು ಉಳಿಸಿಕೊಳ್ಳದೆ ಇರುವುದರ ಜೊತೆಗೆ ಸಮಾಜ 'ಮಾದರಿ' ಎನ್ನಬಹುದಾದ ವ್ಯಕ್ತಿತ್ವಗಳನ್ನು ಪ್ರದರ್ಶಿಸಲಾರದ ದಿವಾಳಿತನವನ್ನು ಅನುಭವಿಸುತ್ತಿದೆ. ರೋಮಾಂಚಕಾರಿ ಸುದ್ದಿಗಳನ್ನು ದಿನವಿಡೀ ಪ್ರಸಾರ ಮಾಡುವ ವಿದ್ಯುನ್ಮಾನ ಮಾಧ್ಯಮಗಳು ಮತ್ತು ಮುದ್ರಣ ಮಾಧ್ಯಮಗಳು ಕೂಡ ಇಂತಹದ್ದೇ ಬೌದ್ಧಿಕ ದಿವಾಳಿತನವನ್ನು ಪ್ರದರ್ಶಿಸುತ್ತಿವೆ. ಇವುಗಳಿಗೆ ಸೇರ್ಪಡೆ ಎನ್ನುವಂತೆ ಆಧುನಿಕ ಕಾಲ ಮಾದರಿಯೆನ್ನಬಹುದಾದ ಯುವ ಮನಸ್ಸುಗಳನ್ನು ಕಟ್ಟಲಾರದ ಹೊಣೆಗೇಡಿತನವನ್ನೇ ಮೈವೆತ್ತು ನಿಂತಿರುವ ಸಾಂಸ್ಥಿಕ ರೂಪಗಳನ್ನು ಅಧರಿಸಿ ನಿಂತಿದೆ.

ಎಲ್ಲ ಕಡೆಗಳಿಂದಲೂ ವಿಜ್ಞಾನ ಒದಗಿಸಿರುವ ಸವಲತ್ತು, ಸೌಕರ್ಯಗಳನ್ನು ಬಳಸಿಕೊಂಡೇ ಅಲೌಖಿಕತೆಯ ಆಧ್ಯಾ ತ್ಮಿಕ ಕೇಂದ್ರ್ರಗಳೆಂಬಂತೆ ತಮ್ಮನ್ನು ಬಿಂಬಿಸಿಕೊಳ್ಳುವ ಧಾರ್ಮಿಕ ಕೇಂದ್ರ್ರಗಳು, ಕಾಲಮಾನಕ್ಕೆ ಒಗ್ಗದ ಬೂಟಾಟಿಕೆ ಯನ್ನು ಬಿತ್ತುತ್ತಾ ಯುವ ಮನಸ್ಸುಗಳಲ್ಲಿ ಜನಪ್ರೇಮದ ಬದಲು ಜನ ದ್ವೇಷವನ್ನು ಹುಟ್ಟು ಹಾಕುತ್ತಿವೆ. ಎಂದೂ ಪ್ರಜಾಪ್ರಭುತ್ವೀಕರಣ(ಡೆಮಾಕ್ರಟೈಸ್)ಕ್ಕೊಳಗಾಗದ ದೇವರು, ದೇವಾಲಯಗಳ ವಾರೀಸುದಾರರಾದ ಪುರೋಹಿತರು, ಜೋತಿಷಿಗಳು, ಧಾರ್ಮಿಕ ನೇತಾರರು ಸಮಾಜವನ್ನು ಆಳುತ್ತಿದ್ದಾರೆ. ಇಂತಹ ಗೊಂದಲಕಾರಿ ವಾತಾವರಣದ ನಡುವೆ ಹೊಸ ಸೃಷ್ಟಿಯ ಹರಿಕಾರರಾಗಬೇಕಾದ ಯುವ ಪೀಳಿಗೆ ಸೃಜನೆಯ ಬದಲು ವಿನಾಶವನ್ನು ಆರಾಧಿಸುವಂತೆ ಪ್ರಚೋಧಿಸಲ್ಪಟ್ಟು ಸಂಪೂರ್ಣವಾಗಿ ದಿಕ್ಕು ತಪ್ಪಿದಂತಿದೆ.

ಹಿಟ್ಲರ್‌ನ ನಾಸಿಸಂ, ಮುಸೋಲಿನಿಯ ಫ್ಯಾಸಿಸಂ ಜೊತೆಗೆ ಇತ್ತೀಚಿಗಿನ ಸೇರ್ಪಡೆಗಳಾದ ಒಸಾಮನ ಧಾರ್ಮಿಕ ಉದ್ರೇಕತಾವಾದ, ದೇಶ-ಭಾಷೆ, ಧರ್ಮ ರಕ್ಷಕರ ಸಂಸ್ಕೃತಿ ರಕ್ಷಣೆ, ಭಾಷಾ ರಕ್ಷಣೆ ಹೆಸರಿನ ಪುಂಡಾಟಿಕೆ, ಸೋಗಲಾ ಡಿತನಗಳು ನಮ್ಮ ಯವಕರನ್ನು ಹೆಚ್ಚು ಆಕರ್ಷಿಸುತ್ತಿವೆ. ದಿಢೀರ್ ಖ್ಯಾತಿಯೊಂದಿಗೆ ಅಧಿಕಾರವನ್ನೂ ಅನುಭವಿಸಿಬಿ ಡುವ ಧಾವಂತದಲ್ಲಿ ವಿಭಜಕ ನೀತಿಯ 'ದ್ವೇಷ ಪ್ರೇಮ' ಹೆಚ್ಚು ಆಪ್ಯಾಯಮಾನವಾಗುತ್ತಿದೆ. ಈ ತೆರನಾದ ಮನಸ್ಸು ಗಳು ಯಾವುದೇ ಜವಾಬ್ದಾರಿ ಇಲ್ಲದೆ ಹೇಳಿಕೆಗಳನ್ನು ತೇಲಿಬಿಡುವ ಅವಿವೇಕಿಗಳು ಯುವಕರನ್ನು ಹುಚ್ಚೆಬ್ಬಿಸಿ, ಅವರ ಕಣ್ಣಿನಲ್ಲಿ ನಾಯಕರಾಗಿ ಸ್ಥಾನ ಪಡೆಯುತ್ತಿರುವುದು ಭವಿಷ್ಯದ ಕುರಿತಾಗಿ ವಿವೇಚಿಸುವ ಎಲ್ಲರಿಗೂ ಆತಂಕದ ಸಂಗತಿ.

ಇಂತಹ ಸ್ಥಿತಿಯೊಂದರ ಜವಾಬ್ದಾರಿಯನ್ನು ಯಾರು ಹೊರಬೇಕು? ಹೊಟ್ಟೆಬಾಕತನ/ ಕೊಳ್ಳುಬಾಕತನವನ್ನು ಉತ್ತೇಜಿಸುತ್ತಾ, ಲಾಭದ ಏಕಮಾತ್ರ ಗುರಿಯೊಂದಿಗೆ ಮುನ್ನುಗ್ಗುತ್ತಿರುವ ಜಾಗತೀಕರಣ ಮತ್ತದರ ನಿರ್ಮಾತೃಗಳಾದ ಬಂಡವಾಳಶಾಹಿ ಜಗತ್ತಿನ ಆಳುವ ಮಂದಿಯನ್ನು ದೂಷಿಸಬೇಕೇ? ಅಥವಾ ಈ ನಾಗಾಲೋಟಕ್ಕೆ ತಡೆಯೊಡ್ಡುವ ಪ್ರತಿಯಜಮಾನಿಕೆಯನ್ನು ರೂಪಿಸಬೇಕಾದ ಬುದ್ಧಿಜೀವಿ ವರ್ಗ, ಅದರಲ್ಲಿಯೂ ಮುಖ್ಯವಾಗಿ ಶಿಕ್ಷಕರನ್ನು ದೂಷಿಸಬೇಕೇ?. ಸಮುದಾಯದಲ್ಲಿ ರಾಷ್ಟ್ರಪ್ರೇಮಕ್ಕಿಂತಲೂ ಹೆಚ್ಚಾಗಿ ಮಾನವೀಯ ಮೌಲ್ಯಗಳನ್ನು ತುಂಬಿ, ಮನುಕುಲದ ಏಳಿಗೆಯೊಂದಿಗೆ ಸಾಮಾಜಿಕ ಸೌಹಾರ್ದತೆ ಮತ್ತು ಸಹಬಾಳ್ವೆಯನ್ನು ರೂಪಿಸಬೇಕಾದ ಶೈಕ್ಷಣಿಕ ಕೇಂದ್ರ್ರಗಳು ಮತ್ತು ಶಿಕ್ಷಕರು ಇಂತಹ ಸ್ಥಿತಿಯೊಂದರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆಯಲ್ಲವೇ? ಈ ಗಹನವಾದ ಪ್ರಶ್ನೆಗೆ ಏಕರೂಪದ ಉತ್ತರ ಸಾಧುವಲ್ಲವಾದರೂ, ಸಹಬಾಳ್ವೆಗಾಗಿ ಶ್ರಮಿಸುವ ಮನಸ್ಸು ಮತ್ತು ಹೃದಯಗಳನ್ನು ಅರಳಿಸುವ ಹೊಣೆಗಾರಿಕೆಯನ್ನು ಹೊತ್ತ ಶಿಕ್ಷಕರ ಜವಾಬ್ದಾರಿಯನ್ನು ನಾವು ಮೆಲುಕುಹಾಕಿಕೊಳ್ಳಲೇಬೇಕು.

> **ಭವಿಷ್ಯವನ್ನು ಕರಾಳರೂಪದಲ್ಲಿ ಮುಂಗಾಣುವಂತೆ ಒತ್ತಾಯಿಸುತ್ತಿರುವ ಇಂತಹ ಪ್ರಖರ ಬೇಸಿಗೆಯ ಬಿಸಿಲಿನ ಝಳದ ನಡುವೆಯೂ ರಾತ್ರಿಯ ಇಬ್ಬನಿಗಳು ನಿಂತಿಲ್ಲವೆನ್ನುವುದು ಸಮಾಧಾನದ ಸಂಗತಿ. ವಿದ್ಯಾರ್ಥಿ ಮನಸ್ಸುಗಳನ್ನು ಗುಣಾತ್ಮಕ ಸಮಾಜ ನಿರ್ಮಾಣಕ್ಕಾಗಿ ಸಿದ್ಧಗೊಳಿಸುತ್ತಾ, ಬದುಕಿನುದ್ದಕ್ಕೂ ಬದ್ಧತೆ, ಕಾಳಜಿಗಳನ್ನು ಮೇಳೈಸಿಕೊಂಡು ಬದುಕಿ ಇತ್ತೀಚೆಗೆ ನಮ್ಮನ್ನಗಲಿದ ಎಸ್.ಎಸ್. ಹಿರೇಮಠರಂತಹ ವಿಶಾಲ ಮನಸ್ಸುಗಳನ್ನು ನೆನೆದುಕೊಳ್ಳುತ್ತಾ, ಇಂತಹ ಇಬ್ಬನಿಗಳನ್ನು ಬಿರುಮಳೆಯಾಗಿಸಿ ನೆಲದ ಬಿಸಿಗೆ ತಂಪು ಹುಡುಕುವ ಮನಸ್ಸು ಕಟ್ಟುವ ಕೆಲಸದಲ್ಲಿ ಶಿಕ್ಷಕನಾದ ಪ್ರತಿಯೊಬ್ಬನೂ ತೊಡಗಿಕೊಂಡಲ್ಲಿ ಯುವ ಮನಸ್ಸುಗಳು "ದ್ವೇಷ ಪ್ರೇಮದ ರಾಜದಾರಿ"ಯ ಬದಲು "ಮನುಷ್ಯ ಪ್ರೀತಿಯ ಕಾಲುದಾರಿ"ಗೆ ಖಂಡಿತಾ ಮರಳುತ್ತಾರಲ್ಲವೇ?.**

ಶಿಕ್ಷಕರನ್ನು ಎಲ್ಲಾ ವಿನಾಶಗಳ ಹೊಣೆಗಾರರನ್ನಾಗಿಸದೆಯೂ, ಅವರಿಂದ ಗುಣಾತ್ಮಕವಾದ ಸಮಾಜ ನಿರ್ಮಾಣದ ಜವಾಬ್ದಾರಿಯನ್ನು ನಿರೀಕ್ಷಿಸುವುದು ತಪ್ಪಲ್ಲ. ಇಂತಹ ಗುಣಾತ್ಮಕ ಯುವಪೀಳಿಗೆಯ ನಿರ್ಮಾಣಕ್ಕೆ ಶಿಕ್ಷಕ ಮೂಲಭೂತವಾಗಿ ಜ್ಞಾನದ ಜೊತೆಗೆ ಸಾಮಾಜಿಕ ಬದ್ಧತೆಯನ್ನು ಹೊಂದಿರಬೇಕು. ವೃತ್ತಿ - ಪ್ರವೃತ್ತಿಗಳಲ್ಲಿ ಸಮತಾವಾದಿ, ಸಮಾಜವಾದಿಯಲ್ಲದ ಶಿಕ್ಷಕನಿಂದ ಇದನ್ನು ನಿರೀಕ್ಷಿಸುವುದು ತಪ್ಪಾದೀತು. ತರಗತಿಯ ಒಂದು ಗಂಟೆಯ ಅವಧಿಯನ್ನು ಮಾಹಿತಿ ರವಾನೆಯ ನಿರ್ಜೀವ ಘಟಕವಾಗಿಸದೆ, ಅದನ್ನೊಂದು ಜೀವಂತ ಮಾನವೀಯ ಮೌಲ್ಯಗಳ "ಸೃಜನಾತ್ಮಕ ಘಳಿಗೆ" ಯಾಗಿಸಿದಾಗ ನಿಜವಾಗಿಯೂ ಈ ಪ್ರತಿಯಜಮಾನಿಕೆಯ ನಿರ್ಮಾಣ ಕೆಲಸ ಸಾಧ್ಯವಿದೆ.

ತರಗತಿಯ ಕೋಣೆಗಳ ಬೌತಿಕ ಅಸ್ತಿತ್ವವನ್ನು ಮಾನ್ಯ ಮಾಡುತ್ತಾ, ಬೌದ್ಧಿಕವಾಗಿ ಅದರಾಚೆಗೆ ಚಿಮ್ಮುವಂತೆ ಸತ್ಪ್ರೇರಣೆ ಉಂಟುಮಾಡತಕ್ಕ ಶಿಕ್ಷಕನಿಗೆ ಮಾತ್ರ ಈ ತೆರನಾದ ನಿರ್ಮಾಣ ಕೆಲಸ ಸಾಧ್ಯ. ಯಾಕೆಂದರೆ ತರಗತಿಯೆನ್ನುವುದು ಮನಸ್ಸು ಕಟ್ಟುವ ಕೆಲಸವೇ ವಿನಃ, ಉದ್ಯೋಗ ಖಾತ್ರಿಯ ತಾಣವಲ್ಲವೆಂಬ ಅರಿವು ಶಿಕ್ಷಕನಿಗೆ ಇರಲೇಬೇಕು. ಹಾಗಿದ್ದಾಗ ಮಾತ್ರ ಎಲ್ಲಾ ಎಲ್ಲೆಗಳನ್ನು ಮೀರಿದ ಮಾನವ ಪ್ರೀತಿಯ ಸಹಬಾಳ್ವೆಯ ಕಾರಣಕ್ಕಾಗಿ ಯುವ ಮನಸ್ಸುಗಳನ್ನು ಪೋಣಿಸುವ ಅದ್ಭುತ ಮಾಲೆಗಾರನ ಕೆಲಸವನ್ನು ಶಿಕ್ಷಕ ಮಾಡಬಲ್ಲ. ಅದಿಲ್ಲದೇ ಹೋದಲ್ಲಿ ಸ್ಥಾಪಿತ ಧರ್ಮ ಮತ್ತು ಸಂಸ್ಕೃತಿ ರಕ್ಷಣೆಯ ಫ್ಯಾಸಿಸ್ಟ್ ವಿಕೃತಿಯನ್ನು ಹರಡುವ ಅಪಾಯಕಾರಿ ಸೊಳ್ಳೆಯಾಗಿ ಸಮಾಜಕ್ಕೆ ಮಾರಕರೋ1ಗವನ್ನು ತರಬಲ್ಲ ಧೂರ್ತನೂ ಆತನಾಗಬಲ್ಲ.

ಇತ್ತೀಚೆಗೆ ಶಿಕ್ಷಣ ಇಲಾಖೆಯ ಜವಾಬ್ದಾರಿ ಸ್ಥಾನದಲ್ಲಿದ್ದ ಮಂತ್ರಿಯೊಬ್ಬರು ಶೇಕಡಾ 85 ರಷ್ಟು ಕಾಲೇಜು ಶಿಕ್ಷಕರು ಅಮಲು ಪದಾರ್ಥದ ದಾಸರಾಗಿದ್ದಾರೆ ಎಂದು ಕೊಟ್ಟ ಹೇಳಿಕೆಯನ್ನು ವಾಸ್ತವದ ಜೊತೆಗೆ ತುಲನೆ ಮಾಡಿದಾಗ ನಮ್ಮ ಅನೇಕ ಶಿಕ್ಷಕರನ್ನು ಫ್ಯಾಸಿಸ್ಟ್ ವಿಕೃತಿ ಎಂಬ ಅಮಲು ಆವರಿಸಿಕೊಂಡಿರುವುದು ಸುವ್ಯಕ್ತವಾಗುತ್ತದೆ.

ವರ್ತಮಾನ ಕಾಲದ ನಮ್ಮ ಶಿಕ್ಷಣ ವ್ಯವಸ್ಥೆಯ ಬಹುದೊಡ್ಡ ಸಮಸ್ಯೆಯೆಂದರೆ, ಅದರ ಆಡಳಿತ ಎನ್ನುವುದು ಜಡ್ಡುಗಟ್ಟಿದ ಜಡ ಸಂಪ್ರದಾಯವಾದಿ ಮನಸ್ಸುಗಳ

ಹಿಡಿತದಲ್ಲಿ ನರಳುತ್ತಿರುವುದು. ಬುದ್ಧಿಜೀವಿಗಳನ್ನು ಫಿನಿಷ್ ಮಾಡಿ, ಬುದ್ಧಿಜೀವಿಗಳೇ ಸಮಾಜದ್ರೋಹಿಗಳು, ಬುದ್ಧಿಜೀವಿಗಳಿಂದ ದೇಶಕ್ಕೆ ಅಪಾಯವಿದೆ ಎಂದು ಬೊಬ್ಬೆ ಹೊಡೆಯುವ ಮಂದಿಯ ಮರ್ಜಿಗೆ ಅನುಸಾರವಾಗಿ ರೂಪುಗೊಳ್ಳುತ್ತಿರುವ ಪಠ್ಯಕ್ರಮ, ಪಠ್ಯೇತರ ಕಾರ್ಯಕ್ರಮಗಳು, ಅಭಿಯಾನಗಳು ಶೈಕ್ಷಣಿಕ ಕೇಂದ್ರಗಳನ್ನು ರಾಜಕೀಯ ಚದುರಂಗದಾಟದ ಪ್ರಯೋಗಶಾಲೆಗಳನ್ನಾಗಿ ಮಾರ್ಪಡಿಸಿವೆ.

ಶಿಕ್ಷಣವನ್ನು ಶತಮಾನಗಳ ಕಾಲದ ಜಾಗೃತಿ ಬಿತ್ತುವ ದೀರ್ಘಕಾಲೀನ ಕಾರ್ಯಕ್ರಮವಾಗಿ ನೋಡದ ಬದ್ಧತೆ ಕಳೆದುಕೊಂಡ ಆಳುವ ವ್ಯವಸ್ಥೆ, ಅದನ್ನೊಂದು ಅನುತ್ಪಾದಕ ಸಂಗತಿಯಾಗಿ ಪರಿಭಾವಿಸಿದೆ. ವಿದ್ಯಾರ್ಥಿಗಳ ಕ್ಷೇಮಾಭ್ಯುದಯ, ಶೈಕ್ಷಣಿಕ ಉನ್ನತಿ, ಸಾಮಾಜಿಕ ನ್ಯಾಯದ ಕೂಗು ಕೇಳಿಸಬೇಕಾದ ವಿದ್ಯಾರ್ಥಿ ಸಂಘಟನೆಗಳು ರಾಜಕೀಯ ಪಕ್ಷಗಳ ಏಜೆಂಟರುಗಳಾಗುತ್ತಿವೆ. ಇದಕ್ಕಿಂತಲೂ ಅಪಾಯಕಾರಿಯಾಗಿ ದಕ್ಷಿಣಕನ್ನಡದ ಸುಳ್ಯ ತಾಲೂಕಿನ ಪಂಜ ಗ್ರಾಮದ ಪದವಿಪೂರ್ವ ಕಾಲೇಜಿನಲ್ಲಿ ಮುಸ್ಲಿಂ ವಿದ್ಯಾರ್ಥಿಗಳ ಬುರ್ಖಾ ನಿಷೇಧದ ಫತ್ವಾ ಹೊರಡಿಸಿದ ಉದಾಹರಣೆಯಂತೆ ಅನ್ಯ ಧರ್ಮೀಯರನ್ನು ದ್ವೇಷಿಸುವ ಫ್ಯಾಸಿಸ್ಟ್ ಸಂಸ್ಕೃತಿಯ ವಕ್ತಾರರಂತೆ ವರ್ತಿಸುತ್ತಿವೆ.

ಇಷ್ಟಕ್ಕೇ ನಿಲ್ಲದೆ ಉತ್ತರ ಪ್ರದೇಶದಲ್ಲಿ ವಿದ್ಯಾರ್ಥಿ ಚುನಾವಣೆಯ ನೆಪದಲ್ಲಿ ವಯೋವೃದ್ಧ ಪ್ರಾಧ್ಯಾಪಕರೊಬ್ಬರ ಮೇಲೆರಗಿ ಗುರುವಂದನೆಯನ್ನು ಘೋಷಿಸುತ್ತಾ, ಗುರುಬಲಿಯನ್ನು ಪಡೆದಂತೆ ಗೂಂಡಾ ಸಂಸ್ಕೃತಿಯ ವಿಧ್ವಂಸಕ ಪ್ರವೃತ್ತಿಯನ್ನು ಬೆಳೆಸುತ್ತಿವೆ. ಸದಾಕಾಲ ಸಿಂಹಾಸನದ ಮೇಲೆ ಕಣ್ಣಿಟ್ಟಿರುವ ಸ್ಟಾಲಿನ್, ಹಿಟ್ಲರ್, ಮುಸೋಲಿನಿಯ ತರದ ರಾಜಕೀಯ ನಾಯಕರು ಇದೆಲ್ಲವನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಇದೆಲ್ಲದಕ್ಕಿಂತ ಆಘಾತಕಾರಿಯಾದುದು ತಮ್ಮಿಂದ ಬದಲಾವಣೆ ಸಾಧ್ಯವೇ ಇಲ್ಲವೆಂದೋ ಅಥವಾ ಗಾಳಿ ಬಂದತ್ತ ತೂರಿಕೊಳ್ಳುವುದು ಒಳಿತು ಎಂದೋ ತಮ್ಮೆಲ್ಲಾ ಆಯುಧಗಳನ್ನು ಕೆಳಗಿರಿಸಿದ ಹೆಂಬೇಡಿಗಳಂತೆ ನರಳುತ್ತಿರುವ ಶಿಕ್ಷಕ ವರ್ಗದ ದುಸ್ಥಿತಿ. ವೇತನ ಪಟ್ಟಿಯನ್ನು ನೋಡುತ್ತಾ ಮಾತಿನ ಪಟ್ಟಿಯನ್ನೇ ಕಳೆದುಕೊಂಡಿರುವ ಶಿಕ್ಷಕರು ಸಂಖ್ಯೆಯಲ್ಲಿ ವೃದ್ಧಿಸುತ್ತಿರುವುದು ಆತಂಕಕಾರಿ ಬೆಳವಣಿಗೆ.

ಭವಿಷ್ಯವನ್ನು ಕರಾಳರೂಪದಲ್ಲಿ ಮುಂಗಾಣುವಂತೆ ಒತ್ತಾಯಿಸುತ್ತಿರುವ ಇಂತಹ ಪ್ರಖರ ಬೇಸಿಗೆಯ ಬಿಸಿಲಿನ ಝಳದ ನಡುವೆಯೂ ರಾತ್ರಿಯ ಇಬ್ಬನಿಗಳು ನಿಂತಿಲ್ಲವೆನ್ನುವುದು ಸಮಾಧಾನದ ಸಂಗತಿ. ವಿದ್ಯಾರ್ಥಿ ಮನಸ್ಸುಗಳನ್ನು ಗುಣಾತ್ಮಕ ಸಮಾಜ ನಿರ್ಮಾಣಕ್ಕಾಗಿ ಸಿದ್ಧಗೊಳಿಸುತ್ತಾ, ಬದುಕಿನುದ್ದಕ್ಕೂ ಬದ್ಧತೆ ಮತ್ತು ಕಾಳಜಿಗಳನ್ನು ಮೇಳೈಸಿಕೊಂಡು ಬದುಕಿ ಇತ್ತೀಚೆಗೆ ನಮ್ಮನ್ನಗಲಿದ ಎಸ್.ಎಸ್.ಹಿರೇಮಠರಂತಹ ವಿಶಾಲ ಮನಸ್ಸುಗಳನ್ನು ನೆನೆದುಕೊಳ್ಳುತ್ತಾ, ಇಂತಹ ಇಬ್ಬನಿಗಳನ್ನು ಬಿರುಮಳೆಯಾಗಿಸಿ ನೆಲದ ಬಿಸಿಗೆ ತಂಪು ಹುಡುಕುವ ಮನಸ್ಸು ಕಟ್ಟುವ ಕೆಲಸದಲ್ಲಿ ಶಿಕ್ಷಕನಾದ ಪ್ರತಿಯೊಬ್ಬನೂ ತೊಡಗಿಕೊಂಡಲ್ಲಿ ಯುವ ಮನಸ್ಸುಗಳು "ದ್ವೇಷಪ್ರೇಮದ ರಾಜದಾರಿ"ಯ ಬದಲು "ಮನುಷ್ಯ ಪ್ರೀತಿಯ ಕಾಲುದಾರಿ"ಗೆ ಖಂಡಿತಾ ಮರಳುತ್ತಾರಲ್ಲವೇ?.

○ ಜಯಪ್ರಕಾಶ ಶೆಟ್ಟಿ. ಎಚ್

ವೈಚಾರಿಕತೆ ಕಳೆದುಕೊಂಡ ಪ್ರಗತಿಪರತೆ

ಏಪ್ರಿಲ್ ೨೦೦೯ರ 'ಸಂವಾದ'ದಲ್ಲಿ ಪ್ರಕಟವಾಗಿರುವ ನಾ. ದಿವಾಕರ ಅವರ 'ಕರ್ನಾಟಕದ ತಾಲೀಬಾನ್' ಲೇಖನ ಓದಿ ಈ ಪತ್ರ. ಅವರು ದ.ಕ. ದ ಪಂಜ ಎಂಬ ಊರಿನಲ್ಲಿನ ಪದವಿಪೂರ್ವ ಕಾಲೇಜಿನಲ್ಲಿ ಎಬಿವಿಪಿಯವರು ಮುಸ್ಲಿಂ ಹುಡುಗಿಯರು ಬುರ್ಖಾ ಧರಿಸುವುದರ ವಿರುದ್ಧ 'ಫತ್ವಾ' ಹೊರಡಿಸಿ ಕಾರ್ಯಚರಣೆಗೆ ಇಳಿದಿರುವುದನ್ನು ಖಂಡಿಸಿದ್ದಾರೆ. ಈ ಖಂಡನೆಯನ್ನು ವಿಸ್ತರಿಸುತ್ತಾ, ಶತಮಾನಗಳ ಕಾಲ ಕುಪ್ಪಸ ತೊಡುವುದನ್ನು ನಿಷೇಧಿಸಿದ್ದ ಸಂಸ್ಕೃತಿ ಆರಾಧಕರೇ ಇಂದು ಮುಸ್ಲಿಂ ಯುವತಿಯರು ಬುರ್ಖಾ ತೊಡುವುದನ್ನು ವಿರೋಧಿಸಿದ್ದಾರೆ ಎನ್ನುತ್ತಾ, ಇದು ಹೀಗೇ ಮುಂದುವರೆದರೆ ಸಲ್ವಾರ್-ಕಮೀಜ್‌ಗಳನ್ನೂ ನಿಷೇಧಿಸುವ ದಿನ ದೂರವಿಲ್ಲ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಆ ಮೂಲಕ ಬುರ್ಖಾ ಪದ್ಧತಿಯನ್ನು ನೇರವಾಗಿಯೇ ಸಮರ್ಥಿಸಿದ್ದಾರೆ.

ಒಂದು ಸಂವಿಧಾನಾತ್ಮಕ ಪ್ರಜಾಪ್ರಭುತ್ವದಲ್ಲಿ ಒಮ್ಮತದ ಬೆಂಬಲ ಪಡೆದ ಕಾನೂನಿಲ್ಲದೆ ಯಾವುದನ್ನೇ-ಅದೆಷ್ಟೇ ಒಳ್ಳೆಯದೆಂದು ಸಾರ್ವಜನಿಕ ಅಭಿಪ್ರಾಯ ಮೂಡಿದರೂ-ಖಾಸಗಿಯಾಗಿ ಹೇರುವಂತಿಲ್ಲ. ನಿಜ. ಹಾಗೆ ಹೇರುವ ಯಾವುದೇ ಪ್ರಯತ್ನ ಅಪರಾಧವಾಗುತ್ತದೆ. ಈ ದೃಷ್ಟಿಯಿಂದ ಪಂಜದ ಘಟನೆ ಖಂಡನೀಯ ಮತ್ತು ಅಂತಹ ಘಟನೆಗಳಿಗೆ ಅಂತ್ಯ ಹಾಡುವಂತಹ ಪೂರಕ ವಾತಾವರಣವನ್ನು ಸೃಷ್ಟಿಸುವುದು ಇಂದಿನ ಅಗತ್ಯ ಕೂಡಾ. ಆ ಬಗ್ಗೆ ಎರಡು ಮಾತಿಲ್ಲ. ಆದರೆ ಇಲ್ಲಿ ಆ ಘಟನೆಯನ್ನು ಖಂಡಿಸುವ ಆವೇಶದಲ್ಲಿ ಬುರ್ಖಾವನ್ನು ಸಮರ್ಥಿಸಿರುವುದು, ಇವರ ಖಂಡನೆ ಕಾನೂನಿನ ಆಡಳಿತವನ್ನು ಎತ್ತಿ ಹಿಡಿಯುವ ಪ್ರಜಾಪ್ರಭುತ್ವವಾದಿ ಭಾವನೆಯಿಂದ ಹುಟ್ಟಿರದೇ, ತಮ್ಮ ರಾಜಕೀಯ ವಿರೋಧಿಯನ್ನು ಖಂಡಿಸುವ ಸೀಮಿತ ಉದ್ದೇಶದಿಂದಷ್ಟೇ ಹುಟ್ಟಿದಂತೆ ತೋರುತ್ತಾ, ಇದೊಂದು ಪಕ್ಕಾ ರಾಜಕೀಯ ಹೇಳಿಕೆ ಮಾತ್ರ ಎನಿಸಿರುವುದು ವಿಷಾದಕರ.

ಬುರ್ಖಾ ತೊಡುವುದನ್ನು ವಿರೋಧಿಸಲು 'ಫತ್ವಾ' ಹೊರಡಿಸಲಾಗಿದೆ ಎನ್ನುವುದಾದರೆ, ಬುರ್ಖಾ ತೊಡುವುದನ್ನೂ 'ಫತ್ವಾ' ಮೂಲಕವೇ ಜಾರಿಗೆ ತರಲಾಗಿದೆ ಎಂದೂ ಹೇಳಬಹುದಲ್ಲವೆ? ಹತ್ತಿಪ್ಪತ್ತು ವರ್ಷಗಳ ಹಿಂದೆ ಅಲ್ಲಲ್ಲಿ ಮಾತ್ರ ಕಾಣುತ್ತಿದ್ದ ಬುರ್ಖಾಗಳು ಇಂದು ದ.ಕ. ದಲ್ಲಿ (ಮತ್ತು ಇತರೆಡೆಗಳಲ್ಲೂ) ಎಲ್ಲೆಲ್ಲೂ ಕಾಣಬರುತ್ತಿರುವುದರ ಮರ್ಮವಾದರೂ ಏನು ಎಂಬುದನ್ನು ನಾವು ಆಲೋಚಿಸಬೇಕಲ್ಲವೆ? ಬುರ್ಖಾಗಳಷ್ಟೇ ಅಲ್ಲ, ಈಗ ನಮ್ಮ ಮಧ್ಯೆ ಗಡ್ಡ-ಟೋಪಿಗಳ ಸಂಖ್ಯೆಯೂ ಗಣನೀಯವಾಗಿ ಏರುತ್ತಿರುವುದನ್ನು ನಾವು ಗಮನಿಸದಿರಲಾಗದು. ಪ್ರಗತಿಪರ ರಾಜಕಾರಣದ ದೃಷ್ಟಿಯಿಂದ ಇದು ಸ್ವಾಗತಾರ್ಹ ಬೆಳವಣಿಗೆಯೇ?

ಇತ್ತೀಚೆಗೆ ನಮ್ಮ 'ಪ್ರಗತಿಪರ'ರೆನ್ನಿಸಿಕೊಂಡವರು ಹಿಂದೂ ಕೋಮುವಾದವನ್ನು ಎದುರಿಸುವ ಆವೇಶದಲ್ಲಿ ತಮ್ಮ ಪ್ರಗತಿಪರತೆಗೆ ಆಧಾರವಾಗಿದ್ದ ವೈಚಾರಿಕತೆಗೆ ತಿಲಾಂಜಲಿ ನೀಡುತ್ತಾ, ಪೂರ್ಣ ರಾಜಕೀಯ ಕಾರ್ಯಕರ್ತರಾಗಿ ಪರಿವರ್ತಿತರಾಗುತ್ತಿದ್ದಾರೆ. ಅಥವಾ ಅವರ ಮೂಲ ಸ್ವರೂಪವೇ ಅದೇ ಏನೋ ತಿಳಿಯದು! ಹಾಗಾಗಿಯೇ ಕುಪ್ಪಸ ತೊಡುವುದನ್ನು ನಿಷೇಧಿಸುವ ಸಂಪ್ರದಾಯದ ಹಿಂದಿನ ಶೋಷಣೆಯ ಮುಖವನ್ನು ಗುರುತಿಸಬಲ್ಲ ಇವರು, ಬುರ್ಖಾ ಧರಿಸಬೇಕೆಂಬ ಸಂಪ್ರದಾಯದ ಹಿಂದಿನ ಶೋಷಣೆಯ ಮುಖವನ್ನು ಗುರುತಿಸಲಾಗದೇ ಹೋಗುತ್ತಿದ್ದಾರೆ.

ಇತ್ತೀಚೆಗೆ ಉಡುಪಿಯಲ್ಲಿ ನಡೆದ ಸಭೆಯೊಂದರಲ್ಲಿ ಇಂತಹ ಪ್ರಗತಿಪರರ ಗುಂಪಿನ ವಕ್ತಾರರೊಬ್ಬರು ಮತೀಯ ಮೂಲಭೂತವಾದವನ್ನು ಧಾರ್ಮಿಕ ಸ್ವಾತಂತ್ರ್ಯವೆಂದು ಅರ್ಥೈಸಿ, ಅದನ್ನು ಸಮರ್ಥಿಸುತ್ತಾ ಮಾತಾಡತೊಡಗಿದಾಗ, ಇಂತಹ ತಲೆಕೆಳಗಾದ ಪ್ರಗತಿಪರತೆಯಿಂದ ಹಿಂದೂ ಕೋಮುವಾದವನ್ನು ಹತ್ತಿಕ್ಕುವುದಲ್ಲ, ಬದಲಿಗೆ ಅದನ್ನು ಬೆಳಸಲು ಹೇಗೆ ನಮ್ಮದೇ ಕೊಡುಗೆಯನ್ನು ಸಲ್ಲಿಸುತ್ತಿದ್ದೇವೆ ಎಂಬುದು ಗೊತ್ತಾಗತೊಡಗಿ ಗಾಬರಿಯಾದೆ.

ಡಿ.ಎಸ್.ನಾಗಭೂಷಣ, ಶಿವಮೊಗ್ಗ

ಭಾವುಕತೆಯಿಂದ ಅನುಷ್ಠಾನದೆಡೆಗೆ...

ಡಾ ಅಪ್ಪಗೆರೆ
ಸೋಮಶೇಖರ್

ಜಾತಿ ನಿರ್ಮೂಲನೆ ಹಾಗೂ ಅಸ್ಪೃಶ್ಯತೆಯ ಆಚರಣೆ ವಿರುದ್ಧ ಬಹಿರಂಗ ವಾಗಿ ಮಾತನಾಡುವ ಕನಿಷ್ಠ ಕಾಳಜಿಯೂ ಇಲ್ಲದ ಮಠಮಾನ್ಯಗಳಿಗೆ, ಬುದ್ಧ, ಬಸವ, ಅಂಬೇಡ್ಕರ್ ಅಂತಹ ಜಾತ್ಯಾತೀತ ವ್ಯಕ್ತಿತ್ವಗಳ ಹೆಸರಿನಲ್ಲಿ ಪೀಠಗಳನ್ನು ಸ್ಥಾಪಿಸಲು ಯಾವ ನೈತಿಕ ಹಕ್ಕಿದೆ? ಈ ಉದ್ದೇಶದ ಹಿಂದಿರುವ ಹುನ್ನಾರವಾದರೂ ಏನು? ಸಂಪ್ರದಾಯವಾದಿಗಳು ತಮ್ಮೊಳಗಿನ ಜಾತಿವಾದಿ ವ್ಯಕ್ತಿತ್ವಗಳನ್ನು ಮರೆಮಾಚಿ ಕೊಳ್ಳುವಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಮುಂತಾದ ಮಹಾಚೇತನಗಳನ್ನು ಮುಖವಾಡಗಳನ್ನಾಗಿ ಬಳಸುತ್ತಿರುವುದು ಬಹು ದೊಡ್ಡ ಕುತಂತ್ರದ ಸಂಗತಿ. ಹಾಗೆಯೇ ರಾಷ್ಟ್ರೀಯ ಸಂಪತ್ತನ್ನು ಕಬಳಿಸುವ ಸಂಚಿನ ಕಾರ ಣಕ್ಕಾಗಿ ಬುದ್ಧ, ಬಸವ, ಅಂಬೇಡ್ಕರ್ ಪರವಾನಿ ಗೆಯ ರಶೀದಿ ಚೀಟಿಗ ಳಾಗಿ ಬಳಕೆಯಾಗುತ್ತಿರು ವುದು ದುರಂತ.

"ಪ್ರಜಾಪ್ರಭುತ್ವವು
ಕೇವಲ ಒಣ ಆಡಳಿತ ಯಂತ್ರ ಮಾತ್ರವಲ್ಲ
ಪರಸ್ಪರ ಪ್ರೇಮದ, ಸಹಕಾರದ
ಅರಿವಿನ ಎಲ್ಲೆಗಳನ್ನು ವಿಸ್ತರಿಸುವ
ಜೀವನ ವಿಧಾನ ಆಗಬೇಕು"

– ಡಾ. ಬಿ. ಆರ್. ಅಂಬೇಡ್ಕರ್

ಮಾನವತೆಯ ಸಾಕಾರ ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ಮರೆತ ಭಾರತಕ್ಕೆ ಭವಿಷ್ಯವಿಲ್ಲ. ಪ್ರಸ್ತುತ ವಿವೇಕ ಶೂನ್ಯತೆಯಿಂದ ಪರಿತಪಿಸುತ್ತಿರುವ ಭಾರತೀಯ ಬದುಕಿಗೆ ಅಂಬೇಡ್ಕರ್ ಅವರ ವೈಚಾರಿಕತೆಯ ಅರಿವು ದಿಕ್ಕಾಗಬಲ್ಲದು.

ಜಾತಿ ಅಪಮಾನದ ನೋವುಗಳನ್ನೆಲ್ಲ ತನ್ನಂತಃಕರಣದಲ್ಲಿ ಅರಗಿಸಿಕೊಳ್ಳುತ್ತಲ್ಲೇ ಮಾನವೀಯತೆಯ ವಿವೇಕದ ನೆಲೆಗಟ್ಟಿನ ಮೇಲೆ ರಾಷ್ಟ್ರೀಯತೆಯನ್ನು ಕಟ್ಟ ಹೊರಟ ಮಹಾನ್ ಮನುಷ್ಯತ್ವದ ಪ್ರತೀಕ ಭಾರತ ರತ್ನ ಅಂಬೇಡ್ಕರ್. ಅಸ್ಪೃಶ್ಯತೆಯ ಕ್ರೌರ್ಯಗಳನ್ನು ತಮ್ಮ ಅಹಿಂಸಾತ್ಮಕ ಹೋರಾಟದ ಬೆನ್ನೆಲುಬಾಗಿಸಿಕೊಂಡು ಮುನ್ನಡೆದವರು. ಆ ಕಾರಣಕ್ಕಾಗಿ ಅಂಬೇಡ್ಕರ್ ಜಾಗತೀಕ ಮಟ್ಟದ ಬಹುದೊಡ್ಡ ಅಹಿಂಸಾ ಹೋರಾಟಗಾರರಾಗಿದ್ದಾರೆ. ಜಾತಿ ಪ್ರಣೀತ ಅಸ ಮಾನತೆಯ ಬೇರುಗಳು ಸಂಕೀರ್ಣವಾಗಿರುವ ಈ ಸಂದಿಗ್ಧ ಸಂದರ್ಭದಲ್ಲಿ ಅಂಬೇಡ್ಕರ್ ಅವರನ್ನ ಅರಿತುಕೊಳ್ಳುವ ಬಗೆ ಯಾವುದೇ ಪೂರ್ವಾಗ್ರಹ ಪೀಡಿತವಲ್ಲದ; ಪ್ರಜ್ಞಾಪೂರ್ವಕ ಜಾತ್ಯಾತೀತ ನೆಲೆಯದ್ದಾಗಬೇಕಿದೆ.

ಈ ಹೊತ್ತಿನ ಜನವಿರೋಧಿ ಜಾತಿರಾಜಕರಣ; ಮಠಮಾನ್ಯಗಳ ಮತಾಂಧತೆ; ಕ್ರೂರತನದ ಹಿಂದುತ್ವ ಹಾಗೂ ಕೋಮುವಾದಿತನಗಳಿಗೆ ಮುಖಾಮುಖಿಯಾಗಿ ನಿಂತು ಸವಾಲಿನ ಉತ್ತರವಾಗುವ ದಿಟ್ಟತನ ಅಂಬೇಡ್ಕರ್‌ವಾದಕ್ಕಿದೆ. ಶೋಷಿತರು ಭಾವನಾತ್ಮಕ ನೆಲೆಗಿಂತ ವೈಚಾರಿಕ ನೆಲೆಯ ಲ್ಲಿಯೂ; ಮೂಲಭೂತವಾದಿಗಳು ಜಾತಿವಾದಿ ದೃಷ್ಟಿಕೋನ ಕ್ಕಿಂತ ಮಾನವೀಯ ದೃಷ್ಟಿಕೋನದಲ್ಲಿ ಪ್ರಾಮಾಣಿಕವಾಗಿ ಅಂಬೇಡ್ಕರ್ ಅವರನ್ನ ಅರ್ಥೈಸಿಕೊಳ್ಳುವ; ಆ ಮೂಲಕ ತಮ್ಮ ಬದುಕಿನ ಅಂತರಾಳಕ್ಕೆ ತಂದುಕೊಳ್ಳುವ ಅಗತ್ಯವಿದೆ. ಆಗ ಮಾತ್ರ ಅಂಬೇಡ್ಕರ್ ಅವರ ನಿಸ್ವಾರ್ಥ ವಿಸ್ತೃತ ಮಾತೃ ಸಂವೇದನೆಯ ಅನುಭವ ಸಾಧ್ಯ.

ಜಾತಿ ನಿರ್ಮೂಲನೆ ಹಾಗೂ ಅಸ್ಪೃಶ್ಯತೆಯ ಆಚ ರಣೆ ವಿರುದ್ಧ ಬಹಿರಂಗವಾಗಿ ಮಾತನಾಡುವ ಕನಿಷ್ಠ ಕಾಳ ಜಿಯೂ ಇಲ್ಲದ ಮಠಮಾನ್ಯಗಳಿಗೆ, ಬುದ್ಧ, ಬಸವ, ಅಂಬೇಡ್ಕರ್ ಅಂತಹ ಜಾತ್ಯಾತೀತ ವ್ಯಕ್ತಿತ್ವಗಳ ಹೆಸರಿನಲ್ಲಿ ಪೀಠಗಳನ್ನು ಸ್ಥಾಪಿಸಲು ಯಾವ ನೈತಿಕ ಹಕ್ಕಿದೆ? ಈ ಉದ್ದೇಶದ ಹಿಂದಿರುವ ಹುನ್ನಾರವಾದರು ಏನು? ಸಂಪ್ರ ದಾಯವಾದಿಗಳು ತಮ್ಮೊಳಗಿನ ಜಾತಿವಾದಿ ವ್ಯಕ್ತಿತ್ವಗಳನ್ನು ಮರೆಮಾಚಿಕೊಳ್ಳುವಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಮುಂತಾದ ಮಹಾಚೇತನಗಳನ್ನು ಮುಖವಾಡಗಳನ್ನಾಗಿ ಬಳಸುತ್ತಿರುವುದು ಬಹುದೊಡ್ಡ ಕುತಂತ್ರದ ಸಂಗತಿ. ಹಾಗೆಯೇ ರಾಷ್ಟ್ರೀಯ ಸಂಪತ್ತನ್ನು ಕಬಳಿಸುವ ಸಂಚಿನ ಕಾರಣಕ್ಕಾಗಿ ಬುದ್ಧ, ಬಸವ, ಅಂಬೇಡ್ಕರ್ ಪರವಾನಿಗೆಯ ರಶೀದಿ ಚೀಟಿಗಳಾಗಿ ಬಳಕೆ ಯಾಗುತ್ತಿರುವುದು ದುರಂತ. ಈವರೆಗೆ ಅಸ್ಪೃಶ್ಯತೆಯ ಸೋಂಕಿನಿಂದ ಬಹಿಷ್ಕೃತ ಗೊಂಡಿದ್ದ ಅಂಬೇಡ್ಕರ್ ರಾತ್ರೋರಾತ್ರಿ ಮಠಮಾನ್ಯಗಳಿಗೆ ಸ್ಪೃಶ್ಯರಾದದ್ದಾದರೂ ಹೇಗೆ? ಇದು ನಂಬಲಸಾಧ್ಯವಾದ ಪವಾಡ ಸದೃಶ್ಯ ಸಂಗತಿಯೇ ಸರಿ!

ಹಿಂದೂಧರ್ಮದ ವಾರಸುದಾರರೆನಿಸಿಕೊಳ್ಳುವವರಿಗೆ ಜಾತೀ ಯತೆ, ಅಸ್ಪಶ್ಯತೆ, ಅಸಮಾನತೆ, ಬಡತನ, ಅನಕ್ಷರತೆ, ನಿರುದ್ಯೋಗ, ಮಹಿಳಾ ವಿಮೋಚನೆಗಳಿಗಿಂತ, 'ಮತಾಂತರ' ಬಹಳ ದೊಡ್ಡ ರಾಷ್ಟ್ರೀಯ □ ಜಾಗತೀಕ ಸಮಸ್ಯೆಯಾಗಿ ಕಾಣುತ್ತದೆ. ಇಂತಹ ಮತಾಂಧರಿಗೆ ಅಂಬೇಡ್ಕರ್ ಹೇಳಿರುವ: "ಒಂದು ಧರ್ಮ ಒಬ್ಬ ವ್ಯಕ್ತಿ ಯನ್ನು ಅಥವಾ ಸಮುದಾಯವನ್ನು ಕೀಳುದರ್ಜೆಯ, ಹೀನ, ಮಾನ ಗೇಡಿ, ಬಹಿಷ್ಕೃತ್ಯ ವ್ಯಕ್ತಿ ಅಥವಾ ಸಮುದಾಯವೆಂದು ಕಾಣದೆ ಅವರೂ ಕೂಡ ತಮ್ಮಂತೆ ಮನುಷ್ಯರು ಎಂದು ಪರಿಗಣಿಸಬೇಕು. ಆ ಧರ್ಮ, ಅವನೂ ಇತರರಿಗೆ ಸಮಾನ ಎನ್ನುವ ವಾತಾವರಣ, ಭರವ ಸೆಯನ್ನು ಮೂಡಿಸಬೇಕು. ಆಗ ಅಂಥ ಧರ್ಮಕ್ಕೆ ಮತಾಂತರ ಹೊಂದುವುದರಿಂದ ಶತಶತಮಾನಗಳಿಂದ ಅಸ್ಪೃಶ್ಯರಲ್ಲಿ ಬೇರು ಬಿಟ್ಟ ಕೀಳರಿಮೆ ಕಾಣೆಯಾಗುತ್ತದೆ". □ ಎಂಬ ಮಾತಿನ ಮೌಲ್ಯ ಅರಿವಾಗ ಬೇಕಿದೆ. ಆ ಕಾರಣದಿಂದಲೇ ಅಂಬೇಡ್ಕರ್, ಮನುಸ್ಮೃತಿಯನ್ನು ಸುಡುವ ಮೂಲಕ, "ಹಿಂದೂವಾಗಿ ಹುಟ್ಟಿದ್ದೇನೆ; ಹಿಂದೂವಾಗಿ ಸಾಯುವುದಿಲ್ಲ" ಎಂದು ಹೇಳುತ್ತ ಬುದ್ಧಧರ್ಮವನ್ನು ಆರಿಸಿ ಕೊಂಡರು.

ಜಾತಿ ಹೊಂಡದಲ್ಲಿ ಮಲೀನಗೊಂಡಿರುವ ನಮ್ಮ 'ರಾಷ್ಟ್ರೀಯತೆ'ಗೆ ಅಂಬೇಡ್ಕರ್ ತತ್ತ್ವದಿಂದ ಮಾತ್ರ ಕಾಯಕಲ್ಪಸಾಧ್ಯ. ಬುದ್ಧ, ಬಸವ, ಅಂಬೇಡ್ಕರ್ ಅವರ ವೈಚಾರಿಕತೆಯನ್ನು ಅರ್ಥೈಸಿಕೊಳ್ಳದ ಯಾವೊಬ್ಬ ಭಾರತೀಯನಿಗೂ ರಾಷ್ಟ್ರೀಯ ಪ್ರಜ್ಞೆಯ ಅರಿವು ಮೂಡಲು ಅಸಾಧ್ಯ. "ಅಸ್ಪೃಶ್ಯತಾ ನಿವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥ ರಹಿತ..; ಭಾರತ ಸ್ವಾತಂತ್ರ್ಯ ವಾದರಷ್ಟೇ ಸಾಲದು ಧಾರ್ಮಿಕ, ರಾಜಕೀಯ, ಸಾಮಾ ಜಿಕ, ಆರ್ಥಿಕ ವಿಷಯಗಳಲ್ಲಿ ಭರತ ಖಂಡದಲ್ಲಿ ಜನಿ ಸಿದವರೆಲ್ಲ ಸಮಾನ ಹಕ್ಕುಳ್ಳವರಾಗಬೇಕು..; ಸ್ವಾತಂತ್ರ್ಯ, ಸಮಾನತೆ, ಸೋದರತ್ವದ ತಳಹದಿಯ ಮೇಲೆ ಮಾತ್ರವೇ

ಆದರ್ಶ ಸುಸ್ಥಿರ ಸಮಾಜ ನಿರ್ಮಾಣ ಮಾಡಬಹುದು..; ನಾವೆಲ್ಲ ಭಾರತೀಯರು ಎಂಬ ಭಾವನೆಯನ್ನು ನಿರ್ಮಿಸುವುದು ನಮ್ಮ ಗುರಿಯಾಗಿರಬೇಕು. ನಮ್ಮ ಎಲ್ಲಾ ಜನರು ಮೊದಲು ಭಾರತೀಯರು, ಕೊನೆಗೂ ಭಾರತೀಯರು, ಭಾರತೀಯತೆಯನ್ನು ಉಳಿದು ಬೇರೆ ಏನೂ ಇಲ್ಲ." ಅಂಬೇಡ್ಕರ್ ಅವರ ಈ ಎಲ್ಲಾ ಅಭಿಪ್ರಾಯಗಳು ಅವರಿಗಿದ್ದ ತಾಯ್ತನದ ರಾಷ್ಟ್ರೀಯತೆಯ ಭ್ರಾತೃಭಾವನೆಯನ್ನು ಸಾಕ್ಷೀಕರಿಸುತ್ತವೆ. ಆ ಕಾರಣಕ್ಕಾಗಿ ಅಂಬೇಡ್ಕರ್ ಹೇಳಿದ್ದು: "ಚರಿತ್ರೆ ಗೊತ್ತಿಲ್ಲದವ ಚರಿತ್ರೆ ನಿರ್ಮಿಸಲು ಸಾಧ್ಯವಿಲ್ಲ" ವೆಂದು.

ಜಾತಿ ಸೂತಕದ ಓದು ಗ್ರಹಿಕೆಗಳನ್ನು ನೀಗಿಕೊಳ್ಳದ ಹೊರತು ಅಂಬೇಡ್ಕರ್ ಅವರ ಜಾತ್ಯಾತೀತ ಬಹುಮುಖಿ ಮಾನವೀಯ ನೆಲೆಗಳು ಸಾಕಾರಗೊಳ್ಳುವುದಿಲ್ಲ. ಭಾರತೀಯ ಸಂದರ್ಭದಲ್ಲಿ ಅಂಬೇಡ್ಕರ್ ಅವರನ್ನ ಜಾತಿ ಕೇಂದ್ರಿತ ದಲಿತ ನೆಲೆಯಲ್ಲಿಯೇ ವ್ಯಾಖ್ಯಾನಿಸಲಾಗುತ್ತಿದೆ. ಈ ಬಗೆಯ ಮನೋಧರ್ಮ ವಿದ್ಯಾವಂತ ಸಮುದಾಯದಲ್ಲಿ ವಿಪರೀತವಾಗಿರುವುದು ನಾಗರೀಕ ಸಮಾಜ ತಲೆ ತಗ್ಗಿಸುವುದಾಗಿದೆ. ಇದು ಭಾರತೀಯ ಸಾಮಾಜಿಕ ಹಾಗೂ ಬೌದ್ಧಿಕ ದಿವಾಳಿತನದ ಸಂಕೇತವೇ ಸರಿ. ಮಹಿಳಾಪರ ಹಕ್ಕುಬಾಧ್ಯತೆಗಳ ಪ್ರಾತಿನಿಧ್ಯವಾಗಿದ್ದ 'ಹಿಂದೂ ಕೋಡ್ ಬಿಲ್' ತಿರಸ್ಕೃತ ಗೊಂಡ ಕಾರಣಕ್ಕಾಗಿ ತಮ್ಮ ಕಾನೂನು ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟ ಏಕೈಕ ಭಾರತೀಯ ಪ್ರಜಾಪ್ರತಿನಿಧಿ ಅಂಬೇಡ್ಕರ್. ಅವರಿಗಿದ್ದ ಮಹಿಳಾಪರ ಕಳಕಳಿಗೆ ಈ ಚಾರಿತ್ರಿಕ ಪ್ರಸಂಗವೇ ನಿದರ್ಶನ. ಆದರೆ ಈವರೆಗಿನ ಬಹುತೇಕ ಭಾರತೀಯ ಮಹಿಳಾ ಚಳುವಳಿಗಳಿಗೆ ಅಂಬೇಡ್ಕರ್ ಅವರ ಸ್ತ್ರೀ ಸಂವೇದನೆಯ ಮಹತ್ವ ಅರ್ಥವಾಗದಿರುವುದು ವಿಪರ್ಯಾಸ. "ಭೂ ರಾಷ್ಟ್ರೀಕರಣ; ಸಹಕಾರ ಕೃಷಿ ಪದ್ಧತಿ; ಜಾತಿ–ಅಸ್ಪೃಶ್ಯತೆಯ ನಿರ್ಮೂಲನೆ ಅಂತರ್ ಜಾತಿ ವಿವಾಹ; ಸಂಪತ್ತಿನ ಸಮಾನ ಹಂಚಿಕೆ; ಆಸ್ತಿ ಮಿತಿ ಕಾಯಿದೆ; ಧಾರ್ಮಿಕ ಸ್ವಾತಂತ್ರ್ಯ; ಮೀಸಲಾತಿ ಮೂಲಕ ಸಾಮಾಜಿಕ ನ್ಯಾಯ; ಕಾರ್ಮಿಕರ ಸಂಘಟನೆ ರಾಜಕಾರಣದ ಅಗತ್ಯತೆ; ಶೋಷಣೆರಹಿತ ಸಮಸಮಾಜದ ಅಸ್ತಿತ್ವಕ್ಕಾಗಿ ಶೋಷಿತರ ಕೈಗೆ ರಾಜ್ಯಾಧಿಕಾರ; ಸರ್ವರಿಗೂ ಶಿಕ್ಷಣದ ಅವಶ್ಯಕತೆ – ಕುರಿತ ಅಂಬೇಡ್ಕರ್ ಅವರ ಚಿಂತನೆಗಳ ತಲಸ್ಪರ್ಶಿ ಅಧ್ಯಯನ ಹಾಗೂ ಅನುಷ್ಠಾನದ ಅನಿವಾರ್ಯತೆ ಇದೆ. ಆ ಮೂಲಕ ಇಂದು ನಮ್ಮನ್ನು ಕಾಡುತ್ತಿರುವ ಹಲವು ಜ್ವಲಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರಗಳನ್ನು ಕಂಡುಕೊಳ್ಳಬಹುದಾಗಿದೆ. ಇದರೊಟ್ಟಿಗೆ ಇಂದು ಶೋಷಿತ ಸಮುದಾಯದ ಸ್ವಾಭಿಮಾನದ ಪ್ರಶ್ನೆಯಾಗಿರುವ 'ಪೂನಾ ಒಪ್ಪಂದ'ದ ಮರುವಿಮರ್ಶೆಯ ತುರ್ತಿದೆ. ಬಹುಶಃ ಇವತ್ತಿನ ದಲಿತರ ಸ್ವಾಭಿಮಾನ ರಹಿತೆ, ಅತಂತ್ರ, ಜೀತರಾಜಕಾರಣದ ಸ್ಥಿತಿಗೆ ಪೂನಾ ಒಪ್ಪಂದ ಕಾರಣವನ್ನು ಅಷ್ಟು ಸುಲಭವಾಗಿ ನಿರ್ಲಕ್ಷಿಸಲು ಸಾಧ್ಯವಿಲ್ಲ. ಈ ಚರ್ಚೆಯ ಮೂಲಕವೇ, ದಲಿತರ ರಾಜ ಕಾರಣದ ದಿಕ್ಕು ದೆಸೆಗಳನ್ನು ಸ್ಪಷ್ಟವಾಗಿ ಕಂಡುಕೊಳ್ಳ ಬೇಕಿದೆ.

ಬುದ್ಧನನ್ನು ಮರಳಿ ಭಾರತಕ್ಕೆ ಕರೆತಂದ ಅಂಬೇಡ್ಕರ್ ಅವರ ಆಮೂಲಾಗ್ರ ಚಿಂತನೆ ಬೌದ್ಧನೆಲೆಯದ್ದಾಗಿದೆ. ಸಮತೆ, ಮೈತ್ರಿ, ಕರುಣೆವೇ ಮೈವೆತ್ತ ನಮ್ಮ 'ಸಂವಿಧಾನ' ಇದಕ್ಕೆ ಸೂರ್ಯಸತ್ಯ ನಿದರ್ಶನವಾಗಿದೆ. ಎಲ್ಲಾ ಜಾತಿ ಜನವರ್ಗಗಳ ಏಳಿಗೆಯ ಬಗ್ಗೆ ದೂರದೃಷ್ಟಿಯ ವಿವೇಚನೆ ಇದ್ದ ಬಹುದೊಡ್ಡ ದಾರ್ಶನಿಕ ಚಿಂತಕರಾಗಿ ಅಂಬೇಡ್ಕರ್

ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಸರ್ವ ಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರೀಕತೆಗೆ; ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ; ಸ್ಥಾನಮಾನ ಹಾಗೂ ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿಗೌರವ, ರಾಷ್ಟ್ರದ ಏಕತೆ ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಲು ಶ್ರದ್ಧಾ ಪೂರ್ವಕ ಸಂಕಲ್ಪ ಮಾಡಿದವರಾಗಿ". ಸಂವಿಧಾನದ 'ಪ್ರಸ್ತಾವನೆ'ಯ ಈ ಮಾತುಗಳೇ ಇಡೀ ಸಂವಿಧಾನದ ಬುದ್ಧನಾಶಯವನ್ನು ಸಾಕ್ಷಾತ್ಕರಿಸುತ್ತದೆ.

ಕಾಣುತ್ತಾರೆ. ಆದರೆ 'ಸಂವಿಧಾನ' ದೇಶದ ದಲಿತರಿಗಷ್ಟೇ ಮೀಸಲಾದದ್ದು ಎಂಬ ಅಪಾಯಕಾರಿ ಧೋರಣೆಗಳನ್ನು ಬಿತ್ತಲಾಗುತ್ತಿದೆ. "ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಸರ್ವ ಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರೀಕತೆಗೆ; ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ; ಸ್ಥಾನಮಾನ ಹಾಗೂ ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿಗೌರವ, ರಾಷ್ಟ್ರದ ಏಕತೆ ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ". ಸಂವಿಧಾನದ 'ಪ್ರಸ್ತಾವನೆ'ಯ ಈ ಮಾತುಗಳೇ ಇಡೀ ಸಂವಿಧಾನದ ಬುದ್ಧನಾಶಯವನ್ನು ಸಾಕ್ಷಾತ್ಕರಿಸುತ್ತದೆ. ಇದನ್ನು ಸಾಕಾರಗೊಳಿಸಿಕೊಂಡಾಗ ಮಾತ್ರ ಜಾತಿವಾದ ಮತಾಂಧ ಭಾರತ; ಜಾತ್ಯಾತೀತ – ಸರ್ವಧರ್ಮ ಸಮನ್ವಯ ಪ್ರಜಾಪ್ರಭುತ್ವ ರಾಷ್ಟ್ರವಾಗಲಿಕ್ಕೆ ಸಾಧ್ಯ. ದಲಿತತ್ವಕ್ಕೆ ಜಾತ್ಯಾತೀತ ಮೌಲ್ಯವನ್ನು ಅರಗಿಸಿಕೊಳ್ಳುವ ಅನುಷ್ಠಾನಗೊಳಿಸುವ ಜೀವಪರ ತುಡಿತವಿರುವುದನ್ನು ಅಂಬೇಡ್ಕರ್ ತಮ್ಮ ಬದುಕು ಮತ್ತು ಬರಹದ ಮೂಲಕ ಸಾಬೀತುಪಡಿಸಿದ್ದಾರೆ. ಈ ಕಾರಣಕ್ಕಾಗಿ 'ಅಂಬೇಡ್ಕರ್ ಸಂಸ್ಮರಣಾ ದಿನಾಚರಣೆ' ಅರಿವಿನೆಚ್ಚರದ ಅನುಷ್ಠಾನದ ಬುದ್ಧಪೂರ್ಣಿಮೆಯಾಗಬೇಕಿದೆ. ಆ ಮೂಲಕ ಅಂಬೇಡ್ಕರ್ ಕನಸುಕಂಡಿದ್ದ ಸಂಪೂರ್ಣ 'ಬುದ್ಧ ಭಾರತ'ವನ್ನು ಜಾತ್ಯಾತೀತ ನೆಲೆಗಟ್ಟಿನ ಮೇಲೆ ಕಟ್ಟಬಹುದಾಗಿದೆ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಧರ್ಮ- ಅಧ್ಯಾತ್ಮ, ಗಾಂಧೀ ಮಹಾತ್ಮಾ, ಜೈಹೋ ಪ್ರಜಾಪ್ರಭುತ್ವ!

ಆಗಸ್ಟ್ ೧೪ರ ಮಧ್ಯರಾತ್ರಿ ನೆಹರೂರವರು ರಾಷ್ಟ್ರವನ್ನುದ್ದೇಶಿಸಿ ಮಾತನಾಡುತ್ತಾ ಈ ಮಧ್ಯರಾತ್ರಿಯಲ್ಲಿ ಜಗತ್ತು ಮಲಗಿ ನಿದ್ರಿಸುತ್ತಿರುವಾಗ ಭಾರತ ಬದುಕು ಮತ್ತು ಸ್ವಾತಂತ್ರಕ್ಕಾಗಿ ಎಚ್ಚರಗೊಂಡಿದೆ ಎಂದು ಕಾವ್ಯಾತ್ಮಕ ಲಹರಿಯಲ್ಲಿ ಹೇಳುತ್ತಾರೆ. ಆದರೆ ಅವುಗಳು ನಿಜವಾಗಿತ್ತೇ? ಭಾರತದ ಬಹುಪಾಲು ಜನರು ದೂರದ ಹಳ್ಳಿ-ಪಟ್ಟಣಗಳಲ್ಲಿ ಕತ್ತಲೆಯಲ್ಲಿ ಮಲಗಿದ್ದರು. ದೇಶದ ಇನ್ನು ಕೆಲವೆಡೆ ರಕ್ತದಾಹಿಗಳಾದ ಸಮಾಜ ಘಾತುಕ ಗುಂಪುಗಳು ಈ ಜನರ ಮನೆ ಮಾರುಗಳನ್ನು ಸುತ್ತುವರಿದಿದ್ದರಿಂದ ಅವರೆಲ್ಲಾ ಭಯ ಭೀತರಾಗಿದ್ದರು. ಇದರ ನಡೆವೆಯೇ ನಾವು ಸಮೃದ್ಧ ಚಿಂತನೆ, ಮಹಾನ್ ಸಂಸ್ಕೃತಿ ಮಹತ್‌ಕಾರ್ಯ ಮತ್ತು ಮಾನವತೆಯ ಸೇವೆಯಲ್ಲಿ ಸಂಪನ್ನವಾಗಿರುವ ಸಶಕ್ತ ಭಾರತವನ್ನು ಕಟ್ಟುತೇವೆ ಎಂಬ ಘೋಷಣೆಗಳು ಅನುರಣಿಸಿದವು. ಧಾರ್ಮಿಕ ರಾಷ್ಟ್ರೀಯತಾವಾದ ನಮ್ಮ ಸಾಮೂಹಿಕ ಬಹುರೂಪಿ ಸೆಕ್ಯೂಲರ್ ರಾಷ್ಟ್ರೀಯವಾದಕ್ಕೆ ವಿರುದ್ಧವಾಗಿದ್ದು ಇದು ಬಹು ರೂಪತೆಗಳ್ನನು ನಾಶಪಡಿಸುತ್ತದೆ.

ಮುಸ್ತಾಫಾ ಆತೂರು

ಸಂವಿಧಾನಾತ್ಮಕವಾಗಿ ನಿರ್ವಚಿಸಲ್ಪಟ್ಟ ಉದಾರವಾದಿ ಮತ್ತು ಸಹಿಷ್ಣುತೆಯ ಭಾರತದ ಕಲ್ಪನೆ ಹಾಗೂ ನಾವೆಲ್ಲರೂ ಅರ್ಥೈಸಿಕೊಂಡಿರುವ ಮತ್ತು ಆಚರಿಸುತ್ತಿರುವ 'ಬದುಕಿ ಮತ್ತು ಬದುಕಲು ಬಿಡಿ' ಎಂಬ ತತ್ವದ ಮೇಲೆ ಅಧಿಷ್ಠಿತವಾಗಿರುವ ಭಾರತ ಇಂದು ಎಲ್ಲಾ ಕಡೆಗಳಿಂದ ದಾಳಿಗೊಳಗಾಗುತ್ತಿದೆ. ಅವೈಚಾರಿಕ ಮತ್ತು ಆಕ್ರಮಣಕಾರೀ ವಿಕೃತ ಬೇಡಿಕೆಗಳನ್ನು ಮೊಳಕೆಯಲ್ಲೇ ಚಿವುಟದಿದ್ದರೆ ಅದರ ಪ್ರತ್ಯಾಘಾತಗಳು ಇಡೀ ಭಾರತದ ಉದಾರವಾದಿ ಪ್ರಜಾಸತ್ತಾತ್ಮಕ ಧರ್ಮ ನಿರಪೇಕ್ಷ ಸಹಿಷ್ಣುತೆಯ ಅನುಬಂಧವನ್ನು ನಾಶಗೊಳಸಬಹುದು. ಈ ರೀತಿಯ ಬೆದರಿಕೆಗಳು ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದ್ದು ನಮ್ಮ ಸಂವಿಧಾನ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಹಾಗೂ ಭಾರತದ ಬೆಗೆಗಿನ ನಮ್ಮ ಸಾಮೂಹಿಕ ಕಲ್ಪನೆಗೆ ಸವಾಲಾಗಿ ನಿಂತಿರುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಭಾರತ ಹಲವು ಬಗೆಯ ಜನಾಂಗೀಯ, ಭಾಷಿಕ ಮತ್ತು ಧಾರ್ಮಿಕ ವೈವಿಧ್ಯತೆಗಳನ್ನು ಹೊಂದಿದ್ದು, ಒಂದು ಪ್ರಜಾಸತ್ತಾತ್ಮಕ ರಿಪಬ್ಲಿಕನ್ ಸಂವಿಧಾನದ ಕೆಳಗೆ, ಒಂದೆ ಧ್ವಜದಡಿಯಲ್ಲಿ ಒಂದುಗೂಡಿರುವುದು ಒಂದು ವೈಶಿಷ್ಟ್ಯತೆಯಾಗಿದೆ.

ಹಲವು ಅನೇಕತೆಗಳಿಂದ ಒಂದು ದೇಶವನ್ನು ರೂಪಿಸಿದ ಪ್ರಯೋಗ ಜಗತ್ತಿನಲ್ಲಿ ಬಹಳ ವಿರಳ. ಇದು ಹಳೆಯ ಸೋವಿಯಟ್ ಯೂನಿಯನ್ ಮತ್ತು ಯುಗೊಸ್ಲೋವಿಯಾಕ್ಕಿಂತಲೂ ಭಿನ್ನವೆಂದು ಶ್ರುತಪಟ್ಟಿದೆ. ನಮ್ಮ ಸಂವಿಧಾನದ ನಿರ್ಮಾತೃಗಳು ಒಂದು ಗಣರಾಜ್ಯವನ್ನು ಸ್ಥಾಪಿಸಿದರು, ಯಾಕೆಂದರೆ ಯಾವನೇ ಒಬ್ಬ ಚಕ್ರವರ್ತಿ ಇಂತಹ ದೇಶವನ್ನು ಜೊತೆಯಾಗಿ ಮುನ್ನಡೆಸಲಾರ. ಗಾಂಧೀ ಮತ್ತು ಟಾಗೋರ್ ವೈವಿಧ್ಯತೆಯೊಂದಿಗೆ ಏಕತೆ (Unity with Diversity) ಭಾರತ ರಾಷ್ಟ್ರೀಯ ಪರಿಕಲ್ಪನೆಯ ಸಾಮಾಜಿಕ-ಸಾಂಸ್ಕೃತಿಕ ತಳಹದಿಯಾಗಿರಬೇಕೆಂದು ಪದೇ ಪದೇ ಆಗ್ರಹಿಸಿದರು. ಸ್ವಾತಂತ್ರ ಬಂದ ದಿನದಿಂದಲೇ ನಾವು ಮತ್ತು ನಮ್ಮ ರಾಷ್ಟ್ರೀಯ ನಾಯಕತ್ವ ತೀವ್ರವಾದ ಸಮಸ್ಯೆಗಳನ್ನು ಗೌಣವಾಗಿಸುತ್ತಾ ಬಂದೆವು. ಇಂದಿಗೂ ಬೃಹದಾಕಾರವಾಗಿ ಬೆಳೆದು ನಿಂತಿರುವ ಸವಾಲುಗಳು ಮತ್ತು ವ್ಯವಸ್ಥೆಯ ಬೇರುಗಳನ್ನೇ ಅಲುಗಾಡಿಸುತ್ತಿರುವ ಸಮಸ್ಯೆಗಳ ಬಗ್ಗೆ ನಾವು ಚಿಂತಿತರಾಗಿಲ್ಲ. ನಾವು ಹೃಸ್ವಕಾಲಿನ ಲಾಭ ಮತ್ತು ಅಲಂಕಾರಿಕ ಬಣ್ಣದ ಘೋಷಣೆಗಳಿಂದಲೇ ತೃಪ್ತರಾಗುತ್ತಿದ್ದೇವೆ.

ಆಗಸ್ಟ್ 14ರ ಮಧ್ಯರಾತ್ರಿ ನೆಹರೂರವರು ರಾಷ್ಟ್ರವನ್ನುದ್ದೇಶಿಸಿ ಮಾತನಾಡುತ್ತಾ ಈ ಮಧ್ಯರಾತ್ರಿಯಲ್ಲಿ ಜಗತ್ತು ಮಲಗಿ ನಿದ್ರಿಸುತ್ತಿರುವಾಗ ಭಾರತ ಬದುಕು ಮತ್ತು ಸ್ವಾತಂತ್ರಕ್ಕಾಗಿ ಎಚ್ಚರಗೊಂಡಿದೆ ಎಂದು ಕಾವ್ಯಾತ್ಮಕ ಲಹರಿಯಲ್ಲಿ ಹೇಳುತ್ತಾರೆ. ಆದರೆ ಅವುಗಳು ನಿಜವಾಗಿತ್ತೇ? ಭಾರತದ ಬಹುಪಾಲು ಜನರು ದೂರದ ಹಳ್ಳಿ ಮತ್ತು ಪಟ್ಟಣಗಳಲ್ಲಿ ಕತ್ತಲೆಯಲ್ಲಿ ಮಲಗಿದ್ದರು. ದೇಶದ ಇನ್ನು ಕೆಲವೆಡೆ ರಕ್ತದಾಹಿಗಳಾದ ಸಮಾಜ ಘಾತುಕ ಗುಂಪುಗಳು ಈ ಜನರ ಮನೆ ಮಾರುಗಳನ್ನು ಸುತ್ತುವರಿದಿದ್ದರಿಂದ ಅವರೆಲ್ಲಾ ಭಯಭೀತರಾಗಿದ್ದರು. ಇದರ ನಡೆವೆಯೇ ನಾವು ಸಮೃದ್ಧ ಚಿಂತನೆ, ಮಹಾನ್ ಸಂಸ್ಕೃತಿ ಮಹತ್‌ಕಾರ್ಯ ಮತ್ತು ಮಾನವತೆಯ ಸೇವೆಯಲ್ಲಿ ಸಂಪನ್ನವಾಗಿರುವ ಸಶಕ್ತ ಭಾರತವನ್ನು ಕಟ್ಟುತೇವೆ ಎಂಬ ಘೋಷಣೆಗಳು ಅನುರಣಿಸಿದವು.

ಧಾರ್ಮಿಕ ರಾಷ್ಟ್ರೀಯ ತಾವಾದ ನಮ್ಮ ಸಾಮೂಹಿಕ ಬಹುರೂಪಿ ಸೆಕ್ಯೂಲರ್ ರಾಷ್ಟ್ರೀಯವಾದಕ್ಕೆ ವಿರುದ್ಧವಾಗಿದ್ದು ಇದು ಬಹುರೂಪತೆಗಳ್ನನು ನಾಶಪಡಿಸುತ್ತದೆ. ಸಾಂಸ್ಥೀಕರಣಗೊಂಡಿರುವ ಈ ಬೃಹತ್ ಪ್ರಜಾಪ್ರಭುತ್ವ ಬಹುರೂಪಿ ರಾಷ್ಟ್ರೀಯತೆಯೇ ಭಾರತವನ್ನು ಒಂದಾಗಿಸಿ ಎಲ್ಲಾ ಪ್ರಜೆಗಳಿಗೂ ಸಮಾನ ಸ್ಥಾನಮಾನಗಳನ್ನು ನೀಡಿದ್ದು ಸಂವಿಧಾನ ಅವರ ಧಾರ್ಮಿಕ-ಸಾಂಸ್ಕೃತಿಕ ಹಕ್ಕುಗಳನ್ನು ಸುರಕ್ಷಿತವಾಗಿರಿಸಿದೆ.

ಇಂದು ಧರ್ಮ-ಸಂಸ್ಕೃತಿಯನ್ನು ನೆಪವಾಗಿಟ್ಟುಕೊಂಡು ನಡೆಸುತ್ತಿರುವ ಕಪಟ ತಂತ್ರಗಳು ಮತ್ತು ರಾಜಕೀಯ ಗಿಮಿಕ್‌ಗಳು, ಸರಳವಾದ ಮಾನವೀಯ ಸಮಾಜಕ್ಕೆ ಮತ್ತು ಸಂಬಂಧಗಳಿಗೆ ವಿರುದ್ಧ

ವಾಗಿದ್ದು ಜನತೆಯನ್ನು ಸ್ಫೂಕ್ತವಾಗಿ ಪ್ರೀತಿಸುವ ಅವರ ನೈಜ ಮಾನ ವೀಯ ಸಂವೇದನೆಗಳಿಗೆ ಸ್ಪಂದಿಸುವ ಯಾವುದೇ ಪ್ರಾಮಾಣೀಕತೆ ಯನ್ನು ಹೊಂದಿಲ್ಲ.

ಸತ್ಯನ್ನು ಸಾಕ್ಷಾತ್‌ಕಾರಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಧರ್ಮಗಳು ಸಾರಿದ ಮಾನವೀಯ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನೊಳಗೊಂಡ ಸಂದೇಶವನ್ನು ಗಾಂಧೀಜಿಯವರು ನಮಗೆ ಬೋಧಿಸಿದರು. ಸತ್ಯ, ಅಹಿಂಸೆ, ತ್ಯಾಗ-ಶಾಂತಿಯ ಉದಾತ್ತಮೌಲ್ಯಗಳನ್ನೊಳಗೊಂಡ ಈ ನಮ್ಮ ಬಹುರೂಪಿ ಸಮಾಜ ಮತ್ತು ಸಾಂಸ್ಕೃತಿಕ ಸತ್ಯಂಗದ ಅಪೂರ್ವ ಶಕ್ತಿ ಹಾಗೂ ಇಲ್ಲಿನ ಬಹು ಧರ್ಮೀಯರು ಜೀವನ ವಿಧಾನ ಮತ್ತು ನಾಗರೀಕತೆಯ ಶ್ರೀಮಂತ ಪರಂಪರೆಯನ್ನು ನಾವ 'ಲ್ಲರೂ ಅಂಗೀಕರಿಸಿ ಗೌರವಿಸುತ್ತಿದ್ದೇವೆ. ಈ ದೃಷ್ಟಿಕೋ ನವೇ ಭಾರತೀಯ ಜೀವನದ ಬುನಾದಿಯೆಂದೂ, ಎಲ್ಲೇ ಆಗಲಿ ಯಾರೇ ಆಗಲಿ ಇದಕ್ಕೆ ವ್ಯತಿರಿಕ್ತವಾದ ಯಾವುದೇ ಕೃತ್ಯವನ್ನೆಸಗುವುದು ನಮ್ಮ ದೇಶದ ಮಹೋನ್ನತ ಪಾರಂಪರಿಕ ಸದಾಚಾರ ಮತ್ತು ಸಹನೆಯ ಶಾಶ್ವತ ಮೌಲ್ಯಗಳಿಗೆ ಅಪಾಯವನ್ನೊಡ್ಡುವ-ರಾಷ್ಟ್ರೀಯ ತಳಹದಿ ಯನ್ನೇ ಧ್ವಂಸಗೊಳಿಸಿದಂತೆ. ಇದನ್ನು ನಾವೆಲ್ಲರೂ ಸಾರ್ವತ್ರಿಕವಾಗಿ ಒಪ್ಪಿಕೊಂಡಿರುತ್ತೇವೆ.

ಗಾಂಧಿಯ ಧರ್ಮ ಅಚರಣೆಗಳು, ಮೂಢನಂಬಿಕೆ ಮತ್ತು ಮತಾಂಧತೆಯಿಂದ ಹೊರತಾಗಿತ್ತು. ಬಹುಶಃ ಈ ಕಾರಣದಿಂದಲೇ ಸಾಬರಮತಿ ಆಶ್ರಮ ಅಥವಾ ವಾರ್ಧದಲ್ಲಿ ಯಾವುದೇ ದೇವಾಲಯಗಳಿರಲಿಲ್ಲ. ಆದರೆ ಅಲ್ಲಿ ಧರ್ಮ ಮತ್ತು ನೈತಿಕ ಮೌಲ್ಯಗಳಿಗೆ ಸಾಕಷ್ಟು ಮರಾವೆಗಳಿತ್ತು. ಈ ಆಶ್ರಮಗಳಲ್ಲಿ ಸತ್ಯದ ಶೋಧನೆಯಲ್ಲಿ ತೊಡಗಿದ್ದ ಗಾಂಧಿ ಮತ್ತು ಆತನ ಸಹ ಸತ್ಯಾಗ್ರಹಿಗಳಿದ್ದರು. ಅಲ್ಲಿ ಅಹಿಂಸೆ, ಸತ್ಯ, ಕರುಣೆ, ಸ್ವಾತಂತ್ರ, ವೈರಿಯನ್ನು ಪ್ರೀತಿಸುವುದು, ರಾಜಕೀಯ, ನೈತಿಕತೆ, ಸಮುದಾಯ ಸೇವೆ ಮತ್ತು ಜಾತ್ಯಾತೀತ ಮೌಲ್ಯಗಳೆಲ್ಲವೂ ಮೇಳೈಸಿದ್ದವು. ಗಾಂಧೀಜಿಗೆ ಎಲ್ಲಾ ಧರ್ಮಗಳೂ ಸತ್ಯವೇ ಆಗಿದ್ದವು. 1928ರ ಬಾರ್ಡೋಲಿ ಸತ್ಯಾಗ್ರ, 1930ರ ಚಾರಿತ್ರಿಕ ದಾಂಡಿ ಸತ್ಯಾಗ್ರಹ, 1942ರ ಕ್ವಿಟ್ ಇಂಡಿಯಾ ಚಳವಳಿಗಳಲ್ಲಿ ಸತ್ಯಾಗ್ರಹಿಗಳು ಗಾಂಧೀಜಿಯವರ ಸತ್ಯ, ಅಹಿಂಸೆ, ತಪಸ್ಯದಂತಹ ತತ್ವಗಳೊಂದಿಗೆ ಆತ್ಮಬಲ ಮತ್ತು ನೈತಿಕ ಶಕ್ತಿಯೊಂದಿಗೆ ಹೋರಾಟಕ್ಕಿಳಿದಿದ್ದರು. ಗಾಂಧೀಜಿಯವರ ದೃಷ್ಟಿಯಲ್ಲಿ ಧರ್ಮವೆನ್ನುವುದು ರಾಜಕೀಯ ಜೀವನದಲ್ಲಿ ಧನಾತ್ಮಕ ಮೌಲ್ಯಗಳನ್ನು ಬಿತ್ತಿ ಬೆಳೆಸಲು ಸಹಕಾರಿಯಾಗಬೇಕಿದೆ, ಆದರೆ ಇಂದು ಧರ್ಮ ಜನರ ಭಾವನೆಗಳನ್ನು ಕೆರಳಿಸಲು ಮತ್ತು ಅವರನ್ನು ಹಿಂಸಾತ್ಮಕ ಕೃತ್ಯಗಳಿಗೆ ಅಣಿಗೊಳಿಸಲು ಅನುಕೂಲಕರ ಸಾಧನವಾಗಿ ಬಳಸಲ್ಪಡುತ್ತಿದೆ. ಗಾಂಧೀಜಿಯವರು ಧರ್ಮವನ್ನು ರಾಜಕೀಯದಲ್ಲಿ ಹೇಗೆ ಬಳಸಿಕೊಂಡರೆಂಬುದು ನಿಜಕ್ಕೂ ಒಂದು ರೋಚಕ ಕಥನ. ಡಾ: ಸರ್ವಪಲ್ಲಿ ರಾಧಾಕೃಷ್ಣನ್ ಗಾಂಧೀಜಿಯವರನ್ನು ಈ ರೀತಿ ಪ್ರಶ್ನಿಸುತ್ತಾರೆ (1) ನಿಮ್ಮ ಧರ್ಮ ಯಾವುದು? (2) ನೀವು ಅದರ ಕಡೆಗೆ ಹೇಗೆ ಆಕರ್ಷಿತರಾದಿರಿ? (3) ಸಾಮಾಜಿಕ ಬದುಕಿನ ಮೇಲೆ ಅದರ ಪ್ರಭಾವವೇನು? ಇದಕ್ಕೆ ಉತ್ತರವಾಗಿ ಗಾಂಧೀ ಹೇಳುತ್ತಾರೆ ನನ್ನ ಧರ್ಮ ಹಿಂದೂ ಅದು ನನ್ನ ಮಟ್ಟಿಗೆ ಮಾನವತೆಯ ಧರ್ಮ. ನಾನು ಸತ್ಯ ಮತ್ತು ಅಹಿಂಸೆ ಅಥವಾ ವಿಶಾಲ ಅರ್ಥದಲ್ಲಿ ಪ್ರೀತಿಯ ಮೂಲಕ ಅದನ್ನು ಕಂಡುಕೊಂಡೆ. ಸತ್ಯವೇ ನನ್ನ ಧರ್ಮ ನಿತ್ಯ ಪ್ರಾರ್ಥನೆಯ ಮೂಲಕ ನಾನು ಸತ್ಯದ ಸಾಮೀಪ್ಯವನ್ನು ಬಯಸುತ್ತೇನೆ. ಎಲ್ಲಾ ಜೀವಿಗಳ ಸೇವೆಗಾಗಿ ನಿರಂತರ ತನ್ನನ್ನು ವ್ಯಯಿಸುವುದು ಧರ್ಮದ ಉಪಾಧಿ ಎನ್ನುವುದು ಗಾಂಧಿಯ ನಿಲುವು.

ಗಾಂಧೀಜಿಯವರು ರಾಜಕೀಯವನ್ನೇ ತತ್ವಶಾಸ್ತ್ರದ ನೆಲೆಯಲ್ಲಿ ಗ್ರಹಿಸಿದ್ದರು. ರಾಜಕೀಯವನ್ನು ಒಂದು ಸಾಮಾಜಿಕ ತತ್ವ ಚಿಂತನೆಯಾಗಿ ಜನರ ಸಾಮಾಜಿಕ ಪ್ರಜ್ಞೆಯ ಅಭಿವ್ಯಕ್ತಿಯಾಗಿ ಕಾಣುವುದಕ್ಕೆ ಕಲಿಸಿದರು. ಆದರೆ ಈಗ ರಾಜಕೀಯ ಒಂದು ಕಲೆಯಾಗಿ, ತಂತ್ರವಾಗಿ ಅಧಿಕಾರವನ್ನು ಗಿಟ್ಟಿಸುವುದಕ್ಕೆ ಯಾವ ಮಾರ್ಗವನ್ನೂ ಅನುಸರಿಸಲು ಸಿದ್ಧವಾಗಿರುವ ಒಂದು ಹಂತಕ್ಕೆ ಬಂದು ನಿಂತಿದೆ. ಮಾರ್ಗ ಮತ್ತು ಗುರಿಗಳಲ್ಲಿ ಪರಿಶುದ್ಧತೆ ಮತ್ತು ಸತ್ಯ ಸಂಧತೆಯಿಲ್ಲ. ಭಾರತೀಯ ರಾಜಕಾರಣದ ನೈತಿಕ ಪುನರ್ ಸಂಘಟನೆಯ ಕೆಲಸ ಬಹುದೂರ ಸಾಗಬೇಕಿದೆ. ಕಡು ಬಡತನದಲ್ಲಿರುವ ದಟ್ಟದರಿದ್ರರಿಗೂ ಸಂವಿಧಾನ ಕೊಡಮಾಡಿದ ಹಕ್ಕುಗಳನ್ನು ಪಡೆಯುವ ಅವಕಾಶಗಳು ಸಿಗಬೇಕು. ನಮ್ಮ ಸ್ವಾತಂತ್ರ ಮತ್ತು ಪ್ರಜಾಪ್ರಭುತ್ವದ ಉದ್ದೇಶ ಪ್ರತಿಯೊಬ್ಬ ಸಾಮಾನ್ಯ ಪ್ರಜೆಯನ್ನು ಸಶಕ್ತನನ್ನಾಗಿಸುವುದು ಮತ್ತು ಅವರೆಲ್ಲರಿಗೂ ಗೌರವ ಮತ್ತು ಘನತೆಯಿಂದ ಬದುಕುವ ಶಕ್ತಿಯನ್ನು ನೀಡುವುದಾಗಿದೆ. ಶತಮಾನಗಳಿಂದ ಬೇರು ಬಿಟ್ಟಿರುವ ಶ್ರೇಣಿಕೃತ ಸಮಾಜ ತೊಲಗಬೇಕು ಎಲ್ಲರೂ ಸಮಾನತೆಯಿಂದ ಬದುಕಬೇಕು. ಸಂಪತ್ತು ಒಂದು ಕಡೆ ಸಂಗ್ರಹವಾಗುವುದನ್ನು ತಪ್ಪಿಸಬೆಕು. ದುಡಿಯುವ ವರ್ಗ ದೇಶದ ಅಧಿಕಾರ ಸೂತ್ರ ಹಿಡಿಯಬೇಕು. ಇದು ಭಗತ್ ಸಿಂಗ್ ಅವರ ಸ್ವಾತಂತ್ರ್ಯದ ಪರಿಕಲ್ಪನೆಯಾಗಿತ್ತು. ನನ್ನ ಜೀವನವೇ ನನ್ನ ಸಂದೇಶ ಎಂದು ಹೇಳಲು ಸಾಧ್ಯವಾದದ್ದು ಗಾಂಧಿಗೆ ಮಾತ್ರ. ಜ್ಯೂಲಿಯಸ್ ನೆರೇರೆ ಕೆನೆತ್ ಕೌಂಡಾ, ನೆಲ್ಸನ್ ಮಂಡೇಲಾ, ಮಾರ್ಟಿನ್ ಲೂಥರ್ ಕಿಂಗ್, ಆಂಗ್ ಸನ್ ಸೂಯಕಿ, ದಲೈಲಾಮ ಗಾಂಧೀಜಿಯವರ ಸತ್ಯಾಗ್ರಹದ ಮಾರ್ಗವನ್ನು ಅನುಸರಿಸಿದರು.

ಗಾಂಧೀಜಿ ಹಿಂದ್ ಸ್ವರಾಜ್‌ನಲ್ಲಿ ನಾಗರಿಕತೆಗಳಲ್ಲಿನ ನೈತಿಕ ಕೊರತೆಯನ್ನು ಪ್ರಸ್ತಾಪಿಸುತ್ತಾರೆ. ಆಧುನೀಕರಣ ಮತ್ತು ಇಂದಿನ ಜಾಗತೀಕರಣ ಆತ್ಮರಹಿತ ರಾಜಕಾರಣದೊಂದಿಗೆ ನಿಕಟವಾಗಿದೆ. ಗಾಂಧಿಜಿಯವರ ಪ್ರಕಾರ ಎಲ್ಲಾ ರಾಜಕೀಯ ಸಂಸ್ಥೆಗಳು ಕೇವಲ ಅಧಿಕಾರವನ್ನು ಪಡೆಯುವ ಸಾಧನಗಳಾಗಿವೆ. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಂಪತ್ತಿನ ಒಡೆತನವನ್ನು ಹೆಚ್ಚಿಸುವುದು, ಕಾಯ್ದುಕೊಳ್ಳುವುದು ಮತ್ತು ಅಧಿಕಾರಕ್ಕೆ ಸಂಬಂಧಿಸಿದಂತೆ ಎಲ್ಲಾ ಬಗೆಯ ಮಾನಸಿಕ ಪ್ರೇರಣೆಯನ್ನು ನೀಡುವುದಾಗಿದೆ. ಈ ಬಗೆಯ ಅಧಿಕಾರ ಅನಿವಾರ್ಯವಾಗಿ ನೈತಿಕತೆ, ಅಹಿಂಸೆ, ಸ್ವಾರ್ಥರಹಿತತೆ, ಸತ್ಯ ಮತ್ತು ಧರ್ಮದಿಂದ ತನ್ನನ್ನು ದೂರವಾಗಿಸಿಕೊಂಡಿದೆ.

ಗೋಖಲೆಯವರು ರಾಜಕೀಯವನ್ನು ಆಧ್ಯಾತ್ಮೀಕರಣಗೊಳಿಸಬೇಕೆಂದು ಹೇಳಿದರು. ರಾಜಕೀಯ, ಸಾರ್ವಜನಿಕ ಚಟುವಟಿಕೆಗಳು ನೈತಿಕ ತಳಹದಿಯ ಮೇಲೆ ನಿಂತಿರಬೇಕೆಂಬ ನಿಲುವನ್ನು ಹೊಂದಿದ್ದರು. ಗೋಖಲೆಯವರು ಗಾಂಧೀಜಿಯವರ ಗುರುವಾಗಿದ್ದರು. ಗಾಂಧೀಜಿಗೆ ಧರ್ಮವೆಂದರೆ ಪರಸ್ಪರ ಆತ್ಮಗಳನ್ನು, ಸಮಾಜಗಳನ್ನು ಬೆಸೆಯುವ ಸತ್ಯದ ಶೋಧನೆ ಮತ್ತು ದೇವರ ಸಾಕ್ಷಾತ್‌ಕಾರಕ್ಕಿರುವ ದಾರಿಯಾಗಿತ್ತು. ಗಾಂಧೀಜಿಯವರ ಧರ್ಮ-ರಾಜಕಾರಣದ ಸಂಬಂಧದಲ್ಲಿ ಯಾರಿಗೂ ಆಕ್ಷೇಪಗಳಿರಲಿಲ್ಲ ಇದು ಎಲ್ಲ ಧರ್ಮಿಯರಿಗೂ ಒಪ್ಪಿಗೆಯಾಗುವಂತಿತ್ತು. ಮುಸ್ಲಿಂ ಮಹಿಳೆಯರನ್ನುದ್ದೇಶಿಸಿ ಮಾತನಾಡಲು ಮುಸ್ಲಿಂ ನಾಯಕರೇ ಗಾಂಧೀಜಿಗೆ ಆಹ್ವಾನ ನೀಡಿದ್ದರು. ಮುಸ್ಲಿಮರು ಬಹಳ ಸಂಪ್ರದಾಯವಾದಿಗಳು, ಆಧುನಿಕತೆಗೆ ತೆರೆದುಕೊಳ್ಳದವರು, ಧಾರ್ಮಿಕ ನಂಬಿಕೆ ಮತ್ತು ಶ್ರದ್ದೆಗಳಿಗೆ ಹೆಚ್ಚು ಮಹತ್ವಕೊಡುವವರೆಂಬ ಭಾವನೆಗಳು ದಟ್ಟವಾಗಿದ್ದ ಕಾಲದಲ್ಲಿಯೇ ಗಾಂಧಿಯ ಬಗ್ಗೆ ಮುಸ್ಲಿಮರಿಗೆ ಅದೆಂತಹ ನಂಬಿಕೆ ವಿಶ್ವಾಸಗಳಿತ್ತೆಂಬುದಕ್ಕೆ ಇದೊಂದು ಉತ್ತಮ ಉದಾಹರಣೆ.

ಗಾಂಧೀಜಿಯ ಧರ್ಮ ಮತ್ತು ರಾಜಕಾರಣ ಸ್ವಾರ್ಥ ರಹಿತ ಸೇವೆ, ಸರ್ವರ ಅಭ್ಯುದಯ ಬಡವರನ್ನು ಸಶಕ್ತರನ್ನಾಗಿಸುವ ಕರ್ಮ ಮಾರ್ಗವಾಗಿತ್ತು ಗಾಂಧೀಜಿಯವರು ನಿಜ ಅರ್ಥದಲ್ಲಿ ಓರ್ವ 'ಧಾರ್ಮಿಕ್' ಆಗಿದ್ದರು. ಭಾವವೇಶ, ಭಯ, ಅಸತ್ಯವನ್ನು ನಿಯಂತ್ರಿಸುವುದು ಇತರರಿಗೆ ಸಾಕಷ್ಟು ಪ್ರೀತಿಯನ್ನು ಮೊಗೆದು ಹಂಚುವುದು ಅವರ ಜೀವನ ಮೌಲ್ಯವಾಗಿತ್ತು. ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ನೈಜವಾದ ಧಾರ್ಮಿಕ ಎಂದು ಕರೆಸಿಕೊಳ್ಳುವ ನಾಯಕರು ಯಾರಿದ್ದಾರೆ. ನಮ್ಮಲ್ಲಿ ಇಂದು ರಾಜ

ಗಾಂಧೀಜಿಯ ಧರ್ಮ ಮತ್ತು ರಾಜಕಾರಣ ಸ್ವಾರ್ಥರಹಿತ ಸೇವೆ, ಸರ್ವರ ಅಭ್ಯುದಯ ಬಡವರನ್ನು ಸಶಕ್ತರನ್ನಾಗಿಸುವ ಕರ್ಮ ಮಾರ್ಗವಾಗಿತ್ತು. ಗಾಂಧೀಜಿಯವರು ನಿಜ ಅರ್ಥದಲ್ಲಿ ಓರ್ವ 'ಧಾರ್ಮಿಕ್' ಆಗಿದ್ದರು. ಭಾವವೇಶ, ಭಯ, ಅಸತ್ಯವನ್ನು ನಿಯಂತ್ರಿಸುವುದು ಇತರರಿಗೆ ಸಾಕಷ್ಟು ಪ್ರೀತಿಯನ್ನು ಮೊಗೆದು ಹಂಚುವುದು ಅವರ ಜೀವನ ಮೌಲ್ಯವಾಗಿತ್ತು. ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ನೈಜವಾದ ಧಾರ್ಮಿಕ ಎಂದು ಕರೆಸಿಕೊಳ್ಳುವ ನಾಯಕರು ಯಾರಿದ್ದಾರೆ. ನಮ್ಮಲ್ಲಿ ಇಂದು ರಾಜಕೀಯ ನಾಯಕರುಗಳಿಗೆ ಕೊರತೆಯಿಲ್ಲ ಆದರೆ ಮುತ್ಸದ್ಧಿಗಳ ಕೊರತೆಯಿದೆ. ಗಾಂಧೀಜಿಯವರ ರಾಮರಾಜ್ಯದ ಪರಿಕಲ್ಪನೆ ಯಾವುದೇ ಮತಪಂಥಗಳ ಸೋಂಕಿಲ್ಲದ ಸುಭಿಕ್ಷ ಆಡಳಿತ, ರಾಜಧರ್ಮ ಮತ್ತು ಪ್ರಜಾಹಿತದ ತಳಹದಿಯ ಮೇಲಿತ್ತು. ಈ ರಾಮರಾಜ್ಯದ ಪರಿಕಲ್ಪನೆಯಲ್ಲಿ ಯಾರನ್ನೂ ಹೊರಗಿಡುವ ಪ್ರಶ್ನೆ ಇಲ್ಲ. ಬದಲಾಗಿ ಇದು ಎಲ್ಲರನ್ನೂ ಒಳಗೊಳ್ಳುವ ಸರ್ವರ ಹಿತವನ್ನೇ ಆದರ್ಶ ಆಡಳಿತ ವ್ಯವಸ್ಥೆಯಾಗಿತ್ತು.

ಕೀಯ ನಾಯಕರುಗಳಿಗೆ ಕೊರತೆಯಿಲ್ಲ ಆದರ ಮುತ್ಸದ್ಧಿಗಳ ಕೊರತೆಯಿದೆ. ಗಾಂಧೀಜಿಯವರ ರಾಜರಾಜ್ಯದ ಪರಿಕಲ್ಪನೆ ಯಾವುದೇ ಮತಪಂಥಗಳ ಸೋಂಕಿಲ್ಲದ ಸುಭಿಕ್ಷ ಆಡಳಿತ, ರಾಜಧರ್ಮ ಮತ್ತು ಪ್ರಜಾಹಿತದ ತಳಹದಿಯ ಮೇಲಿತ್ತು. ಈ ರಾಮರಾಜ್ಯದ ಪರಿಕಲ್ಪನೆಯಲ್ಲಿ ಯಾರನ್ನೂ ಹೊರಗಿಡುವ ಪ್ರಶ್ನೆ ಇಲ್ಲ. ಬದಲಾಗಿ ಇದು ಎಲ್ಲರನ್ನೂ ಒಳಗೊಳ್ಳುವ ಸರ್ವರ ಹಿತವನ್ನೇ ಆದರ್ಶ ಆಡಳಿತ ವ್ಯವಸ್ಥೆಯಾಗಿತ್ತು.

ಇದಕ್ಕೆ ತದ್ವಿರುದ್ಧವಾಗಿ ನಮ್ಮ ಬಹುರೂಪಿ ರಾಷ್ಟ್ರೀಯತೆ ಮತ್ತು ಸಂಯುಕ್ತ ಸಾಂಸ್ಕೃತಿಕ ಪರಂಪರೆಗೆ ಕಡು ವಿರೋಧಿಯಾದ ಒಂದು ಚಿಂತನಾಧಾರೆಯನ್ನು ನಮ್ಮ ರಾಷ್ಟ್ರೀಯ ಹೋರಾಟದ ಸಂದರ್ಭದಿಂದಲೇ ಗುರುತಿಸಬಹುದು. ಜ್ಯೋತಿರ್ಮಯ ಶರ್ಮ ಅವರ Terrifying Vision: MS Golwalker, the RSS and India ಎಂಬ ಪುಸ್ತಕದಲ್ಲಿ ಗೋಲ್ವಲ್ಕರ್‌ರವರ ಜನದ್ರೋಹಿ, ಪ್ರಜಾಪ್ರಭುತ್ವ ವಿದ್ರೋಹಿ ಚಿಂತನೆಗಳನ್ನು ನೋಡಬಹುದು. ಗೋಲ್ವಲ್ಕರ್ ಪ್ರಕಾರ ಹಿಂದುಗಳು ಈ ದೇಶದ ಅನಶ್ವರ ದೈವಿಕ ಪುತ್ರರು. ಋಗ್ವೇದ ಜಗತ್ತಿಗೆ ಇದನ್ನೇ ಹೇಳಿದೆ. ದೈವಿಕವಾಗಿ ಆರಿಸಲ್ಪಟ್ಟ ಈ ಮಕ್ಕಳು (ಹಿಂದೂಗಳು) ಭಾರತ ಭೂಮಿ ಒಡೆಯುವುದನ್ನು ಸಹಿಸಲಾರರು. ಏಕೀಕೃತ ಭಾರತಮಾತೆ ಅಥವಾ ಅಖಂಡ ಮಾತೃಭೂಮಿಯನ್ನು ಕಟ್ಟುವುದು ಅನೇಕ ತರಹದ ಜನರಿಂದ ಸಾಧಿಸಬಹುದಾದ ಒಂದು ಮಹತ್ ಕಾರ್ಯ. ಮೊದಲ ವರ್ಗದವರು ಸ್ವಾತಂತ್ರಕ್ಕಾಗಿ ಪ್ರಾಣತೆರುತ್ತಾರೆ. ಎರಡನೇ ವರ್ಗದವರು ಕೆಲವು ಶತ್ರುಗಳನ್ನು ಮುಗಿಸಿ ಮತ್ತೆ ತಮ್ಮ ಜೀವಗಳನ್ನು ಬಲಿಕೊಡುತ್ತಾರೆ. ರಾಣಾ ಪ್ರತಾಪ್ ಸಿಂಹ ಈ ವರ್ಗಕ್ಕೆ ಸೇರುತ್ತಾರೆ. ಮೂರನೇ ವರ್ಗದ ಜನ ಶಿವಾಜಿಯಂತವರು ಎಲ್ಲಾ ಸಂಧ್ಗಿದಗಳ ನಡುವೆಯೂ ಅಂತಿಮ ವಿಜಯದ ಮುನ್ನೋಟದಿಂದ ಸ್ಫೂರ್ತಿ ಪಡೆದವರು ಅಖಂಡ ಭಾರತದ ಕನಸು ನನಸಾಗಲು ಈ ಗುಣಗಳು ಅನುಕರಣೀಯವೆಂದು ಗೋಲ್ವಾಲ್ಕರ್ ಹೇಳುತ್ತಾರೆ.

ಆದರೆ ಶಿವಾಜಿ ಮುಸ್ಲಿಂ ವಿರೋಧಿಯಾಗಿರಲಿಲ್ಲ ಪಟ್ಟಾಭಿಷೇಕದ ಸಂದರ್ಭದಲ್ಲಿ ಸಿಂಹಾಸನದ ಮೇಲೆ ಪವಿತ್ರ ಕುರ್‌ಆನ್ ಇಟ್ಟು ಗೌರವಿಸಿದ ಬಗ್ಗೆ ಚರಿತ್ರೆ ಹೇಳುತ್ತಿದೆ. ಸೂಫಿಗಳು ಮತ್ತು ಯೋಗಿಗಳನ್ನು ಶಿವಾಜಿ ಸಮಾನವಾಗಿ ಗೌರವಿಸುತ್ತಿದ್ದನೆಂದೂ ಶಿವಾಜಿಯ ಸೈನ್ಯದಲ್ಲಿ ಮುಸ್ಲಿಂ ಸೇನಾಧಿಕಾರಿಗಳಿದ್ದರೆಂದೂ ನಮಗೆ ತಿಳಿದು ಬರುತ್ತದೆ. ಭಾರತದಲ್ಲಿ ಹಿಂದೂ ಮತ್ತು ಇಸ್ಲಾಂಗಳೆಂಬ ಎರಡು ಮಹಾದರ್ಶನಗಳು ಸಂಗಮಗೊಂಡಿವೆ. ವೇದಾಂತದ ಮೆದುಳು ಮತ್ತು ಇಸ್ಲಾಮಿಕ ದೇಹ ಸಮನ್ವಯಗೊಳ್ಳಬೇಕೆಂಬ ಆಶಯ ಹೊಂದಿದ್ದ. ಆಧ್ಯಾತ್ಮ ಚಿಂತನೆಯ ಮೇರು ಪರುಷ ಸ್ವಾಮಿ ವಿವೇಕಾನಂದರಂತಹ ದಾರ್ಶನಿಕರು, ತತ್ವಜ್ಞನಿಗಳು, ಶಿವಾಜಿಯಂತಹ ರಾಜರೂ ಅಲ್ಪ ಸಂಖ್ಯಾತರ ವಿರುದ್ಧ ಹೋರಾಟಕ್ಕೆ ದಾಳಗಳಾಗಿ ಬಳಸಲ್ಪಡುತ್ತಾರೆ.

ಹಿಂದೂ ಸಮಾಜವನ್ನು ಪುನರ್ ಸ್ಥಾಪಿಸುವುದು ಮಾತ್ರ ಧರ್ಮ, ಹಿಂದೂ ರಾಷ್ಟ್ರವನ್ನು ನಿರ್ಮಿಸುವುದಕ್ಕೆ ಸಹಾಕಾರಿಯಾಗವುದೆಲ್ಲವೂ ಧರ್ಮ ಮತ್ತು ಈ ಧ್ಯೇಯವನ್ನು ಸಾಕಾರಗೊಳಿಸುವ ಪ್ರಯತ್ನದಲ್ಲಿ ಮುಂದಾಗುವ ಅಡ್ಡಿ-ಆತಂಕಗಳೆಲ್ಲವೂ ಅಧರ್ಮ. ಹಿಂದೂ ಆದರ್ಶ ಮತ್ತು ರಾಷ್ಟ್ರೀಯ ಆದರ್ಶದ ನಡುವೆ ಏನೂ ಭಿನ್ನತೆಯಿಲ್ಲ. ಇವೆರಡೂ ಕೂಡ ನಮ್ಮೊಳಗಿನ ದೈವತ್ವವನ್ನು



ಆರ್.ಎಸ್.ಎಸ್ ಗುರು ಗೋಲ್ವಾಲ್ಕರ್

ಕಂಡುಕೊಳ್ಳುವುದಕ್ಕಾಗಿರುವ ಶೋಧ. ರಾಷ್ಟದ ಪರಿಕಲ್ಪನೆಯನ್ನು ದೈವತ್ವ, ಧರ್ಮನಿಷ್ಠೆ, ನಂಬಿಕೆ, ಪರಿಶುದ್ಧತೆಯ ಅರ್ಥಗಳೊಂದಿಗೆ ಸಮೀಕರಿಸಿದ ಕ್ಷಣದಿಂದಲೇ ಶಾಶ್ವತವಾಗಿ ಅದನ್ನು ಕಟ್ಟಲಾಗುತ್ತದೆ. ಒಂದೇ ತಾಯಿ ನಾಡು, ಒಂದು ಸಮಾಜ, ಪರಸ್ಪರ ಹಿತಾಕ್ತಿಗಳು, ಸಮಾನ ಪರಂಪರೆಗಳು, ಆಸೆ-ಆಕಂಕ್ಷೆಗಳು ರಾಷ್ಟ್ರ ಜೀವನದ ವಿಚಾರಗಳನ್ನು ಪ್ರಭಾವಿಸಿದೆ. ಬದುಕಿನ ಅತ್ಯಂತಿಕ ಗುರಿಯ ಜ್ಞಾನವನ್ನು ಜಗತ್ತಿಗೆ ತಿಳಿಹೇಳಿದ್ದು ಹಿಂದೂ ರಾಷ್ಟ್ರ ಮಾತ್ರವಾಗಿದೆ. ಇದು ಹಿಂದೂ ರಾಷ್ಟವನ್ನು ಪವಿತ್ರ, ಸಮರ್ಥ, ಧೀರ, ಪ್ರಚಂಡ ಮತ್ತು ಪ್ರಜ್ವಲಗೊಳಿಸುತ್ತಿದೆ. ಋಷಿ ಮುನಿ

ಸ್ವಾಮಿ ವಿವೇಕಾನಂದ, ಗಾಂಧಿ, ಬುದ್ಧ, ಬಸವಣ್ಣ, ಟಾಗೋರ್, ಮದರ್ ತೆರೇಸಾರಂತಹ ಮಹಾನ್ ವ್ಯಕ್ತಿಗ ಳನ್ನು ಮಾದರಿ ಯೋಗ್ಯ ವ್ಯಕ್ತಿಗಳಾಗಿ ಬಿಂಬಿಸುತ್ತಾ ಅವರ ರಾಷ್ಟ್ರಪ್ರೇಮ, ತ್ಯಾಗ ಮಾನವೀಯ ಸಂದೇಶ ಮತ್ತು ಸದ್ಮೌಲ್ಯಗಳ ಉನ್ನತ ಮಾರಿಗಳನ್ನಾಗಿ ಯುವ ತಲೆಮಾರುಗಳಿಗೆ ಶ್ರೇಷ್ಟ ಆದರ್ಶವೆಂದು ಬಿಂಬಿಸುತ್ತಿದ್ದ ಕಾಲವೊಂದಿತ್ತು. ದುರದೃಷ್ಟವಶಾತ್ ಇಂದು ಇವರೆಲ್ಲರೂ ಕಣ್ಮರೆಯಾಗಿ, ಹಿಂಸೆ, ಅನಾಗರೀಕತೆ, ಅಧರ್ಮಗಳನ್ನು ಧರ್ಮದ ಮೌಲ್ಯವನ್ನಾಗಿಸಲು ಪ್ರಯತ್ನಿಸುತ್ತಿರುವ, ಇವುಗ ಳನ್ನೇ ಒಂದು ರಾಷ್ಟ್ರೀಯ ಸಿದ್ಧಾಂತವಾಗಿಸಲು ಹೊರಟ ಕ್ರಿಮಿನಲ್ ಹಿನ್ನೆಲೆಯುಳ್ಳ ಅನೇಕರನ್ನು ಮಹಾನ್ ಪುರುಷರನ್ನಾಗಿ ಬಿಂಬಿಸಲಾಗುತ್ತಿದೆ.

ಗಳು ಪರಿತ್ಯಾಗಿಗಳು ಕಳೆದ ಸಾವಿರಾರು ವರ್ಷಗಳಿಂದ ಈ ದೇಶವನ್ನು ಈ ದೇಶವನ್ನು ಕಾಪಾಡುತ್ತಾ ಹಿಂದೂ ಸಮಾಜದ ವಿಚಾರ ಧಾರೆಯನ್ನು ಭೋದಿಸುತ್ತಾ ಬಂದಿದ್ದು ಅವರ ದೃಷ್ಟಿಕೋನ ರಾಷ್ಟ್ರ ನಿರ್ಮಾತೃಗಳಿಗೆ ಸ್ಫೂರ್ತಿ ನೀಡುತ್ತಲೇ ಬರುತ್ತಿದೆ. ಹೀಗೆ ಆರ್.ಎಸ್.ಎಸ್. ಚಿಂತನೆಗಳು ಪುಂಖಾನು ಪುಂಖವಾಗಿ ಹರಿದು ಬರುತ್ತದೆ.

ಸ್ವಾಮಿ ವಿವೇಕಾನಂದ, ಗಾಂಧಿ, ಬುದ್ಧ, ಬಸವಣ್ಣ, ಟಾಗೋರ್, ಮದರ್ ತೆರೇಸಾರಂತಹ ಮಹಾನ್ ವ್ಯಕ್ತಿಗಳನ್ನು ಮಾದರಿ ಯೋಗ್ಯ ವ್ಯಕ್ತಿಗಳಾಗಿ ಬಿಂಬಿಸುತ್ತಾ ಅವರ ರಾಷ್ಟ್ರಪ್ರೇಮ, ತ್ಯಾಗ ಮಾನವೀಯ ಸಂದೇಶ ಮತ್ತು ಸದ್ಮೌಲ್ಯಗಳ ಉನ್ನತ ಮಾರಿಗಳನ್ನಾಗಿ ಯುವ ತಲೆಮಾರುಗಳಿಗೆ ಶ್ರೇಷ್ಟ ಆದರ್ಶವೆಂದು ಬಿಂಬಿಸುತ್ತಿದ್ದ ಕಾಲವೊಂದಿತ್ತು. ದುರದೃಷ್ಟವಶಾತ್ ಇಂದು ಇವರೆಲ್ಲರೂ ಕಣ್ಮರೆಯಾಗಿ, ಹಿಂಸೆ, ಅನಾಗರೀಕತೆ, ಅಧರ್ಮಗಳನ್ನು ಧರ್ಮದ ಮೌಲ್ಯವನ್ನಾಗಿಸಲು ಪ್ರಯತ್ನಿಸುತ್ತಿರುವ, ಇವುಗಳನ್ನೇ ಒಂದು ರಾಷ್ಟ್ರೀಯ ಸಿದ್ಧಾಂತವಾಗಿಸಲು ಹೊರಟ ಕ್ರಿಮಿನಲ್ ಹಿನ್ನೆಲೆಯುಳ್ಳ ಅನೇಕರನ್ನು ಮಹಾನ್ ಪುರುಷರನ್ನಾಗಿ ಬಿಂಬಿಸಲಾಗುತ್ತಿದೆ. ಇವುಗಳನ್ನೇ ರಾಷ್ಟ್ರಪ್ರೇಮದ ಅಪ್ಪಟ ಮಾದರಿಗಳಂತೆ ನಮ್ಮ ಯುವ ತಲೆಮಾರುಗಳಿಗೆ ಪ್ರದರ್ಶಿಸಲಾಗುತ್ತಿದೆ.

ಹಿಂಸೆ, ದಾಂಧಲೆ, ಲೂಟಿ, ಪುಂಡಾಟಿಕೆಗಳನ್ನು ಧರ್ಮ-ಸಂಕೃತಿಯ ಸುಂದರ ಪೋಷಾಕಿನಲ್ಲಿ ನಿರ್ಲಜ್ಜವಾಗಿ ವಿಜೃಂಬಿಸುವಂತೆ ಮಾಡುವ ಅದಕ್ಕೆ ಸಕಲ ರೀತಿಯ ರಾಜ ಮರ್ಯಾದೆಗಳು ಮತ್ತು ಕಾನೂನಿನ ಬೆಂಗಾವಲನ್ನು ನೀಡುತ್ತಿರುವ ನಮ್ಮ ಜನಪ್ರತಿನಿಧಿಗಳ ಸಾಮಾಜಿಕ ನೈತಿಕ, ವಿಶಾಲ ರಾಷ್ಟ್ರೀಯ ಮತ್ತು ಸಾಂವಿಧಾನಿಕ ಪ್ರತಿಬದ್ಧತೆ ಎಷ್ಟೊಂದು ಶೋಚನೀಯ, ಅವಮಾನಕರ, ಈ ಬಗ್ಗೆ ನಾಗರಿಕ ಸಮಾಜ ಎಚ್ಚೆತ್ತುಕೊಳ್ಳಬೇಕಾಗಿದ್ದು ಎಲ್ಲಾ ವರ್ಗದ ಜನರಲ್ಲಿ ನಿಷ್ಪಕ್ಷ ಮತ್ತು ನಿಸ್ಪೃಹ ಬೌದ್ಧಿಕ ಚರ್ಚೆ ಮತ್ತು ಅತ್ಮ ವಿಮರ್ಶೆ ಹೆಚ್ಚು ಪ್ರಸ್ತುತವೆನಿಸುತ್ತದೆ.

ಧಾರ್ಮಿಕ, ಜನಾಂಗೀಯ ಅನನ್ಯತೆಯ ಸಂಕೇತಗಳಾಗಿ ಬೆಳೆದು ಬರುತ್ತಿರುವ ಈ ಶಕ್ತಿಗಳು ಪ್ರಜಾಪ್ರಭುತ್ವದ ಅಂತಃ ಸತ್ವವಾದ ಕಾನೂನಿನ ಆಡಳಿತ(Rule of Law)ದ ಸರ್ವೋತ್ಕೃಷ್ಟತೆಯನ್ನು ಮತ್ತು ಸಂವಿಧಾನವನ್ನು ಧ್ವಂಸಗೊಳಿಸಲು ಮುಂದಾಗಿದ್ದಾರೆ. ರಾಜಕೀಯ ಪಕ್ಷಗಳು ತಮ್ಮ ರಾಜಕೀಯ ಚದುರಂಗಾಟದಲ್ಲಿ ಅಧಿಕಾರವೊಂದನ್ನೇ ಏಕೈಕ ಗುರಿಯಾಗಿಸಿ, ತಮ್ಮ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಕಾನೂನು ಕಟ್ಟಳೆಗಳು ಮತ್ತು ಅವುಗಳನ್ನು ಜಾರಿಗೊಳಿಸುವ ವ್ಯವಸ್ತೆಯನ್ನೇ ವಿರೂಪಗೊಳಿಸುವ ಕುಯುಕ್ತಿ ಮತ್ತು ಕೌಶಲ್ಯವನ್ನು ಪ್ರದರ್ಶಿಸುತ್ತಿದ್ದು ಇಡೀ ವ್ಯವಸ್ಥೆಯನ್ನೇ ಬುಡಮೆಲು ಮಾಡುವ ಹಂತಕ್ಕೆ ತಲುಪಿದೆ. ಸಾರ್ವತ್ರಿಕ ಮಾನವೀಯ ಮತ್ತು ರಾಷ್ಟೀಯ ಹಿತಕ್ಕೆ ಮಾರಕವಾದ ಒಳಸಂಚುಗಳು ಒಂದು ಜನ ವಿಭಾಗದ ಸಮೂಲ ನಾಶವನ್ನು ಗುರಿಯಾಗಿಸಿ ಪ್ರಾಯೋಜಿಸುತ್ತಿರುವ ಸಾಮೂಹಿಕ ಹಿಂಸಾಚಾರ, ಹತ್ಯಾಕಾಂಡಗಳ ನಿಕೃಷ್ಟ ಕಲ್ಪನೆ ಮತ್ತು ಪ್ರಯೋಗ ಪ್ರಜಾಸತ್ತೆ ಮತ್ತು ಅದರ ಸಂಸ್ಥೆಗಳಾದ ಆಡಳಿತಶಾಹಿ, ಪೋಲೀಸ್, ನ್ಯಾಯಾಂಗವನ್ನು ದೃತಿಗೆಡಿಸಿದೆ. ಪ್ರಜಾತಾಂತ್ರಿಕ ಸಂಕೃತಿ ಒಂದು ಜನ ವಿಭಾಗವನ್ನು ಆಕ್ರಮಣಕಾರಿಯಾಗಿ ದಮನಿಸುವ, ಹಿಂಸಾತ್ಮಕ ಅಭಿಯಾನಗಳ ಮೂಲಕ ಪರಸ್ಪರ ಸಮುದಾಯಗಳನ್ನು ರೇಗಿಸುವ, ರೊಚ್ಚಿಗೆಬ್ಬಿಸುವ ಪ್ರವಣತೆಯನ್ನು ಸುತಾರಾಂ

ಸಮ್ಮತಿಸುವುದಿಲ್ಲ. ಪ್ರಜಾಪ್ರಭುತ್ವದ ಶಿರಸ್ಸೆಂದೇ ಪರಿಗಣಿಸುವ ವ್ಯಕ್ತಿಗಳು ಮತ್ತು ಸಮುದಾಯಗಳ ಹಕ್ಕು, ಸ್ವಾತಂತ್ರ್ಯವನ್ನು ರಕ್ಷಿಸುವವರಾರು? ಜನರನ್ನು ಭಾವೋದ್ರೇಕಗೊಳಿಸಿ, ಕೆರಳಿಸಿ ಹಿಂಸಾ ತಾಂಡವಕ್ಕೆ ಹುರುದುಂಬಿಸುವ ಕೆಲಸಗಳು ಯಶಸ್ವಿಯಾಗುತ್ತಿದ್ದು, ಶಾಂತಿಪ್ರಿಯ, ಮುಗ್ಧ ದೇಶಬಾಂಧವರು ಇದರ ಬಲಿಪಶುಗಳಾಗುತ್ತಿದ್ದಾರೆ. ವಿಭಜನವಾದಿ ಸಿದ್ಧಾಂತಗಳನ್ನು ಪ್ರಚುರ ಪಡಿಸುತ್ತಿರುವ ಸಂಘಟನೆಗಳಲ್ಲಿ ಬಡಮಕ್ಕಳಿಗೆ ಜ್ಞಾನವನ್ನು ನೀಡುವ ಪುಸ್ತಕಗಳನ್ನು ವಿತರಿಸುವ ಬಡಕೂಲಿಕಾರ್ಮಿಕರು ಅಥವಾ ಈ ದೇಶದ ಬೆನ್ನೆಲುಬಾಗಿರುವ ರೈತರ ಸಂಕಷ್ಟ ಮತ್ತು ಯಾತನಾಮಯ ಬದುಕಿಗೆ ಸ್ಪಂದಿಸುವ ಯಾವುದೇ ಕಾರ್ಯಕ್ರಮಗಳಿಲ್ಲ. ಜನರನ್ನು ವಿವೇಕ ಮತ್ತು ವೈಚಾರಿಕತೆಗೆ ಹಚ್ಚುವ ಕೆಲಸ ಮತ್ತು ಕಾರ್ಯ ಸೂಚಿಗಳನ್ನು ಯಾವ ಪಕ್ಷ, ಸಂಘಟನೆಗಳು ಮುಂದಿಡುತ್ತಿಲ್ಲ ಮತ್ತು ಅವುಗಳು ನಿರೀಕ್ಷಿತ ಫಲಗಳನ್ನು ನೀಡುತಿಲ್ಲವೆಂಬುದು ಒಂದ ಪ್ರತಿಭಾಸವೆಂದೇ ಹೇಳಬಹುದು.

ಶಿಥಿಲಗೊಳ್ಳುತ್ತಿರುವ ಪ್ರಜಾಪ್ರಭುತ್ವ:

ಭಾರತದಲ್ಲಿ ಪ್ರಜಾತಂತ್ರ ಮತ್ತು ಜಾತ್ಯಾತೀತ ವ್ಯವಸ್ಥೆ ಕವಲುದಾರಿಯಲ್ಲಿದ್ದು ತನ್ನ ವಿಶ್ವಾಸಾರ್ಹತೆಯನ್ನೇ ಕಳೆದುಕೊಳ್ಳುತ್ತಿದೆ. ಕೋಮು ಆಧಾರದಲ್ಲಿ ನಾಗರಿಕ ಸಮಾಜವನ್ನು ಛಿದ್ರಗೊಳಿಸಲಾಗುತ್ತಿದೆ. ಕೋಮು ಗಲಭೆಗಳು ನಡೆದ ಬಳಿಕ ಸಂತ್ರಸ್ತರಿಗೆ ಪರಿಹಾರ, ಉದ್ಯೋಗ, ಪುನರ್ವಸತಿ ಇತ್ಯಾದಿ ಭರವಸೆಗಳನ್ನು ಗಾಳಿಯಲ್ಲಿ ತೇಲಿಬಿಡಲಾಗುತ್ತದೆ. ಆದರೆ ಕ್ರಿಮಿನಲ್‌ಗಳು, ಗೂಂಡಾಗಳು ಜನರನ್ನು ಕೊಂದವರು, ಸುಟ್ಟವರು, ಅಂಗಹೀನ ಮಾಡಿದವರು, ದೋಚಿದವರನ್ನು ಉಗ್ರ ಶಿಕ್ಷೆಗೆ ಒಳಪಡಿಸಲು ಹಿಂಜರಿಯುತ್ತಿರುವ ಸರಕಾರ ಈ ದುರುಳರಿಗೆ ಶ್ರೀ ರಕ್ಷೆ ನೀಡಿ ಈ ಪಾತಕಿಗಳನ್ನು ಜೀವಂತ ರಾಜಕೀಯ ಹುತಾತ್ಮರಾಗಿ ಚಿತ್ರಿಸಿ ಡಂಗುರ ಹೊಡೆಸುತ್ತಿದೆ.

ಕಾನೂನು ಭಂಜಕರನ್ನು ಹದ್ದು ಬಸ್ತಿನಲ್ಲಿಡುವುದು, ಪ್ರಜಾಸತ್ತಾತ್ಮಕ ನಾಗರಿಕ ಸಮಜದ ಸ್ವಾಸ್ಥ್ಯದ ದೃಷ್ಟಿಯಿಂದ ಅನಿವಾರ್ಯ ಕ್ಷಿಪ್ರ ಕಾರ್ಯಚರಣೆಯ ಮೂಲಕ ಯಾವುದೇ ಒತ್ತಡ, ಪ್ರಲೋಭನೆಗಳಿಗೆ ಜಗ್ಗದೆ ಕಾನೂನಿನ ಆಡಳಿತ, ದಕ್ಷತೆ ಮತ್ತು ಪಾರದರ್ಶಕತೆಯನ್ನು ಪ್ರದರ್ಶಿಸುವುದು ಸರಕಾರದ ಮೊತ್ತ ಮೊದಲ ಕರ್ತವ್ಯವಾಗಿದೆ. ಜನಪ್ರತಿನಿಧಿಗಳು ಈ ಸಂದರ್ಭದಲ್ಲಿ ಯಾವುದೇ ಪಕ್ಷಪಾತೀ ಧೋರಣೆ, ರಾಜಕೀಯ ಲಾಭ-ನಷ್ಟಗಳ ಲೆಕ್ಕಾಚಾರವನ್ನು ಬಿಟ್ಟು ಜವಾಬ್ದಾರಿಯಿಂದ ವರ್ತಿಸಿದರೆ ಸಮಾಜದಲ್ಲಿ ಶಾಂತಿ-ಸುವ್ಯವಸ್ಥೆಯನ್ನು ತರುವುದು ಕಷ್ಟಕರವಲ್ಲ. ಅಪರಾಧಿಗಳನ್ನು, ಧಾಳಿಕೋರರನ್ನು ಅವರು ನಮ್ಮವರಲ್ಲ ನಮಗೂ ಅವರಿಗೂ ಏನೂ ಸಂಬಂಧವಿಲ್ಲ ಇತ್ಯಾದಿ ಬೇಜಾವಾಬ್ದಾರಿ ಹೇಳಿಕೆಗಳನ್ನು ನೀಡುತ್ತಿರುವ ಸರಕಾರ, ಸಮಾಜಘಾತುಕ ಶಕ್ತಿಗಳನ್ನು ಮಟ್ಟ ಹಾಕುವಲ್ಲಿ ಹಿಂಜರಿಯುತ್ತಿದ್ದು ಪೊಲೀಸ್ ವ್ಯವಸ್ಥೆ ಇಚ್ಛಾ ಶಕ್ತಿ ನ್ಯಾಯ-ನಿಷ್ಠೆಯಿಂದ ಕಾರ್ಯ ಪ್ರವೃತ್ತರಾಗದಿರಲು ಸರಕಾರದ ಈ ಎಡೆಬಿಡಂಗಿತನವೂ ಒಂದು ಕಾರಣವಾಗಿದೆ.

ಒಬ್ಬ ವಯಸ್ಕ ಒಂದು ಓಟು ಎಂಬ ರಾಜಕೀಯ ಪ್ರಜಾಪ್ರಭುತ್ವ ಮತ್ತು ಬಹಳಷ್ಟು ವಿರೂಪಗೊಳಿಸಲ್ಪಟ್ಟ ಆರ್ಥಿಕ ಪ್ರಜಾಪ್ರಭುತ್ವ ಜೊತೆಗೂಡಿದೆ ಮಾರುಕಟ್ಟೆಯಲ್ಲಿ ಓಟು ಅಥವಾ ಮತದಾನ ಕೊಂಡುಕೊಳ್ಳುವ ಸಾಮರ್ಥ್ಯಕ್ಕೆನುಗುಣವಾಗಿದೆ. ಇದು ಬಡವರನ್ನು ಇನ್ನಷ್ಟು ಅಂಚಿಗೆ ತಳ್ಳುತ್ತದೆ. ಚುನಾವಣೆಗಳು ಮುಕ್ತ ಮತ್ತು ಹೆಚ್ಚು ಪ್ರಾತಿನಿಧಿ

ನಾವೆಂದೂ ಮರೆಯಲಾಗದ ವೈಫಲ್ಯವೆಂದರೆ ನಿರಂತರವಾಗಿ ಕಿತ್ತು ತಿನ್ನುವ ಬಡತನ ಮತ್ತು ನಿರ್ಗತಿಕ ಸ್ಥಿತಿ ಉಳಿದುಕೊಂಡಿರುವುದು. ಸ್ವಾತಂತ್ರ ಬಂದು ಆರು ದಶಕಗಳೇ ಕಳೆದರೂ 3/4ರಷ್ಟು ಜನರಿಗೆ ತೀರಾ ಬಡವರಾಗಿದ್ದು ಅವರಿಗೆ ಕನಿಷ್ಠ ಮಾನವ ಅಸ್ತಿತ್ವನ್ನು ನಿರಾಕರಿಸಲಾಗಿದೆ. ಭಾರತ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ವೃದ್ಧಿಗೊಳಿಸಲು ಮೈಲುಗಟ್ಟಲೆ ಮುನ್ನಡೆಯಬೇಕಾಗಿದೆ. ಜಾಗತಿಕವಾಗಿ 4 ಮಿಲಿಯನ್ ಶಿಶು ಮರಣಗಳಲ್ಲಿ ಶೇಕಡಾ 28% ಭಾರತದಲ್ಲೆ ಸಂಭವಿಸಿದೆ.

ಕವಾಗುತ್ತಿದ್ದರೂ ಪ್ರಜಾಪ್ರಭುತ್ವದ ಗುಣಮಟ್ಟ ಕುಸಿಯುತ್ತಿದೆ. ರಾಜಕೀಯ ಮತ್ತು ಆರ್ಥಿಕ ಪ್ರಜಪ್ರಭುತ್ವದ ನಡುವಿನ ಅಂತರವನ್ನು ನಾವು ಬಹು ಬೇಗ ಸಮೀಪಿಸಿದಾಗ ಮಾತ್ರ ಸಮಾನತೆಯ ಸಮಾಜದ ಕನಸು ನನಸಾಗಲು ಸಾಧ್ಯ.

ನಮ್ಮ ಪ್ರಜಾಪ್ರಭುತ್ವದಲ್ಲಿ ಉತ್ತರದಾಯಿತ್ವ ಪ್ರಜ್ಞೆಯನ್ನು ಹೆಚ್ಚಿಸಬೇಕಾಗಿರುವುದು ಬಹಳ ಪ್ರಮುಖವಾದ ಒಂದು ವಿಷಯವಾಗಿದೆ. ಆದರೆ ಇದನ್ನು ಹೇಗೆ ಸಾಧಿಸಬಹುದೆಂಬುದು ಬಹಳ ದೊಡ್ಡ ಪ್ರಶ್ನೆಯಾಗಿದೆ. ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ನಿರಂತರವಾಗಿ ಜನರಿಗೆ ಉತ್ತರದಾಯಿತ್ವವನ್ನು ಹೊಂದಿರಬೇಕು. ರಾಜಕಾರಣಿಗಳು ಜನತೆಯ ಸೇವೆಗಾಗಿ ಇರುವವರಲ್ಲ ಅವರು ನಮ್ಮ ಮೇಲೆ ಯಜಮಾನಿಕೆಯನ್ನು ಚಲಾಯಿಸುವವರು. ನಮ್ಮ ಪ್ರಜಾಪ್ರಭುತ್ವ ಪ್ರಕ್ರಿಯೆ ಮೂಲಭೂತವಾಗಿ ಅಧಿಕಾರವನ್ನು ಹಂಚುವುದಾಗಿದೆ. ಭಾರತದಲ್ಲಿ ಚುನಾವಣೆಗಳು ಅಧಿಕಾರದ ಸುತ್ತ ಗಿರಕಿ ಹೊಡೆಯುತ್ತಾ ಇರುತ್ತದೆ ಇಲ್ಲಿ ಅಧಿಕಾರವೇ ಮುಖ್ಯ, ಜನವಿಧಿಗೆ ಮಾನ್ಯತೆ ಇಲ್ಲ. ಇಲ್ಲಿ ಯಾವುದೋ ಪರಿಗಣೆಯ ಮೇಲೆ ಕೆಲವರಿಗೆ ಹೆಚ್ಚಿನ ಆಶ್ರಯ ದೊರೆಯುತ್ತದೆ ಹೊರತು ಸಾರ್ವಜನಿಕ ನೀತಿಗೆ ಮಹತ್ವವಿಲ್ಲ.

ನಮ್ಮ ರಾಜಕಾರಣಿಗಳು, ಪ್ರಾದೇಶಿಕ ಪಾಳೇಗಾರರು ಸ್ಥಳೀಯ ಮಟ್ಟದಲ್ಲಿ ಪ್ರಭಾವಿಗಳಾಗಿರುವವರು ಅಧಿಕಾರಕ್ಕಾಗಿ ತಮ್ಮ ಪ್ರಭಾವವನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಅವರು ಬಳಸುವ ಎಲ್ಲ ಕೃತಿಮ ಮಾರ್ಗಗಳು ಸರಿಯೆನಿಸಿಬಿಡುತ್ತವೆ.

ಅಪರಾಧೀಕರಣ ಒಂದು ಸಮಸ್ಯೆಯೇ ಅಲ್ಲ. ಕಾನೂನು ಬದ್ಧ ಶಕ್ತಿ ಮತ್ತು ಕಾನೂನು ಬಾಹಿರ ತೋಳ್ಬಲಗಳ ನಡುವೆ ಅಷ್ಟೇನು ಅಂತರವಿಲ್ಲದಂತಹ ಪರಿಸ್ಥಿತಿ ನಿರ್ಮಾಣಗೊಂಡಿದೆ. ಭ್ರಷ್ಟಚಾರ ವ್ಯವಸ್ಥೆಯ ಸೂತ್ರವನ್ನು ಒಲಿಸುವುದಕ್ಕೆ ಪ್ರತಿಯಾಗಿರುವ ಒಂದು ಕಾಣಿಕೆಯಾಗಿದೆ. ಹಣ ಶಂಪತ್ತು ಆಳುವ ಅಧಿಕಾರವನ್ನು ಗಿಟ್ಟಿಸುತ್ತದೆ. ಹೀಗಾಗಿ ಹಣತಂತ್ರದ ಮುಂದೆ ಜನ ತಂತ್ರ ಸೋಲುತ್ತಿದೆ. ನಮ್ಮ ಜನ ಪ್ರತಿನಿಧಿಗಳನ್ನು ಆಳುವವರನ್ನಾಗಿಸಿ, ನಾವು ಪರಿವರ್ತಿಸಿದ್ದೇವೆ. ಹೀಗಾಗಿ ಭಾರತ ಪ್ರಜಾಪ್ರಭುತ್ವವೆಂದು ಹೊರನೋಟಕ್ಕೆ ಕಾಣುವ ಆದರೆ ತೆರೆಮರೆಯಲ್ಲರುವ ಒಂದು ರಾಜಪ್ರಭುತ್ವವೇ ಆಗಿದೆ. ಆದರಲ್ಲೂ ತೀರಾ ದುರದೃಷ್ಟಕರ ಸಂಗತಿಯೆಂದರೆ ಅದು 'ರಾಜಧರ್ಮಕ್ಕೆ' ತಿಲಾಂಜಲಿಯನ್ನಿತ್ತ ರಾಜಪ್ರಭುತ್ವವಾಗಿದೆ.

ನಾವೆಂದೂ ಮರೆಯಲಾಗದ ವೈಫಲ್ಯವೆಂದರೆ ನಿರಂತರವಾಗಿ ಕಿತ್ತು ತಿನ್ನುವ ಬಡತನ ಮತ್ತು ನಿರ್ಗತಿಕ ಸ್ಥಿತಿ ಉಳಿದುಕೊಂಡಿರುವುದು. ಸ್ವಾತಂತ್ರ ಬಂದು ಆರು ದಶಕಗಳೇ ಕಳೆದರೂ 3/4ರಷ್ಟು ಜನರಿಗೆ ತೀರಾ ಬಡವರಾಗಿದ್ದು ಅವರಿಗೆ ಕನಿಷ್ಠ ಮಾನವ ಅಸ್ತಿತ್ವನ್ನು ನಿರಾಕರಿಸಲಾಗಿದೆ. ಭಾರತ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ವೃದ್ಧಿಗೊಳಿಸಲು ಮೈಲುಗಟ್ಟಲೆ ಮುನ್ನಡೆಯಬೇಕಾಗಿದೆ. ಜಾಗತಿಕವಾಗಿ 4 ಮಿಲಿಯನ್ ಶಿಶು ಮರಣಗಳಲ್ಲಿ ಶೇಕಡಾ 28% ಭಾರತದಲ್ಲೆ ಸಂಭವಿಸಿದೆ. ಚುಚ್ಚುಮದ್ದು ನೀಡುವ ಪ್ರಯತ್ನಗಳು ವ್ಯಾಪಕವಾಗಿದ್ದರೂ ಜಾಗತಿಕವಾಗಿ ಶೇಕಡಾ 40% ರಷ್ಟು ಚುಚ್ಚು ಮದ್ದು (ಲಸಿಕೆ) ಹಾಕದ ಮಕ್ಕಳು ಭಾರತದಲ್ಲೇ ಇದ್ದಾರೆ ಭಾರತದ ಅರ್ಧಕ್ಕಿಂತಲೂ ಹೆಚ್ಚು ಜನಸಂಖ್ಯೆಗೆ ಶೌಚಾಲಯದ ವ್ಯವಸ್ಥೆಗಳಿಲ್ಲ. ಶಿಕ್ಷಣದ ಸಾರ್ವತ್ರೀಕರಣದ ಪ್ರಯತ್ನಗಳ ನಡುವೆಯೂ ಪ್ರತೀ 5ಮಕ್ಕಳಲ್ಲಿ ಒಂದಕ್ಕಿಂತ ಹೆಚ್ಚು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಇದರ ಅರ್ಥ ಸರಕಾರದ ಬೊಕ್ಕಸದಲ್ಲಿ ಹಣದ ಕೊರತೆಯಿದೆ ಎಂದಲ್ಲ. ಆದರೆ ಈ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಇಚ್ಛಾಶಕ್ತಿಯ ಕೊರತೆಯಿದೆ. ಜಾಗತಿಕವಾಗಿ 6ಬಿಲಿಯನ್ ಜನಸಂಖ್ಯೆಗೆ ವಿದ್ಯುತ್ ಶಕ್ತಿಯ ಸೌಲಭ್ಯಗಳಿಲ್ಲ ಅದರಲ್ಲಿ ದುದೃಷ್ಟವಶಾತ್ 400 ಮಿಲಿಯನ್ ಜನರು ಭಾರತದಲ್ಲಿದ್ದಾರೆ. ಶುದ್ಧ ಜಲ, ರಸ್ತೆಗಳು ಸಾರಿಗೆ ಸಂಪರ್ಕಗಳನ್ನೇ ಕಾಣದ ಅದೆಷ್ಟೊ ಹಳ್ಳಿಗಳು ಬುಡಕಟ್ಟು ಪ್ರದೇಶಗಳು ನಮ್ಮಲ್ಲಿವೆ. ದೊಡ್ಡ ಪ್ರಮಾಣದ ಅನಕ್ಷರಸ್ಥರು ಮತ್ತು ಮಿಲಿಯಗಟ್ಟಲೆ ಅಪೌಷ್ಟಿಕತೆಯಿಂದ ಬಳಲುವ ಮಕ್ಕಳು ನಮ್ಮಲ್ಲಿದ್ದಾರೆ.

ಯಾವುದೇ ಒಂದು ಸರಕಾರದ ಮೂಲಭೂತ ಕರ್ತವ್ಯವೇನೆಂದರೆ, ಅಲ್ಲಿನ ಪ್ರಜೆಗಳು ಭಯೋತ್ಪಾದಕರ ಅಥವಾ ಸಮಾಜ ಘಾತಕ ಶಕ್ತಿಗಳ ಕೈಗೆ ಸಿಕ್ಕಿ ತಮ್ಮ ಪ್ರಾಣಕ್ಕೇ ಅಭದ್ರತೆಯೊದಗುವ ಪರಿಸ್ಥಿತಿಯಿಂದ ರಕ್ಷಿಸಲ್ಪಡಬೇಕು. ರಾಜಕೀಯ ರಚನೆ ಮತ್ತು ಸಾಮಾಜಿಕ ಬುನಾದಿಯನ್ನು ನಾಶಗೊಳಿಸಿ, ದಶಕಗಳಿಂದ ಕಟ್ಟಲ್ಪಟ್ಟ ಸಾಮಾಜಿಕ ಮತ್ತು ರಾಜಕೀಯ ಅನುಬಂಧವನ್ನು ತಮ್ಮ ಸಂಕುಚಿತ ರಾಜಕೀಯ ಅಂಜೆಂಡಾಗಳಿಗೆ ಅಥವಾ ತಮ್ಮ ಸ್ವಂತ ಅಧಿಕಾರ ತಂತ್ರಗಳಿಗಾಗಿ ಬಳಸಿಕೊಳ್ಳುವ ಹಾಗೂ ರಾಷ್ಟ್ರೀಯ ಭಾವೈಕ್ಯವನ್ನು ಹಾಳುಗೆಡಹುವ ವಿಧ್ವಂಸಕ ಮತ್ತು ವಿಭಜನಕಾರಿ ಶಕ್ತಿಗಳ ಸಂಚಿನಿಂದ ಪ್ರಜೆಗಳನ್ನು ರಕ್ಷಿಸುವ ದೊಡ್ಡ ಹೊಣೆಗಾರಿಕೆ ನಮ್ಮ ಸರ್ಕಾರಗಳ ಮೇಲಿದೆ. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳಬಲ್ಲ ಒಬ್ಬ ದಲಿತ, ಚಮ್ಮಾರ, ಕಮ್ಮಾರ ಮತ್ತು ಗೋವಳನನ್ನು ಒಂದು ಏಕೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಪೋಣಿಸಬಲ್ಲ ಒಂದು ಭಾವನಾತ್ಮಕ, ಆಧ್ಯಾತ್ಮಿಕ ಪ್ರಜಾಸತ್ತಾತ್ಮಕ ಸುಖೀ ದೇಶವನ್ನು ಕಟ್ಟುವ ಅಜೆಂಡಾವನ್ನು ಯಾರೂ ಮುಂದಿಡುತ್ತಿಲ್ಲ. ಇಂತಹ ಸಂಕೀರ್ಣ ಸಮಸ್ಯೆಗಳು ಮತ್ತು ಸವಾಲುಗಳು ನಡುವೆಯೂ ಈ ಬೃಹತ್ ಪ್ರಜಾಪ್ರಭುತ್ವದ ಬಗ್ಗೆ ನಾವಿನ್ನೂ ಆಶಾವಾದಿಗಳಾಗಿರೋಣ. ಜೈ ಹೋ ಪ್ರಜಾಪ್ರಭುತ್ವ □

ಪ್ರಜಾತಂತ್ರವನ್ನೇ ಸೋಲಿಸುವ ಚುನಾವಣೆಗಳು!!

ಈಗ ಚುನಾವಣೆಗೆ ನಿಲ್ಲುವ ಪ್ರತಿ ಅಭ್ಯರ್ಥಿಯೂ ಸಹ ತಮ್ಮ ಹಣಕಾಸು ಹಿನ್ನೆಲೆಯ ಬಗ್ಗೆ ಚುನಾವಣಾ ಅಯೋಗಕ್ಕೆ ವರದಿ ಸಲ್ಲಿಸುವುದು ಕಡ್ಡಾಯ. ಅವರು ಅಯೋಗಕ್ಕೆ ಸಲ್ಲಿಸುವ ಲೆಕ್ಕಾಚಾರವೆಲ್ಲಾ ಕೇವಲ ರಾಮನ ಲೆಕ್ಕ. ಕೃಷ್ಣನ ಲೆಕ್ಕ ಹುಡುಕಿ ತೆಗೆಯುವುದು ಸಾಕ್ಷಾತ್ ಕೃಷ್ಣ ಪರಮಾತ್ಮನಿಗೂ ಸಾಧ್ಯವಲ್ಲ. ಹಾಗಿದ್ದರೂ ಸಹ ಆ ಪಟ್ಟಿಯಲ್ಲಿ ಒಬ್ಬನೂ/ಳೂ ಬಿಪಿಎಲ್ (ಬಿಲೋ ಪಾವರ್ಟಿ ಲೈನ್ - ಬಡತನ ರೇಖೆಗಿಂತ ಕೆಳಗಿರುವವರು) ಪಕ್ಷದ ಸದಸ್ಯನಿಲ್ಲ! ಅಂದರೆ ಈ ಚುನಾವಣೆಯಲ್ಲಿ ನಿಂತಿರುವ ಯಾವ 'ಪ್ರಜೆಯೂ' ಬಡತನ ರೇಖೆಗಿಂತ ಕೆಳಗಿಲ್ಲ. ಹೀಗಾಗಿಯೇ ರಾಜಕೀಯದಲ್ಲೂ ಸಹ ಅವರು ಬಡವರಿಗೂ ಮತ್ತು ಶ್ರೀಮಂತರಿಗೂ ನಡುವೆ ವ್ಯವಸ್ಥೆ ಎಳೆದಿರುವ ಈ ಲಕ್ಷಣ ರೇಖೆಯನ್ನು ದಾಟಿ ಬರುವುದಿಲ್ಲ.

ಶಿವಸುಂದರ್

"ಆಪರೇಷನ್ ಸಕ್ಸಸ್, ಪೇಷೆಂಟ್ ಡೈಡ್" ಎನ್ನುವುದಕ್ಕೆ ಅತ್ಯುತ್ತಮ ಉದಾಹರಣೆ ಭಾರತೀಯ ಚುನಾವಣೆಗಳು ಮತ್ತು ಭಾರತೀಯ ಪ್ರಜಾತಂತ್ರ. ವಾಸ್ತವದಲ್ಲಿ ಚುನಾವಣೆಗಳು ಪ್ರಜಾತಂತ್ರಕ್ಕೆ ಮತ್ತಷ್ಟು ಜೀವವನ್ನು ಎರೆಯಬೇಕು. ಪ್ರಜಾತಂತ್ರವನ್ನೂ ಜೀವಂತವಾಗಿಡಬೇಕು. ಆದರೆ ಈ ಚುನಾವಣೆಗಳು ಪ್ರಜಾಂತ್ರವನ್ನು ಪೊರೆಯುತ್ತಿವೆಯೋ? ಕೊಲ್ಲುತ್ತಿವೆಯೋ?

ಚುನಾವಣೆಯು ಒಂದು ದೇಶದಲ್ಲಿ ಪ್ರಜಾತಂತ್ರ ಜೀವಂತವಾಗಿರುವುದಕ್ಕೆ ದೊಡ್ಡ ಸಾಕ್ಷಿ ಎಂದು ಹೇಳುವ ಮುತ್ಸದ್ದಿಗಳು ಪಕ್ಕದ ಪಾಕಿಸ್ತಾನಕ್ಕೆ ಹೋಲಿಸಿದರೆ ಭಾರತ ಪ್ರಜಾತಂತ್ರ ಎಷ್ಟು ಮಾಗಿದೆ ನೋಡಿ ಎಂದು ಸಮಾಧಾನದ ನಿಟ್ಟುಸಿರು ಬಿಡುತ್ತಾರೆ. ಭಾರತದ ಪ್ರಜಾತಂತ್ರದಲ್ಲಿ ದೋಷಗಳಿದೆ ಎಂದು ಒಪ್ಪಿಕೊಳ್ಳುವವರೂ ಚುನಾವಣೆ ಈ ದೇಶದ ಪ್ರಜಾತಂತ್ರವನ್ನು ಹೆಚ್ಚಿಸುತ್ತಿದೆ ಎಂದೇ ಅಭಿಪ್ರಾಯ ಪಡುತ್ತಾರೆ. ಅದಕ್ಕೆ ಅವರು ಪ್ರಜಾತಂತ್ರದ ಬಗ್ಗೆ ಅಬ್ರಹಾಂ ಲಿಂಕನ್‌ನ ಪ್ರಖ್ಯಾತ 'ಪ್ರಜೆಗಳಿಂದ, ಪ್ರಜೆಗಳಿಗಾಗಿ ಮತ್ತು ಪ್ರಜೆಗಳೇ ಆಳುವ ವ್ಯವಸ್ಥೆ' ಎಂಬ ವ್ಯಾಖ್ಯಾನವಾವನ್ನು ಉದ್ಧರಿಸುತ್ತಾರೆ. ತಮ್ಮನ್ನು ಯಾರು ಆಳಬೇಕೆಂದು ಈ ಚುನಾವಣೆಗಳ ಮೂಲಕ ಜನರೇ ನಿರ್ಧರಿಸುವುದರಿಂದ ಇದಕ್ಕಿಂತ ಉತ್ತಮ ಪ್ರಜಾತಂತ್ರವಾಗಲೀ, ಚುನಾವಣೆಗಿಂತ ಉತ್ತಮ ಪ್ರಜಾತಾಂತ್ರಿಕ ಪ್ರಕ್ರಿಯೆಯಾಗಲೀ ಮತ್ತೊಂದಿಲ್ಲವೆಂಬುದು ಬಹುತೇಕ ಗಾಂಧಿವಾದಿಗಳಿಂದ ಹಿಡಿದು, ಸಮಾಜವಾದಿ, ಸ 'ಮಜಾ'ವಾದಿಗಳ ತನಕ ಎಲ್ಲರ ಅಭಿಪ್ರಾಯ. ಇಲ್ಲಿ 'ಪ್ರಜೆ'ಯೆನ್ನುವವರು ಯಾರು? ಓಟು ಹಾಕುವ ಪ್ರಜೆ, ಚುನಾವಣೆಗೆ ನಿಂತು ಗೆಲ್ಲುವ ಪ್ರಜೆ, ಗೆದ್ದ ಸರ್ಕಾರಗಳಿಂದ ಅನುಕೂಲ ಪಡೆಯುವ ಪ್ರಜೆ ಒಬ್ಬರೆಯೇ? ಅಥವಾ ಬೇರೆ ಬೇರೆಯೇ? ಪ್ರಜೆಗಳೇ ಆಳುವ ವ್ಯವಸ್ಥೆ ಎಂದರೆ ಯಾವ ಪ್ರಜೆ ಬೇಕಾದರೂ ಚುನಾವಣೆಗೆ ನಿಲ್ಲುವ ಅವಕಾಶಗಳು ಈ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಇರಬೇಕಿತ್ತಲ್ಲವೇ?ಈ ಬಾರಿ ಚುನಾವಣೆಗೆ ನಿಲ್ಲುತ್ತಿರುವ ಅಭ್ಯರ್ಥಿಗಳು ಎಂಥಾ 'ಪ್ರಜೆ'ಗಳು?

ಮೊನ್ನೆ ಆಂಧ್ರಪ್ರದೇಶದಲ್ಲಿ ತೆಲಂಗಾಣ ರಾಜ್ಯ ಸಭಾ (ಟಿ.ಆರ್.ಎಸ್) ಕಚೇರಿಯಲ್ಲಿ ಪಕ್ಷದ ಟಿಕೆಟ್ ಪಡೆದ ಅಭರ್ಥಿಯನ್ನು ಆ ಪಕ್ಷದ ಸದಸ್ಯರೇ ಅಟ್ಟಾಡಿಸಿಕೊಂಡು ಹೊಡೆದಿದ್ದಾರೆ. ಕಾರಣ? ಈವರೆಗೆ ಈ ಮನುಷ್ಯ ಯಾರೆಂಬುದೇ ಆ ಪಕ್ಷದ ಸದಸ್ಯರಿಗೆ ತಿಳಿದಿರಲಿಲ್ಲ. ಮೇಲಾಗಿ ಪಕ್ಷದ ಕಾರ್ಯಕರ್ತರು ಈ ಅಪರಿಚಿತನಿಗೆ ಟಿಕೆಟ್ ಕೊಡಬಾರದು ಎಂದು ಹಠ ಹಿಡಿದಿದ್ದಕ್ಕೆ ಆತ "10 ಕೋಟಿ ರೂಪಾಯಿಗಳನ್ನು ಪಕ್ಷಕ್ಕೆ ಕೊಟ್ಟು ಟಿಕೆಟ್ ಖರೀದಿಸಿದ್ದೇನೆ" ಎಂದು ಅಬ್ಬರಿಸಿದ್ದಾನೆ. ಸಿಟ್ಟಿಗೆದ್ದ ಕಾರ್ಯಕರ್ತರು ತೆಲಂಗಾಣ ಬಿಟ್ಟು ಓಡಿ ಹೋಗುವಂತೆ ಅವನಿಗೆ ತದಕಿದ್ದಾರೆ. ಈವರೆಗೆ ಈ ಟಿಆರ್‌ಎಸ್ ಪಕ್ಷದ ಹೋರಾಟಗಳಲ್ಲಾಗಲೀ, ಸಿದ್ಧಾಂತಗಳಲ್ಲಾಗಲೀ ಎಂದೂ ಭಾಗವಹಿಸದ ಈ 'ಪ್ರಜೆ' ಕೇವಲ ತನ್ನ ಹಣದ ಬಲದಿಂದ ಉಮೇದುವಾರಿಕೆಯನ್ನು ಅರ್ಥಾತ್ ಲೋಕಸಭೆಯಲ್ಲಿ ಪ್ರಜೆಗಳ ಹೆಸರಲ್ಲಿ ಶಾಸನ ಮಾಡುವ ಅಧಿಕಾರವನ್ನು ಖರೀದಿ ಮಾಡುತ್ತಾನೆ. ಕಳೆದ ಚುನಾವಣೆಯಲ್ಲಿ ಮದ್ಯ, ಜೂಜು, ಮಾನಿನಿ ಮದಿರೆಯರನ್ನು ಬಿಟ್ಟರೆ ಬೇರೇನೂ ಗೊತ್ತಿಲ್ಲದ ವಿಜಯ್ ಮಲ್ಯನಂಥ 'ಪ್ರಜೆ' ಸಹ ಈ ದೇಶದಲ್ಲಿ 'ಜನತಾ ಪಕ್ಷದ' ರಾಜ್ಯಾಧ್ಯಕ್ಷನಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದೂ ಸಹ ಈ ದೇಶದ ಪ್ರಜಾತಂತ್ರ ಮೆಚೂರ್ ಆಗಿರುವ ಲಕ್ಷಣವೇ ಇರಬೇಕು.

ಇದು ಕೇವಲ ಒಂದು ಪಕ್ಷದ ಕಥೆಯಲ್ಲ. ಇಂದು ಕರ್ನಾಟಕದಲ್ಲಿ ಪ್ರತಿ ಪಕ್ಷವೂ 'ಗೆಲ್ಲಬಲ್ಲ' ಸಮರ್ಥ 'ಪ್ರಜೆ'ಗಾಗಿ ಹುಡುಕಾಡುತ್ತಿದೆ. ಈವರೆಗೆ ಪಕ್ಷದ ಬಗ್ಗೆ, ಜನರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದ ಕೇವಲ ಹಣದ ಥೈಲಿ ಮಾತ್ರ ಇರುವ ದೊಡ್ಡ ದೊಡ್ಡ ಕುಳಗಳು ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳ ಅಭ್ಯರ್ಥಿಯಾಗುತ್ತಿದ್ದಾರೆ. ವಿಜಯ ಕರ್ನಾಟಕದಂತ ಪಕ್ಕಾ ಚಡ್ಡಿ ಪತ್ರಿಕೆ ಸಹ, ಬಿಜೆಪಿ ಪಕ್ಷವು ಬೆಂಗಳೂರು ಉತ್ತರ ವಿಭಾಗಕ್ಕೆ ಗೆಲ್ಲಬಲ್ಲ 'ತಾಕತ್ತು' ಅರ್ಥಾತ್ ಹಣದ ತಾಕತ್ತು ಇರುವ ವ್ಯಕ್ತಿ ಯಾವುದೇ ಪಕ್ಷದಲ್ಲಿದ್ದರೂ ಕರೆದು ತರುವ ಪ್ರಯತ್ನದಲ್ಲಿದೆ ಎಂದು ವರದಿ ಮಾಡಿತ್ತು.

ಈಗ ಚುನಾವಣೆಗೆ ನಿಲ್ಲುವ ಪ್ರತಿ ಅಭ್ಯರ್ಥಿಯೂ ಸಹ ತಮ್ಮ ಹಣಕಾಸು ಹಿನ್ನೆಲೆಯ ಬಗ್ಗೆ ಚುನಾವಣಾ ಅಯೋಗಕ್ಕೆ ವರದಿ ಸಲ್ಲಿಸುವುದು ಕಡ್ಡಾಯ. ಅವರು ಅಯೋಗಕ್ಕೆ ಸಲ್ಲಿಸುವ ಲೆಕ್ಕಾಚಾರವೆಲ್ಲಾ

ಕೇವಲ ರಾಮನ ಲೆಕ್ಕ. ಕೃಷ್ಣನ ಲೆಕ್ಕ ಹುಡುಕಿ ತೆಗೆಯುವುದು ಸಾಕ್ಷಾತ್ ಕೃಷ್ಣ ಪರಮಾತ್ಮನಿಗೂ ಸಾಧ್ಯವಲ್ಲ. ಹಾಗಿದ್ದರೂ ಸಹ ಆ ಪಟ್ಟಿಯಲ್ಲಿ ಒಬ್ಬನೂ/ಳೂ ಬಿಪಿಎಲ್ (ಬಿಲೋ ಪಾವರ್ಟಿ ಲೈನ್ – ಬಡತನ ರೇಖೆಗಿಂತ ಕೆಳಗಿರುವವರ) ಪಕ್ಷದ ಸದಸ್ಯನಿಲ್ಲ! ಅಂದರೆ ಈ ಚುನಾವಣೆಯಲ್ಲಿ ನಿಂತಿರುವ ಯಾವ 'ಪ್ರಜೆಯೂ' ಬಡತನ ರೇಖೆಗಿಂತ ಕೆಳಗಿಲ್ಲ. ಹೀಗಾಗಿಯೇ ರಾಜಕೀಯದಲ್ಲೂ ಸಹ ಅವರು ಬಡವರಿಗೂ ಮತ್ತು ಶ್ರೀಮಂತರಿಗೂ ನಡುವೆ ವ್ಯವಸ್ಥೆ ಎಳೆದಿರುವ ಈ ಲಕ್ಷಣ ರೇಖೆಯನ್ನು ದಾಟಿ ಬರುವುದಿಲ್ಲ. ಜನಪರ ಹೋರಾಟದಲ್ಲಿರುವ ಕೆಲವರು ಈ ರೇಖೆಯನ್ನು ದಾಟಿದರೂ ಈ ಲಕ್ಷ್ಮಣ ರೇಖೆಯನ್ನು ಕಾಯುತ್ತಿರುವ ರಾಮರು ಅವರನ್ನು ಕಾಡಿಗಟ್ಟಿ ಬಿಡುತ್ತಾರೆ!

ನಮ್ಮ ಸಂವಿಧಾನದಲ್ಲಿ ಭಾರತವನ್ನು ಒಂದು ಸ್ವತಂತ್ರ, ಸಾರ್ವಭೌಮಿ, ಸಮಾಜವಾದಿ, ಜಾತ್ಯತೀತ ಗಣರಾಜ್ಯವನ್ನಾಗಿ ಕಟ್ಟಿಕೊಳ್ಳಬೇಕೆಂದು ಬರೆದುಕೊಳ್ಳಲಾಗಿದೆ. ಆದರೆ ಅದು ಅಂಬೇಡ್ಕರ್ ಬರೆದ ನಿರ್ದೇಶನಾ ತತ್ವದಲ್ಲಿರುವ ಆದರ್ಶ ಮಾತ್ರ, ಸಂವಿಧಾನದ ಉಳಿದ ಭಾಗಬು ನಿರ್ದೇಶನಾ ತತ್ವಗಳು ಆಚರಣೆಗೆ ಬರದಂತೆ ರೂಪಿತಗೊಂಡಿವೆ. ಅದಕ್ಕೆ ಜಡಗಟ್ಟಿದ ಹಿಂದೂ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆ ತರಬಹುದಾದ ಹಿಂದೂ ಕೋಡ್ ಬಿಲ್ ಅನ್ನು ಜಾರಿಗೆ ತರಲಾಗದೆ ಅಂಬೇಡ್ಕರ್ ಹತಾಷೆಯಿಂದ ರಾಜೀನಾಮೆ ಕೊಟ್ಟದ್ದು. "ಇಂದು ನಾವು ರಾಜಕೀಯವಾಗಿ ಸಮಾನವಾಗಿರುವ ಆದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಸಮಾನವಾಗಿರುವ ಅಂತರ್ ವೈರುಧ್ಯಗಳಿಂದ ಕೂಡಿದ ಕಾಲಘಟ್ಟವನ್ನು ಪ್ರವೇಶಿಸುತ್ತಿದ್ದೇವೆ. ಆದಷ್ಟು ಬೇಗ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ತರುವೆಡೆ ಪ್ರಭುತ್ವ ಗಮನ ಹರಿಸದಿದ್ದರೆ ರಕ್ತ ಪೂರಿತ ಕ್ರಾಂತಿಯಿಂದಲೇ ಜನ ಇದನ್ನು ಬದಲಾಯಿಸು ತ್ತಾರೆ" ಎಂದು ದಾರ್ಶನಿಕವಾಗಿ ನುಡಿದದ್ದು.

ಅಂಬೇಡ್ಕರ್ ಬರೆದ ನಿರ್ದೇಶನಾ ತತ್ವದ ಕಲಂ 39 (ಸಿ)ಯು ಸರ್ಕಾರಗಳು ಈ ದೇಶದ ಸಂಪತ್ತು ಒಂದೆಡೆ ಕೇಂದ್ರೀಕರಣವಾಗದಂತೆ ನೀತಿಗಳನ್ನು ರೂಪಿಸಬೇಕೆಂದು ಹೇಳುತ್ತದೆ. ಆದರೆ 91ರಿಂದ ಜಾರಿ ಯಲ್ಲಿರುವ ಆರ್ಥಿಕ ನೀತಿಗಳು ಈ ದೇಶದ ಸಂಪತ್ತೆಲ್ಲಾ ಕೆಲವೇ ಕೆಲವು ವ್ಯಕ್ತಿಗಳ ಕೈಯಲ್ಲಿ ಕೇಂದ್ರೀಕರಣವಾಗುವಂತೆ ಮಾಡಿದೆ. ಆದರಿಂದಲೇ ಕಳೆದ 20ವರ್ಷಗಳಲ್ಲಿ ಅಂಬಾನಿಗಳ ಆಸ್ತಿ 300 ಕೋಟಿ ರೂ.ಗಳಿಂದ 3 ಲಕ್ಷ ಕೋಟಿ ರೂಗಳಿಗೇರಿದರೆ ಅದೇ ಅವಧಿಯಲ್ಲಿ 2 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾರಣ? ಚುನಾವಣೆ ಮೂಲಕ ಅಧಿಕಾರಕ್ಕೆ ಬಂದ ಎಲ್ಲಾ ಪಕ್ಷಗಳಲ್ಲಿ ಮತ್ತವರ ಅಭ್ಯರ್ಥಿಗಳಲ್ಲಿ ಯಾರೂ ಬಿಪಿಎಲ್ 'ಪ್ರಜೆ'ಗಳಿಲ್ಲ. ಯಾವ ಬಿಪಿಎಲ್ ಕೂಡಾ ಚುನಾವಣೆಯ ಮೂಲಕ ಅಧಿಕಾರವನ್ನು ಪಡೆಯುವ ಕನಸನ್ನೂ ಇಟ್ಟು ಕೊಳ್ಳಲು ಸಾಧ್ಯವಿಲ್ಲ.

ಆದ್ದರಿಂದ ಒಂದರ್ಥದಲ್ಲಿ ಈಗಿರುವ ಚುನಾವಣಾ ಪದ್ಧತಿಗಳು ಮತ್ತು ಪಕ್ಷಗಳು ಪ್ರಜಾತಂತ್ರವನ್ನೇ ಕೊಲ್ಲುತ್ತಿದೆ ಎನಿಸುವುದಿಲ್ಲವೇ? ಜನರಿಂದ ಆಯ್ಕೆಯಾಗದಿದ್ದರೂ ಸರ್ಕಾರ ರಚಿಸುವ ಕುತಂತ್ರ,

ಅಬ್ರಾಹಾಂ ಲಿಂಕನ್ ಪ್ರಕಾರ ಒಂದು ಪ್ರಜಾತಂತ್ರದ ನಿಜವಾದ ಲಕ್ಷಣವೆಂದರೆ ಆಳುವ ಸರ್ಕಾರಗಳನ್ನು ಬಹುಸಂಖ್ಯಾತ ಜನರು ಆಯ್ಕೆಮಾಡಬೇಕಲ್ಲವೇ? 15 ನೇ ಲೋಕಸಭೆಗೆ ಚುನಾವಣೆ ನಡೆಯುವ ಈ ಹೊತ್ತಿನಲ್ಲಾದರೂ 1952ರಿಂದ ಈ ದೇಶವನ್ನು ಆಳಿದ 15 ಸರ್ಕಾರ

ನಮ್ಮ ಸಂವಿಧಾನದಲ್ಲಿ ಭಾರತವನ್ನು ಒಂದು ಸ್ವತಂತ್ರ, ಸಾರ್ವಭೌಮ, ಸಮಾಜವಾದಿ, ಜಾತ್ಯತೀತ ಗಣರಾಜ್ಯವನ್ನಾಗಿ ಕಟ್ಟಿಕೊಳ್ಳಬೇಕೆಂದು ಬರೆದುಕೊಳ್ಳಲಾಗಿದೆ. ಆದರೆ ಅದು ಅಂಬೇಡ್ಕರ್ ಬರೆದ ನಿರ್ದೇಶನಾ ತತ್ವದಲ್ಲಿರುವ ಆದರ್ಶ ಮಾತ್ರ, ಸಂವಿಧಾನದ ಉಳಿದ ಭಾಗದ ನಿರ್ದೇಶನಾ ತತ್ವಗಳು ಆಚರಣೆಗೆ ಬರದಂತೆ ರೂಪಿತಗೊಂಡಿವೆ. ಅದಕ್ಕೆ ಜಡಗಟ್ಟಿದ ಹಿಂದೂ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆ ತರಬಹುದಾದ ಹಿಂದೂ ಕೋಡ್ ಬಿಲ್ ಅನ್ನು ಜಾರಿಗೆ ತರಲಾಗದೆ ಅಂಬೇಡ್ಕರ್ ಹತಾಷೆಯಿಂದ ರಾಜೀನಾಮೆ ಕೊಟ್ಟದ್ದು. "ಇಂದು ನಾವು ರಾಜಕೀಯವಾಗಿ ಸಮಾನವಾಗಿರುವ ಆದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಸಮಾನವಾಗಿರುವ ಅಂತರ್ ವೈರುಧ್ಯಗಳಿಂದ ಕೂಡಿದ ಕಾಲಘಟ್ಟವನ್ನು ಪ್ರವೇಶಿಸುತ್ತಿದ್ದೇವೆ. ಆದಷ್ಟು ಬೇಗ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ತರುವೆಡೆ ಪ್ರಭುತ್ವ ಗಮನ ಹರಿಸದಿದ್ದರೆ ರಕ್ತ ಪೂರಿತ ಕ್ರಾಂತಿಯಿಂದಲೇ ಜನ ಇದನ್ನು ಬದಲಾಯಿಸುತ್ತಾರೆ" ಎಂದು ದಾರ್ಶನಿಕವಾಗಿ ನುಡಿದದ್ದು.

ಗಳು ನಿಜಕ್ಕೂ ಬಹುಸಂಖ್ಯಾತ ಭಾರತೀಯರಿಂದ ಆಯ್ಕೆಯಾಗಲ್ಪಟ್ಟವರೇ ಎಂದು ವಿಶ್ಲೇಷಣೆ ಮಾಡಬೇಕಲ್ಲವೇ?

1999ರಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ ಮೈತ್ರಿಕೂಟ ಅಧಿಕಾರದಲ್ಲಿದ್ದಾಗ ಈ ದೇಶದ ಸಂವಿಧಾನಕ್ಕೆ ಕರಸೇವೆ ಮಾಡಲು ನಿವೃತ್ತ ಮುಖ್ಯ ನ್ಯಾಯಾಧೀಶ ವೆಂಕಟಾಚಲಯ್ಯನವರ ನೇತೃತ್ವದಲ್ಲಿ ಒಂದು 'ಸಂವಿಧಾನ ಸುಧಾರಣಾ ಆಯೋಗ'ವನ್ನು ನೇಮಕ ಮಾಡಿದ್ದು ನೆನಪಿನಲ್ಲಿರಬೇಕಲ್ಲವೇ? ಆ ಆಯೋಗ ತನ್ನನ್ನು ನೇಮಕ ಮಾಡಿದ್ದ ಸರ್ಕಾರ ಕೇಳದಿದ್ದರೂ ಆಳುವ ಸರ್ಕಾರಗಳು ಬಹುಮತ ಪಡೆದ ಸರ್ಕಾರವೇ ಎಂಬ ಪ್ರಶ್ನೆ ಹಾಕಿಕೊಂಡಿತ್ತು. ಆದರೆ ಅವರು ಕಂಡುಕೊಂಡ ಉತ್ತರ ಅವರಿಗೇ ಆಶ್ಚರ್ಯ ತರುವಂತಿತ್ತು. ಆಯೋಗದ ಅಧ್ಯಯನದ ಪ್ರಕಾರ ಆವರೆಗೆ (2000) ಅಧಿಕಾರ ಅನುಭವಿಸಿದ(ಆಗ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಎನ್.ಡಿ.ಎಯೂ ಸೇರಿದಂತೆ) ಯಾವ ಪಕ್ಷಗಳು ಚಲಾಯಿಸಿದ ಮತಗಳಲ್ಲಿ ಶೇ.50ಕ್ಕಿಂತ ಹೆಚ್ಚಿನ ಮತಗಳನ್ನು ಪಡೆದುಕೊಂಡಿರಲಿಲ್ಲ. ಆದರೂ ನಮ್ಮ ಸಂವಿಧಾನ ಸಭೆ ಅಳವಡಿಸಿದ First-Past-The-Post (FPTP) ಪದ್ಧತಿಯ– ಅಂದರೆ ಚಲಾಯಿಸಿದ ಮತಗಳಲ್ಲಿ ಯಾರು ಹೆಚ್ಚು ಮತ ಪಡೆಯುತ್ತಾರೋ ಅವರು ವಿಜೇತರು ಎಂಬ ಪದ್ಧತಿಯ– ಪ್ರಕಾರ ಚಲಾಯಿಸಿದ ಮತಗಳಲ್ಲಿ ಅತ್ಯಧಿಕ ಮತ ಪಡೆದವರೇ ವಿಜೇತರಾಗುತ್ತಾ ಬಂದರು. ಅಂದರೆ ಒಂದು ಕ್ಷೇತ್ರದಲ್ಲಿ ಬಹುಮುಖೀ ಸ್ಪರ್ಧೆ ಇದ್ದು ಐದಾರು ಸಮಬಲರು ಸ್ಪರ್ಧಿಸಿದ್ದರೆ ಗೆದ್ದ ಅಭ್ಯರ್ಥಿಗೆ ಶೇ.20 ಮತ ಬಂದರೂ ಅರ್ಥಾತ್ ಶೇ.80 ಜನ ತಿರಸ್ಕರಿಸಿದರೂ ಗೆದ್ದುಬರುವ ಅವಕಾಶವನ್ನು ನಮ್ಮ ಪ್ರಜಾತಂತ್ರ ಕಲ್ಪಿಸಿಕೊಟ್ಟಿತು.

ಕಳೆದ ಅರವತ್ತು ವರ್ಷಗಳ ಭಾರತೀಯ ಪ್ರಜಾತಂತ್ರದ ಅನುಭವವು, ಇದು ಹೇಗೆ ಬಹುಸಂಖ್ಯಾತರ ಒಟ್ಟು ನಿಲುವಿಗೆ ವಿರುದ್ಧವಾಗಿ ವರ್ತಿಸುತ್ತಾ ಬಂದಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಆದ್ದರಿಂದಲೇ ಆ ಆಯೋಗವು ತಾನು ನೀಡಿದ ಅಂತಿಮ ಶಿಫಾರಸ್ಸುಗಳಲ್ಲಿ ಕನಿಷ್ಠ ಮೊದಲೆರಡು ಅಭ್ಯರ್ಥಿಗಳ ನಡುವೆಯಾದರೂ ಮತ್ತೊಮ್ಮೆ ಸ್ಪರ್ಧೆ ಏರ್ಪಡಿಸಬೇಕೆಂದು ಸಲಹೆ ಮಾಡಿತ್ತು. ಆ ಆತ್ಮಹತ್ಯಾಕಾರಿ ಸಲಹೆಯನ್ನು ಆಳುವ ಪಕ್ಷವಾಗಲೀ, ವಿರೋಧ ಪಕ್ಷವಾಗಲೀ ಒಪ್ಪಲಿಲ್ಲ. ಅದಕ್ಕೆ ಈ ಸಲಹೆಯ ಬಗ್ಗೆ ರಾಷ್ಟ್ರೀಯ ಚರ್ಚೆಯಿರಲಿ, ಪ್ರಚಾರವೂ ನಡೆಯಲಿಲ್ಲ!

ಈವರೆಗೆ ನಮ್ಮನ್ನಾಳಿದ ಯಾವ ಸರ್ಕಾರಗಳು ಬಹುಮತ ಪಡೆದ ಸರ್ಕಾರವಲ್ಲ ಅನ್ನುವುದಕ್ಕೆ ಕಳೆದ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳು ಪಡೆದ ಮತಗಳನ್ನು ಮತ್ತು ಒಟ್ಟಾರೆ ಚಲಾಯಿತ ಮತಗಳನ್ನು ಹೋಲಿಸಿ ನೋಡಿದರೆ ಸಾಕು. ಅರ್ಥವಾಗುತ್ತದೆ. ಈ ಬಗ್ಗೆ ಚುನಾವಣಾ ಆಯೋಗವೇ ಗಾಬರಿಗೊಳಿಸುವಂತ ಅಂಕಿಅಂಶಗಳನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ ಗೆದ್ದ ಅಭ್ಯರ್ಥಿಗಳಲ್ಲಿ ಶೇ.70ಕ್ಕೂ ಹೆಚ್ಚು ಅಭ್ಯರ್ಥಿಗಳು ಚಲಾಯಿಸಿದ ಮತಗಳಲ್ಲಿ ಶೇ.33ಕ್ಕಿಂತ ಕಡಿಮೆ ಮತಗಳನ್ನು ಪಡೆದಿದ್ದರು. ಶೇ.5ರಷ್ಟು ಅಭ್ಯರ್ಥಿಗಳು ಮಾತ್ರ ಚಲಾವಣೆಗೊಂಡ ಮತಗಳಲ್ಲಿ ಶೇ.50ಕ್ಕಿಂತ ಹೆಚ್ಚಿನ ಮತಗಳನ್ನು ಪಡೆದಿದ್ದರು.

ಆದರೆ ಶೇ.50ಕ್ಕಿಂತ ಹೆಚ್ಚು ಮತ ಪಡೆದ ಈ ಶೇ. 5ರಷ್ಟು ಅಭ್ಯರ್ಥಿಗಳನ್ನಾದರೂ ನಿಜವಾದ ಜನಪ್ರತಿನಿಧಿಗಳೆಂದು ಹೇಳಲು ಸಾಧ್ಯವೇ? ಕಷ್ಟ. ಏಕೆಂದರೆ ಒಟ್ಟಾರೆ ಮತದಾರರಲ್ಲಿ ಓಟೇ ಹಾಕದ ಮತದಾರನ ಇಂಗಿತವೇನು? ಆ ಮತದಾರರು ಗೆದ್ದ ಅಭ್ಯರ್ಥಿಯೊಂದಿಗೆ ಎಲ್ಲಾ ಅಭ್ಯರ್ಥಿಗಳನ್ನು ತಿರಸ್ಕರಿಸಿದ್ದಾರೆಂದು ತಾನೇ ಅರ್ಥ? ಉದಾಹರಣೆಗೆ ಈವರೆಗೆ ಲೋಕಸಭಾ ಚುನಾವಣೆಗಳಲ್ಲಿ ಓಟು ಹಾಕಿರುವವರ ಪ್ರಮಾಣ ಶೇ.65ನ್ನೂ ಎಂದಿಗೂ ದಾಟಿಲ್ಲ. ಈವರೆಗೆ ಅತಿ ಹೆಚ್ಚು ಮತದಾನ ದಾಖಲಾಗಿರುವುದು 1985ರಲ್ಲಿ ಇಂದಿರಾ ಗಾಂಧಿ ಹತ್ಯೆ ನಡೆದ ನಂತರ ನಡೆದ ಎಂಟನೇ ಲೋಕಸಭಾ ಚುನಾವಣೆಯಲ್ಲಿ. ಆಗ 64.1 ರಷ್ಟು ಮತದಾನ ದಾಖಲಾಗಿತ್ತು. ಮತ್ತು ಅದೊಂದು ಲೋಕಸಭೆಯಲ್ಲಿ ಮಾತ್ರ ಗೆದ್ದ ಪಕ್ಷ (ಕಾಂಗ್ರೆಸ್) ಚಲಾವಣೆಗೊಂಡ ಮತಗಳಲ್ಲಿ ಶೇ.50ಕ್ಕಿಂತ ಹೆಚ್ಚಿನ ಮತಗಳನ್ನು ಪಡೆದುಕೊಂಡಿತ್ತು. ಅದನ್ನು ಬಿಟ್ಟರೆ 1952ರಿಂದ ಈವರೆಗೆ ನಡೆದಿರುವ 14 ಲೋಕಸಭಾ ಚುನಾವಣೆಗಳಲ್ಲಿ ಹತ್ತು ಚುನಾವಣೆಗಳಲ್ಲಿ ಮತದಾನದ ಪ್ರಮಾಣ ಶೇ.60ರ ಗಡಿ ದಾಟಲಿಲ್ಲ. ಅಂದರೆ ಸರಾಸರಿ ಶೇ.55ರಷ್ಟು ಮತದಾನವಾಗುತ್ತಿದೆಯೆಂದು ಭಾವಿಸಿದರೂ (ಕಳೆದ ಬಾರಿ ಶೇ.58.3ರಷ್ಟು ಮತದಾನವಾಗಿತ್ತು.) ಶೇ. 45 ರಷ್ಟು ಮತದಾರರು ಗೆದ್ದ ಅಭ್ಯರ್ಥಿಯನ್ನು ತಿರಸ್ಕರಿಸಿದ್ದಾರೆಂದರ್ಥ. ಅಂದರೆ ಚಲಾಯಿಸಿದ ಮತಗಳಲ್ಲಿ ಶೇ. 90ರಷ್ಟು ಮತದಾನವನ್ನು ಪಡೆಯದ ಹೊರತೂ ಯಾವ

ಗದ್ದ ಅಭ್ಯರ್ಥಿಯನ್ನು ಬಹುಸಂಖ್ಯಾತ ಜನರ ಅಭ್ಯರ್ಥಿಯೆಂದು ಹೇಳಲು ಸಾಧ್ಯವೇ ಇಲ್ಲ. ಸಾಕ್ಷ್ಯಾತ್ ನೆಹರೂ ಜಾಮ ಹಿಡಿದು ಈವರೆಗೆ ಯಾವ ಗದ್ದ ಅಭ್ಯರ್ಥಿಗೂ ಚಲಾಯಿಸಿದ ಮತಗಳಲ್ಲಿ ಶೇ.90ರಷ್ಟು ಮತದಾನವಾಗಿಲ್ಲ. ಈ ಮಾದರಿಯ ಚುನಾವಣಾ ಪ್ರಜಾತಂತ್ರದಲ್ಲಿ ನಮ್ಮನ್ನು ಆಳಿದವರು ಯಾರು ಬಹುಸಂಖ್ಯಾತ ಜನರ ಪ್ರತಿನಿಧಿಗಳಲ್ಲ ಎಂದಾಯಿತಲ್ಲವೇ?

ಈ ಅಂಕಿಅಂಶಗಳು ಏನನ್ನು ಹೇಳುತ್ತಿವೆ? ಭಾರದ ಆಳುವ ಪ್ರಭುಗಳ ಬಗ್ಗೆ ಭಾರತೀಯ ಮತದಾರರಿಗೆ ಆಗಿರುವ ಭ್ರಮನಿರಸನವನ್ನಲ್ಲವೇ? ಆದರೂ ನಮ್ಮ ಸಂಸದೀಯ ಪ್ರಜಾತಂತ್ರವು ಬಹುಸಂಖ್ಯಾತರಿಂದ ತಿರಸ್ಕೃತಗೊಂಡ ಅಭ್ಯರ್ಥಿಯನ್ನೇ ವಿಜೇತನೆಂದು ಘೋಷಿಸಿ ಜನತೆಯ ಅಣಕ ಮಾಡುತ್ತದೆ. ಕೆಲವು ಅಪವಾದಗಳನ್ನು ಹೊರತು ಪಡಿಸಿದಂತೆ, 1967ರಿಂದಾಚೆಗೆ ನಡೆದ ಚುನಾವಣೆಗಳಲ್ಲಿ ಯಾವ ಒಂದು ಪಕ್ಷಕ್ಕೂ ಬಹುಮತ ದೊರೆಯದಿರುವುದು ಏನನ್ನು ಸೂಚಿಸುತ್ತದೆ? ಇದರ ಮೂಲಕ ಜನತೆ ಈ ವ್ಯವಸ್ಥೆಯ ಬಗ್ಗೆ, ಚುನಾವಣೆಗೆ ನಿಂತಿರುವ ಪಕ್ಷಗಳ ಬಗ್ಗೆ ಅತ್ಯಂತ ಭ್ರಮನಿರಸನಗೊಂಡಿರುವುದು ಅತ್ಯಂತ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಅದರರ್ಥ 1967ಕ್ಕೆ ಮುನ್ನ ಆಳಿದ ಕಾಂಗ್ರೆಸ್ ಪಕ್ಷ ಬಹುಸಂಖ್ಯಾತರ ಬೆಂಬಲವನ್ನು ಪಡೆದಿತ್ತು ಎಂದೇನಲ್ಲ. 1952ರಲ್ಲಿ ನಡೆದ ಮೊಟ್ಟಮೊದಲ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 490 ಸೀಟುಗಳಲ್ಲಿ 245 ಸೀಟುಗಳು ಲಭಿಸಿ ಸೀಟುಗಳ ಲೆಕ್ಕಾಚಾರದಲ್ಲಿ ಸರಳ ಬಹುಮತ ಪಡೆದುಕೊಂಡರೂ ಪಡೆದ ಓಟು ಶೇರು ಕೇವಲ ಶೇ.45. ಅಂದರೆ ಶೇ.50ಕ್ಕಿಂತ ಕಡಿಮೆ. ಇದು, ಸ್ವಾತಂತ್ರ್ಯ ಬಂದ ತರುಣದಲ್ಲಿ ಮತ್ತು ಕಾಂಗ್ರೆಸ್ ದೇಶ ವ್ಯಾಪಿ ಪಕ್ಷವಾಗಿದ್ದಾಗ ಎಂಬುದನ್ನು ಮರೆಯಬಾರದು. 1957ರಲ್ಲಿ ನಡೆದ ಎರಡನೇ ಲೋಕಸಭೆಯಲ್ಲೂ ಕಾಂಗ್ರೆಸ್ 296 ಸೀಟುಗಳನ್ನು ಪಡೆದುಕೊಂಡಿತಾದರೂ ಶೇ.50 ರಷ್ಟು ಮತಗಳನ್ನು ಪಡೆದುಕೊಳ್ಳಲಿಲ್ಲ. 1962ರಲ್ಲಿ 357 ಸೀಟುಗಳನ್ನು ಪಡೆದುಕೊಂಡರೂ ಅದು ಸೀಟು ಹೆಚ್ಚಳವಾಗಿತ್ತೇ ವಿನಃ ಓಟು ಹೆಚ್ಚಳವಾಗಿರಲಿಲ್ಲ. -1967ರಲ್ಲಿ ಅಂದರೆ ಸ್ವಾತಂತ್ರ್ಯ ಬಂದು ಇಪ್ಪತ್ತು ವರ್ಷಗಳಾದ ನಂತರ ಕಾಂಗ್ರೆಸ್‌ನ ಬಗ್ಗೆ ಮುಡಿದ ಭ್ರಮನಿರಸನ ಸ್ಪಷ್ಟವಾಗಿ ಚುನಾವಣೆಯಲ್ಲಿ ಕಾಣಿಸಿಕೊಂಡಿತು. ಆ ಚುನಾವಣೆಯಲ್ಲಿ ಕಾಂಗ್ರೆಸ್ 60 ಸೀಟುಗಳನ್ನು ಕಳೆದುಕೊಂಡು ಅದರ ಸಂಖ್ಯೆ 297ಕ್ಕಿಳಿಯಿತು ಮಾತ್ರವಲ್ಲ ಬಿಹಾರ, ಕೇರಳ, ಒರಿಸ್ಸಾ, ಮದ್ರಾಸ್, ಪಂಜಾಬ್, ಪ.ಬಂಗಾಳ ವಿಧಾನಸಭೆಗಳಲ್ಲಿ ಹೀನಾಯ ಸೋಲನ್ನು ಕಂಡಿತು. 1969ರಲ್ಲಿ ಪಕ್ಷದ ಅಂತರಿಕ ಒಡಕಿನಿಂದ ಕಾಂಗ್ರೆಸ್ 283 ಸೀಟುಗಳನ್ನು ಮಾತ್ರ ಪಡೆದರೆ 1971ರಲ್ಲಿ ಇಂದಿರಾ ಗಾಂಧಿ 'ಗರೀಬಿ ಹಟಾವೋ', ಬ್ಯಾಂಕುಗಳ ರಾಷ್ಟ್ರೀಕರಣದಂತ ಸೋಗಲಾಡಿ ಭರವಸೆಗಳನ್ನು ನೀಡುವ ಮೂಲಕ ಕಾಂಗ್ರೆಸ್ ಪಕ್ಷದ ಪರಿಸ್ಥಿತಿ ಸುಧಾರಿಸಿ 352 ಸೀಟುಗಳನ್ನು ಪಡೆದರೂ ಅರ್ಧಕ್ಕಿಂತ ಹೆಚ್ಚು ಮತದಾರರು ಆಕೆಯ ಭರವಸೆಗಳನ್ನು ನಂಬಲಿಲ್ಲ.

ಆ ನಂತರ ಸರ್ವಾಧಿಕಾರಿ ಇಂದಿರಮ್ಮ 1975ರಲ್ಲಿ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದ್ದರಿಂದ, ತುರ್ತು ಸ್ಥಿತಿ ತೆಗೆದ ನಂತರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋಲುಂಡಿತು. ಆದರೆ ಗೆದ್ದ ಜನತಾ ಪಕ್ಷದ ಒಕ್ಕೂಟಕ್ಕೆ 298 ಸೀಟುಗಳು ಲಭಿಸಿ ಸರಳ ಬಹುಮತ ದೊರೆತರೂ ಅವರ ಪಡೆದುಕೊಂಡ ಓಟು ಶೇರು ಕಾಂಗ್ರೆಸ್

ಗಿಂತ ಜಾಸ್ತಿ ಆಗಿರಲಿಲ್ಲ. ಇದು ಈ ಹೊಸ ಪಕ್ಷ ಜನರಲ್ಲಿ ಅಂಥ ಭರವಸೆಯನ್ನೇನೂ ತುಂಬಿರಲಿಲ್ಲ ಎಂಬುದನ್ನು ಸಾರಿ ಹೇಳುತ್ತದೆ. ತಮ್ಮ ಒಳಕಚ್ಚಾಟಗಳಿಂದ ಈ ಜನತಾ ಪರಿವಾರ ಐದು ವರ್ಷ ಪೂರೈಸದಿದ್ದರಿಂದ 1980 ರಲ್ಲೇ ಮತ್ತೊಂದು ಚುನಾವಣೆ ಎದುರಾಯಿತು. ಇದರಲ್ಲಿ ಕಾಂಗ್ರೆಸ್ ಮತ್ತೆ 351 ಸೀಟು ಪಡೆದು ಅಧಿಕಾರಕ್ಕೆ ಬಂದರೆ ಅಧಿಕಾರದಲ್ಲಿದ್ದ ಜನತಾ ಪಕ್ಷಕ್ಕೆ ದಕ್ಕಿದ್ದು ಕೇವಲ 32 ಸೀಟುಗಳು. ಆದರೆ ಇವರಿಬ್ಬರ ಓಟೂ ಶೇರುಗಳೂ ಸಹ ಶೇ.40ಕ್ಕಿಂತ ಕಡಿಮೆಯಿತ್ತು ಎಂಬುದೇ ಇಲ್ಲಿ ಗಮನಾರ್ಹ.

1985ರಲ್ಲಿ ನಡೆದ ಚುನಾವಣೆಯು, ಇಂದಿರಾ ಗಾಂಧಿಯ ಹತ್ಯೆಯಾದ ತರುವಾಯ ಅಪಾರ ಅನುಕಂಪದ ಅಲೆಯ ಮೇಲೆ ನಡೆದದ್ದರಿಂದ ಆ ಚುನಾವಣೆಯಲ್ಲಿ ಕಾಂಗ್ರೆಸ್ ಪಡೆದ ಸ್ವಾತಂತ್ರ್ಯ ನಂತರದ ಇತಿಹಾಸದಲ್ಲೇ ಅತ್ಯಧಿಕವಾದ ಶೇ.50ಕ್ಕಿಂತ ಹೆಚ್ಚಿನ ಓಟು ಶೇರಾಗಲೀ 403 ಸೀಟುಗಳಾಗಲೀ ಒಂದು ಅಪವಾದವೇ ವಿನಃ ವಾಸ್ತವವಾದದ್ದಲ್ಲ. ಇದು ನಂತರ 1989ರಲ್ಲಿ ನಡೆದ ಚುನಾವಣೆಯಲ್ಲಿ ಸಾಬೀತಾಗಿಹೋಯಿತು. ಆ ಚುನಾವಣೆಯಲ್ಲಿ ಕಾಂಗ್ರೆಸ್ 200ಕ್ಕೂ ಹೆಚ್ಚು ಸ್ಥಾನಗಳನ್ನು ಕಳೆದುಕೊಂಡು ಕೇವಲ 197 ಸೀಟುಗಳನ್ನು ಪಡೆದುಕೊಂಡಿತು. ಆಗ ಅಧಿಕಾರ ರಚಿಸಿದ ರಾಷ್ಟ್ರೀಯ ರಂಗದ ಪ್ರಮುಖ ಘಟಕವಾಗಿದ್ದ ಜನತಾ ದಳ ಪಡೆದುಕೊಂಡಿದ್ದು ಕೇವಲ 143 ಸೀಟುಗಳು ಅಂದರೆ ಕಾಂಗ್ರೆಸ್‌ಗಿಂತ ಕಡಿಮೆ. 1985ರ ನಂತರ ಯಾವ ಪಕ್ಷಕ್ಕೂ ಅಧಿಕಾರ ರಚಿಸುವಷ್ಟು ಸೀಟುಗಳು(272) ಸೀಟುಗಳು ದಕ್ಕಿಲ್ಲ.

1985ರಲ್ಲಿ ನಡೆದ ಚುನಾವಣೆಯು, ಇಂದಿರಾ ಗಾಂಧಿಯ ಹತ್ಯೆಯಾದ ತರುವಾಯ ಅಪಾರ ಅನುಕಂಪದ ಅಲೆಯ ಮೇಲೆ ನಡೆದದ್ದರಿಂದ ಆ ಚುನಾವಣೆಯಲ್ಲಿ ಕಾಂಗ್ರೆಸ್ ಪಡೆದ ಸ್ವಾತಂತ್ರ್ಯ ನಂತರದ ಇತಿಹಾಸದಲ್ಲೇ ಅತ್ಯಧಿಕವಾದ ಶೇ.50ಕ್ಕಿಂತ ಹೆಚ್ಚಿನ ಓಟು ಶೇರಾಗಲೀ 403 ಸೀಟುಗಳಾಗಲೀ ಒಂದು ಅಪವಾದವೇ ವಿನಃ ವಾಸ್ತವವಾದದ್ದಲ್ಲ. ಇದು ನಂತರ 1989ರಲ್ಲಿ ನಡೆದ ಚುನಾವಣೆಯಲ್ಲಿ ಸಾಬೀತಾಗಿಹೋಯಿತು. ಆ ಚುನಾವಣೆಯಲ್ಲಿ ಕಾಂಗ್ರೆಸ್ 200ಕ್ಕೂ ಹೆಚ್ಚು ಸ್ಥಾನಗಳನ್ನು ಕಳೆದುಕೊಂಡು ಕೇವಲ 197 ಸೀಟುಗಳನ್ನುಪಡೆದುಕೊಂಡಿತು. ಆಗ ಅಧಿಕಾರ ರಚಿಸಿದ ರಾಷ್ಟ್ರೀಯ ರಂಗದ ಪ್ರಮುಖ ಘಟಕವಾಗಿದ್ದ ಜನತಾ ದಳ ಪಡೆದುಕೊಂಡಿದ್ದು ಕೇವಲ 143 ಸೀಟುಗಳು ಅಂದರೆ ಕಾಂಗ್ರೆಸ್‌ಗಿಂತ ಕಡಿಮೆ.

1985ರ ನಂತರ ಈವರೆಗೆ ನಡೆದಿರುವ ಯಾವ ಚುನಾವಣೆಗಳಲ್ಲೂ ಯಾವ ಒಂದು ಪಕ್ಷಕ್ಕೂ ಅಧಿಕಾರ ರಚಿಸುವಷ್ಟು ಸೀಟುಗಳು ಅಂದರೆ 272 ಸೀಟುಗಳು ದಕ್ಕಿಲ್ಲ. ಅಧಿಕಾರ ಹಿಡಿದ ಯಾವ ಮೈತ್ರಿಕೂಟಗಳು ಶೇ. 50ಕ್ಕಿಂತ ಹೆಚ್ಚಿನ ಓಟು ಶೇರನ್ನು ಪಡೆಯಲಿಲ್ಲ. 1991ರಲ್ಲಿ ರಾಜೀವ್ ಗಾಂಧಿ ಹತ್ಯೆಯಾದ ನಂತರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೂ ಪಡೆದ ಸೀಟುಗಳು ಕೇವಲ232. ಪ್ರಮುಖ ವಿರೋಧ ಪಕ್ಷವಾದ ಬಿಜೆಪಿ ಪಡೆದುಕೊಂಡದ್ದು 120 ಸೀಟುಗಳು.1996ರಲ್ಲಿ ನಡೆದ 11ನೇ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ 161 ಸೀಟು ದಕ್ಕಿದರೆ ಕಾಂಗ್ರೆಸ್‌ಗೆ 140 ಸೀಟುಗಳು ದಕ್ಕಿದವು. 1998ರ 12ನೇ ಲೋಕಸಭೆಯಲ್ಲಿ ಚುನವಣೋತ್ತರ ಮೈತ್ರಿ ಮಾಡಿಕೊಂಡ ಬಿಜೆಪಿ ಕೂಟಕ್ಕೆ ಲಭಿಸಿದ್ದು ಕೇವಲ 265 ಸೀಟುಗಳು, ಅದು ಅಧಿಕಾರ ನಡೆಸಿದ್ದು ಹೊರಗಿನಿಂದ ಬೆಂಬಲಿಸಿದ ಎಐಡಿಎಂಕೆ ನೀಡಿದ ಬೆಂಬಲದಿಂದ. ಅದು ಬೆಂಬಲ ವಾಪಸ್ ತೆಗೆದುಕೊಂಡ ನಂತರ ಸರ್ಕಾರ ಕುಸಿದು 1999ರಲ್ಲಿ 13ನೇ ಲೋಕಸಭೆ ಚುನಾವಣೆ ನಡೆಯಿತು. ಇದರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟ ಅಧಿಕಾರಕ್ಕೆ ಬಂದಿತು. ಈ ಕೂಟ ಪಡೆದುಕೊಂಡ ಸೀಟುಗಳ ಸಂಖ್ಯೆ 298 ಅದರಲ್ಲಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಬಿಜೆಪಿ ಪಡೆದುಕೊಂಡ ಸೀಟು ಕೇವಲ 182. ಇದು ಬಿಜೆಪಿ ಈ ವರೆಗೆ ಪಡೆದುಕೊಂಡಿರುವ ಅತಿ ಹೆಚ್ಚು ಸೀಟುಗಳು. ಕಾಂಗ್ರೆಸ್ ಪಕ್ಷ ಪಡೆದುಕೊಂಡಿದ್ದು ಕೇವಲ 114 ಸೀಟುಗಳು. 2004ರ 14ನೇ ಲೋಕಸಭೆಯಲ್ಲಿ ಅಧಿಕಾರ ರಚಿಸಿದ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಮೈತ್ರಿಕೂಟ ಅಧಿಕಾರ ರಚಿಸಿತು. ಈ ಚುನಾವಣೆಯಲ್ಲಿ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಕಾಂಗ್ರೆಸ್ ಪಕ್ಷ ಪಡೆದುಕೊಂಡ ಸೀಟುಗಳ ಸಂಖ್ಯೆ ಕೇವಲ 145. ಪ್ರಮುಖ ವಿರೋಧ ಪಕ್ಷವಾದ ಬಿಜೆಪಿಗೆ ದೊರೆತದ್ದು ಕೇವಲ 138 ಸೀಟುಗಳು.

ಇದು ಈವರೆಗಿನ ಭಾರತದ ಚುನಾವಣಾ ಪ್ರಜಾತಂತ್ರದ ಕಥೆ. ಭಾರತೀಯ ಪ್ರಜಾತಂತ್ರಕ್ಕೆ 61 ವರ್ಷ ಕಳೆದ ನಂತರ ಯಾವ ಪಕ್ಷಕ್ಕೂ ಸ್ವತಂತ್ರವಾಗಿ ಅಧಿಕಾರ ರಚಿಸುವಷ್ಟು ಸೀಟುಗಳೂ ಸಿಕ್ಕುತ್ತಿಲ್ಲ. ಓಟುಗಳೂ ಸಿಕ್ಕು

ತ್ತಿಲ್ಲ. ಸ್ವತಂತ್ರವಾಗಿ ಅಧಿಕಾರ ರಚಿಸಲು 272 ಸೀಟುಗಳು ಬೇಕಿದ್ದರೆ ಕಳೆದ ಮೂರು ನಾಲ್ಕು ಚುನಾವಣೆಗಳಿಂದ ಯಾವ ಒಂದು ಪಕ್ಷಕ್ಕೂ ಅದರ ಅರ್ಧದಷ್ಟೂ ಸೀಟುಗಳು ದಕ್ಕುತ್ತಿಲ್ಲ. ಅಷ್ಟು ಮಾತ್ರವಲ್ಲ ಕಳೆದ ಕೆಲವು ಚುನಾವಣೆಗಳಿಂದ ಯಾವ ಪಕ್ಷಕ್ಕೂ ಶೇ.40ರಷ್ಟು ಓಟು ಶೇರು ಸಿಗು ತ್ತಿಲ್ಲ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಓಟು ಶೇರು ಶೇ.38ರಷ್ಟಿದ್ದರೆ ಬಿಜೆಪಿಯದ್ದು ಶೇ.30ರಷ್ಟು ಮಾತ್ರವಾಗಿತ್ತು. ಕರ್ನಾಟಕದ ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿ 110 ಸೀಟುಗಳನ್ನು ಪಡೆದು ಅತಿ ದೊಡ್ಡ ಪಕ್ಷವಾಗಿ ಅಧಿಕಾರ ರಚಿಸಿದರೂ ಅದು ಪಡೆದುಕೊಂಡ ಓಟು ಶೇರು ಶೇ.33.9.ಆದರೆ ಕೇವಲ 80 ಸೀಟುಗಳನ್ನು ಪಡೆ ದುಕೊಂಡ ಕಾಂಗ್ರೆಸ್ ಪಕ್ಷ ಪಡೆದುಕೊಂಡ ಓಟು ಶೇರು ಶೇ.34.6 ಅಂದರೆ ಅಧಿಕಾರ ರೂಢ ಬಿಜೆಪಿಗಿಂತ 0.7 ರಷ್ಟು ಜಾಸ್ತಿ. ಅಂದರೆ ಕರ್ನಾಟಕದ ಮತದಾರರಲ್ಲಿ ಅತಿ ಹೆಚ್ಚು ಜನ ಬಿಜೆಪಿಯ ಬದಲಿಗೆ ಕಾಂಗ್ರೆಸನ್ನೇ ಆಯ್ದುಕೊಂಡರೂ, (ಇದಕ್ಕೆ ಜಾತ್ಯತೀತ ಜನತಾದಳದ ಓಟುಗಳನ್ನು ಸೇರಿಸಿದರೆ ಒಟ್ಟು ಶೇ.55ರಷ್ಟು) ಜನ ಕೋಮುವಾದಿಗಳನ್ನು ತಿರಸ್ಕರಿಸಿದರೂ ಬಿಜೆಪಿಯೇ ಅಧಿಕಾರಕ್ಕೆ ಬರುವಂತೆ ಮಾಡಿರುವುದು ನಮ್ಮ ಚುನಾವಣಾ ಪದ್ಧತಿಗಳು.

ಕಳೆದ ಕೆಲವು ಚುನಾವಣೆಗಳಿಂದ ಕಾಂಗ್ರೆಸ್ ಸುತ್ತ ಹತ್ತಾರು ಪಕ್ಷಗಳು ಮತ್ತು ಬಿಜೆಪಿ ಸುತ್ತಾ ಹತ್ತಾರು ಕೂಡಿಕೊಂಡು ಕೂಟ ರಚಿಸಿಕೊಂಡು ಯುಪಿಎ, ಎನ್‌ಡಿಎ ಎಂದು ಅಧಿಕಾರ ಹಿಡಿಯುತ್ತಿದ್ದವು. ಈ ಬಾರಿ ಜನ ಅದನ್ನೂ ತಿರಸ್ಕರಿಸುತ್ತಿರುವಂತೆ ಕಾಣುತ್ತದೆ. ಈವರೆಗೆ ನಡೆದಿರುವ ಚುನಾವಣಾ ಪೂರ್ವಸಮೀಕ್ಷೆಗಳು ಯಾವುವೂ ಒಂದು ಪಕ್ಷವಿರಲಿ ಒಂದು ಕೂಟವೂ ಅಧಿಕಾರಕ್ಕೆ ಬರುವುದು ಕಷ್ಟವೆಂದು ಸಾರುತ್ತಿವೆ. CNN-IBN, CSDSನವರು ನಡೆಸಿದ ಸಮೀಕ್ಷೆಯ ಪ್ರಕಾರ ಯುಪಿಎ ಕೂಟಕ್ಕೆ 215-235 ಸೀಟುಗಳು, ಎನ್‌ಡಿಎ ಕೂಟಕ್ಕೆ 165 -185 ಸೀಟುಗಳು ಮತ್ತು ಇತರರಿಗೆ 120-150 ಸೀಟುಗಳು ಬರಲಿವೆ. ಸ್ಟಾರ್ ನ್ಯೂಸ್ ನಡೆಸಿದ ಸಮೀಕ್ಷೆಯ ಪ್ರಕಾರ ಯುಪಿಎಗೆ 257, ಎನ್‌ಡಿಎಗೆ 185 ಮತ್ತು ಇತರರಿಗೆ 96 ಸೀಟುಗಳು ಬರಲಿವೆ. ಟೈಮ್ಸ್ ಆಫ್ ಇಂಡಿಯಾ ನಡೆಸಿದ ಸಮೀಕ್ಷೆಯ ಪ್ರಕಾರ ಯುಪಿಎಗೆ 201, ಎನ್‌ಡಿಎಗೆ 195 ಮತ್ತು ಇತರರಿಗೆ 147 ಸೀಟುಗಳು ಸಿಗ ಲಿವೆ. ಇತ್ತೀಚೆಗೆ ಇಂಡಿಯಾ ಟಿವಿ ನಡೆಸಿದ ಸಮೀಕ್ಷೆಯ ಪ್ರಕಾರ ಯುಪಿ-ಎಗೆ 178, ಎನ್‌ಡಿಎಗೆ 187 ಮತ್ತು ಇತರರಿಗೆ 178 ಸೀಟುಗಳು ಬರಲಿವೆ. ಇವುಗಳ ನಡುವಿನ ವ್ಯತ್ಯಾಸವೇನೇ ಇರಲಿ, ಈಗ ಒಂದು ಪಕ್ಷಕ್ಕಿರಲಿ ಒಂದು ಕೂಟಕ್ಕೇ ಬಹುಮತ ಬರಲಿಕ್ಕಿಲ್ಲ. ಈಗ ಕೂಟಾಂತರ ಮೈತ್ರಿ ಆಗದ ಹೊರತು ಸರ್ಕಾರ ರಚನೆ ಸಾಧ್ಯವಿಲ್ಲ.

ಇದು ಭಾರತದ ಚುನಾವಣಾ ಪ್ರಜಾತಂತ್ರ ಎದುರಿಸುತ್ತಿರುವ ಹೊಸ ಬಿಕ್ಕಟ್ಟು. ವಿಶ್ವಾಸದ ಬಿಕ್ಕಟ್ಟು. ಮತದಾನದಲ್ಲಿ, ಓಟು ಶೇರಿನಲ್ಲಿ, ಸೀಟುಗಳ ಸಂಖ್ಯೆಯಲ್ಲಿ ಎಲ್ಲದರಲ್ಲೂ ಭಾರತೀಯ ಮತದಾರ ಈ ವ್ಯವಸ್ಥೆಯ ಬಗ್ಗೆ, ಆಳುವವರ ಬಗ್ಗೆ ತನ್ನ ಸ್ಪಷ್ಟ ಅವಿಶ್ವಾಸ ಮತ್ತು ತಿರಸ್ಕಾರವನ್ನು ಸೂಚಿಸುತ್ತಿದ್ದಾನೆ/ಳೆ. ಆದರೂ ನಮ್ಮ ಚುನಾವಣಾ ಪದ್ಧತಿಯ ತಂತ್ರಗಳು ಪ್ರಜಾತಂತ್ರವನ್ನೇ ಸೋಲಿಸಿ ಸೋತವರನ್ನೇ ವಿಜೇತರನ್ನಾಗಿ ಆಯ್ಕೆ ಮಾಡಿ ಅಧಿಕಾರ ಕೊಡುತ್ತದೆ. ವ್ಯವಸ್ಥೆ ಬದಲಾಗದಿದ್ದರೂ ಹೋಗಲಿ, ಈ ಚುನಾವಣಾ ಪದ್ಧತಿಗಳಾದರೂ ಬದಲಾಗಬೇಕಲ್ಲವೇ? □

ಕಾಲಜ್ಞಾನ





ಆದಿ ಅನಾದಿ ಕಾಲಖಂಡವು,
ಕತ್ತರಿಸದ ಮಾಂಸದ ತುಂಡೇ ಕೊಳೆತು ನಾರಲು:
ನಿಗಿನಿಗಿಸುವ ಕಣ್ಣುಕುಲುಮೆಯ ಹೊತ್ತಿಸಿ
ಒಡೆದ ತಲೆಬುರುಡೆಯಾದರೂ ಸರಿ
ಒಲೆಯ ಮೇಲಿರಿಸಿ, ಒಂದೊಂದು ತುಂಡನು
ಕ್ಷಣಕ್ಷಣವು ಜೀವಜೀವದ ಕಣ್ಣೀರನ್ನೇ ನೀರಾಗಿಸಿ
ತಾಜಾ ಮಸಾಲೆಯೊಂದಿಗೆ
ಮಧ್ಯಾಹ್ನದ ರಣಬೇಗುದಿಯಲಿ ಘಮಘಮ ಬೇಯಿಸಿ
ರಸ ಗಂಟಲವರೆಗೂ ಏರಿಸಿ ಬಿಡುವ ವಿಕ್ರಮಿ.
ಅಜೀರ್ಣ ಕಾಡದ ಕಾಡ್ಗಿಚ್ಚು!
ಮೈಯೆಲ್ಲ ಹುಣ್ಣು-ಬಣ್ಣಗಳ ಚಿತ್ರ ಕಾಡಿದರೂ
ಕಳಚುತ್ತ ತನ್ನ ವಯ್ಯಾರವ ರಣರಣ ಉರಿಯಲ್ಲಿ
ವಸಂತ ಶೃಂಗಾರ ವೀರ.

ಯಾವ ಜ್ವಾಲೆ ಸ್ಫೋಟಿಸಿ ಲಾವಾಗ್ನಿ ಕಾರಿದರೂ
ಅದಕ್ಕೆ ತಣ್ಣನೆಯ ಮುಲಾಮು ಹಚ್ಚುವ ವೈದ್ಯ.
ಯಾವ ಧ್ರುವತಾರೆ ನೆಲಕ್ಕುರುಳಿ ಕಂಗಾಲ ಕಲೆ ಮೂಡಿಸಿದರೂ
ತಾನು ನಿರುಮ್ಮಳ ಧ್ಯಾನಿ; ಎಲ್ಲರ ಹಿಂದೆ ಬಿಟ್ಟು
ಕೂಡದ ಗ್ರಹ ತಾರೆಗಳ ಹಾದಿಯಲಿ ಹಾರುವ ನಿರಾಕರ ಯಾನಿ
ತನ್ನಿನಿಯೆ ಇಳೆಯ ಗರ್ಭದಲಿ ಬೀಜ ಬಿತ್ತುವ ಮಹಾಕಾಮಿ
ದಶದಿಕ್ಕುಗಳಲಿ ಸಾಗುವ ಸಾಗರಾಭಿಮುಖಿ ಸಾವಿರಾರು ನದಿಗಳ
ಮಥಿಸಿ ಜೀವತಂಗಾಳಿ ತರುವ ಮಾಯಾವಿ

ಹಗಲು ರಾತ್ರಿಯಾಗಿ ಹುಟ್ಟಿಸಾಯುವ ಪ್ರೇಮಿ
ಮಣ್ಣಿನಲಿ ಮಣ್ಣಾಗಿ ಕಾಡುವ ಕನಸುಗಳ ತನ್ನೊಂದಿಗೆ ಹೊತ್ತು
ಯಾವ ಹಿಡಿತಕ್ಕೂ ಸಿಗದೆ ಹೊರಟಿದ್ದಾನೆ ಚಿಲಿಪಿಯ ಬೆನ್ನುಹತ್ತಿ

○ ರಂಗನಾಥ ಕಂಟನಕುಂಟೆ

ಚುನಾವಣಾ ಪ್ರಣಾಳಿಕೆ : ಹಾವು ಏಣಿ ಆಟ!

೧೯೭೫ರ ತುರ್ತು ಪರಿಸ್ಥಿತಿ ಮತ್ತು ತದನಂತರದ ಕ್ಷಿಪ್ರ ಬೆಳವಣಿಗೆಗಳು ರಾಷ್ಟ್ರ ರಾಜಕಾರಣವನ್ನು ಕವಲು ದಾರಿಯಲ್ಲಿ ತಂದು ನಿಲ್ಲಿಸಿದ್ದವು. ಆಳ್ವಿಕರು ಕೈಗೊಳ್ಳುವ ತೀರ್ಮಾನಗಳಲ್ಲಿ, ಅನುಸರಿಸುವ ಮಾರ್ಗಗಳಲ್ಲಿ, ಅಳವಡಿಸುವ ನೀತಿಗಳಲ್ಲಿ ಪ್ರಜೆಗಳ ದನಿ ನಗಣ್ಯವಾಗತೊಡಗಿತು. ಸಂಪೂರ್ಣ ಕ್ರಾಂತಿಯ ಘೋಷಣೆಯಡಿ ನಡೆದ ಚಳುವಳಿ ಕ್ರಾಂತಿಕಾರಿ, ಪ್ರಗತಿಪರ ನಾಯಕರನ್ನು ಸೃಷ್ಟಿಸುವ ಬದಲು ಪ್ರತಿಕ್ರಾಂತಿ ಸೃಷ್ಟಿಸುವ, ಅವಕಾಶವಾದಿ, ಪ್ರತಿಗಾಮಿ, ಸ್ವಾರ್ಥಪರ ನಾಯಕರನ್ನು ಸೃಷ್ಟಿಸಿತು. ಇದೇ ಹಂತದಲ್ಲೇ ಅಧಿಕಾರ ವಿಕೇಂದ್ರೀಕರಣ ಪ್ರಕ್ರಿಯೆ ಚಾಲ್ತಿಗೆ ಬಂದರೂ, ಅದು ಕೇಂದ್ರೀಕೃತ ಅಧಿಕಾರದ ವಿಕೇಂದ್ರೀಕರಣವಾಗಿತ್ತು. ಸ್ಪಷ್ಟವಾಗಿ ಹೇಳುವುದಾದರೆ ಇಡೀ ದೇಶದ ಸೂತ್ರವನ್ನು ದೆಹಲಿಯಲ್ಲಿ ಕುಳಿತು ನಿರ್ವಹಿಸುವ ಬದಲು, ಸೂತ್ರಧಾರರನ್ನು ಗ್ರಾಮ ಮಟ್ಟದಲ್ಲೇ ಪ್ರತಿಷ್ಠಾಪಿಸಲಾಯಿತು.

ನಾ ದಿವಾಕರ

ಸಾಮಾನ್ಯವಾಗಿ ಲೋಕಸಭಾ ಚುನಾವಣೆಗಳನ್ನು ಮಹಾ ಚುನಾವಣೆ ಎಂದು ಕರೆಯಲಾಗುತ್ತದೆ. ಐದು ವರ್ಷಗಳಿಗೊಮ್ಮೆ ಎದುರಾಗುವ ಈ ಪ್ರಕ್ರಿಯೆ ಪ್ರಜಾತಂತ್ರದ ಅಳಿವು ಉಳಿವಿನ ಮಾನದಂಡವಾಗಿರುವುದರಿಂದ ಸಾಮಾನ್ಯ ಜನತೆ ಈ ಮಹತ್ತರ ಸಮಯಕ್ಕಾಗಿ ಕಾತುರದಿಂದಿರುತ್ತಾರೆ. ತಮ್ಮಿಂದ ಚುನಾಯಿತವಾದ ಪಕ್ಷಗಳ ಕಾರ್ಯವೈಖರಿಯನ್ನು ಪ್ರಶ್ನಿಸುವ ಮತ್ತು ಸರ್ಕಾರಗಳ ಸಾಧನೆಗಳನ್ನು ಪರಾಮರ್ಶಿಸಿ ತಮ್ಮ ಸಂವಿಧಾನಿಕ ಹಕ್ಕಿನ ಮೂಲಕ ತೀರ್ಪು ನೀಡುವ ಸಾರ್ವತ್ರಿಕ ಮತದಾನ ಪ್ರಜಾತಾಂತ್ರಿಕ ವ್ಯವಸ್ಥೆಯ ಪ್ರಮುಖ ಮಾನದಂಡ. ಸಾಮಾನ್ಯವಾಗಿ ಚುನಾವಣೆಗಳಲ್ಲಿ ಶೇ. 60ರಷ್ಟು ಮತದಾರರು ಮತ ಚಲಾಯಿಸುತ್ತಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಶೇ.45 ರಿಂದ 50ರಷ್ಟು ಜನ ಮತ ಚಲಾಯಿಸುತ್ತಾರೆ. ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬಿಲಿಯನ್ ವೋಟ್ಸ್ (100 ಕೋಟಿ ಮತಗಳು) ಎಂಬ ಶೀರ್ಷಿಕೆಯಡಿ ಇಡೀ ಚುನಾವಣಾ ಪ್ರಕ್ರಿಯೆಯನ್ನು ರಂಜನೀಯಗೊಳಿಸುವುದು ಈ ದೃಷ್ಟಿಯಿಂದ ಬಾಲಿಶವೆನಿಸುತ್ತದೆ. ಆದಾಗ್ಯೂ ಮತ ಚಲಾಯಿಸುವ ಜನತೆ ಸಮಸ್ತ ಭಾರತೀಯರ ನಾಡಿಮಿಡಿತವನ್ನು ಪ್ರತಿನಿಧಿಸುವುದರಿಂದ ಹಾಗೂ ಚುನಾಯಿತ ಪಕ್ಷಗಳ ಸಾಫಲ್ಯ ವೈಫಲ್ಯಗಳು ಇಡೀ ಜನಸಂಖ್ಯೆಯನ್ನು ಬಾಧಿಸುವುದರಿಂದ ಚುನಾಯಿತ ಸದಸ್ಯರು ಸಮಸ್ತ ಭಾರತೀಯ ಪ್ರಜೆಗಳ ಒಳಿತಿಗಾಗಿ ಶ್ರಮಿಸಬೇಕಾಗುತ್ತದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜನತೆಯ ಹಿತಾಸಕ್ತಿಗಳೆಂದರೆ ಶೇ. 80ರಷ್ಟು ಜನತೆ ಎಂದೇ ಭಾವಿಸಬೇಕಾಗುತ್ತದೆ. ಏಕೆಂದರೆ ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ ದೇಶದ ಶೇ 77ರಷ್ಟು ದುಡಿಯುವ ಜನತೆಯ ದಿನದ ಆದಾಯ ಕೇವಲ 20 ರೂಗಳಾಗಿರುತ್ತದೆ. ಷೇರು ಮಾರುಕಟ್ಟೆಯ ಸೂಚ್ಯಂಕ, ಮೊಬೈಲ್‌ಗಳ ಸಂಖ್ಯೆ, ಅಂತರ್ಜಾಲದ ವ್ಯಾಪ್ತಿ, ಟೆಲಿವಿಷನ್‌ಗಳ ಸಂಖ್ಯೆ, ಮೋಟಾರು ವಾಹನಗಳ ಬಳಕೆ ಇವೆಲ್ಲ ಗಣನೀಯವಾಗಿ ಹೆಚ್ಚಾಗುತ್ತಿದ್ದರೂ ಅಪಾರ ಸಂಖ್ಯೆಯ ಜನ ಇನ್ನೂ ಬಡತನದ ಬೇಗೆಯಲ್ಲಿ ಬೇಯುತ್ತಿರುವುದು ಆಧುನಿಕ ಭಾರತದ ವಿಪರ್ಯಾಸ.

ಈ ದೃಷ್ಟಿಯಿಂದ ನೋಡಿದಾಗ ಭಾರತೀಯ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಕಳೆದ ಶತಮಾನದ ಎಪ್ಪತ್ತರ ದಶಕದ ಅಂಚಿನವರೆಗೂ ಚುನಾವಣಾ ಪ್ರಣಾಳಿಕೆಗಳು ಸ್ವಲ್ಪ ಮಟ್ಟಿಗಾದರೂ ದಾರ್ಶನಿಕತೆಯಿಂದ ಕೂಡಿ, ದೂರದೃಷ್ಟಿ ಹೊಂದಿರುತ್ತಿದ್ದವು. ಪ್ರಣಾಳಿಕೆಗಳೆಂದರೆ ಮತದಾರರನ್ನು ಓಲೈಸುವ ದಸ್ತಾವೇಜು ಮಾತ್ರವಾಗಿರದೆ ಮುಂದಿನ 5 ವರ್ಷಗಳಲ್ಲಿ ದೇಶವು ಕ್ರಮಿಸುವ ನಿರ್ದಿಷ್ಟ ಮಾರ್ಗವನ್ನು ಸೂಚಿಸುತ್ತಿದ್ದವು. ಈ ಅವಧಿಯಲ್ಲಿ ಪ್ರಣಾಳಿಕೆಗಳಿಂದಲೇ ರಾಜಕೀಯ ಪಕ್ಷಗಳ ಸೈದ್ಧಾಂತಿಕ ನಿಲುವು, ಆರ್ಥಿಕ ನೀತಿ, ಸಾಮಾಜಿಕ ಹೊಣೆಗಾರಿಕೆ ಮತ್ತು ಸಂವಿಧಾನ ಬದ್ಧತೆಗಳು ವ್ಯಕ್ತವಾಗುತ್ತಿದ್ದವು. ಇಂದಿಗೂ ಕಮ್ಯುನಿಸ್ಟ್ ಪಕ್ಷಗಳ ಪ್ರಣಾಳಿಕೆಗಳಲ್ಲಿ ಇದನ್ನು ಕಾಣಬಹುದು. ಶೇ 40ರಷ್ಟು ಅನಕ್ಷರಸ್ಥರಿರುವ ದೇಶದಲ್ಲಿ ಪ್ರಣಾಳಿಕೆಗಳು ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬ ಅಂಶ ಚರ್ಚಾಸ್ಪದವಾದರೂ, ಗ್ರಾಮೀಣ ಪ್ರದೇಶಗಳಲ್ಲೂ ರಾಜಕೀಯ ಪಕ್ಷಗಳ ಧ್ಯೇಯೋದ್ದೇಶಗಳನ್ನು ಕುರಿತ ಚರ್ಚೆಗಳು ವ್ಯಾಪಕವಾಗಿರುತ್ತಿದ್ದುದು ಅಂದಿನ ಚುನಾವಣೆಗಳ ವೈಶಿಷ್ಟ್ಯ. ಸ್ವಾತಂತ್ರ್ಯ ನಂತರದ ಪ್ರತಿಯೊಂದು ಚುನಾವಣೆಯ ಸಂದರ್ಭದಲ್ಲೂ, ಆರ್ಥಿಕ ಧ್ಯೇಯಗಳು, ಸಾಮಾಜಿಕ ನ್ಯಾಯ, ನಿರುದ್ಯೋಗ ನಿವಾರಣೆ, ಬಡತನ ನಿವಾರಣೆ, ಬೆಲೆ ಏರಿಕೆ, ವಿದೇಶಿ ನೀತಿ, ಗ್ರಾಮೋದ್ಧಾರ ಕಾರ್ಯಕ್ರಮಗಳು ಹೀಗೆ ಅನೇಕ ಜನಪರ ವಿಚಾರಗಳು ರಾಜಕೀಯ ಪಕ್ಷಗಳ ಪ್ರಣಾಳಿಕೆಯಲ್ಲಿ ಗೋಚರಿಸುತ್ತಿದ್ದವು. ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಲ್ಲವಾದರೂ, ಬಗೆಹರಿಸುವ ಸದುದ್ದೇಶವನ್ನು ಕಾಣಬಹುದಿತ್ತು.

ವಾಸ್ತವ ಸನ್ನಿವೇಶ

ಆದರೆ 80ರ ದಶಕದ ನಂತರ ಭಾರತದ ರಾಜಕೀಯ ಮತ್ತು ಸಾಮಾಜಿಕ ಸ್ತರದಲ್ಲಿ ಏರ್ಪಟ್ಟ ಪಲ್ಲಟಗಳ ಪರಿಣಾಮವಾಗಿ ಇಡೀ ಚುನಾವಣಾ ಪ್ರಕ್ರಿಯೆಯೇ ವಿಭಿನ್ನ ಮಾರ್ಗ ಹಿಡಿದಿರುವುದು ಸ್ಪಷ್ಟ.

1975ರ ತುರ್ತು ಪರಿಸ್ಥಿತಿ ಮತ್ತು ತದನಂತರದ ಕ್ಷಿಪ್ರ ಬೆಳವಣಿಗೆಗಳು ರಾಷ್ಟ್ರ ರಾಜಕಾರಣವನ್ನು ಕವಲುದಾರಿಯಲ್ಲಿ ತಂದು ನಿಲ್ಲಿಸಿದ್ದವು. ಆಳ್ವಿಕರು ಕೈಗೊಳ್ಳುವ ತೀರ್ಮಾನಗಳಲ್ಲಿ, ಅನುಸರಿಸುವ ಮಾರ್ಗಗಳಲ್ಲಿ, ಅಳವಡಿಸುವ ನೀತಿಗಳಲ್ಲಿ ಪ್ರಜೆಗಳ ದನಿ ನಗಣ್ಯವಾಗತೊಡಗಿತು. ಸಂಪೂರ್ಣಕ್ರಾಂತಿಯ ಘೋಷಣೆಯಡಿ ನಡೆದ ಚಳುವಳಿ ಕ್ರಾಂತಿಕಾರಿ, ಪ್ರಗತಿಪರ ನಾಯಕರನ್ನು ಸೃಷ್ಟಿಸುವ ಬದಲು ಪ್ರತಿಕ್ರಾಂತಿ ಸೃಷ್ಟಿಸುವ, ಅವಕಾಶವಾದಿ, ಪ್ರತಿಗಾಮಿ, ಸ್ವಾರ್ಥಪರ ನಾಯಕರನ್ನು ಸೃಷ್ಟಿಸಿತು. ಇದೇ ಹಂತದಲ್ಲೇ ಅಧಿಕಾರ ವಿಕೇಂದ್ರೀಕರಣ ಪ್ರಕ್ರಿಯೆ ಚಾಲ್ತಿಗೆ ಬಂದರೂ, ಅದು ಕೇಂದ್ರೀಕೃತ ಅಧಿಕಾರದ ವಿಕೇಂದ್ರೀಕರಣವಾಗಿತ್ತು. ಸ್ಪಷ್ಟವಾಗಿ ಹೇಳುವುದಾದರೆ ಇಡೀ ದೇಶದ ಸೂತ್ರವನ್ನು ದೆಹಲಿಯಲ್ಲಿ ಕುಳಿತು ನಿರ್ವಹಿಸುವ ಬದಲು, ಸೂತ್ರಧಾರರನ್ನು ಗ್ರಾಮ ಮಟ್ಟದಲ್ಲೇ ಪ್ರತಿಷ್ಠಾಪಿಸಲಾಯಿತು. ತತ್ಪರಿಣಾಮವಾಗಿ ಪ್ರಜೆಗಳ ಕೈಗೇ ಅಧಿಕಾರ ಎಂಬ ಸೂತ್ರದಡಿ ಸಾಮಾನ್ಯ ಪ್ರಜೆಗಳ ಕೈಯ್ಯಿಂದ ಅಧಿಕಾರವನ್ನು ಕಸಿದುಕೊಳ್ಳುವ ಪ್ರಕ್ರಿಯೆಗೆ ಸಂವಿಧಾನಾತ್ಮಕ ಚಾಲನೆ ದೊರೆಯಿತು. ಹಾಗಾಗಿಯೇ ಭ್ರಷ್ಟ ಪ್ರಧಾನ ಮಂತ್ರಿಯನ್ನು ರಕ್ಷಿಸುವ ಶಕ್ತಿಗಳೇ ಭ್ರಷ್ಟ ಗ್ರಾಮ ಪಂಚಾಯಿತಿಯ ಅಧ್ಯಕ್ಷನನ್ನೂ ರಕ್ಷಿಸುವುದು ಸಾಧ್ಯವಾಯಿತು. ಆದ್ದರಿಂದಲೇ ಪ್ರತಿಯೊಬ್ಬ ಪ್ರಜೆಗೂ ತನ್ನ ಪ್ರತಿನಿಧಿಯನ್ನು ಚುನಾಯಿಸುವ ಹಕ್ಕು ಇರುವುದೇ ಹೊರತು, ಚುನಾಯಿತರನ್ನು ಪ್ರಶ್ನಿಸುವ ಅಥವಾ ಹಿಂದಕ್ಕೆ ಕರೆಯುವ ಹಕ್ಕು ದೊರೆತಿಲ್ಲ. ಇದು ಪ್ರಜಾತಂತ್ರದ ವಿಡಂಬನೆಯಾದರೂ ಸತ್ಯ.

ಚುನಾವಣಾ ಪ್ರಣಾಳಿಕೆಗಳ ಮಹತ್ವವನ್ನು ಈ ಹಿನ್ನೆಲೆಯಲ್ಲೇ ವಿಶ್ಲೇಷಿಸಬೇಕಾಗುತ್ತದೆ. ರಾಜಕೀಯ ಪಕ್ಷಗಳ ಕೆಲವು ನಾಯಕರುಗಳು, ತಮ್ಮ ಪಕ್ಷ ಸಮಸ್ತ ಭಾರತದ ಜನತೆಯನ್ನು ಪ್ರತಿನಿಧಿಸುತ್ತದೆ ಎಂಬ ಅಹಮಿಕೆಯಿಂದ ತಮ್ಮ ಧ್ಯೇಯೋದ್ದೇಶಗಳಿಗನುಗುಣವಾಗಿ ಸಿದ್ಧಪಡಿಸುವ ಚುನಾವಣಾ ಪ್ರಣಾಳಿಕೆಗಳಿಗೆ ಜನ ಮನ್ನಣೆ ಇರುತ್ತದೆಯೇ ಎಂಬ ಮೂರ್ತ ಪ್ರಶ್ನೆಗೆ ಚುನಾವಣಾ ಫಲಿತಾಂಶ ಉತ್ತರ ನೀಡುತ್ತದೆ. ಹಾಗಾಗಿಯೇ ಪ್ರಣಾಳಿಕೆಗಳು ಕೇವಲ ಪಕ್ಷಗಳ ಚಿಂತನೆಗಳನ್ನು, ಸ್ವಾರ್ಥಪರ ಉದ್ದೇಶಗಳನ್ನು ಮಾತ್ರ ಬಿಂಬಿಸದೆ, ಜನರ ಆಶೋತ್ತರಗಳನ್ನೂ ಬಿಂಬಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಕಳೆದ ಹಲವು ಚುನಾವಣೆಗಳ ಪ್ರಣಾಳಿಕೆಗಳನ್ನು ಪರಾಮರ್ಶಿಸಿದಾಗ ಬಹುತೇಕವಾಗಿ ಪಕ್ಷಗಳು ಜನರ ಆಶೋತ್ತರಗಳನ್ನು ಕಡೆಗಣಿಸಿರುವುದು ಗೋಚರಿಸುತ್ತದೆ. 1979ರ ಚುನಾವಣೆಗಳಲ್ಲಿ, ಇಂದಿರಾ ಗಾಂಧಿಯವರ ಪುನರಾಗಮನ ಮತ್ತು ವ್ಯೆಭವೀಕರಣ, 1984ರಲ್ಲಿ ಇಂದಿರಾ ಗಾಂಧಿಯವರ ಹತ್ಯೆಯ ಹಿನ್ನೆಲೆಯಲ್ಲಿ ಉಂಟಾದ ಅನುಕಂಪದ ಅಲೆ, 1989ರಲ್ಲಿ ಬೋಫೋರ್ಸ್ ಹಗರಣ, 1991ರಲ್ಲಿ ರಾಜೀವ್ ಹತ್ಯೆಯ ಹಿನ್ನೆಲೆ, 1996 ಮತ್ತು 98ರಲ್ಲಿ ಅಯೋಧ್ಯೆಯ ಘಟನೆಗಳು ಹಾಗು ಕೋಮುವಾದ-ಸೆಕ್ಯುಲರ್ ನೀತಿಗಳ ಪೈಪೋಟಿ, 2004 ರಲ್ಲಿ ಜಾಗತೀಕರಣ ಪ್ರಕ್ರಿಯೆ ಹೀಗೆ ಕೆಲವು ಭಾವನಾತ್ಮಕ ಅಂಶಗಳು ಮಾತ್ರ ಪ್ರಧಾನ ಭೂಮಿಕೆ ವಹಿಸಿದ್ದವು. ಪ್ರಮುಖ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳೂ ಈ ವಿಷಯಗಳ ಸುತ್ತ ಗಿರಕಿ ಹೊಡೆದಿದ್ದು ಕಟು ಸತ್ಯ. ಈ ಎಲ್ಲಾ ಚುನಾವಣೆಗಳಲ್ಲೂ ನಿರ್ಲಕ್ಷಿಸಲ್ಪಟ್ಟ ಏಕೈಕ ಅಂಶವೆಂದರೆ ದೇಶದ ಜನಸಾಮಾನ್ಯರ ದುಸ್ತರ ಜೀವನ.

ಕಾಕತಾಳೀಯವಾಗಿ 1980 ರಿಂದಲೇ ಪ್ರಾರಂಭವಾದ ನವ ಉದಾರವಾದಿ ಆರ್ಥಿಕ ನೀತಿಗಳು ಮತ್ತು

ಜಾಗತೀಕರಣ ಪ್ರಕ್ರಿಯೆ 1991ರಲ್ಲಿ ಪೂರ್ಣ ಪ್ರಮಾಣದಲ್ಲಿ ಅನಾವರಣಗೊಂಡ ನಂತರ ಎಲ್ಲ ಆಳುವ ವರ್ಗಗಳೂ ಒಂದೇ ಸ್ವರದಲ್ಲಿ ಹಾಡತೊಡಗಿದವು. ಸ್ವತಂತ್ರ ಭಾರತದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ (ಕೆಲವೊಮ್ಮೆ ಎಡ ಪಕ್ಷಗಳನ್ನು ಹೊರತುಪಡಿಸಿ) ಸರ್ವ ಸಮ್ಮತವಾಗಿ ಒಪ್ಪಿ ಐಕಮತ್ಯ ಸಾಧಿಸಿರುವುದೆಂದರೆ ಜಾಗತೀಕರಣ ಪ್ರಕ್ರಿಯೆಯ ಬಗ್ಗೆ ಮಾತ್ರ. ಕಳೆದ ಎರಡು ದಶಕಗಳ ರಾಜಕಾರಣದಲ್ಲಿ ಯಾವುದೇ ಚುನಾವಣೆಯಲ್ಲೂ ಜನರ ದೈನಂದಿನ ಸಮಸ್ಯೆಗಳು ಪ್ರಧಾನ ವಿಷಯವಾಗಲೇ ಇಲ್ಲ. 1998ರಲ್ಲಿ ಅಧಿಕಾರಕ್ಕೆ ಬರುವ ಮುನ್ನ ಭಾಜಪ ನೇತೃತ್ವದ ಎನ್.ಡಿ.ಎ ಮೈತ್ರಿ ಕೂಟ, ಐವತ್ತು ವರ್ಷಗಳ ಕಾಂಗ್ರೆಸ್ ಆಳ್ವಿಕೆಯ ನೀತಿಗಳನ್ನು ಸಂಪೂರ್ಣ ಬದಲಾಯಿಸುವ ಆಶ್ವಾಸನೆ

ಭಾರತೀಯ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಕಳೆದ ಶತಮಾನದ ಎಪ್ಪತ್ತರ ದಶಕದ ಅಂಚಿನವರೆಗೂ ಚುನಾವಣಾ ಪ್ರಣಾಳಿಕೆಗಳು ಸ್ವಲ್ಪ ಮಟ್ಟಿಗಾದರೂ ದಾರ್ಶನಿಕತೆಯಿಂದ ಕೂಡಿ, ದೂರದೃಷ್ಟಿ ಹೊಂದಿರುತ್ತಿದ್ದವು. ಪ್ರಣಾಳಿಕೆಗಳೆಂದರೆ ಮತದಾರರನ್ನು ಓಲೈಸುವ ದಸ್ತಾವೇಜು ಮಾತ್ರವಾಗಿರದೆ ಮುಂದಿನ 5 ವರ್ಷಗಳಲ್ಲಿ ದೇಶವು ಕ್ರಮಿಸುವ ನಿರ್ದಿಷ್ಟ ಮಾರ್ಗವನ್ನು ಸೂಚಿಸುತ್ತಿದ್ದವು. ಈ ಅವಧಿಯಲ್ಲಿ ಪ್ರಣಾಳಿಕೆಗಳಿಂದಲೇ ರಾಜಕೀಯ ಪಕ್ಷಗಳ ಸೈದ್ಧಾಂತಿಕ ನಿಲುವು, ಸಾಮಾಜಿಕ ಹೊಣೆಗಾರಿಕೆ ಮತ್ತು ಸಂವಿಧಾನ ಬದ್ಧತೆಗಳು ವ್ಯಕ್ತವಾಗುತ್ತಿದ್ದವು. ಇಂದಿಗೂ ಕಮ್ಯುನಿಸ್ಟ್ ಪಕ್ಷಗಳ ಪ್ರಣಾಳಿಕೆಗಳಲ್ಲಿ ಇದನ್ನು ಕಾಣಬಹುದು.

ನೀಡಿತ್ತಾದರೂ, 2004ರ ವೇಳೆಗೆ ದೇಶದ ಪರಿಸ್ಥಿತಿ ಅಯೋಮಯವಾಗಿತ್ತು. ಜಾಗತೀಕರಣ ಪ್ರಕ್ರಿಯೆ ಯನ್ನು ತೀಕ್ಷ್ಣವಾಗಿಸಿದ್ದೇ ಅಲ್ಲದೆ ದೇಶದ ಸಾಮಾಜಿಕ ಚೌಕಟ್ಟಿನಲ್ಲಿ ಅಂತರ್ಗತವಾಗಿದ್ದ ಸೌಹಾರ್ದಯುತ ವಾತಾವರಣವನ್ನೂ ಎನ್.ಡಿ.ಎ ಸರ್ಕಾರ ಹಾಳುಗೆಡವಿತ್ತು. ಭಾರತ ಪ್ರಕಾಶಿಸುತ್ತಿದ್ದ ಸಂದರ್ಭದಲ್ಲೇ ಆಮ್ ಆದ್ಮಿ (ಸಾಮಾನ್ಯ ಪ್ರಜೆ)ಯ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದಿಂದ ಹೆಚ್ಚಿನ ನಿರೀಕ್ಷೆ ಇರಿಸಿಕೊಂಡಿದ್ದ ಜನತೆಗೆ ಅಂತಿಮವಾಗಿ ನಿರಾಸೆಯೇ ಆಗಿದೆ. ಭಾರತದ ಆಮ್ ಆದ್ಮಿ ತನ್ನ ಬಾಳಿನ ಹೆಜ್ಜೆ ಗುರುತುಗಳನ್ನು ಗಮನಿಸದಿರುವಷ್ಟು ಕೃಷನಾಗುತ್ತಿದ್ದಾನೆಂಬ ಕಟು ಸತ್ಯ ಆಳ್ವಿಕರಿಗೆ ಗ್ರಹಿಸಲಾಗಿಲ್ಲ. ದೈನಂದಿನ ಜೀವನದ ಸಮಸ್ಯೆಗ ಳನ್ನಷ್ಟೇ ಎದುರಿಸುತ್ತಿದ್ದ ಆಮ್ ಆದ್ಮಿ ಈಗ ಭಯೋತ್ಪಾದನೆ, ಕೋಮುವಾದ, ಜಾತಿವಾದ, ಮತಾಂಧತೆ, ಹಿಂಸೆ ಮುಂತಾದ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ದೇಶದ ಬಹುಸಂಖ್ಯಾತರಾದ ದಲಿತರು, ಮಹಿಳೆಯರು ಮತ್ತು ಅಲ್ಪಸಂಖ್ಯಾತ ಸಮುದಾಯಗಳು ಎದುರಿಸುತ್ತಿರು ಜ್ವಲಂತ ಸಮಸ್ಯೆಗಳು ದಿನೇ ದಿನೇ ತೀಕ್ಷ್ಣವಾಗುತ್ತಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಚುನಾವಣೆಯಲ್ಲಿ ಜನತೆ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಈ ಸಮಸ್ಯೆಗಳಿಗೆ ರಾಜಕೀಯ ಪಕ್ಷಗಳ ಸ್ಪಂದನ ಮಹತ್ವಗಳಿಸುತ್ತವೆ.

ಸಮಸ್ಯೆಗಳ ಮಹಾಪೂರ

ಕಳೆದ ಎಲ್ಲಾ ಚುನಾವಣೆಗಳಿಗೆ ಹೋಲಿಸಿದರೆ ಈ ಬಾರಿಯ ಚುನಾವಣೆಗಳು ಜನಸಾಮಾನ್ಯರ ದೃಷ್ಟಿಯಿಂದ ಮಹತ್ವದ್ದಾಗಿದೆ. ಯಾವುದೇ ಸಮಾಜದಲ್ಲೂ ಸಮಸ್ಯೆಗಳು ಸರ್ವಕಾಲಿಕ ಪರಿಹಾರ ಅಲ್ಪಕಾಲಿಕ. ಇದು ಐತಿಹಾಸಿಕ ಸತ್ಯ. ಆದರೆ ಭಾರತೀಯ ಜನತೆಯ ಮುಂದಿರುವ ಪ್ರಶ್ನೆ ವಿಭಿನ್ನವಾದುದು. ಇಲ್ಲಿ ಜನತೆಯ ಸಮಸ್ಯೆಗಳಿಗೆ ಪರಿಹಾರ ಮಾರ್ಗಗಳೇ ಇಲ್ಲ. ಸಮಸ್ಯೆ ಸ್ವಾಭಾವಿಕ, ಹಾಗಾಗಿ ಕೊಂಚ ಕಾಲ ಸಹಿಸಿಕೊಂಡಿರಿ ಎಂಬ ಉಪದೇಶ ಆಳ್ವಿಕರ ವೇದಮಂತ್ರ. ವಿಧಿ, ಹಣೆಬರಹ, ಕರ್ಮ ಸಿದ್ಧಾಂತಗಳನ್ನು ಇನ್ನೂ ತ್ಯಜಿಸದ ಸಮಾಜದಲ್ಲಿ ಬಡತನದ ಬೇಗೆ ದೈವೀಕವಾದರೆ, ಶ್ರೀಮಂತಿಕೆ ಮಹತ್ಸಾಧನೆಯಾಗುತ್ತದೆ. ಹಾಗಾಗಿಯೇ ಮದ್ಯದ ದೊರೆಗಳೂ ಗಾಂಧಿವಾದಿಗಳಾಗಿಬಿಡುತ್ತಾರೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಜನತೆ ಮಹಾಚುನಾವಣೆಯನ್ನು ಎದುರಿಸುವಾಗ ಅವರ ಮುಂದಿರುವ ಪ್ರಶ್ನೆಗಳು, ಸಮಸ್ಯೆಗಳು ಹತ್ತು ಹಲವಾರು. ಪ್ರಮು

ನಿರುದ್ಯೋಗ ಸಮಸ್ಯೆ : ಸ್ವಾವಲಂಬಿ ಭಾರತದ ಕನಸು ಕಂಡ ಸ್ವಾತಂತ್ರ್ಯ ಪೂರ್ವ ರಾಷ್ಟ್ರ ನಾಯಕರುಗಳ ಮುಂದಿದ್ದ ಪ್ರಮುಖ ಗುರಿ, ಭಾರತೀಯ ಯುವಕರನ್ನು ಕಾಡುತ್ತಿದ್ದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದು. ಈ ದೃಷ್ಟಿಯಿಂದಲೇ ಪ್ರಮುಖ ಆರ್ಥಿಕ ಕ್ಷೇತ್ರಗಳ ರಾಷ್ಟ್ರೀಕರಣವಾಗಿತ್ತು. ಇಡೀ ವಿಶ್ವದಲ್ಲಿ ಆರ್ಥಿಕ ಕುಸಿತ ಕಂಡು ಬಂದಿದ್ದರೂ, ಭಾರತೀಯ ಬ್ಯಾಂಕುಗಳು, ವಿಮಾ ಕಂಪನಿಗಳು ಸುರಕ್ಷಿತವಾಗಿದ್ದರೆ ಅದಕ್ಕೆ ರಾಷ್ಟ್ರೀಕೃತ ನೀತಿಗಳೇ ಸಾಕ್ಷಿ. ಆದರೆ ಈ ಶ್ರೇಯಸ್ಸು ಕಾರ್ಮಿಕ ಸಂಘಟನೆಗಳು ಮತ್ತು ಎಡ ಪಕ್ಷಗಳಿಗೆ ಸಲ್ಲುವುದೇ ಹೊರತು ಆಳುವ ಪಕ್ಷಗಳಿಗಲ್ಲ. ಬಹುಶಃ ಕಾರ್ಮಿಕರ ಪ್ರತಿರೋಧವಿಲ್ಲದಿದ್ದರೆ ಈ ವೇಳೆಗೆ ಭಾರತದಾದ್ಯಂತ ಹಲವಾರು ಸತ್ಯಂಗಳ ತಾಂಡವ ನೃತ್ಯ ಕಾಣಬಹುದಿತ್ತು. ಆದರೂ ಕಳೆದ ಮೂರು ದಶಕಗಳ ರಾಜಕಾರಣದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದಿರುವುದು ಸ್ಪಷ್ಟ. ಹೊಸ ಉದ್ಯೋಗಗಳ ಸೃಷ್ಟಿ ಮತ್ತು ನಿರುದ್ಯೋಗವನ್ನು ಹೊಡೆದೋಡಿಸುವ ಸಂಕಲ್ಪ ಚುನಾವಣೆಯ ಪ್ರಮುಖ ವಿಷಯವಾಗಿರಬೇಕಿತ್ತು. ಆದರೆ ಹಾಗಾಗಿಲ್ಲ.

ದೇಶದ ದುಡಿಯುವ ವರ್ಗಗಳಲ್ಲಿ ಕೇವಲ ಶೇ 8 ರಷ್ಟು ಮಾತ್ರ ಒಳ್ಳೆಯ ವೇತನ ಪಡೆಯುತ್ತಾರೆ. ಉದ್ಯೋಗ ಖಾತರಿ ಯೋಜನೆಯು ಎಷ್ಟೇ ಆಶಾದಾಯಕವಾಗಿ ಕಂಡುಬಂದರೂ ಭಾರತದಲ್ಲಿನ ನಿರುದ್ಯೋಗ ಪ್ರಮಾಣವನ್ನು ನೀಗಿಸುವುದರಲ್ಲಿ ವಿಫಲವಾಗಿದೆ. ಈ ಯೋಜನೆಯಡಿ ವರ್ಷಕ್ಕೆ 12 ದಶಲಕ್ಷ ಉದ್ಯೋಗ ಸೃಷ್ಟಿಸುವ ಉದ್ದೇಶ ಹೊಂದಿದ್ದರೂ ಸೃಷ್ಟಿಯಾಗಿರುವುದು ಕೇವಲ 6.97 ದಶಲಕ್ಷವಷ್ಟೆ. ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ರಾಜಕೀಯ ಹಸ್ತಕ್ಷೇಪ, ಮಾಫಿಯಾಗಳ ನಿಯಂತ್ರಣ ಈ ಎಲ್ಲ ಅನಿಷ್ಟಗಳೂ ಈ ಯೋಜನೆಯ ವೈಫಲ್ಯದಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಔಪಚಾರಿಕ ಉದ್ಯೋಗ ಕ್ಷೇತ್ರದಲ್ಲಿ ಸೇರ್ಪಡುವ ಎಲ್ಲಾ ಘಟಕಗಳಲ್ಲಿನ ಅಂಕಿ ಅಂಶಗಳನ್ನು ಪರಿಗಣಿಸಿದಲ್ಲಿ, 1999–2000ದಲ್ಲಿ 54.1 ದಶಲಕ್ಷ ಇದ್ದ ಉದ್ಯೋಗಿಗಳ ಸಂಖ್ಯೆ 2004–05ರಲ್ಲಿ 62.6 ದಶಲಕ್ಷವಾಗಿತ್ತು. ಅಂದರೆ ವರ್ಷಕ್ಕೆ ಶೇ.3 ರಷ್ಟು ವೃದ್ಧಿಯಾಗಿತ್ತು. ಇದೇ ಅವಧಿಯಲ್ಲಿ ಸಂಘಟಿತ ಕ್ಷೇತ್ರದ ಉದ್ಯೋಗಿಗಳ ಸಂಖ್ಯೆ 33.7 ದಶಲಕ್ಷದಿಂದ 33.4 ದಶಲಕ್ಷಕ್ಕೆ ಇಳಿದಿತ್ತು. ಇದೇ ಅವಧಿಯಲ್ಲಿ, 2004ರಲ್ಲಿ ಆಮ್ ಆದ್ಮಿಯ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಯುಪಿಎ ಸರ್ಕಾರ ಉದ್ಯೋಗ ಸೃಷ್ಟಿಗಾಗಲೀ, ರಕ್ಷಣೆಗಾಗಲೀ ಯಾವುದೇ ಪ್ರಾಮುಖ್ಯತೆ ನೀಡದಿರುವುದು ಸ್ಪಷ್ಟವಾಗಿದೆ. ಜಾಗತಿಕ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ 2008 ಸೆಪ್ಟೆಂಬರ್‌ನಿಂದ ಈವರೆಗೆ 16 ದಶಲಕ್ಷ ಜನ ನಿರುದ್ಯೋಗಿಗಳಾಗಿರುವುದು ಸಮೀಕ್ಷೆಯಿಂದ ತಿಳಿದು ಬಂದಿದೆ. ಸಂಘಟಿತ ಕ್ಷೇತ್ರದ ಕಾರ್ಮಿಕರು ಅನಿಶ್ಚಿತತೆಯನ್ನು ಎದುರಿಸುತ್ತಿದ್ದರೆ, ಅಸಂಘಟಿತ ಕಾರ್ಮಿಕರು ಮತ್ತು ಕೃಷಿಕಾರ್ಮಿಕರು ನೌಕರಿ ಅರಸಿ ವಲಸೆ ಹೋಗಲಾರಂಭಿಸಿದ್ದಾರೆ. ವಲಸೆ ಕಾರ್ಮಿಕರ ಸಮಸ್ಯೆ ಅಗಾಧವಾಗಿದ್ದು, ಹಲವು ರಾಜ್ಯಗಳಲ್ಲಿ ಪ್ರಾದೇಶಿಕ ಸಮಸ್ಯೆಗಳಿಗೂ ಕಾರಣವಾಗಿದೆ.

ಕೃಷಿ ಬಿಕ್ಕಟ್ಟು : 2004ರಲ್ಲಿ ಭಾರತ ಪ್ರಕಾಶಿಸುತ್ತಿದ್ದಾಗಲೂ, 2009ರಲ್ಲಿ ಜೈಹೋ ಉದ್ಘೋಷಗಳು ಮೊಳಗುತ್ತಿರುವಾಗಲೂ, ಒಂದೇ ರೀತಿಯ ಸಮಸ್ಯೆಗೆ ಸಿಲುಕಿರುವ ಕ್ಷೇತ್ರವೆಂದರೆ ಭಾರತದ ಕೃಷಿ ಕ್ಷೇತ್ರ. ಆಮ್ ಆದ್ಮಿಯ

ಯುಪಿಎ ಸರ್ಕಾರ ಐದು ವರ್ಷಗಳಲ್ಲಿ ಕೈಗೊಂಡ ನಿರ್ಣಯಗಳಲ್ಲಿ ಯಾವುವೂ ರೈತರ ಆತ್ಮಹತ್ಯೆಯನ್ನು ತಡೆಗಟ್ಟಲಾಗಿಲ್ಲ. ಮಾಧ್ಯಮಗಳಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗುತ್ತಿಲ್ಲ ಎಂದ ಮಾತ್ರಕ್ಕೆ ಘಟನೆಗಳನ್ನು ನಿರಾಕರಿಸಲಾಗುವುದಿಲ್ಲ. ದಿನನಿತ್ಯದ ಗೋಳಾಗಿರುವ ಆತ್ಮಹತ್ಯೆಗಳು ಈಗ ರಂಜನೀಯವಾಗಿ ಉಳಿದಿಲ್ಲ. ಈಗ ಕೃಷಿ ಕ್ಷೇತ್ರದೊಂದಿಗೆ ಜವಳಿ ಕಾರ್ಮಿಕರ ಬವಣೆ ಸೇರ್ಪಡೆಯಾಗಿದೆಯಷ್ಟೆ.

1991ರಲ್ಲಿ ನರಸಿಂಹರಾವ್ ಸರ್ಕಾರ ಪ್ರಾರಂಭಿಸಿದ ಐಎಂಎಫ್ ಪ್ರೇರಿತ ಆರ್ಥಿಕ ನೀತಿಗಳ ಪರಿಣಾಮವನ್ನು ದೇಶ ಇಂದು ಎದುರಿಸುತ್ತಿದೆ. ಕೃಷಿ ಕ್ಷೇತ್ರದಲ್ಲಿ ಸಾರ್ವಜನಿಕ ಹೂಡಿಕೆ, ಕೃಷಿ ಸಹಾಯಧನ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಭಿವೃದ್ಧಿ ವೆಚ್ಚ, ಕೃಷಿ ಗೊಬ್ಬರ ಮತ್ತು ಔಷದಗಳಿಗೆ ನೀಡುತ್ತಿದ್ದ ಸಹಾಯಧನ ಈ ಎಲ್ಲ ಸವಲತ್ತುಗಳನ್ನೂ ಹಿಂದೆಗೆದುಕೊಂಡಿದ್ದೇ ಅಲ್ಲದೆ ರಫ್ತುಮಾಡಲಾಗುವ ಕೃಷಿ ಉತ್ಪನ್ನಗಳ ಮೇಲಿನ ನಿರ್ಬಂಧಗಳನ್ನು ಸಡಿಲಿಸಿ, ಸಾರ್ವಜನಿಕ ಬ್ಯಾಂಕುಗಳ ಆದ್ಯತಾ ಸಾಲಗಳ ಮರುವ್ಯಾಖ್ಯಾನದ ಪರಿಣಾಮವಾಗಿ ಸಾಲ ನೀಡುವಿಕೆಯಲ್ಲೂ ಹಿನ್ನಡೆ ಉಂಟಾಯಿತು. ಇವೆಲ್ಲವೂ ಕೃಷಿ ಕ್ಷೇತ್ರಕ್ಕೆ ಕಾಂಗ್ರೆಸ್–ಭಾಜಪ ಸರ್ಕಾರಗಳು ನೀಡಿರುವ ಕೊಡುಗೆ.

> **ಇತ್ತೀಚಿನ ದಿನಗಳಲ್ಲಿ ಹಣದುಬ್ಬರ ಇಳಿಯುತ್ತಿದ್ದರೂ ದೈನಂದಿನ ಅವಶ್ಯ ಆಹಾರ ಪದಾರ್ಥಗಳ ಬೆಲೆಗಳಲ್ಲಿ ಇಳಿಮುಖ ಕಂಡುಬರುತ್ತಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಹಣದುಬ್ಬರ ಎಂದರೆ ಪದಾರ್ಥಗಳ ಬೆಲೆಗಳಲ್ಲಿ ಉಂಟಾಗುವ ವ್ಯತ್ಯಯ. ಹಾಗಾಗಿ ಯಾವುದೇ ಧನಾತ್ಮಕ ಹಣದುಬ್ಬರ ದರ ಇದ್ದರೆ, ಬೆಲೆಗಳು ಏರುತ್ತಲೇ ಇರುತ್ತವೆ. ಹಣದುಬ್ಬರದ ಪ್ರಮಾಣ ಕಡಿಮೆಯಾದರೂ ಬೆಲೆಗಳು ಕಡಿಮೆಯಾಗುತ್ತದೆ ಎಂದು ಅರ್ಥವಲ್ಲ. ಬದಲಾಗಿ ಪದಾರ್ಥಗಳ ಬೆಲೆಗಳಲ್ಲಿನ ಏರಿಕೆಯ ಪ್ರಮಾಣ ಕಡಿಮೆಯಾಗುತ್ತಿದೆ ಎಂದರ್ಥವಷ್ಟೆ. ಮಾಧ್ಯಮಗಳಲ್ಲಿ ಈ ಅಂಶವನ್ನು ಸರಿಯಾಗಿ ಹೇಳದಿರುವುದು ವಿಪರ್ಯಾಸ.**

ಇದರ ಪರಿಣಾಮವೆಂದರೆ 2 ಲಕ್ಷಕ್ಕೂ ಹೆಚ್ಚು ರೈತರ ಆತ್ಮಹತ್ಯೆ. ಇತ್ತೀಚಿನ ದಿನಗಳಲ್ಲಿ ಯುಪಿಎ ಸರ್ಕಾರ ಅಭಿವೃದ್ಧಿ ವೆಚ್ಚವನ್ನು ಹೆಚ್ಚಿಸಿದೆ ಎಂದು ವಾದಿಸಿದರೂ, ಕೃಷಿ ಕ್ಷೇತ್ರದಲ್ಲಿ ಉಂಟಾಗಿದ್ದ ನಿರುದ್ಯೋಗ, ಉತ್ಪಾದಕೀಯತೆಯ ಕುಸಿತ, ಕ್ಷೀಣಿಸಿದ್ದ ಆದಾಯ, ಬಂಡವಾಳದ ಕೊರತೆ, ಇವೆಲ್ಲವನ್ನೂ ಮೀರಿ ಸಮಸ್ಯೆಯನ್ನು ಬಗೆಹರಿಸುವಲ್ಲಿ ಸರ್ಕಾರ ವಿಫಲವಾಗಿದೆ. ಸಾಲದೆಂಬಂತೆ ಜಾಗತಿಕ ಆರ್ಥಿಕ ಹಿನ್ನಡೆಯ ಪರಿಣಾಮವಾಗಿ ಗ್ರಾಮೀಣ ಉತ್ಪಾದಕರ ಕೊಳ್ಳುವ ಸಾಮರ್ಥ್ಯ ಕುಸಿದಿದ್ದು ಬೆಳೆದ ಫಸಲಿಗೆ ಉತ್ತಮ ಬೆಲೆ ದೊರಕದೆ ಪರದಾಡುವಂತಾಗಿದೆ. ಇದೇ ಸಂದರ್ಭದಲ್ಲಿ ಸಾಲಮನ್ನಾ ಮಾಡುವುದನ್ನೇ ಕ್ರಾಂತಿಕಾರಿ ಹೆಜ್ಜೆ ಎಂದು ಬಣ್ಣಿಸುವ ಯುಪಿಎ ಸರ್ಕಾರ, ಆರ್‌ಬಿಐ ನಬಾರ್ಡ್‌ಗೆ ನೀಡುತ್ತಿದ್ದ 6000 ಕೋಟಿ ರೂಗಳ ಸಾಲವನ್ನು ಸ್ಥಗಿತಗೊಳಿಸಿದೆ. ತತ್ಪರಿಣಾಮವಾಗಿ ಸಾರ್ವಜನಿಕ ಕ್ಷೇತ್ರಗಳ ಬ್ಯಾಂಕುಗಳಲ್ಲಿ ಆದ್ಯತಾ ಕ್ಷೇತ್ರದ ಸಾಲ ನೀಡಿಕೆ ಕ್ಷೀಣಿಸುತ್ತಿದೆ.

ರಾಷ್ಟ್ರೀಯ ಮಾದರಿ ಸಮೀಕ್ಷೆಯ ಪ್ರಕಾರ 1993–94 ರಿಂದ 2004–05ರ ಅವಧಿಯಲ್ಲಿ ಗ್ರಾಮೀಣ ಜನತೆಯ ಬಳಕೆಯ ಪ್ರಮಾಣ ಗಣನೀಯ ಇಳಿಮುಖ ಕಂಡಿದೆ. ದಿನಕ್ಕೆ ಕನಿಷ್ಟ ಅವಶ್ಯವಾದ 2200 ಕ್ಯಾಲೊರಿಗಳನ್ನೂ ಪಡೆಯಲಾಗದವರ ಸಂಖ್ಯೆ ಈ ಅವಧಿಯಲ್ಲಿ ಶೇ 58.5ರಿಂದ ಶೇ 69.5ಕ್ಕೆ ಏರಿದೆ. ಶೇ 90ಕ್ಕಿಂತಲೂ ಹೆಚ್ಚು ರೈತರು ತಮ್ಮ ಜಾನುವಾರುಗಳನ್ನು ನಿರ್ವಹಿಸಲಾಗದೆ ಕಳೆದುಕೊಳ್ಳುತ್ತಿದ್ದಾರೆ. ಪವಿತ್ರ ಗೋವುಗಳಿಗಾಗಿ ಪ್ರಾಣ

ಕೊಡುವ ದೇಶಭಕ್ತರು ಈ ಬಗ್ಗೆ ಚಕಾರವೆತ್ತದಿರುವುದು ಆಶ್ಚರ್ಯವೇ! ವಿದೇಶಗಳಲ್ಲಿನ ಷಾಪಿಂಗ್ ಮಾಲ್‌ಗಳಲ್ಲಿ ಶ್ರೀಮಂತಿಕೆಯ ಭೋಗವಸ್ತುಗಳನ್ನು ಕಂಗೊಳಿಸುವಂತೆ ಮಾಡಲು, ಭಾರತದಲ್ಲಿನ 80 ಲಕ್ಷ ಹೆಕ್ಟೇರ್ ಕೃಷಿ ಭೂಮಿಯನ್ನು ಆಹಾರಧಾನ್ಯಗಳಿಂದ ಮುಕ್ತಗೊಳಿಸಲಾಗಿದೆ. 1996–97 ರಿಂದ 2007–08ರ ಅವಧಿಯಲ್ಲಿ ಕೃಷಿ ಉತ್ಪನ್ನ ವಾರ್ಷಿಕ ಶೇ 1.3ರಷ್ಟು ಮಾತ್ರ ವೃದ್ಧಿ ಹೊಂದಿರುವುದು ಆಳ್ವಿಕರ ಕೃಷಿ ನೀತಿಗಳಿಗೆ ಹಿಡಿದ ಕೈಗನ್ನಡಿ.

ಬೆಲೆ ಏರಿಕೆ : ಬೆಲೆಗಳ ಏರಿಳಿತಗಳು ಮೂಲಭೂತವಾಗಿ ಆದಾಯ ವಿತರಣೆಯನ್ನು ಪ್ರತಿಬಿಂಬಿಸುತ್ತವೆ. ಕೆಲವು ಪದಾರ್ಥಗಳ ಬೆಲೆಗಳು ಏರುತ್ತಿದ್ದರೆ ಇತರ ಪದಾರ್ಥಗಳ ಮಾರಾಟಗಾರರಿಗೆ ಆದಾಯ ಕ್ಷೀಣಿಸುತ್ತಿರುತ್ತದೆ. ಇದರ ನೇರ ಪರಿಣಾಮ ವೇತನದ ಮೇಲೆ ಉಂಟಾಗುತ್ತದೆ. ಏರುತ್ತಿರುವ ಬೆಲೆಗಳನ್ನು ಕೊಳ್ಳಲಾಗದೆ ದುಡಿಯುವ ವರ್ಗಗಳು ತಮ್ಮ ಆದಾಯ ಕುಸಿಯುತ್ತಿರುವುದನ್ನು ಕಾಣುತ್ತಾರೆ. ಹಾಗೆಯೇ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ದೊರೆಯುವ ಬೆಲೆಗಳು ಹೂಡಿದ ಬಂಡವಾಳಕ್ಕಿಂತಲೂ ಕಡಿಮೆಯಾದಲ್ಲಿ ರೈತರ ಆದಾಯ ಕುಂಠಿತವಾಗುತ್ತದೆ. ಕೃಷಿಯೇತರ ಸಣ್ಣ ಉತ್ಪಾದಕರಿಗೂ ಇದೇ ನಿಯಮ ಅನ್ವಯಿಸುತ್ತದೆ. ಆದ್ದರಿಂದಲೇ ಬೆಲೆ ಏರಿಕೆ ಅಥವಾ ಹಣದುಬ್ಬರ ಪ್ರಮುಖ ರಾಜಕೀಯ ವಿವಾದಗಳಾಗಿ ಪರಿಣಮಿಸುತ್ತವೆ.

ಇತ್ತೀಚಿನ ದಿನಗಳಲ್ಲಿ ಹಣದುಬ್ಬರ ಇಳಿಯುತ್ತಿದ್ದರೂ ದೈನಂದಿನ ಅವಶ್ಯ ಆಹಾರ ಪದಾರ್ಥಗಳ ಬೆಲೆಗಳಲ್ಲಿ ಇಳಿಮುಖ ಕಂಡುಬರುತ್ತಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಹಣದುಬ್ಬರ ಎಂದರೆ ಪದಾರ್ಥಗಳ ಬೆಲೆಗಳಲ್ಲಿ ಉಂಟಾಗುವ ವ್ಯತ್ಯಯ. ಹಾಗಾಗಿ ಯಾವುದೇ ಧನಾತ್ಮಕ ಹಣದುಬ್ಬರ ದರ ಇದ್ದರೆ, ಬೆಲೆಗಳು ಏರುತ್ತಲೇ ಇರುತ್ತವೆ. ಹಣದುಬ್ಬರದ ಪ್ರಮಾಣ ಕಡಿಮೆಯಾದರೂ ಬೆಲೆಗಳು ಕಡಿಮೆಯಾಗುತ್ತದೆ ಎಂದು ಅರ್ಥವಲ್ಲ. ಬದಲಾಗಿ ಪದಾರ್ಥಗಳ ಬೆಲೆಗಳಲ್ಲಿನ ಏರಿಕೆಯ ಪ್ರಮಾಣ ಕಡಿಮೆಯಾಗುತ್ತಿದೆ ಎಂದರ್ಥವಷ್ಟೆ. ಮಾಧ್ಯಮಗಳಲ್ಲಿ ಈ ಅಂಶವನ್ನು ಸರಿಯಾಗಿ ಹೇಳದಿರುವುದು ವಿಪರ್ಯಾಸ.

2004ರ ನಂತರದಲ್ಲಿ ಗ್ರಾಹಕ ಬೆಲೆಗಳ ಪ್ರಮಾಣ ಶೇ 40ರಷ್ಟು ಹೆಚ್ಚಾಗಿದೆ. ಆದರೆ ಈ ಅವಧಿಯಲ್ಲಿ ವೇತನಗಳಲ್ಲಿ ಈ ಪ್ರಮಾಣದ ಹೆಚ್ಚಳವಾಗಿಲ್ಲ. 2006 ರವರೆಗೂ ಕೈಗಾರಿಕಾ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ ಗಣನೀಯವಾಗಿ ಏರುತ್ತಿತ್ತು. ನಂತರದಲ್ಲಿ ಕೃಷಿ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ ಇನ್ನೂ ತೀವ್ರವಾದ ಏರಿಕೆ ಕಂಡಿತ್ತು. ಹಾಗಾಗಿ ಒಟ್ಟಾರೆ ಹಣದುಬ್ಬರದಲ್ಲಿ ಇಳಿಕೆ ಕಂಡುಬಂದಿದ್ದರೂ ಆಹಾರಧಾನ್ಯಗಳ ಬೆಲೆಗಳಲ್ಲಿ ಶೇ 10 ರಷ್ಟು ಏರಿಕೆ ಕಂಡುಬಂದಿದೆ. ಬೆಲೆ ಏರಿಕೆಗೆ ತೃತೀಯ ವಿಶ್ವದ ರಾಷ್ಟ್ರಗಳಲ್ಲಿ ವೃದ್ಧಿಸುತ್ತಿರುವ ಮಧ್ಯಮ ವರ್ಗಗಳ ಬಳಕೆಯ ಪ್ರಮಾಣವೇ ಕಾರಣ ಎಂದು ಅಮೆರಿಕದ ಅಧ್ಯಕ್ಷ ಹೇಳುತ್ತಾರೆ. ಆದರೆ ಬೆಲೆ ಏರಿಕೆಯ ಬಿಸಿ ಈ ವರ್ಗವನ್ನೂ ತಟ್ಟಿರುವ ಅಂಶ ಆಳ್ವಿಕರ ಕಣ್ಣಿಗೆ ಗೋಚರಿಸುವುದಿಲ್ಲ.

ಆಹಾರ ಧಾನ್ಯಗಳ ಜೊತೆಗೇ ಔಷದಿಗಳ ಬೆಲೆಗಳೂ ಶೇ 5ರಷ್ಟು ಏರಿಕೆ ಕಂಡಿರುವುದು ಸಾಮಾನ್ಯ ಜನತೆಯನ್ನು ಕಂಗೆಡಿಸಿದೆ. ಜೀವರಕ್ಷಕ ಔಷದಿಗಳು ಬಡಜನತೆಯ ಕೈಗೆಟುಕದಂತಾಗಿವೆ. ವಿಡಂಬನೆ ಎಂದರೆ ಅವಶ್ಯ ಆಹಾರ ಪದಾರ್ಥಗಳ ಬೆಲೆ ಗಗನಕ್ಕೇರುತ್ತಿರುವಾಗಲೇ,

ಶಿಶು ಮರಣ ಪ್ರಮಾಣ, ಅಂದರೆ ಒಂದು ವರ್ಷಕ್ಕಿಂತಲೂ ಮುನ್ನ ಅಸುನೀಗುವ ಮಕ್ಕಳ ಪ್ರಮಾಣ ಶೇ 57ರಷ್ಟಿದೆ. ಪ್ರತಿ 18 ಮಕ್ಕಳಲ್ಲಿ ಒಂದು ಹಸುಳೆ ಒಂದು ವರ್ಷಕ್ಕಿಂತಲೂ ಮುನ್ನ ಸಾಯುತ್ತಿದೆ. ಮಕ್ಕಳ ಮರಣ ಪ್ರಮಾಣವೂ ಸಹ (5 ವರ್ಷಕ್ಕಿಂತಲೂ ಕಡಿಮೆ ವಯಸ್ಸು) ಶೇ 74ರಷ್ಟಿದೆ. ಆದಾಗ್ಯೂ ಸರ್ಕಾರದಿಂದ ಯಾವುದೇ ಸಕಾರಾತ್ಮಕ ಯೋಜನೆ ಕೈಗೊಳ್ಳಲಾಗಿಲ್ಲ. ದೇಶದ ಶೇ.18 ರಷ್ಟು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಮಾತ್ರ ಮಹಿಳಾ ವೈದ್ಯರಿದ್ದಾರೆ. ಹಾಗಾಗಿ ಮಹಿಳೆಯರಲ್ಲಿ ರಕ್ತಹೀನತೆ ಹೆಚ್ಚಾಗಿದೆ. ವರ್ಷಕ್ಕೆ 1 ಲಕ್ಷಕ್ಕಿಂತಲೂ ಹೆಚ್ಚು ಮಹಿಳೆಯರು ಹೆರಿಗೆಯಾದ ಕೂಡಲೇ ಅಸುನೀಗುತ್ತಿರುವುದು ವರದಿಯಾಗಿದೆ.

ಆಹಾರೇತರ ಪದಾರ್ಥಗಳಾದ ಹತ್ತಿ, ನಾರು, ರೇಷ್ಮೆ, ಉಕ್ಕು ಮತ್ತು ಕಬ್ಬಿಣದ ಬೆಲೆಗಳು ಇಳಿಮುಖವಾಗುತ್ತಿವೆ. ಕೃಷಿ ಕ್ಷೇತ್ರದ ಮತ್ತು ಸಣ್ಣ ಕೈಗಾರಿಕಾ ಕ್ಷೇತ್ರದ ಉತ್ಪಾದಕರು ತಮ್ಮ ಉತ್ಪನ್ನಗಳಿಗೆ ಬೆಲೆ ಇಲ್ಲದೆ ಸೊರಗುತ್ತಿರುವಂತೆಯೇ, ಆಹಾರ ಪದಾರ್ಥಗಳು ಮತ್ತು ಔಷದಿಯ ಬೆಲೆಗಳು ಏರುತ್ತಿವೆ. ದೇಶದ ಬಹುಸಂಖ್ಯಾತರಾದ ಈ ಜನಸಮುದಾಯಗಳ ಆಕ್ರೋಶ, ಜಿಗುಪ್ಸೆಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ.

ಶಿಕ್ಷಣ ಕ್ಷೇತ್ರ : ಆರು ದಶಕಗಳ ಸ್ವತಂತ್ರ ಭಾರತದಲ್ಲಿ ಪ್ರಾರಂಭದ ಹಂತದಿಂದಲೂ ನಿರ್ಲಕ್ಷ್ಯಕ್ಕೊಳಗಾಗಿರುವ ಕ್ಷೇತ್ರವೆಂದರೆ ಶಿಕ್ಷಣ ಕ್ಷೇತ್ರವೇ. ಮೊದಲಿಗೆ ಭಾರತೀಯ ಪ್ರಭುತ್ವ ಮಕ್ಕಳ ಶಿಕ್ಷಣವನ್ನು ಶಾಸನಬದ್ಧ ಕರ್ತವ್ಯವೆಂದು ಪರಿಗಣಿಸಿಯೇ ಇಲ್ಲ. ಸಾಂವಿಧಾನಿಕವಾಗಿ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದೂ ಪರಿಗಣಿಸಿಲ್ಲ. ಹಾಗಾಗಿ ಸಾರ್ವತ್ರಿಕ ಶಿಕ್ಷಣ ಸಾಮಾನ್ಯ ಜನತೆಯ ಪಾಲಿಗೆ ಮರೀಚಿಕೆಯಾಗಿಯೇ ಉಳಿದಿದೆ. ದೇಶದ ಸಮಗ್ರ ಉತ್ಪಾದನೆಯಲ್ಲಿ ಶಿಕ್ಷಣಕ್ಕೆ ಶೇ.3 ಕ್ಕಿಂತಲೂ ಹೆಚ್ಚು ಪಾಲನ್ನು ಈವರೆಗೂ ನೀಡದಿರುವುದು ಆಳ್ವಿಕರ ನಿರ್ಲಕ್ಷ್ಯಕ್ಕೆ ನಿದರ್ಶನ.

2004ರಲ್ಲಿ ಪ್ರಾಥಮಿಕ ಹಂತದಲ್ಲೇ ಶಾಲೆಯನ್ನು ತೊರೆದ ಮಕ್ಕಳ ಸಂಖ್ಯೆ ಶೇ 52ರಷ್ಟಿತ್ತು. ದಲಿತರಲ್ಲಿ ಈ ಪ್ರಮಾಣ ಶೇ 59ರಷ್ಟೂ, ಆದಿವಾಸಿಗಳಲ್ಲಿ ಶೇ 70 ರಷ್ಟೂ ಇತ್ತು. 2004ರಲ್ಲಿ ಅಧಿಕಾರಕ್ಕೆ ಬಂದ ಯುಪಿಎ ಸರ್ಕಾರ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡುವುದು, ಬಿಸಿ ಊಟವನ್ನು ಸಾರ್ವತ್ರೀಕರಣಗೊಳಿಸುವುದು, ಶಿಕ್ಷಣ ಕ್ಷೇತ್ರಕ್ಕೆ ಜಿಡಿಪಿಯ ಶೇ 6ರಷ್ಟನ್ನು ವ್ಯಯಿಸುವುದು ಮುಂತಾದ ಭರವಸೆಗಳನ್ನು ನೀಡಿತ್ತು. ಆದರೆ ಯಾವುದೂ ಕೈಗೂಡಿಲ್ಲ. ಆದರೆ 2007–08ರಲ್ಲಿ 2.2 ಲಕ್ಷ ಕೋಟಿ ರೂಗಳನ್ನು ಶಿಕ್ಷಣ ಕ್ಷೇತ್ರಕ್ಕೆ ಮೀಸಲಿರಿಸಿದ್ದರೂ, ಸರ್ಕಾರ ಖರ್ಚು ಮಾಡಿರುವುದ 1.45 ಲಕ್ಷ ಕೋಟಿರೂಗಳು ಮಾತ್ರ. ಏತನ್ಮಧ್ಯೆ ಶಿಕ್ಷಣ ಕ್ಷೇತ್ರದ ಖಾಸಗೀಕರಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದ್ದು 2003ರಲ್ಲಿ ಶೇ 86ರಷ್ಟಿದ್ದ ಸರ್ಕಾರಿ ಶಾಲೆಗಳ ಪ್ರಮಾನ 2007ರಲ್ಲಿ ಶೇ 81.2ಕ್ಕೆ ಇಳಿದಿದೆ. ಇದೇ ಅವಧಿಯಲ್ಲಿ ಏಕಶಿಕ್ಷಕ ಶಾಲೆಗಳ ಪ್ರಮಾಣ ಶೇ.2ರಿಂದ ಶೇ.10ಕ್ಕೆ ಏರಿದೆ. ಯುಪಿಎ ಮತ್ತು ಎನ್‌ಡಿಎ ಸರ್ಕಾರಗಳ ನವ ಉದಾರವಾದಿ ನೀತಿಗಳ ಪರಿಣಾಮವಾಗಿ ದುಡಿಯುವ ಜನತೆ ಮತ್ತು ದಮನಿತ ಸಮುಯದಾಯಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಆರೋಗ್ಯ ಕ್ಷೇತ್ರದ ಅನಾರೋಗ್ಯ : ಯಾವುದೇ ಒಂದು ರಾಷ್ಟ್ರದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತ್ಯಂತರಗಳು ಅಲ್ಲಿನ ಜನತೆಯ ಆರೋಗ್ಯವನ್ನು ಅವಲಂಬಿಸುತ್ತದೆ. 2005–06ರಲ್ಲಿ ಕೈಗೊಂಡ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ವರದಿಯನ್ನು ನೋಡಿದರೆ ನಮ್ಮ ಆಳುವ ವರ್ಗಗಳು ನಾಚಿಕೆಯಿಂದ ತಲೆತಗ್ಗಿಸಬೇಕಾಗುತ್ತದೆ. ಶೇ 8–9 ರಷ್ಟು ಜಿಡಿಪಿ ವೃದ್ಧಿಯನ್ನು ಕಾಣುತ್ತಿರುವ ಭಾರತದಲ್ಲಿ ಶೇ 56ರಷ್ಟು ಮಹಿಳೆಯರು, ಶೇ 24ರಷ್ಟು ಪುರುಷರು ಮತ್ತು ಶೇ 70ರಷ್ಟು ಐದು ವರ್ಷದ ಕೆಳಗಿನ ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಯುಪಿಎ ಸರ್ಕಾರ ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಸಾರ್ವಜನಿಕ ವೆಚ್ಚವನ್ನು ಶೇ 1 ರಿಂದ ಶೇ 3ಕ್ಕೆ ಏರಿಸುವುದಾಗಿ, ಪ್ರಾಥಮಿಕ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡುವುದಾಗಿ, ಜೀವ ರಕ್ಷಕ ಔಷದಿಗಳ ಬೆಲೆಗಳನ್ನು ಇಳಿಸುವುದಾಗಿ, ಆಶ್ವಾಸನೆ ನೀಡಿತ್ತು. ಆದರೆ ಯಾವುದೂ ಕಾರ್ಯಗತವಾಗಿಲ್ಲ.

ಶಿಶು ಮರಣ ಪ್ರಮಾಣ, ಅಂದರೆ ಒಂದು ವರ್ಷಕ್ಕಿಂತಲೂ ಮುನ್ನ ಅಸುನೀಗುವ ಮಕ್ಕಳ ಪ್ರಮಾಣ ಶೇ 57ರಷ್ಟಿದೆ. ಪ್ರತಿ 18 ಮಕ್ಕಳಲ್ಲಿ ಒಂದು ಹಸುಳೆ ಒಂದು ವರ್ಷಕ್ಕಿಂತಲೂ ಮುನ್ನ ಸಾಯುತ್ತಿದೆ. ಮಕ್ಕಳ ಮರಣ ಪ್ರಮಾಣವೂ ಸಹ(5 ವರ್ಷಕ್ಕಿಂತಲೂ ಕಡಿಮೆ ವಯಸ್ಸು) ಶೇ 74ರಷ್ಟಿದೆ. ಆದಾಗ್ಯೂ ಸರ್ಕಾರದಿಂದ ಯಾವುದೇ ಸಕಾರಾತ್ಮಕ ಯೋಜನೆ ಕೈಗೊಳ್ಳಲಾಗಿಲ್ಲ. ದೇಶದ ಶೇ.18 ರಷ್ಟು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಮಾತ್ರ ಮಹಿಳಾ ವೈದ್ಯರಿದ್ದಾರೆ. ಹಾಗಾಗಿ ಮಹಿಳೆಯರಲ್ಲಿ ರಕ್ತಹೀನತೆ ಹೆಚ್ಚಾಗಿದೆ. ವರ್ಷಕ್ಕೆ 1 ಲಕ್ಷಕ್ಕಿಂತಲೂ ಹೆಚ್ಚು ಮಹಿಳೆಯರು ಹೆರಿಗೆಯಾದ ಕೂಡಲೇ ಅಸುನೀಗುತ್ತಿರುವುದು ವರದಿಯಾಗಿದೆ.

ಇಷ್ಟೆಲ್ಲಾ ದುರವಸ್ಥೆಯ ನಡುವೆಯೂ ಆಳುವ ಪಕ್ಷಗಳು ಆರೋಗ್ಯ ಕ್ಷೇತ್ರದಲ್ಲಿ ಯಾವುದೇ ಸುಧಾರಣಾ ಕ್ರಮ ಕೈಗೊಳ್ಳದಿರುವುದು ಸ್ಪಷ್ಟವಾಗಿದೆ. 2001ರ ಜನಗಣತಿಯ ಪ್ರಕಾರ ದೇಶದಲ್ಲಿ 22 ಸಾವಿರ ಪ್ರಾಥಮಿಕ ಆರೋಗ್ಯ ಘಟಕಗಳು, 4400 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 3300 ಸಮುದಾಯ ಆರೋಗ್ಯ ಕೇಂದ್ರಗಳು ಕಡಿಮೆ ಇವೆ. 807 ಪಿಹೆಚ್‌ಸಿಗಳಲ್ಲಿ ವೈದ್ಯರೇ ಇಲ್ಲವಾದರೆ, 3000 ಕೇಂದ್ರಗಳು ವಿದ್ಯುತ್ ಸಂಪರ್ಕವಿಲ್ಲದೆ ಕಾರ್ಯ ನಿರ್ವಹಿಸುತ್ತಿವೆ. ಶೇ 20ರಷ್ಟು ವೈದ್ಯಾಧಿಕಾರಿಗಳ ಸ್ಥಾನಗಳು ಖಾಲಿ ಇವೆ. ಇಂತಹ ವಿಷಮ ಪರಿಸ್ಥಿತಿಯಲ್ಲೂ ಭಾರತ ಸರ್ಕಾರ ತನ್ನ ಒಟ್ಟಾರೆ ಆರೋಗ್ಯ ಕ್ಷೇತ್ರದ ವೆಚ್ಚದಲ್ಲಿ ಶೇ 16ರಷ್ಟನ್ನು ಮಾತ್ರ ಸಾರ್ವಜನಿಕ ಆರೋಗ್ಯಕ್ಕಾಗಿ ಖರ್ಚು ಮಾಡುತ್ತಿದೆ. ಹಾಗಾಗಿಯೇ ಭಾರತದಲ್ಲಿ ಅತಿ ಹೆಚ್ಚಿನ ಸಂಖ್ಯೆಯ ರೋಗಿಗಳು ಕಂಡುಬರುತ್ತಾರೆ.

ಕೋಮುವಾದಿ ಫ್ಯಾಸಿಸಂ–ಭಯೋತ್ಪಾದನೆ : ಅಯೋಧ್ಯಾ ಕಾಂಡದಿಂದ ಪ್ರಾರಂಭಗೊಂಡ ಹಿಂದುತ್ವ

ಕೋಮುವಾದಿ ಫ್ಯಾಸಿಸಂನ ನಗ್ನ ನೃತ್ಯ ಗೋದ್ರಾದ ನಂತರದಲ್ಲಿ ದೇಶವ್ಯಾಪ್ತಿಯಾಗಿ ಹರಡಿರುವುದು ಸ್ಪಷ್ಟವಾಗಿದೆ. ಎಲ್ಲ ಧರ್ಮಗಳ ಮೂಲಭೂತವಾದಿಗಳನ್ನು ಬೆಂಬಲಿಸುವ ಆಳ್ವಿಕರಿಗೆ ಕೋಮುವಾದದ ಬೆಳವಣಿಗೆ ಹೆಚ್ಚು ಉಪಯುಕ್ತವಾಗಿ ಕಂಡು ಬರುತ್ತಿದೆ. ನವ ಉದಾರವಾದಿ ನೀತಿಗಳಿಗೆ ಪೂರಕವಾಗಿ ಫ್ಯಾಸಿಸಂ ಬೆಳೆಯುತ್ತಿರುವುದು ದೇಶದ ಸಾಮಾಜಿಕ ಸೌಹಾರ್ದತೆಗೆ ಮಾರಕವಾಗಿದೆ. ಭಾಜಪದ ಅಧಿಕಾರ ವ್ಯಾಪ್ತಿ ಹೆಚ್ಚುತ್ತಿರುವಂತೆಲ್ಲಾ ಆಡಳಿತ ಯಂತ್ರಗಳಲ್ಲಿ ಸಂಘಪರಿವಾರದ ಫ್ಯಾಸಿಸ್ಟ್ ಧೋರಣೆ ಭದ್ರವಾಗಿ ನೆಲೆಗೊಳ್ಳುತ್ತಿದೆ. ಗುಜರಾತ್, ಕರ್ನಾಟಕ, ಮಧ್ಯಪ್ರದೇಶಗಳು ನಿದರ್ಶನವಷ್ಟೆ. ಯುಪಿಎ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಸೆಕ್ಯುಲರ್ ತತ್ವಗಳ ರಕ್ಷಣೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುವುದೆಂಬ ನಂಬಿಕೆ ಹುಸಿಯಾಗಿದ್ದು, ಕಳೆದ 5 ವರ್ಷಗಳಲ್ಲಿ ಫ್ಯಾಸಿಸ್ಟ್ ಶಕ್ತಿಗಳ ಚಟುವಟಿಕೆಗಳು ತೀವ್ರವಾಗುತ್ತಿವೆ. ಕಂಧಮಾಲ್, ಮಂಗಳೂರು ಈ ನಿಟ್ಟಿನಲ್ಲಿ ಉಲ್ಲೇಖನಾರ್ಹ.

ಹಿಂದುತ್ವ ಫ್ಯಾಸಿಸಂನ ಬೆಳವಣಿಗೆಯ ಬೆನ್ನಲ್ಲೇ ದೇಶವನ್ನು ಕಾಡುತ್ತಿರುವ ಭಯೋತ್ಪಾದನೆಯ ಸಮಸ್ಯೆ ನವ ಉದಾರವಾದಿ ಆಳ್ವಿಕರಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಮಲೆಗಾಂವ್ ಪ್ರಕರಣದಲ್ಲಿ ಹಿಂದುತ್ವ ಪ್ರತಿಪಾದಕರ ಕೈವಾಡವಿರುವ ಆರೋಪಗಳ ಹಿನ್ನೆಲೆಯಲ್ಲಿ ಭಯೋತ್ಪಾದನೆ ಹೊಸ ಆಯಾಮವನ್ನು ಪಡೆದುಕೊಂಡಿದೆ. ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಭಾಜಪಕ್ಕಿಂತಲೂ ತಾನೇನೂ ಕಡಿಮೆಯಲ್ಲ ಎಂದು ನಿರೂಪಿಸಲು ಯುಪಿಎ ಸರ್ಕಾರ ಕರಾಳಶಾಸನಗಳ ಮೊರೆ ಹೋಗಿರುವುದರಿಂದ ಪ್ರಭುತ್ವ ಇನ್ನೂ ಹೆಚ್ಚು ದಮನಕಾರಿಯಾಗಿದೆ. ಇಸ್ಲಾಂ ಮೂಲಭೂತವಾದಿಗಳೊಡನೆಯೇ ಹಿಂದೂ ಮೂಲಭೂತವಾದಿಗಳೂ ರಾಷ್ಟ್ರದ ಸಾಮಾನ್ಯ ಜನತೆಗೆ ದಿಕ್ಕು ತಪ್ಪಿಸುತ್ತಿದ್ದಾರೆ. ಕಂಧಮಾಲ್ ಪ್ರಕರಣದ ನಂತರದಲ್ಲಿ ದೇಶದ ಅಲ್ಪಸಂಖ್ಯಾತರಿಗೆ ಅಭದ್ರತೆಯ ಭೀತಿ ಎದುರಾಗಿದ್ದು, ಫ್ಯಾಸಿಸ್ಟ್ ಶಕ್ತಿಗಳನ್ನು ನಿಯಂತ್ರಿಸುವಲ್ಲಿ ಸರ್ಕಾರ ಪೂರ್ಣ ವಿಫಲವಾಗಿದೆ. ಭಾರತದ ಬಹುಸಂಖ್ಯಾತ ಜನತೆಯ ಸೆಕ್ಯುಲರ್ ಆಶೋತ್ತರಗಳು ಅಪಾಯದ ಅಂಚಿನಲ್ಲಿರುವುದು ಅಲ್ಲಗಳೆಯಲಾಗದ ಸತ್ಯ.

ದಲಿತ-ಮಹಿಳೆ-ಆದಿವಾಸಿಗಳ ಸಮಸ್ಯೆ : ಕಳೆದ ಎರಡು ದಶಕಗಳಲ್ಲಿ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳೂ ದಲಿತ-ಆದಿವಾಸಿ-ಒಬಿಸಿಗಳ ಬಗ್ಗೆ ತೀವ್ರವಾದ ಕಾಳಜಿ ವ್ಯಕ್ತಪಡಿಸಿವೆ. 1996ರಲ್ಲಿ ಅಧಿಕಾರಕ್ಕೆ ಬಂದ ಸಂಯುಕ್ತ ರಂಗ ಸರ್ಕಾರ ಎಸ್‌ಸಿ-ಎಸ್‌ಟಿ-ಒಬಿಸಿಗಳಿಗಾಗಿ 6 ರಿಂದ 12ನೆಯ ತರಗತಿಯವರೆಗೆ ದೇಶಾದ್ಯಂತ ಉತ್ತಮ ಗುಣಮಟ್ಟದ ಶಾಲೆಗಳನ್ನು ತೆರೆಯುವುದಾಗಿ ಹೇಳಿತ್ತು. ಆದರೆ ಒಂದೇ ಒಂದು ಶಾಲೆಯನ್ನೂ ಪ್ರಾರಂಭಿಸಲಾಗಿಲ್ಲ. 1998-2004ರ ಎನ್‌ಡಿಎ ಸರ್ಕಾರ ತನ್ನ ಹಿಂದಿನ ಸರ್ಕಾರದ ಮೂರು ಪ್ರಮುಖ ನಿರ್ಣಯಗಳನ್ನು ಅನೂರ್ಜಿತಗೊಳಿಸುವ ಮೂಲಕ ದಲಿತರ ಕ್ಷೇಮಾಭಿವೃದ್ಧಿಯನ್ನು ಕಡೆಗಣಿಸಿತ್ತು. 2004ರಿಂದ ಯುಪಿಎ ಸರ್ಕಾರದ ಅವಧಿಯಲ್ಲಿ ದಲಿತರ ಪ್ರಗತಿಗಾಗಿ ಯಾವುದೇ ದಿಟ್ಟ ಕ್ರಮವನ್ನೂ ಕೈಗೊಳ್ಳಲಾಗಿಲ್ಲ. 2008ರಲ್ಲಿ ರಾಜ್ಯಸಭೆಯಲ್ಲಿ ಮಂಡಿಸಲಾದ ಎಸ್‌ಸಿ ಎಸ್‌ಟಿ(ಸಾರ್ವಜನಿಕ ಕ್ಷೇತ್ರಗಳ ಮೀಸಲಾತಿ) ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಗಿಲ್ಲ. ಈ ಮಸೂದೆಯ ಪ್ರಕಾರ ಉನ್ನತ ವ್ಯಾಸಂಗ ಸಂಸ್ಥೆಗಳಲ್ಲಿ ಮತ್ತು ಉನ್ನತ ಹುದ್ದೆಗಳಲ್ಲಿ ಮೀಸಲಾತಿ ನೀಡದಿರಲು ಶಿಫಾರಸು ಮಾಡಲಾಗಿದೆ.

ದೇಶದ ಶೇ 80ರಷ್ಟು ದಲಿತರು ಗ್ರಾಮೀಣ ಪ್ರದೇಶದಲ್ಲಿದ್ದು, ಕೃಷಿಯನ್ನೇ ಅವಲಂಬಿಸಿರುತ್ತಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನವ ಉದಾರವಾದಿ ನೀತಿಗಳ ಪರಿಣಾಮವಾಗಿ ಈ ಜನಸಮುದಾಯಗಳು ಡೋಲಾಯಮಾನ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಸರ್ಕಾರಿ ನೌಕರಿಯಲ್ಲಿ ಮೀಸಲಾತಿ ಸೌಲಭ್ಯವನ್ನು ಬಿಟ್ಟರೆ ಬೇರಾವುದೇ ಸಕಾರಾತ್ಮಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರಲ್ಲಿ ಆಳುವ ಪಕ್ಷಗಳು ವಿಫಲವಾಗಿವೆ. ವಿಶೇಷ ಆರ್ಥಿಕ ವಲಯ ಮತ್ತು ಚತುಷ್ಪಥ ರಸ್ತೆಗಳ ನಿರ್ಮಾಣಕ್ಕಾಗಿ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುತ್ತಿರುವ ಸರ್ಕಾರಗಳು ದಲಿತರನ್ನು ಮತ್ತು ಆದಿವಾಸಿಗಳನ್ನು ತಮ್ಮ ನೆಲದಿಂದ ಉಚ್ಚಾಟಿಸುತ್ತಿವೆ. ಮತ್ತೊಂದೆಡೆ ಜಾತಿ ದೌರ್ಜನ್ಯಗಳು ತೀವ್ರಗೊಳ್ಳುತ್ತಿದ್ದು ಖೈರಲಾಂಜಿಯಂತಹ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಒಂದೆಡೆ ಆರ್ಥಿಕ ಅಭದ್ರತೆ ಮತ್ತೊಂದೆಡೆ ಸಾಮಾಜಿಕ ದೌರ್ಜನ್ಯಗಳಿಗೆ ಸಿಲುಕಿರುವ ದಲಿತ ಸಮುದಾಯಗಳ ಬವಣೆಯನ್ನು ಕೇಳುವವರೇ ಇಲ್ಲವಾಗಿದ್ದಾರೆ.

ಜಾಗತೀಕರಣ ಪ್ರಕ್ರಿಯೆಯಿಂದ ಹೆಚ್ಚು ಬಾಧಿತರಾಗಿರುವ ಮಹಿಳೆಯರ ಸಮಸ್ಯೆಗಳಿಗೆ ಯಾವುದೇ ಸರ್ಕಾರಗಳೂ ಸಕಾರಾತ್ಮಕವಾಗಿ ಸ್ಪಂದಿಸದಿರುವುದು ಸ್ಪಷ್ಟವಾಗಿದೆ. ಮಹಿಳಾ ಮೀಸಲಾತಿ ಮಸೂದೆ ಇಂದಿಗೂ ಮರೀಚಿಕೆಯಾಗೇ ಉಳಿದಿದೆ. ಉದ್ಯೋಗ ಖಾತರಿ ಯೋಜನೆಯಡಿ ಗ್ರಾಮೀಣ ಮಹಿಳೆಯರಿಗೆ ಅನುಕೂಲವಾಗಿರುವುದಾದರೂ, ಮಹಿಳೆಯರ ಮೇಲಿನ ದೌರ್ಜನ್ಯ ಅವ್ಯಾಹತವಾಗಿ ನಡೆಯುತ್ತಿದೆ. ಫ್ಯಾಸಿಸ್ಟ್ ಸಂಘಟನೆಗಳ ಸಾಂಸ್ಕೃತಿಕ ಆರಕ್ಷಕರು ಸರ್ಕಾರಗಳ ಬೆಂಬಲದಿಂದ ಮಹಿಳೆಯರ ಮೇಲೆ ಆಕ್ರಮಣ ನಡೆಸುತ್ತಿದ್ದಾರೆ. ಅತ್ಯಾಚಾರ ಮತ್ತಿತರ ದೌರ್ಜನ್ಯಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವುದೇ ಶಾಸನವನ್ನು ತರುವುದರಲ್ಲಿ ಸರ್ಕಾರಗಳು ವಿಫಲವಾಗಿವೆ. ಹೆಣ್ಣು ಭ್ರೂಣಹತ್ಯೆ ಸಾಮಾನ್ಯ ಸಂಗತಿಯಾಗಿದ್ದು ಪುರುಷ-ಮಹಿಳೆಯ ಅನುಪಾತದಲ್ಲಿ ತೀವ್ರತೆರನಾದ ವ್ಯತ್ಯಯಗಳು ಕಂಡುಬರುತ್ತಿವೆ. ಮಹಿಳಾ ಚಳುವಳಿಗಳ ನಿರಂತರ ಹೋರಾಟಗಳ ನಡುವೆಯೂ ಆಳ್ವಿಕರ ನಿಷ್ಕ್ರಿಯತೆ ಮುಂದುವರೆದಿದೆ.

ವಿದೇಶಾಂಗ ನೀತಿ : ಅಲಿಪ್ತ ಚಳುವಳಿಗೆ ಒಂದು ಹೊಸ ಆಯಾಮವನ್ನು ನೀಡಿ, ತೃತೀಯ ಜಗತ್ತಿನ ರಾಷ್ಟ್ರಗಳಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಂದು ಪ್ರಬಲ ದನಿಯಾಗಿದ್ದ ಭಾರತ ಇಂದು ಸಾಮ್ರಾಜ್ಯಶಾಹಿಗಳ ಅಡಿಯಾಳಾಗಿದೆ. ಭಯೋತ್ಪಾದನೆಯ ವಿರುದ್ಧ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಸಾರಿರುವ ಸಮರದಲ್ಲಿ ಭಾರತವೂ ಭಾಗಿಯಾಗುತ್ತಿರುವುದು, ದೇಶದ ತಟಸ್ಥ ವಿದೇಶಾಂಗ ನೀತಿಗೆ ಮಾರಕವಾಗಿ ಪರಿಣಮಿಸಿದೆ. ಭಾರತ ಅಮೆರಿಕ ಪರಮಾಣು ಒಪ್ಪಂದಕ್ಕೆ ಸಹಿ ಹಾಕಿದ ನಂತರದಲ್ಲಿ ಅಮೆರಿಕದ ಕೈಗೊಂಬೆಯಾಗಿರುವ ಭಾರತ ಸರ್ಕಾರ, ಅಮೆರಿಕದ ಯುದ್ಧ ಪರಂಪರೆಗೆ ಶರಣಾಗುತ್ತಿದೆ. ದೇಶವನ್ನು ಕಾಡುತ್ತಿರುವ ಭಯೋತ್ಪಾದನೆಯ ಸಮಸ್ಯೆಗೆ ಮೂಲ ಕಾರಣರಾದ ಸಾಮ್ರಾಜ್ಯಶಾಹಿಗಳ ವಿರುದ್ಧ ಸೆಟೆದು ನಿಂತು ಪ್ರಜಾತಾಂತ್ರಿಕ ರಾಷ್ಟ್ರಗಳ ಐಕಮತ್ಯಕ್ಕಾಗಿ ಹೋರಾಡಬೇಕಾಗಿರುವ ಸಂದರ್ಭದಲ್ಲಿ ಎನ್‌ಡಿಎ ಮತ್ತು ಯುಪಿಎ ಸರ್ಕಾರಗಳು ಇಸ್ರೇಲ್‌ನ ಆಕ್ರಮಣಶೀಲತೆಯನ್ನು ಬೆಂಬಲಿಸುತ್ತಿರುವುದು ಅಂತಾರಾಷ್ಟ್ರೀಯ ಮಟ್ಟದಲ್ಲಿ ತೀವ್ರ ವಿವಾದವನ್ನು ಸೃಷ್ಟಿಸಿದೆ.

ಅಮೆರಿಕದ ಒತ್ತಡಕ್ಕೆ ಮಣಿದು ವಿಶ್ವ ಸಂಸ್ಥೆಯಲ್ಲಿ ಇರಾನ್ ವಿರುದ್ಧ ಮತ ಚಲಾಯಿಸುವ ಮೂಲಕ ಯುಪಿಎ ಸರ್ಕಾರ ಭಾರತದ ಬಹುಸಂಖ್ಯಾತರ ಹಿತಾಸಕ್ತಿ

ಅಮೆರಿಕದ ಒತ್ತಡಕ್ಕೆ ಮಣಿದು ವಿಶ್ವ ಸಂಸ್ಥೆಯಲ್ಲಿ ಇರಾನ್ ವಿರುದ್ಧ ಮತ ಚಲಾಯಿಸುವ ಮೂಲಕ ಯುಪಿಎ ಸರ್ಕಾರ ಭಾರತದ ಬಹುಸಂಖ್ಯಾತರ ಹಿತಾಸಕ್ತಿಗಳನ್ನು ಕಡೆಗಾಣಿಸಿದೆ. 26-11ರ ಮುಂಬೈ ದಾಳಿಯ ನಂತರದಲ್ಲಿ ನೆರೆ ರಾಷ್ಟ್ರ ಪಾಕಿಸ್ತಾನದಲ್ಲಿ ಉದ್ಭವಿಸಿರುವ ಕ್ಲಿಷ್ಟ ಪರಿಸ್ಥಿತಿ ಭಾರತಕ್ಕೂ ಅಪಾಯಕಾರಿಯಾಗಿರುತ್ತದೆ. ಪಾಕ್ ನೆಲದಲ್ಲಿ ತಾಲಿ ಬಾನ್ ಸುಭದ್ರ ನೆಲೆ ಕಾಣುತ್ತಿರುವುದು ಚಿಂತನಾರ್ಹ ವಿಷಯವಾಗಿದೆ.

ಗಳನ್ನು ಕಡೆಗಾಣಿಸಿದೆ. 26-11ರ ಮುಂಬೈ ದಾಳಿಯ ನಂತರದಲ್ಲಿ ನೆರೆ ರಾಷ್ಟ್ರ ಪಾಕಿಸ್ತಾನದಲ್ಲಿ ಉದ್ಭವಿಸಿರುವ ಕ್ಲಿಷ್ಟ ಪರಿಸ್ಥಿತಿ ಭಾರತಕ್ಕೂ ಅಪಾಯಕಾರಿಯಾಗಿರುತ್ತದೆ. ಪಾಕ್ ನೆಲದಲ್ಲಿ ತಾಲಿಬಾನ್ ಸುಭದ್ರ ನೆಲೆ ಕಾಣುತ್ತಿರುವುದು ಚಿಂತನಾರ್ಹ ವಿಷಯವಾಗಿದೆ. ಈ ಸಂದರ್ಭದಲ್ಲಿ ಪಾಕ್‌ನೊಡನೆ ಉತ್ತಮ ಬಾಂಧವ್ಯ ಬೆಳೆಸುವ ಮೂಲಕ ಭಾರತ ಸರ್ಕಾರ ಭಯೋತ್ಪಾದಕರ ವಿರುದ್ಧ ಹೋರಾಡಬಹುದಾಗಿದೆ. ಆದರೆ ಅಮೆರಿಕದ ಆಫ್ಘಾನ್ ನೀತಿಯನ್ನು ಅನುಮೋದಿಸುವ ಮೂಲಕ ಭಾರತ ಸರ್ಕಾರ ಭಯೋತ್ಪಾದಕರ ಕೆಂಗಣ್ಣಿಗೆ ಗುರಿಯಾಗಿದೆ.

ಯೂರೋಪ್‌ನ ಬಹುಪಾಲು ಜನತೆಯ ಅಭಿಪ್ರಾಯದಲ್ಲಿ ಅಮೆರಿಕ ಅಂತಾರಾಷ್ಟ್ರೀಯ ಸ್ಥಿರತೆಗೆ ಮಾರಕವಾಗಿದೆ ಎಂದು ಸಮೀಕ್ಷೆಯೊಂದರಲ್ಲಿ ವರದಿಯಾಗಿದೆ. ಆದರೆ ಭಾರತದ ಆಳ್ವಿಕರು ಅಮೆರಿಕದ ಸಹಾಯದಿಂದ ಪ್ರಾದೇಶಿಕ ಶಕ್ತಿಯಾಗಿ ಬೆಳೆಯಲು ಯೋಚಿಸುತ್ತಿದೆ. ಈ ನಿಟ್ಟಿನಲ್ಲಿ ಅಮೆರಿಕ, ಜಪಾನ್, ಆಸ್ಟ್ರೇಲಿಯ ಮತ್ತು ಫ್ರಾನ್ಸ್ ದೇಶಗಳ ಜಂಟಿ ಸಮರಾಭ್ಯಾಸ ಭಾರತದ ನೆಲದಲ್ಲಿ ನಡೆಯುತ್ತಿರುವುದನ್ನು ಗಮನಿಸಬಹುದು. ಪರಮಾಣು ಒಪ್ಪಂದದ ಮೂಲಕ ಭಾರತದ ಪರಮಾಣು ಕಾರ್ಯಕ್ರಮದಲ್ಲಿ ನೇರ ಹಸ್ತಕ್ಷೇಪ ಮಾಡುವ ಅಧಿಕಾರ ಪಡೆದಿರುವ ಅಮೆರಿಕದ ಸಾಮ್ರಾಜ್ಯಶಾಹಿ ಧ್ಯೇಯಗಳಿಗೆ ಭಾರತ ಚಿಮ್ಮು ಹಲಗೆಯಾಗಿ ಪರಿಣಮಿಸಿದೆ.

ಪ್ರಣಾಳಿಕೆಗಳಲ್ಲೇನಿದೆ ?

ಮೇಲೆ ಹೇಳಿದ ಸಮಸ್ಯೆಗಳು ಇಡೀ ಭಾರತೀಯರನ್ನು ಕಾಡುತ್ತಿವೆ. ಜಾಗತಿಕ ಆರ್ಥಿಕ ಹಿಂಜರಿತದ ಪರಿಣಾಮವಾಗಿ ಲಕ್ಷಾಂತರ ರೂಗಳ ವೇತನ ಗಳಿಸುತ್ತಿದ್ದ ಸಾಫ್ಟ್‌ವೇರ್ ಇಂಜಿನಿಯರುಗಳು ನಿರುದ್ಯೋಗಿಗಳಾಗುವ ಸನ್ನಿವೇಶ ಎದುರಾಗಿದೆ. ಗ್ರಾಮೀಣ ಪ್ರದೇಶಗಳಿಂದ ನಗರ-ಪಟ್ಟಣಗಳಿಗೆ ವಲಸೆ ಹೋಗುವವರ ಸಂಖ್ಯೆ ಏರುತ್ತಲೇ ಇದೆ. ಆರ್ಥಿಕ ಅಸ್ಥಿರತೆ, ಸಾಮಾಜಿಕ ಅಭದ್ರತೆಗಳಿಂದ ಜನಸಾಮಾನ್ಯರು ಚಿಂತಿತರಾಗಿದ್ದಾರೆ. ಐಷಾರಾಮಿ ಜೀವನ ಶೈಲಿಗೆ ಅನುಕೂಲವಾಗುವ ನವ ಉದಾರವಾದಿ ನೀತಿಗಳು ಬಡ ಜನತೆಯನ್ನು ದಾರಿದ್ರ್ಯತೆಯ ಕೂಪಕ್ಕೆ ತಳ್ಳುತ್ತಿವೆ. ನಿರುದ್ಯೋಗಿ ಯುವಕರು ಮಾಫಿಯಾಗಳಿಗೆ, ಮೂಲಭೂತವಾದಿಗಳಿಗೆ, ಫ್ಯಾಸಿಸ್ಟ್ ಶಕ್ತಿಗಳಿಗೆ ಬಲಿಯಾಗಿ ಹರಕೆಯ ಕುರಿಗಳಾಗುತ್ತಿದ್ದಾರೆ. ದೇಶದಲ್ಲಿ ಕೋಟ್ಯಾಧಿಪತಿಗಳ ಸಂಖ್ಯೆ ಏರುತ್ತಿರುವಂತೆಯೇ ದಾರಿದ್ರ್ಯತೆಯ ಪ್ರಮಾಣವೂ ಏರುತ್ತಿದೆ. ಸ್ವಿಸ್‌ಬ್ಯಾಂಕಿನಲ್ಲಿ ಹೂಡಲಾಗಿರುವ 1456 ಬಿಲಿಯನ್ ಡಾಲರ್ ಕಪ್ಪುಹಣ(70ಲಕ್ಷ ಕೋಟಿರೂಗಳು) ಯಾವುದೇ ಪ್ರಜ್ಞಾವಂತನನ್ನೂ ತಲೆತಗ್ಗಿಸುವಂತೆ ಮಾಡುತ್ತದೆ.

ಇಷ್ಟೆಲ್ಲಾ ಸಮಸ್ಯೆಗಳ ನಡುವೆ ಮಹಾಚುನಾವಣೆಗಳನ್ನು ಎದುರಿಸುತ್ತಿರುವ ಭಾರತೀಯ ಜನತೆಯ ಮುಂದೆ ರಾಜಕೀಯ ಪಕ್ಷಗಳು ಮಂಡಿಸುತ್ತಿರುವ ಪ್ರಣಾಳಿಕೆಗಳೇನು? 1 ರೂ ಕೆಜಿಗೆ ಅಕ್ಕಿ, 2 ರೂ ಕೆಜಿಗೆ ಗೋಧಿ, ಎಲ್ಲರಿಗೂ ಉಚಿತ ಟಿವಿ, ಉಚಿತ ಮೊಬೈಲ್, ಅಂತರ್ಜಾಲ ಸಂಪರ್ಕ, ಪ್ರತಿ ಮನೆಗೂ ಟೆಲಿಫೋನ್ ಇತ್ಯಾದಿ. ಭಾರತದ ದುಡಿಯುವ ಜನತೆ ತಮ್ಮ ಪ್ರತಿನಿಧಿಗಳಿಂದ ಭಿಕ್ಷೆ ಕೇಳುತ್ತಿಲ್ಲ ಎಂಬ ಅಂಶವನ್ನು ರಾಜಕೀಯ ಪಕ್ಷಗಳು ಗ್ರಹಿಸುವ ಕಾಲ ಬಂದಿದೆ. ದೇಶದಲ್ಲಿ ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ತಮ್ಮ ಕೋಟ್ಯಾಂತರ ರೂ ಆಸ್ತಿಗಳನ್ನು ಬಹಿರಂಗಪಡಿಸುವ ರಾಜಕಾರಣಿಗಳ ಪ್ರಹಸನ ನಾಚಿಕೆಗೇಡಿನ ಸಂಗತಿ. ಚುನಾವಣೆಯಲ್ಲಿ ನೀರಿನಂತೆ ಹರಿಸಲಾಗುವ ಕೋಟ್ಯಾಂತರ ರೂ.ಗಳು ಮತದಾರರನ್ನು ತಾತ್ಕಾಲಿಕವಾಗಿ ಕೊಳ್ಳಬಹುದು, ಆದರೆ ಇಡೀ ದೇಶದ ನಾಗರಿಕ ಪ್ರಜ್ಞೆಯನ್ನು ಕೊಳ್ಳಲಾಗುವುದಿಲ್ಲ.

ಈ ಮೊದಲೇ ಹೇಳಿದಂತೆ ಚುನಾವಣಾ ಪ್ರಣಾಳಿಕೆಗಳು ದೇಶದ ಭವಿಷ್ಯದ ಅಭಿವೃದ್ಧಿಗೆ ಪೂರಕವಾಗಿರುವುದು ಅತ್ಯವಶ್ಯ. ಆದರೆ ಪ್ರಸ್ತುತ ಚುನಾವಣೆಗಳಲ್ಲಿ ಯಾವುದೇ ಗಂಭೀರ ಸಮಸ್ಯೆಗಳೂ ಬಿಂಬಿತವಾಗುತ್ತಿಲ್ಲ. ತಲೆ, ಕೈ ಕಾಲು ಕಡಿಯುವುದರಲ್ಲಿ ಪೈಪೋಟಿ ನಡೆಸುತ್ತಿರುವ ಆಯುಧ ಧಾರಿ ರಾಜಕಾರಣಿಗಳು ಪರಸ್ಪರ ದೋಷಾರೋಪಣೆಯಲ್ಲಿ ತೊಡಗಿದ್ದಾರೆಯೇ ಹೊರತು, ಜನಸಾಮಾನ್ಯರ ಜ್ವಲಂತ ಸಮಸ್ಯೆಗಳ ಬಗ್ಗೆ ಕಿಂಚಿತ್ತೂ ಗಮನ ಹರಿಸುತ್ತಿಲ್ಲ. ಜಾಗತೀಕರಣದ ಮುಕ್ತ ಮಾರುಕಟ್ಟೆಯ ಸರಕುಗಳಾಗಿರುವ ಚುನಾಯಿತ ಪ್ರತಿನಿಧಿಗಳಲ್ಲಿ ಪಕ್ಷ ನಿಷ್ಠೆ ಸಂಪೂರ್ಣ ಮಾಯವಾಗಿ ಸಂವಿಧಾನ ನಿಷ್ಠೆಯೂ ಕ್ಷೀಣಿಸುತ್ತಿದೆ. ಯಾವುದೇ ಪಕ್ಷವೂ ತಮ್ಮ ಪ್ರಣಾಳಿಕೆಗಳಲ್ಲಿ ಈ ಸಮಸ್ಯೆಗಳನ್ನು ಪರಿಶೀಲಿಸುವ ಆಶ್ವಾಸನೆ ನೀಡಿಲ್ಲ. ಇಂದು ಭಾರತ ಜಾಗತಿಕ ಮಟ್ಟದಲ್ಲಿ ಅಗ್ರ ಶ್ರೇಣಿಯಲ್ಲಿ ನಿಲ್ಲುವುದೇ ಆದರೆ ಅದಕ್ಕೆ ಕಾರಣ ಶ್ರಮಿಕ ವರ್ಗಗಳು. ವಿಪರ್ಯಾಸವೆಂದರೆ ಪ್ರಸಕ್ತ ಚುನಾವಣೆಗಳಲ್ಲಿ ಈ ಶ್ರಮಿಕವರ್ಗಗಳು ಸಂಪೂರ್ಣ ನಿರ್ಲಕ್ಷ್ಯಕ್ಕೊಳಗಾಗಿದ್ದಾರೆ. ರಿಯಲ್ ಎಸ್ಟೇಟ್ ಮಾಫಿಯಾಗಳು, ಭೂಗತ ದೊರೆಗಳು, ಮದ್ಯದ ದೊರೆಗಳು ಮತ್ತು ದಲ್ಲಾಳಿ ಕಾರ್ಪೋರೇಟ್ ಶಕ್ತಿಗಳು ದೇಶದ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ.

ಕಳಿಂಗನಗರ, ನಂದಿಗ್ರಾಮ, ಸಿಂಗೂರು, ಕಂಧಮಾಲ್, ಖೈರಲಂಜಿ, ಕಂಬಾಲಪಲ್ಲಿ, ಮಂಗಳೂರು, ಮುಂಬೈ, ಗೋಧ್ರ, ಗುಜರಾತ್ ಇವೆಲ್ಲವೂ 60 ವರ್ಷಗಳ ಪ್ರಬುದ್ಧ ಸ್ವತಂತ್ರ ಭಾರತಕ್ಕೆ ಕಳಂಕ ಹಚ್ಚುವ ಸಂಗತಿಗಳು. ಈ ಎಲ್ಲ ಪ್ರಕರಣಗಳ ಹಿಂದೆ ನವಉದಾರವಾದಿ ನೀತಿಗಳ ಕಾಣದ ಕೈಗಳು ಕೆಲಸ ಮಾಡುತ್ತವೆ. ಈ ಕಾಣದ ಕೈಗಳಿಗೆ ಇನ್ನೂ ಹೆಚ್ಚು ಸಾಮರ್ಥ್ಯ ತುಂಬುವ ಕೆಲಸವನ್ನು ದೇಶದ ಪ್ರಮುಖ ರಾಜಕೀಯ ಪಕ್ಷಗಳು ಮಾಡುತ್ತಿರುವುದು ಸ್ಪಷ್ಟವಾಗಿದೆ. ಈ ಸಂದರ್ಭದಲ್ಲಿ ತಮ್ಮ ಪ್ರಣಾಳಿಕೆಗಳ ಮೂಲಕ ಸಾಮಾನ್ಯ ಜನತೆಯನ್ನು ಅಂಗಲಾಚುವ ಭಿಕಾರಿಗಳಂತೆ ಪರಿಗಣಿಸುವ ರಾಜಕೀಯ ಪಕ್ಷಗಳಿಗೆ ಜನರ ಸಂವೇದನೆಗಳನ್ನು ಸರಿಯಾಗಿ ಗ್ರಹಿಸುವ ಕಾಲ ಸನ್ನಿಹಿತವಾಗಿದೆ. ಹೊರಗಿನ ಶತ್ರುಗಳಿಗಿಂತಲೂ ಒಳಗಿನ ಶತ್ರುಗಳೇ ಭಾರತದ ನೂರು ಕೋಟಿ ಜನತೆಗೆ ಅಪಾಯಕಾರಿಯಾಗಿದ್ದಾರೆ. ಯಾವ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಎನ್ನುವುದಕ್ಕಿಂತಲೂ ಮುಂಬರುವ ಸರ್ಕಾರದ ನೀತಿಗಳು ಯಾವ ದಿಕ್ಕಿನಲ್ಲಿ ಸಾಗುತ್ತವೆ ಎಂಬ ಪ್ರಶ್ನೆ ಇಂದು ಜನತೆಯನ್ನು ಕಾಡುತ್ತಿದೆ. ಈ ನಿಟ್ಟಿನಲ್ಲಿ ಪ್ರಮುಖ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು ತೀವ್ರ ನಿರಾಸೆ ಮೂಡಿಸುತ್ತವೆ.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾವಣೆ ಜನತೆಯ ಬತ್ತಳಿಕೆಯಲ್ಲಿರುವ ಒಂದು ಮಹಾನ್ ಅಸ್ತ್ರ. ಸದಾಕಾಲವೂ ಹಣದ ಪ್ರಭಾವದಿಂದ ಈ ಅಸ್ತ್ರಗಳನ್ನು ನಿಷ್ಕ್ರಿಯಗೊಳಿಸಲಾಗುವುದಿಲ್ಲ. ದುಡಿಯುವ ಜನತೆಯ, ದಮನಿತ ಜನಸಮುದಾಯಗಳ, ಶೋಷಿತ ವರ್ಗಗಳ ಆಕ್ರೋಶದ ಕಿಡಿಗಳು ಸುಪ್ತವಾಗಿದ್ದರೂ, ಸಹನೆಯ ಮಿತಿ ಮೀರಿದಾಗ ಸ್ಫೋಟಗೊಳ್ಳುತ್ತವೆ. ಈ ಗಂಭೀರ ಸತ್ಯವನ್ನು ಆಳುವ ಪಕ್ಷಗಳು, ರಾಜಕಾರಣಿಗಳು ಗ್ರಹಿಸಿದಲ್ಲಿ ಪ್ರಜಾತಂತ್ರ ಗಟ್ಟಿಯಾಗುತ್ತದೆ. ಪ್ರಸಕ್ತ ಚುನಾವಣೆಗಳು ಈ ದಿಕ್ಕಿನಲ್ಲಿ ಬದಲಾವಣೆಯನ್ನು ತರುವುದೆಂದು ಆಶಿಸೋಣ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೦೨೮ ೭೯೪೩/೯೪೪೪೮೦೪೪೩೦೬

ಜಾತಿ ವ್ಯವಸ್ಥೆ ಮತ್ತು ರಾಜಕಾರಣ

ಡಾ. ಜೆ. ಸೋಮಶೇಖರ್

ಭಾರತ ಒಂದು ಜಾತಿ ವ್ಯವಸ್ಥೆಯ ರಾಷ್ಟ್ರ. ಈ ವ್ಯವಸ್ಥೆ ಭಾರತೀಯ ಚಟುವಟಿಕೆಗಳನ್ನ ನಿಯಂತ್ರಿಸುವ ಶಕ್ತಿಯನ್ನು ಹೊಂದಿದೆ. ಜಾತಿ ವ್ಯವಸ್ಥೆಯ ಉಗಮ ಮತ್ತು ಇದಕ್ಕೆ ಸಂಬಂಧಿಸಿದ ಸಿದ್ಧಾಂತಗಳನ್ನು ಪಾಶ್ಚಿಮಾತ್ಯ ಮತ್ತು ಭಾರತೀಯ ವಿದ್ವಾಂಸರುಗಳು ತಮ್ಮ ತಮ್ಮ ನೆಲೆ ಮತ್ತು ನಿಲುವುಗಳಲ್ಲಿ ವ್ಯಾಖ್ಯಾನಿಸಿ ವಿಶ್ಲೇಷಿಸಿದ್ದಾರೆ. ಅವುಗಳು ಜಾತಿ ವ್ಯವಸ್ಥೆಯ ಪ್ರಾಮುಖ್ಯತೆ ಮತ್ತು ಪರಿಣಾಮವನ್ನು ಸ್ವತಂತ್ರ ಭಾರತದಲ್ಲೂ ಮುಂದುವರೆಸುವ ಒಂದು ಯಂತ್ರವಾಗಿಸಿ ಸದಾ ಚಾಲನೆಯಲ್ಲಿರುವದನ್ನು ಗಮನಿಸಿದಾಗ ಅದರ ಸ್ವರೂಪ ಮತ್ತು ಲಕ್ಷಣಗಳನ್ನು ತಿಳಿಯಬಹುದಾಗಿದೆ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಒಬ್ಬ ಶ್ರೇಷ್ಠ ಸಮಾಜ ಶಾಸ್ತ್ರಜ್ಞ ಹಾಗೂ ಮಾನವ ಶಾಸ್ತ್ರಜ್ಞರಾಗಿ ಜಾತಿ ವ್ಯವಸ್ಥೆಯನ್ನು ಕುರಿತು ಆಳವಾದ ಮತ್ತು ಅರ್ಥ ಪೂರ್ಣವಾದ ಬರಹಗಳನ್ನ ಜಾತಿ ಆಧಾರಿತ ಸಮಾಜಕ್ಕೆ ಜಾತಿಯ ವಿನಾಶಕ್ಕಾಗಿ ನೀಡಿರುತ್ತಾರೆ. ಆದರೆ ಜಾತಿ ವ್ಯವಸ್ಥೆ ಜಾತಿ ವಿನಾಶವನ್ನ ಸ್ವತಂತ್ರ ಬಂದು ೬೦ ವರ್ಷಗಳಾದರೂ ಮಾಡದೆ ಇರುವುದೇ ಜಾತಿ ವ್ಯವಸ್ಥೆಯ ಶಕ್ತಿ ಏನೆಂಬುದನ್ನು ಸಾಬೀತು ಪಡಿಸಿದೆ.

ಇಡೀ ಜಗತ್ತಿಗೆ ಜಾತಿ ವ್ಯವಸ್ಥೆ ಭಾರತದ ಒಂದು ಬಲಿಷ್ಠ ಶಕ್ತಿ ಎಂಬುದನ್ನ ತೋರಿಸಿಕೊಡುತ್ತದೆ. ಈ ಶಕ್ತಿಯ ರೂವಾರಿಗಳು ಮೇಲು ವರ್ಗದ ಜನರಾಗಿದ್ದಾರೆ. ಅವರ ನಿರ್ದೇಶನದಂತೆ ಹಿಂದುಳಿದ ವರ್ಗದವರು ಅಲ್ಪಸಂಖ್ಯಾತರ ಮತ್ತು ದಲಿತರನ್ನ ನಿಯಂತ್ರಿಸುತ್ತಿದ್ದಾರೆ. ಇಂತ ಅಸಮಾನತೆಯ ಸಮಾಜಕ್ಕೆ ಜಾತಿ ವ್ಯವಸ್ಥೆಯು ಪ್ರಮುಖ ಕಾರಣವಾಗಿದೆ. ಸ್ವತಂತ್ರ ಬಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡು ಅಸಮಾನತೆಯ ಸಮಾಜವನ್ನು ಕಿತ್ತೊಗೆಯುವ ಸಂಕಲ್ಪದ ಪ್ರಜಾಪ್ರಭುತ್ವ ಇನ್ನು ಉದಯವಾಗಲಿಲ್ಲ. ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ರಾಜಕೀಯ ಸಮಾನತೆಯನ್ನು ಡಾ. ಅಂಬೇಡ್ಕರ್ ಹೇಳುವಂತೆ 'One man, One Vote, One value.' ಎಂಬ ಸಿದ್ಧಾಂತದ ಅನ್ವಯ ಸ್ಥಾಪಿಸಲಾಯಿತು. ಆದರೆ ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಪ್ರಭುತ್ವಗಳು ಇನ್ನೂ ಕನಸಾಗಿ ಉಳಿದಿವೆ. ಪ್ರತಿ ಚುನಾವಣೆಗಳಲ್ಲೂ ಜಾತಿಯ ಜೊತೆಗೆ ಉಪಜಾತಿಗಳು ಬಹಳವಾಗಿ ಕ್ರಿಯಾಶೀಲತೆಯಲ್ಲಿ ತೊಡಗಿಕೊಳ್ಳುತ್ತವೆ. ಜಾತಿ ವ್ಯವಸ್ಥೆ ಮತ್ತು ಶಕ್ತಿ ರಾಜಕಾರಣವನ್ನು ಈ ಕೆಳಗಿನ ೦೬ ಅಂಶಗಳಿಂದ ವಿಶ್ಲೇಷಿಸಲು ಪ್ರಯತ್ನಿಸುತ್ತೇನೆ.

೧. ರಾಜಕೀಯ ಸಮಾಜದಲ್ಲಿ ಜಾತಿ ಕೇಂದ್ರ ಬಿಂದು

೨. ಜಾತಿಯ ಪ್ರಾಬಲ್ಯ ಕ್ಷೀಣಿಸಲು ದೊಡ್ಡ ಪ್ರಮಾಣದಲ್ಲಿ ಶೂದ್ರಾತಿಶೂದ್ರಗಳು ಒಗ್ಗೂಡುವಿಕೆ ರಾಜಕಾರಣ ಉದಯವಾಗಬೇಕು.

೩. ದಲಿತ Phobia

೪. ಜಾಗತೀಕರಣ ಸ್ಥಳೀಯಗೌಡ ಭಯೋತ್ಪಾದಕನಾದರೆ, ವಿದೇಶಗೌಡ ಯುದ್ಧೋತ್ಪಾದಕ ಇವರಿಬ್ಬರನ್ನು ಏಕಕಾಲಕ್ಕೆ ವಿರೋಧಿಸುವ ಇಲ್ಲವೆ ಇವರಿಬ್ಬರಿಂದ ಏಕಕಾಲಕ್ಕೆ ಪಾರಾಗುವ ದಲಿತ ರಾಜಕಾರಣ ಇಂದು ಸಾಧ್ಯವೇ?

೫. ೫೦ ವರ್ಷಗಳಾಗಬೇಕಾಗಿತ್ತು ದೇಶವು ದಲಿತ ರಾಷ್ಟ್ರಪತಿ ಯನ್ನು ಹೊಂದಲು ಮತ್ತು ೬೦ ವರ್ಷಗಳಾಗಬೇಕಾಗಿತ್ತು

ಸರ್ವೋಚ್ಚ ನ್ಯಾಯಾಲಯಕ್ಕೆ ದಲಿತ ಮುಖ್ಯ ನ್ಯಾಯಾಧೀಶರಾಗಲು,

೬. ವಿರಾಟ ಸಮಾವೇಶಕ್ಕೂ ಅಂಬೇಡ್ಕರ್ ಪ್ರವೇಶದ ಸ್ಥಿತಿ ಜಾತಿಯ ರಾಜಕಾರಣದ ರಕ್ಕಸತನವನ್ನು ಪ್ರದೇಶಿಸುತ್ತದೆ.

ಶಕ್ತಿಯ ರಾಜಕಾರಣ ಪ್ರಜಾಪ್ರಭುತ್ವದ ಆಶಯಕ್ಕೆ ಅನುಗುಣವಾಗಿ ಇರಬೇಕು. ಪ್ರಜಾಪ್ರಭುತ್ವವು ಕೇವಲ ಓಟಿನ ರಾಜಕಾರಣವಾಗಿದೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಭಾರತದ ಶಕ್ತಿ ರಾಜಕಾರಣ ಅಳ ವಡಿಸಿಕೊಳ್ಳುವಲ್ಲಿ ವಿಫಲವಾಗಿದೆ. ಇದಕ್ಕೆ ಕಾರಣ Hindu mind and Hindu blood ರಾಷ್ಟ್ರದ ನೇತಾರರು ಪ್ರಜಾಪ್ರಭುತ್ವದ ಹೆಸರಿನಲ್ಲಿ ಶಕ್ತಿಯ ರಾಜಕಾರಣವನ್ನು ಜಾತಿವ್ಯವಸ್ಥೆಗನುಗುಣವಾಗಿ ಮಾಡುತ್ತಾ ಬಂದಿರುತ್ತಾರೆ. ಇದು ಪ್ರತಿ ಹಂತದ ಶಕ್ತ ರಾಜಕಾರಣದ ಮಾದರಿಗಳಲ್ಲಿ ಗೋಚರಿಸುತ್ತದೆ. ರಾಜಕೀಯ ಅಧಿಕಾರಗಳನ್ನ ಹಂಚುವದರಲ್ಲಿ ಜಾತಿಯ ಲೆಕ್ಕಾಚಾರಗಳೇ ಬಹುಗಣನೀಯವಾಗಿರುತ್ತದೆ. ಈ ಮೂಲಕ ಕೋಮುವಾದದ ಪ್ರಜಾಪ್ರಭುತ್ವ ಪಾರ್ಲಿಮೆಂಟ್‌ನಿಂದ ಪಂಚಾಯಿತಿವರೆಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತದೆ. ಇದು ಎಷ್ಟರ ಮಟ್ಟಿಗೆ ಆಕ್ಟೀವ್ ಆಗಿದೆ ಎಂಬುದನ್ನು ವಿಶ್ಲೇಷಿಸಲು ಮೇಲೆ ತಿಳಿಸುವ ಆರು ಅಂಶಗಳನ್ನು ಬಳಸಿಕೊಳ್ಳಲಾಗಿದೆ.

ರಾಜಕೀಯ ಸಮಾಜದಲ್ಲಿ ಜಾತಿ ಕೇಂದ್ರ ಬಿಂದು:

ಪಾರ್ಥ ಚಟರ್ಜಿಯವರ ಮಾತಿನಲ್ಲಿ ಹೇಳುವುದಾದರೆ ಜಾತಿ ರಾಜಕೀಯ ಸಮಾಜದ ಕೇಂದ್ರ ಬಿಂದು. ರಾಜಕೀಯ ಸಮಾಜದಲ್ಲಿ ಜಾತಿಯ ಪ್ರಾಬಲ್ಯವನ್ನ ಎರಡು ಬಗೆಯಾಗಿ ಕಾಣಬಹುದು. ಒಂದು ಜಾತಿ ಜಾತಿಯ ನಡುವಿನ ನೈಜ ಸಂಬಂಧಗಳು ಮತ್ತೊಂದು ಚುನಾವಣಾ ರಾಜಕಾರಣದ ಜಾತೀಯ ರಾಜಕಾರಣ.

petric olivelle ಎಂಬ ಅಮೇರಿಕಾದ ಪ್ರಾಧ್ಯಾಪಕ ಭಾರತದ ಜಾತಿಯ ರಾಜಕಾರಣವನ್ನು ವಿಶ್ಲೇಷಿಸುತ್ತ ಬ್ರಾಹ್ಮಣತ್ವದ ಸಿದ್ಧಾಂತದ ಫಲವಿದು ಎಂಬ ನಿರ್ಧಾರಕ್ಕೆ ಬಂದಿರುತ್ತಾನೆ. ಶಕ್ತಿಯ ರಾಜಕಾರಣ ಈ ದೇಶದಲ್ಲಿ ಮಹಾರಾಜರನ್ನು ಬಿಡಲಿಲ್ಲ. ಸ್ಥಳೀಯ ಬ್ರಾಹ್ಮಣರು ಶಿವಾಜಿಯ poltical coronationಗೆ ವಿರೋಧ ವ್ಯಕ್ತಪಡಿಸಿದಾಗ ಶಿವಾಜಿಯು [illegible]ಸಾರಸಿನ ಬ್ರಾಹ್ಮಣನನ್ನ ಅವಲಂಬಿಸಬೇಕಾಯಿತು. ಚರಿತ್ರೆಯಾದರೆ ದೇಶದ ಪ್ರಧಾನ ಮಂತ್ರಿಯಾಗಲು ಒಬ್ಬ ದಲಿತ ಇನ್ನೂ ಸಾಧ್ಯವಾಗಲಿಲ್ಲ. ಅದರ ಸಮೀಪಕ್ಕೆ ಬಂದ ಬಾಬು ಜಗಜೀವನರಾಂ ಅವರನ್ನು ಬಹುಬೇಗನೆ ಉಪ ಪ್ರಧಾನಮಂತ್ರಿಯ ಸ್ಥಾನದಿಂದ ನಿರ್ಗ ಮಿಸಬೇಕಾಗಿದ್ದು ಮತ್ತೊಂದು ಆಧುನಿಕದ ಜಾತಿಯ ಇತಿಹಾಸವೇ ಆಗಿದೆ.

ಪ್ರತಿಯೊಂದು ಜಾತಿಗಳು ತಮ್ಮ ತಮ್ಮ ಧಾರ್ಮಿಕ ನೆಲೆಗಳಾದ ಮಠ, ಮಂದಿರ, ಮಸೀದಿ, ಚರ್ಚು ಮತ್ತು ಗುರುದ್ವಾರಗಳ ಮೂಲಕ ತಮ್ಮ ತಮ್ಮ ಜಾತಿಗಳನ್ನು ಪ್ರಬಲಗೊಳಿಸುತ್ತಾ ಶಕ್ತಿ ರಾಜಕಾರಣವನ್ನು ಮತ್ತಷ್ಟು ಶಕ್ತಿಗೊಳಿಸುತ್ತ ಸಾಗುತ್ತಿದೆ. ಇವುಗಳಿಗೆ ಬೆಂಬಲವಾಗಿ ಜಾತ್ಯಾತೀತ ರಾಷ್ಟ್ರದಲ್ಲಿ ಜಾತ್ಯಾತೀತ ಪಕ್ಷಗಳು ಮತ್ತು ಕೋಮುವಾದ ಪಕ್ಷಗಳು ನೇರವಾಗಿ ಅಥವಾ ಪರೋಕ್ಷವಾಗಿ ಸಹಕರಿಸುತ್ತಿವೆ. ರಾಜಕೀಯ ಪಕ್ಷಗಳು, ಧಾರ್ಮಿಕ ಸಂಸ್ಥೆಗಳನ್ನು, ಧಾರ್ಮಿಕ ಸಂಸ್ಥೆಗಳು ರಾಜಕೀಯ ಪಕ್ಷಗಳನ್ನ ಅವಲಂಬಿಸಿಕೊಂಡಿರುವುದೆ ಶಕ್ತಿ ರಾಜಕಾರಣದ ಚಿಹ್ನೆಯಾಗಿದೆ. ರಾಜಕೀಯ ಪಕ್ಷಗಳು ಅಧಿಕಾರ ಹಿಡಿಯುವುದೆ ಪರಮ ಗುರಿಯಾಗಿರುವುದರಿಂದ ಧಾರ್ಮಿಕ ಪರಮ ಪೂಜ್ಯರುಗಳನ್ನು ಅವಲಂಬಿಸ ಬೇಕಾಗಿರುತ್ತದೆ. ಪರಮ ಪೂಜ್ಯರು ತಮ್ಮ ಪ್ರಭಾವಗಳನ್ನು ಹೆಚ್ಚಿಸಿಕೊಳ್ಳಲಿಕ್ಕೆ ಹಾಗೂ ತಮ್ಮ ತಮ್ಮ ಜಾತಿಗಳನ್ನು ಹಿಡಿತದಲ್ಲಿ ಇಟ್ಟುಕೊಂಡು ಸಂರಕ್ಷಿಸುವುದಕ್ಕೆ ರಾಜಕಾರಣಗಳನ್ನು ಅವಲಂಬಿಸಿರುತ್ತಾರೆ. ಆದುದರಿಂದಲೇ ಶಕ್ತಿ ರಾಜಕಾರಣ ಜಾತಿ ವ್ಯವಸ್ಥೆಯನ್ನ ಮೀರಿ ಜಾತಿರಹಿತ ವ್ಯವಸ್ಥೆಯನ್ನು ಹುಟ್ಟುಹಾಕಲು ಸಾಧ್ಯವಾಗುತ್ತಿಲ್ಲ. ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವದರಿಂದ

ಇಡೀ ಜಗತ್ತಿಗೆ ಜಾತಿ ವ್ಯವಸ್ಥೆ ಭಾರತದ ಒಂದು ಬಲಿಷ್ಠ ಶಕ್ತಿ ಎಂಬುದನ್ನ ತೋರಿಸಿಕೊಡುತ್ತದೆ. ಈ ಶಕ್ತಿಯ ರೂವಾರಿಗಳು ಮೇಲು ವರ್ಗದ ಜನರಾಗಿದ್ದಾರೆ. ಅವರ ನಿರ್ದೇಶನದಂತೆ ಹಿಂದುಳಿದ ವರ್ಗದವರು ಅಲ್ಪ ಸಂಖ್ಯಾತರ ಮತ್ತು ದಲಿತರನ್ನ ನಿಯಂತ್ರಿಸುತ್ತಿದ್ದಾರೆ. ಸಮಾಜಕ್ಕೆ ಜಾತಿ ವ್ಯವಸ್ಥೆಯು ಪ್ರಮುಖಕಾರಣವಾಗಿದೆ. ಸ್ವತಂತ್ರ ಬಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡು ಅಸಮಾನತೆಯ ಸಮಾಜವನ್ನು ಕಿತ್ತೊಗೆಯುವ ಪ್ರಜಾಪ್ರಭುತ್ವ ಇನ್ನು ಉದಯವಾಗಲಿಲ್ಲ. ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ರಾಜಕೀಯ ಸಮಾನತೆಯನ್ನು 'One man, One Vote, One value' **ಎಂಬ ಸಿದ್ಧಾಂತದ ಅನ್ವಯ ಸ್ಥಾಪಿಸಲಾಯಿತು. ಆದರೆ ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಪ್ರಭುತ್ವಗಳು ಇನ್ನೂ ಕನಸಾಗಿ ಉಳಿದಿವೆ.**

ಹಿಡಿದು ಸರ್ಕಾರ ಸ್ಥಾಪನೆಯಾಗುವವರೆಗೂ ಜಾತಿ ಕೆಲಸ ಮಾಡುತ್ತಿರುತ್ತದೆ. ಸರ್ಕಾರ ರಚನೆಯಾದ ನಂತರ ಅದರ ಲಾಭವನ್ನು ಆಡಳಿತದ ಹೆಸರಿನಲ್ಲಿ ಹಂಚಿಕೊಳ್ಳಲು ಮತ್ತೆ ಜಾತಿ ಚಟುವಟಿಕೆಯಿಂದ ಇರುತ್ತದೆ. ಇಂದು ಈ ರಾಜಕೀಯದ ಆಟ ಹಾಗೆಯೇ ಮುಂದುವರೆಯುತ್ತ ಸಾಗಿದೆ. ಅದು ಎಷ್ಟರ ಮಟ್ಟಿಗೆ ಗೋಚರವಾಗುತ್ತದೆ ಎಂಬುದನ್ನು ಸಂಸತ್ತಿನ ಅಥವಾ ರಾಜ್ಯಗಳ ವಿಧಾನ ಸಭೆಯ ಕಲಾಪಗಳಲ್ಲಿ ನೋಡ ಬಹುದಾಗಿದೆ.

ಇತ್ತೀಚೆಗೆ ಸಂಸತ್ತಿನಲ್ಲಿ ಡಿ.ಎಂ.ಕೆ. ಸದಸ್ಯರು ಚೆನ್ನೈನಲ್ಲಿ ocean university ಸ್ಥಾಪನೆಗಾಗಿ ನಿರ್ಣಯವನ್ನು ಮಂಡಿಸಿದಾಗ ವಿರೋಧ ಪಕ್ಷಗಳು ತಕರಾರು ಎತ್ತಿದವು. ಒಂದು ವೇಳೆ ಸಂಸ್ಕೃತ ವಿಶ್ವವಿದ್ಯಾಲಯ, ಆಯುರ್ವೇದಿಕ ವಿಶ್ವವಿದ್ಯಾಲಯ ಅಥವಾ ಗೋಶಾಲೆಗಳು ಸ್ಥಾಪಿಸಿದರೆ ವಿರೋಧ ಪಕ್ಷಗಳು ಸಹಮತ ವ್ಯಕ್ತಪಡಿಸುತ್ತಿದ್ದವು. ಆದುದರಿಂದಲೇ ಎಂ.ಎನ್. ಶ್ರೀನಿವಾಸ್ ಅವರು ಜಾತಿ ಪ್ರಜಾಪ್ರಭುತ್ವ ಭಾರತದಲ್ಲಿ ಹೆಚ್ಚು ಅಸ್ತಿತ್ವದಲ್ಲಿರುತ್ತದೆ ಎಂದು ಅಭಿಪ್ರಾಯಿಸುತ್ತಾರೆ. ಜಾತಿ ಕಮ್ಯುನಿಷ್ಟರನ್ನು ಕೂಡ ಬಿಡಲಿಲ್ಲ. ದೀಲಿಪ್ ಎಮ್. ಮೇನನ್ ಅವರು ತಮ್ಮ essays on caste ಎಂಬುದರಲ್ಲಿ ಇದನ್ನು ದೃಢಪಡಿಸಿರುತ್ತಾರೆ.

ಇಂದು ದಲಿತರು, ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರುಗಳು ಸಾಕಷ್ಟು ಸಂಖ್ಯೆಯಲ್ಲಿ ಒಂದಾಗಿ ಮೇಲ್ಜಾತಿಯ ಕೈಯಲ್ಲಿರುವ ಅಧಿಕಾರವನ್ನು ಪಡೆಯುವ ಕಾರ್ಯಕ್ಕೆ ಚಾಲನೆಯನ್ನು ನೀಡಿರುತ್ತಾರೆ. ಈ ಮೂಲಕ ಒಂದು ಹೊಸ ರಾಜಕೀಯ ಅಧ್ಯಾಯವನ್ನು ಪ್ರಾರಂಭಿಸುವ ಕಾಲ ಇಂದಿನ ತುರ್ತಾಗಿದೆ. ಆದರೆ ಇದು ಅಷ್ಟು ಸುಲಭವಾಗಿ ಸ್ಥಾಪನೆಯಾಗುವ ರಾಜಕೀಯ ವ್ಯವಸ್ಥೆಯಲ್ಲ. ಏಕೆಂದರೆ ರಾಜ್ಯದಿಂದ ರಾಜ್ಯಕ್ಕೆ ಜಾತಿಯ ಮಾದರಿಗಳು ಬಿನ್ನವಾಗಿರುತ್ತದೆ. ಉತ್ತರ ಪ್ರದೇಶದ ಜಾತಿಯ ಲೆಕ್ಕಾಚಾರಗಳು ಕರ್ನಾಟಕದಲ್ಲಿ ಯತಾವತ್ತಾಗಿ ಜಾರಿಗೊಳಿಸಲು ಸಾಧ್ಯವಿರುವುದಿಲ್ಲ. ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ತಮ್ಮ ಮತ ಬ್ಯಾಂಕುಗಳನ್ನು ಬಹುಮಟ್ಟಿಗೆ ಜಾತಿಯ ಆಧಾರದ ಮೇಲೆ ಹೊಂದಿರುತ್ತವೆ. ಜಾತಿಯ ಆಧಾರಿತ ರಾಜಕೀಯ ಪಕ್ಷಗಳು ಹೆಚ್ಚಾಗುತ್ತಿರುವ ಕಾಲದಲ್ಲಿ ಭಾರತ ರಾಜಕಾರಣ ಜಾತಿಯ ರಾಜಕಾರಣವಾಗಿರುತ್ತದೆ. ಕೆಲವರು ಇದನ್ನು ಅಲ್ಲಗಳೆಯುತ್ತಾರೆ. ಆದರೆ ವಾಸ್ತವವಾಗಿ ಜಾತಿಯೇ ಪ್ರಧಾನವಾಗಿ ಕೆಲಸ ಮಾಡುತ್ತಿರುತ್ತದೆ. ಅದಕ್ಕಾಗಿ ಜಾತಿ ಭಾರತದ ರಾಜಕೀಯ ಸಮಾಜದ ಕೇಂದ್ರ ಬಿಂದುವಾಗಿರುತ್ತದೆ.

ಜಾತಿಯ ಪ್ರಾಬಲ್ಯ ಕ್ಷೀಣಿಸಬೇಕಾಗಿರುವುದು ಪ್ರಜಾಪ್ರಭುತ್ವದ ಶ್ರೇಯಸ್ಸಿಗೆ ಅಗತ್ಯವಾಗಿದೆ. ಆದರೆ ಇದನ್ನು ಹೇಗೆ ಸಾಧಿಸಬಹುದೆಂಬ ಪ್ರಶ್ನೆ ಬಹುಮುಖ್ಯವಾಗಿದೆ. ಭಾರತವು ೧೪ ಮಹಾ ಚುನಾವಣೆಗಳನ್ನು ಕಂಡಿದೆ. ಪ್ರತಿ ಚುನಾವಣೆಯಲ್ಲಿಯೂ ಹೊಸ ಹೊಸ ಪ್ರಯೋಗಗಳನ್ನು ರಾಷ್ಟ್ರದಲ್ಲಿ ನಡೆಸಲಾಗಿದೆ. ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ತಮ್ಮ ಪ್ರಣಾಳಿಕೆಯಲ್ಲಿ ಅಭಿವೃದ್ಧಿಯ ಪಾಠಗಳನ್ನು ಮತದಾರರಿಗೆ ಚುನಾವಣೆ ಸಮಯದಲ್ಲಿ ತಿಳಿಸುತ್ತವೆ. ಅಭಿವೃದ್ಧಿಯ ಹಿಂದೆ ಇರುವ ಮತ ಸೆಳೆಯುವ ತಂತ್ರ ಗಳು ಸಾಮಾನ್ಯ ಮತದಾರರಿಗೆ ಗೊತ್ತಿರುವುದಿಲ್ಲ. ಬಂಡವಾಳಶಾಹಿಗಳು ರಾಜಕೀಯ ಪಕ್ಷಗಳ ಮೇಲ ಹಿಡಿತೆ ಹಿಡಿತ ಸಾಧಿಸುವ ಅಭಿವೃದ್ಧಿಯ ಪ್ರಣಾಳಿಕೆ ಜಾತಿಯನ್ನ ಬಲಿಷ್ಠಗೊಳಿಸುತ್ತ ಸಾಗುತ್ತಿದೆ. ಇಂತಹ ಪರಿಪಾಠಗಳು ಪ್ರತಿ budgetಗಳಿಂದ ಸಾಬೀತಾಗಿದೆ. ರಾಷ್ಟ್ರಕ್ಕೆ ಇದರಿಂದ ಮುಕ್ತಿ ಸಿಗಬೇಕಾದರೆ ಜಾತಿರಹಿತ ರಾಜಕೀಯ ಸಮಾಜ ಸೃಷ್ಠಿಯಾಗಬೇಕಾಗಿದೆ. ಹೀಗೆ ಸೃಷ್ಠಿಯಾಗಬೇಕೆಂದರೆ ದಲಿತರು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರುಗಳು ಅಧಿಕಾರದ ವ್ಯವಸ್ಥೆಯಲ್ಲಿ ಹೆಚ್ಚು ಪಾಲುಗಳನ್ನು ಹೊಂದಿರಬೇಕಾಗಿರುತ್ತದೆ. ಇದನ್ನೇ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಪ್ರತಿಪಾದಿಸಿದ್ದು, ಗಾಂಧಿ ಕೂಡ ಅಂತ್ಯಜರಿಗೆ ಅಧಿಕಾರ ದೊರೆಯಬೇಕು ಎಂಬುದನ್ನು ಅಂಬೇಡ್ಕರ್ ಅವರ ಮೂಲಕ ಮನಗೊಂಡು ಅದನ್ನೇ ಪ್ರತಿಪಾದಿಸಿದರು.

ಈ ಮಾದರಿಯ ದಲಿತೇತರರಿಗೆ ಸಾಧ್ಯವಾಗಿಸಲು ಜಾತಿ ಮನಸ್ಸುಗಳಿಂದ ಬಹುದೊಡ್ಡ ತೊಡಕನ್ನು ಎದುರಿಸಬೇಕಿದೆ. ಶತಶತಮಾನದಿಂದ ಶಕ್ತಿ ರಾಜಕಾರಣದಲ್ಲಿ ಮುಂದಿರುವ ದಲಿತೇತರರು(ಮೇಲ್ವರ್ಗದವರು) ಸುಲಭವಾಗಿ ಅಧಿಕಾರದಿಂದ ವಂಚಿತರಾಗುವದಿಲ್ಲ ಹಾಗೂ ಅಧಿಕಾರವನ್ನು ಸರಿಯಾದ ರೀತಿಯಲ್ಲಿ ಹಂಚಿಕೆ ಮಾಡಿ ಅನುಭವಿಸುವ ಮನಸುಗಳು ಇರುವದಿಲ್ಲ. ಆದುದರಿಂದ ಅಹಿಂದ ಹೆಚ್ಚು ಅರ್ಥಪೂರ್ಣವಾಗಿ ತನ್ನ ಸಾಮಾಜಿಕ ನೆಲೆಯನ್ನು ವಿಸ್ತರಿಸಿ, ರಾಜಕೀಯ ಸಮಾಜವನ್ನು ಶಕ್ತಿ ರಾಜಕಾರಣಕ್ಕಾಗಿ ಸೃಷ್ಠಿಸಬೇಕಾಗಿರುತ್ತದೆ. ಇದಕ್ಕೆ ತಡೆಯೊಡ್ಡುವ ಶಕ್ತಿಗಳನ್ನು ಮೀರುವ ರಾಜಕೀಯ ಸಮಾಜ ಸೃಷ್ಠಿಯಾದಾಗ ಮಾತ್ರವೇ ಇದು ಸಾಧ್ಯವಾಗುತ್ತದೆ. ಒಂದಂತು ಸತ್ಯ ಇಂತಹ ಶಕ್ತಿ ರಾಜಕಾರಣ ಇಂದು ಉದ್ಘಾಟನೆಗೊಂಡಿದೆ.

ಇಂತಹ ಪ್ರಯತ್ನಗಳ ಜವಾಬ್ದಾರಿ ಹೊತ್ತಿರುವ ನೇತಾರರು ಅಧಿಕಾರ ತ್ಯಾಗಕ್ಕೂ ಸಿದ್ದರಿದ್ದು, ಶೋಷಿತ ಸಮುದಾಯಗಳ ಮತಬ್ಯಾಂಕ್ ಅನ್ನು ಸರಿಯಾಗಿ ಬಳಸಿಕೊಳ್ಳುವ ವಾತಾವರಣವನ್ನು ಸೃಷ್ಠಿ ಮಾಡಬೇಕು. ಇಂತಹ ವಾತಾವರಣದ ಮೂಲಕ ಸಾಮಾಜಿಕ ನ್ಯಾಯದ ಅಧಿಕಾರ ಹಂಚಿಕೆಯಾಗುತ್ತದೆ. ಇಂತಹ ಪ್ರಯತ್ನಗಳ ಮುರಿಯಲು ಜಾತಿ ಆಧಾರಿತ ಸಮಾಜವು ಅಷ್ಟೇ ಬಲಿಷ್ಠವಾಗಿ ಕೌಶಲ್ಯಗಳನ್ನು ಬಳಸುತ್ತದೆ. ಮೀಸಲಾತಿ ಸದುಪಯೋಗವಾಗಿಲ್ಲ ಎಂಬ ಕಾರಣಕ್ಕಾಗಿ ಒಳ ಮೀಸಲಾತಿಯಿಂದ ಜಾತಿಗಳ ಒಗ್ಗಟ್ಟುಗಳನ್ನು ಮುರಿದು ಪ್ರಬಲ ಜಾತಿಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನಗಳು ನಮ್ಮ ಕಣ್ಣು ಮುಂದೆ ನಡೆಯುತ್ತಿವೆ. ಪ್ರಜಾಪ್ರಭುತ್ವದ ಆಚರಣೆಯು ಜಾತಿಯನ್ನು ಹೊರತು ಪಡಿಸಿದಾಗ ಮಾತ್ರ ಪ್ರಜಾಪ್ರಭುತ್ವ ಬಲಿಷ್ಠವಾಗುತ್ತದೆ. ಆದರೆ, ಅಂತಹ ಸಮಾಜವನ್ನು ನಿರ್ಮಾಣ ಮಾಡುವದು ಇನ್ನೂ ಕಷ್ಟಸಾಧ್ಯವಾಗಿದೆ. ಪ್ರತಿಯೊಂದು ರಾಜಕೀಯ ಪಕ್ಷಗಳು ತಮ್ಮ ತಮ್ಮ ಆಡಳಿತದ ಅವಧಿಯಲ್ಲಿ ಆಯೋಗಗಳನ್ನು, ಮಸೂದೆಗಳನ್ನು ಮತ್ತು ಆದೇಶಗಳನ್ನು ಮತ ಬ್ಯಾಂಕಿಗಾಗಿಯೇ ಸೃಷ್ಠಿಸುತ್ತಿರುವುದು ಶೋಚನೀಯ ವಿಷಯವಾಗಿದೆ. ಇಂತಹ ಬೆಳವಣಿಗೆಗಳು ಜಾತಿಗಳನ್ನು ಬಲಿಷ್ಠಗೊಳಿಸುವುದರ ಜೊತೆಗೆ ಉಪ ಜಾತಿಗಳ ಪ್ರಾಮುಖ್ಯತೆಯನ್ನು ಹೆಚ್ಚಿಸುತ್ತವೆ. ಹಿಂದುಳಿದ ವರ್ಗಗಳ ಆಯೋಗಗಳ ರೂಪುರೇಷೆಗಳನ್ನು ಕೆದುಕಿದಾಗ ರಾಷ್ಟ್ರಮಟ್ಟದಿಂದ ರಾಜ್ಯ ಮಟ್ಟದವರೆಗೆ ಜಾತಿ ರಾಜಕಾರಣ ಹೇಗೆ ಸಾಗಿದೆ ಎಂಬುದು ಅರ್ಥವಾಗುತ್ತದೆ. ಸರ್ಕಾರಗಳು ಸಂವಿಧಾನವನ್ನು ಬಳಸಿಕೊಂಡು ಅಸಮಾನತೆಯ ಸಮಾಜದ ನಿರ್ಮೂಲನೆಗಾಗಿ ರಕ್ಷಿತ ತಾರತಮ್ಯಗಳನ್ನು ತರುವ ಮೂಲಕ ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವುದಾಗಿ ಹೇಳಿ ಜಾತಿಗಳ ಮತ ಬ್ಯಾಂಕುಗಳ ನೆಲೆಯನ್ನು ಗಟ್ಟಿಗೊಳಿಸುತ್ತವೆ.

ರಾಜಕೀಯ ಪಕ್ಷಗಳು ತಾತ್ವಿಕತೆಯ ನೆಲೆಗಟ್ಟುಗಳನ್ನು ಸಡಿಲಗೊಳಿಸಿಕೊಂಡು ಜಾತಿಯ ಭೂತವನ್ನು ಮೆರೆಸುವ ಎಲ್ಲಾ ತಂತ್ರಗಾರಿಕೆಗಳನ್ನು ರೂಢಿಸಿ ಅಳವಡಿಸಿಕೊಂಡು ವಂಚನೆಯನ್ನು ಎಸಗುತ್ತಿವೆ. ಈ ರಾಷ್ಟ್ರದಲ್ಲಿ

ಜಾತಿಯ ಪ್ರಾಬಲ್ಯ ಕ್ಷಿಣಿಸಬೇಕಾಗಿರುವುದು ಪ್ರಜಾಪ್ರಭುತ್ವದ ಶ್ರೇಯಸ್ಸಿಗೆ ಅಗತ್ಯವಾಗಿದೆ. ಆದರೆ ಇದನ್ನು ಹೇಗೆ ಸಾಧಿಸಬಹುದೆಂಬ ಪ್ರಶ್ನೆ ಬಹುಮುಖ್ಯವಾಗಿದೆ. ಭಾರತವು ೧೪ ಮಹಾ ಚುನಾವಣೆಗಳನ್ನು ಕಂಡಿದೆ. ಪ್ರತಿ ಚುನಾವಣೆಯಲ್ಲಿಯೂ ಹೊಸ ಹೊಸ ಪ್ರಯೋಗಗಳನ್ನು ರಾಷ್ಟ್ರದಲ್ಲಿ ನಡೆಸಲಾಗಿದೆ. ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ತಮ್ಮ ಪ್ರಣಾಳಿಕೆಯಲ್ಲಿ ಅಭಿವೃದ್ಧಿಯ ಪಾಠಗಳನ್ನು ಮತದಾರರಿಗೆ ತಿಳಿಸುತ್ತವೆ. ಅಭಿವೃದ್ಧಿಯ ಹಿಂದೆ ಇರುವ ತಂತ್ರಗಳು ಸಾಮಾನ್ಯ ಮತದಾರರಿಗೆ ಗೊತ್ತಿರುವುದಿಲ್ಲ. ಬಂಡವಾಳಶಾಹಿಗಳು ರಾಜಕೀಯ ಪಕ್ಷಗಳ ಮೇಲೆ ಹಿಡಿತ ಸಾಧಿಸುವ ಅಭಿವೃದ್ಧಿಯ ಪ್ರಣಾಳಿಕೆ ಜಾತಿಯನ್ನ ಬಲಿಷ್ಠಗೊಳಿಸುತ್ತ ಸಾಗುತ್ತಿದೆ. ಇಂತಹ ಪರಿಪಾಠಗಳು ಪ್ರತಿ budgetಗಳಿಂದ ಸಾಭೀತಾಗಿದೆ. ರಾಷ್ಟ್ರಕ್ಕೆ ಇದರಿಂದ ಮುಕ್ತಿ ಸಿಗಬೇಕಾದರೆ ಜಾತಿರಹಿತ ರಾಜಕೀಯ ಸಮಾಜ ಸೃಷ್ಠಿಯಾಗಬೇಕಾಗಿದೆ.



ಜಾತೀಯತೆ ವಿರುದ್ಧ ಸಿಡಿದೆದ್ದ ಅಂಬೇಡ್ಕರ್

ಇಂದು ಯಾವುದೇ ರಾಜಕೀಯ ಪಕ್ಷಗಳು ಜಾತಿಯನ್ನು ಬದಿಗಿಟ್ಟು ರಾಜಕಾರಣ ಮಾಡುವ ಸ್ಥಿತಿಯಲ್ಲಿ ಇಲ್ಲ. ಅಂತಹ ಶಕ್ತಿಯನ್ನು ಕೂಡ ಇವುಗಳು ಬೆಳೆಸಿಕೊಂಡಿಲ್ಲ. ಇದೇ ಈ ರಾಷ್ಟ್ರದ ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ. ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವಾಗ, ವಿಶೇಷ ಸೌಲಭ್ಯಗಳನ್ನು ನೀಡುವಾಗ ಅಥವಾ ರಕ್ಷಣೆಯನ್ನು ಕೊಡುವ ನೆಪದಲ್ಲಿ ಜಾತಿ ಹೆಚ್ಚು ಕೆಲಸ ಮಾಡುತ್ತದೆ. ಸದನವೂ ಜಾತಿ ಹಿಡಿತದಿಂದ ಹೊರತಾಗಿಲ್ಲ. ಇದನ್ನೆಲ್ಲಾ ಮನಗಂಡ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾರತೀಯರಿಗೆ ಸ್ವತಂತ್ರವೆಂಬುದು ತಮ್ಮನ್ನು ತಾವೇ ಆಳಿಕೊಳ್ಳುವದು ಮಾತ್ರವಲ್ಲ, ಆಂತರೀಕವಾಗಿ ತಾಂಡವಾಡುವ ಅನಿಷ್ಟಗಳಿಂದ ತಮ್ಮನ್ನು ಬಿಡುಗಡೆ ಪಡೆಯುವದು ಎಂದಿದ್ದಾರೆ. ಆಗ ಮಾತ್ರ ಭಾರತದ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ ಎಂಬುದನ್ನು ಬಲವಾಗಿ ನಂಬಿದಂತವರು. ಇಂದು ಸಿದ್ಧಾಂತವಿಲ್ಲದ ರಾಜಕಾರಣ, ಮೌಲ್ಯವಿಲ್ಲದ ರಾಜಕಾರಣ, ಸೇವೆ ನಿಷ್ಠೆ ಇಲ್ಲದ ರಾಜಕಾರಣ, ತೋಳ್ಬಲದ ರಾಜಕಾರಣ, ಹಣದ ರಾಜಕಾರಣ ಭಾರತದ ರಾಜಕಾರಣವಾಗಿರುತ್ತದೆ. ಇಂತಹ ಪರಿಸ್ಥಿತಿಯಿಂದ ಶೋಷಿತ ಜಾತಿಗಳು ನಿಸ್ಸಹಾಯಕವಾಗಿ ನಿಂತು ದುರ್ಬಲಗೊಳ್ಳುವ ಅಪಾಯದ ಸೂಚನೆಗಳು ಹೆಚ್ಚಿರುತ್ತವೆ. ಇದನ್ನೆಲ್ಲಾ ಸರಿಪಡಿಸುವ ಭಾರತೀಯರ ಸಮಾಜವು ನಿರ್ಮಾಣವಾಗಬೇಕಾಗುತ್ತದೆ. ಇದನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ಹೊರಬಲ್ಲ ಸಂಸ್ಥೆಗಳು ಮತ್ತು ನಾಗರೀಕರು ಹುಟ್ಟಬೇಕಾಗಿದೆ.

ಜಾತಿ ಆಧಾರಿತ ಸಮಾಜದಲ್ಲಿ ರಾಜಕೀಯದ ಅಧಿಕಾರ ಎಲ್ಲಾ ಜಾತಿಗಳಿಗೂ ಹಂಚಿಕೆಯಾಗಬೇಕು. ಇದು ಎಲ್ಲಿಯವರೆಗೆ ಜಾತಿ ಇರುತ್ತದೆಯೋ ಅಲ್ಲಿಯವರೆಗೆ ಹಂಚಿಕೆಯ ಪ್ರಮಾಣ ಜನಸಂಖ್ಯೆಗೆ ಅನುಗುಣವಾಗಿ ನಡೆಯುತ್ತಿರಬೇಕು. ನಾನು ಜಾತಿರಹಿತ ಸಮಾಜದ ಪ್ರಜಾಪ್ರಭುತ್ವವನ್ನು ಬಯಸುವವನು. ಆದರೆ, ಐವತ್ತೇಳು ವರ್ಷಗಳಾದರೂ ಜಾತಿರಹಿತ ಸಮಾಜದ ನಿರ್ಮಾಣಗೊಂಡಿಲ್ಲ. ಪ್ರಬಲ ಜಾತಿಗಳ ಹಿಡಿತದಿಂದ ಶೋಷಿತ ಸಮುದಾಯಗಳು ಹೊರಬಂದು ಸ್ವತಂತ್ರವಾಗಿ ಘರ್ಜಿಸುವ ಶಕ್ತಿ ನಿರ್ಮಾಣವಾಗಿದೆ. ಈ ಶಕ್ತಿಯೇ ಶೂದ್ರಾತಿಶೂದ್ರರನ್ನು ಒಗ್ಗೂಡಿಸಿಕೊಳ್ಳುವುದಲ್ಲದೇ ಮೇಲ್ವರ್ಗದ ಜಾತಿಗಳನ್ನು ತನ್ನತ್ತ ಸೆಳೆಯುವ ಲಕ್ಷಣಗಳನ್ನು ಇದು ಹೊಂದಿದೆ. ಉತ್ತರ ಪ್ರದೇಶದಲ್ಲಿ ಬಹುಜನ ಸಮಾಜಪಕ್ಷವು ೧೯೯೫, ೯೭ ಮತ್ತು ೨೦೦೭ರಲ್ಲಿ ಸರ್ಕಾರವನ್ನು ಸ್ಥಾಪಿಸುವ ಮೂಲಕ ಹೊಸ ಯುಗವನ್ನು ಪ್ರಾರಂಭಿಸಿತು. ಇದು ಕೂಡ ಬಹುದೂರ ಸಾಗಲಿಲ್ಲ. ಆದರೆ ೨೦೦೭ರ ಚುನಾವಣೆಯಲ್ಲಿ ಇದನ್ನು ರಾಷ್ಟ್ರದ ಏಕೈಕ ದಲಿತ ನಾಯಕಿ ಕುಮಾರಿ ಮಾಯಾವತಿ ಅವರು ರಾಷ್ಟ್ರದ ಅತಿ ದೊಡ್ಡ ರಾಜಕೀಯ ಸ್ಥಳವಾದ ರಾಜ್ಯದಲ್ಲಿ ಸಾಧಿಸಿದ್ದಾರೆ. ಈ ಸಾಧನೆ ಇಡೀ ರಾಷ್ಟ್ರಕ್ಕೆ ಶೂದ್ರಾತಿ ಶೂದ್ರರು ಹಾಗೂ ಮೇಲ್ವರ್ಗದ ಜಾತಿಗಳು ರಾಜಕೀಯ ಅಧಿಕಾರವನ್ನು ಹಂಚಿಕೊಂಡು ಭಾರತದ ಪ್ರಜಾಪ್ರಭುತ್ವವನ್ನು ಮುನ್ನಡೆಸುವ ಅನಿವಾರ್ಯತೆಯನ್ನು ಸಾರಿದೆ. ಇದರಿಂದ ಜಾತಿಗಳು ರಾಜಕಾರಣದಲ್ಲಿ ಬೇರೂರಿದರೂ ಜಾತ್ಯಾತೀತ ಮನೋಭಾವನೆಯ ಲಕ್ಷಣಗಳು ಹೊರಹೊಮ್ಮಿದಾಗ ಮಾತ್ರವೇ ಕೋಮುವಾದದ ಪ್ರಜಾಪ್ರಭುತ್ವದ ಜಾಗದಲ್ಲಿ ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಸ್ಥಾಪಿಸಬಹುದಾಗಿದೆ. ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿಯೂ ಇಂತಹ ಪ್ರಯೋಗ

ಉತ್ತರ ಪ್ರದೇಶದ ಮುಖ್ಯಮಂತ್ರಿ ಮಾಯಾವತಿ

ಗಳು ನಡೆದು ಭಾರತದ ಪ್ರಜಾಪ್ರಭುತ್ವಕ್ಕೆ ಒಂದು ಹೊಸ ಆಶಯವನ್ನು ನೀಡಿ ಬಲಿಷ್ಠಗೊಳ್ಳುತ್ತಿರುವ ಭಾರತವನ್ನು ಅಂತಾರಾಷ್ಟ್ರದ ಮಟ್ಟದಲ್ಲಿ ಈಗಾಗಲೇ ಶಕ್ತಿ ರಾಜಕಾರಣದಲ್ಲಿ ಪೈಪೋಟಿಯನ್ನು ನಡೆಸಿರುವ ಭಾರತ ಮತ್ತಷ್ಟು ಮೈಲುಗಲ್ಲನ್ನು ಸಾಧಿಸುವ ಎಲ್ಲಾ ಅವಕಾಶಗಳು ಸಂವೃದ್ಧಿ ಭಾರತದಲ್ಲಿ ನಿರ್ಮಾಣವಾಗಬೇಕಾಗಿದೆ.

ಜಾತಿ ಆಧಾರಿತ ಸಮಾಜದಲ್ಲಿ ರಾಜಕೀಯದ ಅಧಿಕಾರ ಎಲ್ಲಾ ಜಾತಿಗಳಿಗೂ ಹಂಚಿಕೆಯಾಗಬೇಕು. ಇದು ಎಲ್ಲಿಯವರೆಗೆ ಜಾತಿ ಇರುತ್ತದೆಯೋ ಅಲ್ಲಿಯವರೆಗೆ ಹಂಚಿಕೆಯ ಪ್ರಮಾಣ ಜನ ಸಂಖ್ಯೆಗೆ ಅನುಗುಣವಾಗಿ ನಡೆಯುತ್ತಿರಬೇಕು. ಐವತ್ತೇಳು ವರ್ಷಗಳಾದರೂ ಜಾತಿರಹಿತ ಸಮಾಜದ ನಿರ್ಮಾಣಗೊಂಡಿಲ್ಲ. ಪ್ರಬಲರ ಹಿಡಿತದಿಂದ ಶೋಷಿತ ಸಮುದಾಯಗಳು ಹೊರ ಬಂದು ಸ್ವತಂತ್ರವಾಗಿ ಘರ್ಜಿಸುವ ಶಕ್ತಿ ನಿರ್ಮಾಣವಾಗಿದೆ. ಉತ್ತರ ಪ್ರದೇಶದಲ್ಲಿ ಬಹುಜನ ಸಮಾಜ ಪಕ್ಷವು ೧೯೯೫, ೯೭ ಮತ್ತು ೨೦೦೭ರಲ್ಲಿ ಸರ್ಕಾರವನ್ನು ಸ್ಥಾಪಿಸುವ ಮೂಲಕ ಹೊಸ ಯುಗವನ್ನು ಪ್ರಾರಂಭಿಸಿತು. ಇದನ್ನು ರಾಷ್ಟ್ರದ ಏಕೈಕ ದಲಿತ ನಾಯಕಿ ಕುಮಾರಿ ಮಾಯಾವತಿ ಅವರು ರಾಷ್ಟ್ರದ ಅತಿದೊಡ್ಡ ರಾಜಕೀಯ ಸ್ಥಳವಾದ ರಾಜ್ಯದಲ್ಲಿ ಸಾಧಿಸಿದ್ದಾರೆ. ಈ ಸಾಧನೆ ಇಡೀ ರಾಷ್ಟ್ರಕ್ಕೆ ಶೂದ್ರಾತಿ ಶೂದ್ರರು ಹಾಗೂ ಮೇಲ್ವರ್ಗದವರು ರಾಜಕೀಯ ಅಧಿಕಾರವನ್ನು ಹಂಚಿಕೊಂಡು ಭಾರತದ ಪ್ರಜಾಪ್ರಭುತ್ವವನ್ನು ಮುನ್ನಡೆಸುವ ಅನಿವಾರ್ಯತೆಯನ್ನು ಸಾರಿದೆ.

ದಲಿತ phobia ಭಾರತದ ಪ್ರಜಾಪ್ರಭುತ್ವವನ್ನು ಸರಿಪಡಿಸುವ ಶಕ್ತಿಯನ್ನು ಹೊಂದುತ್ತಿರುವದು ಆಶಾದಾಯಕ ಬೆಳವಣಿಗೆಯಾಗಿದೆ. ಇಂದು ದಲಿತರನ್ನು ಕಡೆಗಣಿಸುವ ಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆಯಾಗಿದೆ. ಅದರ ಅರ್ಥ ದಲಿತರ ಮೇಲಿನ ದೌರ್ಜನ್ಯಗಳು ಇಲ್ಲವೆಂದಲ್ಲ. ದಲಿತರ ಮೇಲಿನ ದೌರ್ಜನ್ಯಗಳು ನಡೆಯುತ್ತಿದ್ದರೂ ದಲಿತರ ಶಕ್ತಿಯನ್ನು ಕಡೆಗಣಿಸುವಂತಿಲ್ಲ. ದಲಿತರೆಂದರೆ ಅಸೂಯೆ ಪಡುವ ಸಮಾಜ ಅವರನ್ನು ಎಲ್ಲಾ ರಂಗದಲ್ಲೂ ಸಮಾನತೆಯಿಂದ ಸ್ವೀಕರಿಸುವ ಭಯ(phobia) ದಲಿತೇತರಲ್ಲಿ ಮತ್ತು ದಲಿತರಲ್ಲಿ ಅಡಕವಾಗಿದೆ. ಹೆಸರಾಂತ ಬುದ್ಧಿಜೀವಿಯಾದ ಚಂದ್ರಭಾನ್ ಪ್ರಸಾದ ಅವರು ೧೯೯೯ ರಿಂದ ೨೦೦೫ ರವರೆಗೆ ತಮ್ಮ ದಲಿತ ಡೈರಿಯಲ್ಲಿ ೮೦ ಲೇಖನಗಳನ್ನು ಆಧರಿಸಿ ಭಾರತದ ಜಾತಿವ್ಯವಸ್ಥೆಯಲ್ಲಿ ದಲಿತರ ಸ್ಥಿತಿಗತಿಗಳನ್ನು ತಿಳಿಸಿದ್ದಾರೆ. ದಲಿತರನ್ನು ಶಾಂತಿಯ ಸಮಯದಲ್ಲಿ ಅಥವಾ ಸಂಕಷ್ಟದ ಸಮಯದಲ್ಲಿ ಜಾತಿಯ ಮನಸ್ಸುಗಳು ನಿತ್ಕೃಷ್ಟವಾಗಿ ದಲಿತರ ಮೇಲಿನ ಭಯದ ವಾತಾವರಣವನ್ನು ನಿರ್ಮಿಸುತ್ತಾ, ಸಾಗುತ್ತಿವೆ. ಸುನಾಮಿ ದುರಂತದಲ್ಲಿ ಮಡಿದವರ ಸಾಮೂಹಿಕ ಅಂತ್ಯ ಸಂಸ್ಕಾರದಲ್ಲೂ ದಲಿತ ಹೆಣಗಳು ಪ್ರತ್ಯೇಕವಾಗಿ ಸಂಸ್ಕಾರಗೊಂಡಿದ್ದನ್ನು ಭಾರತದಲ್ಲಿ ೨೧ನೇ ಶತಮಾನದಲ್ಲೂ ಕಂಡಾಗ ಈ ರಾಷ್ಟ್ರದ ಜಾತಿವ್ಯವಸ್ಥೆ ಹೇಗಿದೆ ಎಂಬುದನ್ನು ತಿಳಿಯಬಹುದಾಗಿದೆ. ಇಂದು ಇಂತಹ ವಾತಾವರಣವನ್ನು ಹೋಗಲಾಡಿಸಬೇಕಾದರೆ, ದಲಿತ phobia ಲೆನಿನ್ನರ bols-hevik ಕ್ರಾಂತಿಯ ಭಯ ಅಮೇರಿಕಾದ ಬಂಡವಾಳಶಾಹಿಗಳನ್ನು ಹೇಗೆ ನಡುಗಿಸಿತ್ತೋ ಹಾಗೆ ದಲಿತ phobia ಜಾತಿ ಆಧಾರಿತ ಸಮಾಜದಲ್ಲಿ ತನ್ನ ಶಕ್ತಿ ಏನೆಂಬುದನ್ನು ತೋರಿಸಬೇಕಾಗಿದೆ. ಇದನ್ನು ತೋರಿಸಬೇಕೆಂದರೆ ದಲಿತರ ತಮ್ಮ ಹಿಂದಿನ ಕಳಂಕಿತ ಬದುಕುಗಳ ಸಂಕೋಲೆಗಳಿಂದ ಸಂಪೂರ್ಣವಾಗಿ ಬಿಡುಗಡೆಗೊಂಡು ಸ್ವಾಭಿಮಾನದ ಬದುಕನ್ನ ಬದುಕುವ ಮೂಲಕ ದಲಿತ ಶಕ್ತಿಯನ್ನು ಸ್ಥಾಪಿಸಬೇಕಾಗಿದೆ. ಇದು ದಲಿತ ಸಮುದಾಯದ ಎಲ್ಲಾ ವರ್ಗಗಳಿಗೂ ಅನ್ವಯಿಸುತ್ತದೆ. ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನಕ್ಕೆ ಮಹತ್ವವನ್ನು ಕೊಡುವ ಮೂಲಕ ಬಾಬಾಸಾಹೇಬ್ ಅವರ ಕನಸನ್ನು ನನಸು ಮಾಡುವ ಛಲವನ್ನು ರೂಢಿಸಿಕೊಳ್ಳಬೇಕು. ನೌಕರರು ಅಂಬೇಡ್ಕರ್ ಅವರು ಹಾಕಿಕೊಟ್ಟ ಸ್ವಾಭಿಮಾನದ ದಾರಿಯನ್ನು ಯಾವುದೇ ಒತ್ತಡಕ್ಕೂ, ಭಯಕ್ಕೂ ಅಥವಾ ಆಮಿಷಕ್ಕೂ ಒಳಗಾಗದೇ ರೂಢಿಸಿಕೊಳ್ಳಬೇಕು. ದಲಿತ ಕೃಷಿ ಕಾರ್ಮಿಕರು ಕೂಡ ಶಿಕ್ಷಣದ ಮಹತ್ವವನ್ನು ಅರಿತು ಸಬಲೀಕರಣ ದತ್ತ ಸಾಗಬೇಕು. ಇದನ್ನು ದಲಿತ ಪ್ರತಿನಿಧಿಗಳು ತಮ್ಮ ನಾಯಕತ್ವದ ಬೆಳವಣಿಗೆಗಾಗಿ ಅಂಬೇಡ್ಕರ್ ವಾದದ ಮೂಲಕ ರೂಢಿಸಿಕೊಂಡು ದಲಿತೇತರರನ್ನು ಅಂಬೇಡ್ಕರ್ ವಾದದ ಕಡೆಗೆ ಸೆಳೆಯುವ ಗುಣಗಳುಳ್ಳ ನಾಯಕರಾಗಿ ಹೊರಹೊಮ್ಮಬೇಕಾಗಿದೆ. ತುಂಡು ತುಂಡಾಗಿ ಹರಿದು ಹಂಚಾಗಿರುವ ಚಳವಳಿಗಾರರು ದಲಿತ ಚಳವಳಿಯ ನೆಲೆಯನ್ನು ವಿಸ್ತರಿಸಿ ದಲಿತ ಚಳವಳಿಯ ಹಿಂದಿನ ಶಕ್ತಿಯನ್ನು ಮತ್ತೆ ಸ್ಥಾಪಿಸಬೇಕಾಗಿದೆ. ಇವರಿಗೆ ಸಹಾಯಕವಾಗಿ ದಲಿತ ಬುದ್ಧಿ ಜೀವಿಗಳು ಮತ್ತು ರಾಜಕೀಯ ಪಕ್ಷಗಳು ಕಾರ್ಯ ಪ್ರವೃತ್ತವಾಗಬೇಕಾಗಿದೆ. ಆಗ

> **ದಲಿತ phobia ಭಾರತದ ಪ್ರಜಾಪ್ರಭುತ್ವವನ್ನು ಸರಿಪಡಿಸುವ ಶಕ್ತಿಯನ್ನು ಹೊಂದುತ್ತಿರುವದು ಆಶಾದಾಯಕ ಬೆಳವಣಿಗೆಯಾಗಿದೆ. ಇಂದು ದಲಿತರನ್ನು ಕಡೆಗಣಿಸುವ ಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆಯಾಗಿದೆ. ದಲಿತರ ಮೇಲಿನ ದೌರ್ಜನ್ಯಗಳು ನಡೆಯುತ್ತಿದ್ದರೂ ದಲಿತರ ಶಕ್ತಿಯನ್ನು ಕಡೆಗಣಿಸುವಂತಿಲ್ಲ.ಅವರನ್ನು ಎಲ್ಲಾ ರಂಗದಲ್ಲೂ ಸಮಾನತೆಯಿಂದ ಸ್ವೀಕರಿಸುವ ಭಯ(phobia) ದಲಿತೇತರಲ್ಲಿ ಮತ್ತು ದಲಿತರಲ್ಲಿ ಅಡಕವಾಗಿದೆ. ಚಂದ್ರಭಾನು ಪ್ರಸಾದ್ ಅವರು ತಮ್ಮ ದಲಿತ ಡೈರಿಯಲ್ಲಿ ೮೦ ಲೇಖನಗಳನ್ನು ಆಧರಿಸಿ ಭಾರತದ ಜಾತಿ ವ್ಯವಸ್ಥೆಯಲ್ಲಿ ದಲಿತರ ಸ್ಥಿತಿಗತಿಗಳನ್ನು ತಿಳಿಸಿದ್ದಾರೆ. ಸುನಾಮಿ ದುರಂತದಲ್ಲಿ ಮಡಿದವರ ಸಾಮೂಹಿಕ ಅಂತ್ಯ ಸಂಸ್ಕಾರದಲ್ಲೂ ದಲಿತ ಹೆಣಗಳು ಪ್ರತ್ಯೇಕವಾಗಿ ಸಂಸ್ಕಾರಗೊಂಡಿದ್ದನ್ನು ಭಾರತದಲ್ಲಿ ೨೧ನೇ ಶತಮಾನದಲ್ಲೂ ಕಂಡಾಗ ಈ ರಾಷ್ಟ್ರದಜಾತಿ ವ್ಯವಸ್ಥೆ ಹೇಗಿದೆ ಎಂಬುದನ್ನು ತಿಳಿಯಬಹುದಾಗಿದೆ.**

ಮಾತ್ರ ದಲಿತ phobia ಭಾರತದ ಪ್ರಜಾಪ್ರಭುತ್ವವನ್ನು ಎಚ್ಚರಿಸುವ ಮತ್ತು ಸರಿಪಡಿಸುವ ಅಸ್ತ್ರವಾಗುತ್ತದೆ.

ಜಾಗತೀಕರಣದ ಪ್ರಕ್ರಿಯೆಗಳನ್ನು ಪ್ರಜಾಪ್ರಭುತ್ವ ರಾಷ್ಟ್ರಗಳು ಸವಾಲಾಗಿ ಸ್ವೀಕರಿಸದೆ ಜಾಗತೀಕರಣದ ಬೆಳವಣಿಗೆಗೆ ಕಾರಣವಾಗಿ ರಾಜ್ಯದ ಪರಿಕಲ್ಪನೆಯನ್ನ ದುರ್ಬಲಗೊಳಿಸುವ ಹಂತಕ್ಕೆ ತಲುಪಿವೆ. ಇಂತಹ ಸ್ಥಿತಿ ಆ ರಾಷ್ಟ್ರದೊಳಗಿನ ಶೋಷಿತ ಸಮುದಾಯಕ್ಕೆ ಬಹುದೊಡ್ಡ ತೊಡಕಾಗಿ ಪರಿಣಮಿಸಿದೆ. ಅಂತರಾಷ್ಟ್ರೀಯ ರಾಜಕಾರಣದ ದೃಷ್ಟಿಕೋನದಲ್ಲಿ ಹೇಳುವುದಾದರೆ ಜಾಗತೀಕರಣ ಅನಿವಾರ್ಯವಾಗಿದೆ. ಇದು ಬಲಿಷ್ಠ ರಾಷ್ಟ್ರಗಳಿಗೆ ಪೂರಕವಾಗಿದೆ. ಏಕೆಂದರೆ, ಇತರ ರಾಷ್ಟ್ರಗಳನ್ನು ಜಾಗತೀಕರಣದ ನೆಪದಲ್ಲಿ ನಿಯಂತ್ರಿಸುವ ಶಕ್ತಿ ಸುಲಭವಾಗಿ ದೊರೆಯುತ್ತದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಅಭಿವೃದ್ಧಿಯನ್ನು ಮತ್ತಷ್ಟು ಸಾಧಿಸಲು ಜಾಗತೀಕರಣದ ಜೊತೆಗೆ ರಾಜಿಯಾಗಿ ಮುನ್ನುಗ್ಗುತ್ತಿರುವುದು ಬಡ ರಾಷ್ಟ್ರಗಳು ಪರ್ಯಾಯವಿಲ್ಲದೆ ಕೈ ಜೋಡಿಸುವಂತಹ ಸ್ಥಿತಿ ನಿರ್ಮಾಣಗೊಂಡಿದೆ. ಇಂತಹ ಸ್ಥಿತಿ ದೇಶಿಯತೆಯನ್ನು ನಾಶಪಡಿಸಿ ಅದರ ಜಾಗದಲ್ಲಿ ವಿದೇಶಿಯತೆಯನ್ನು ಸ್ಥಾಪಿಸಿ ಅದರ ತೆಕ್ಕೆಯಲ್ಲಿ ಹೊಸ ಜೀವನವನ್ನು ಪ್ರಾರಂಭಿಸಿ ಸಂಸ್ಕೃತಿಯ ಮೇಲಿನ ದಾಳಿಗೆ ಸುಲಭವಾಗಿ ತುತ್ತಾಗಿರುವ ಸಮಾಜಗಳು ಜಗತ್ತಿನಾದ್ಯಂತ ನಿರ್ಮಾಣಗೊಳ್ಳುತ್ತಿವೆ. ಇಂತಹ ಸಂದರ್ಭದಲ್ಲಿಯೂ ಭಾರತದ ಜಾತಿ ವ್ಯವಸ್ಥೆ ತನ್ನ ಹಿಡಿತವನ್ನ ಸುಲಭವಾಗಿ ಬಿಟ್ಟು ಕೊಡುತ್ತಿಲ್ಲ. ಚರಿತ್ರೆಯಿಂದ ಕಲಿತ ಪಾಠವನ್ನ ದಲಿತ ಸಮುದಾಯಗಳು ಸರಿಯಾಗಿ ರೂಢಿಸಿಕೊಳ್ಳುವಲ್ಲಿ ಇನ್ನೂ ಬಹುದೂರ ಸಾಗಬೇಕಿದೆ. ಈ ಸಂದಿಗ್ಧತೆಯಲ್ಲಿ 'ಜಾಗತೀಕರಣದಲ್ಲಿ ಸ್ಥಳೀಯಗೌಡ ಭಯೋತ್ಪಾದಕನಾದರೆ, ವಿದೇಶಿಗೌಡ ಯುದ್ಧೋತ್ಪಾದಕ' ಇವರಿಬ್ಬರನ್ನ ಏಕಕಾಲಕ್ಕೆ ವಿರೋಧಿಸುವ ಇಲ್ಲವೇ ಇವರಿಬ್ಬರಿಂದ ಏಕಕಾಲಕ್ಕೆ ಪಾರಾಗುವ ದಲಿತ ರಾಜಕಾರಣ ಇಂದು ಸಾಧ್ಯವೇ? ಎಂಬ ಪ್ರಶ್ನೆ ಬಹುಮುಖ್ಯವಾಗಿದೆ. ರಾಜ್ಯ, ಸಂವಿಧಾನ, ಸರ್ಕಾರ, ನ್ಯಾಯಾಲಯ, ಇವುಗಳನ್ನ ಅವಲಂಬಿಸಿ ಜೀವಿಸುವ ದಲಿತ ಸಮುದಾಯ ಒಂದು ಕಡೆ ಇದ್ದರೆ, ಇವರನ್ನು ವಂಚಿಸುವ ಮತ್ತೊಂದು ಸಮುದಾಯ ಮತ್ತೊಂದು ಕಡೆ ಕ್ರೌರ್ಯತೆಯಿಂದ ವರ್ತಿಸುತ್ತಿರುವ ಈ ಸಮಾಜದಲ್ಲಿ ದಲಿತ ರಾಜಕಾರಣ ಯಾವ ರೀತಿ ಸಾಗಬೇಕೆಂಬುದನ್ನು ನಿರ್ಧರಿಸುವ ಹೊಣೆಗಾರಿಕೆಯುಳ್ಳ ದಲಿತ ರಾಜಕಾರಣ ಮೊದಲು ಸೃಷ್ಟಿಯಾಗಬೇಕಿದೆ. ಇದನ್ನ ಸೃಷ್ಟಿಸಬೇಕಾದರೆ ದಲಿತ ರಾಜಕಾರಣವನ್ನು ವ್ಯಾಖ್ಯಾನಿಸಿ ವಿಶ್ಲೇಷಿಸಬೇಕಿದೆ.

ರಾಷ್ಟ್ರೀಯ ಚಳವಳಿಯ ಸಂದರ್ಭದಲ್ಲಿಯೇ ಅಂಬೇಡ್ಕರ್ ಅವರು ದಲಿತ ರಾಜಕಾರಣವನ್ನು ವ್ಯಾಖ್ಯಾನಿಸಿ ವಿಶ್ಲೇಷಿಸಿದ್ದಾರೆ. ಇವರ ವ್ಯಾಖ್ಯಾನವನ್ನು ಅರ್ಥೈಸುವ ಮುಂಚೆ ಅವರ ಪ್ರಜಾಪ್ರಭುತ್ವದ ವ್ಯಾಖ್ಯಾನವನ್ನು ತಿಳಿಯುವದು ಸೂಕ್ತವೆನಿಸುತ್ತದೆ. ಕಾರಣ ದಲಿತ ರಾಜಕಾರಣದ ತಳಹದಿ ಈ ವ್ಯಾಖ್ಯಾನದಲ್ಲಿ ಇರುವುದು. ಅಂಬೇಡ್ಕರ್ ಅವರ ಪ್ರಕಾರ 'ಪ್ರಜಾಪ್ರಭುತ್ವವು ಒಂದು ಮಾದರಿಯ ಸರ್ಕಾರವಾಗಿದ್ದು, ಜನರ ಸಾಮಾಜಿಕ ಮತ್ತು ಆರ್ಥಿಕ ಬದುಕುಗಳಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನ ರಕ್ತ ರಹಿತವಾಗಿ ಜಾರಿಗೆ ತರುವುದು.' ಈ ಸಾಲುಗಳನ್ನು ಗಮನಿಸಿದಾಗ ಇಲ್ಲಿ ಅಡಕವಾಗಿರುವ ಸರ್ಕಾರ, ಜನರು, ಆರ್ಥಿಕ ಮತ್ತು ಸಾಮಾಜಿಕ ಜೀವನ, ಕ್ರಾಂತಿಕಾರಕ ಮತ್ತು ರಕ್ತರಹಿತ ಪದಗಳು ಅಂಬೇಡ್ಕರ್ ಬಯಸಿದ ಪ್ರಜಾಪ್ರಭುತ್ವವನ್ನ ಸ್ಪಷ್ಟವಾಗಿ ತಿಳಿಸುತ್ತದೆ. ಇಂತಹ ವ್ಯಾಖ್ಯಾನವನ್ನ ಜಗತ್ತಿನ ಶ್ರೇಷ್ಠ ಪ್ರಜಾಪ್ರಭುತ್ವದ ಗ್ರಂಥಗಳನ್ನ ರಚಿಸಿದಂತಹ ಜೇಮ್ಸ್ ಬ್ರೈಸ್‌ನ ಗ್ರಂಥದಲ್ಲಿಯೂ ಕೂಡ ಕಾಣಲ್ಲಿಕ್ಕೆ ಸಾಧ್ಯವಿಲ್ಲ. ಅಂಬೇಡ್ಕರ್ ಅವರು ತಮ್ಮ ವ್ಯಾಖ್ಯಾನದ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವಗಳನ್ನ ಪ್ರತಿಪಾದಿಸಿ ಇವುಗಳು ಬಹುಬೇಗನೆ ಭಾರತೀಯ ಸಮಾಜದಲ್ಲಿ ಸ್ಥಾಪಿತವಾಗಬೇಕೆಂಬುದೇ ಅವರ ಗುರಿಯಾಗಿತ್ತು. ಮೊದಲನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಜಗತ್ತಿನ ಶ್ರೇಷ್ಠ ರಾಷ್ಟ್ರಗಳಾದ ಇಂಗ್ಲೆಂಡ್ ಮತ್ತು ಅಮೇರಿಕಗಳಿಗಿಂತ ಬಹುಮುಂದೆ ಸಾಗಿ ರಾಜಕೀಯ ಸಮಾನತೆಯನ್ನ ಸ್ಥಾಪಿಸಿದ ಕೀರ್ತಿ ನಮ್ಮದು. ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಸಂವಿಧಾನವೇ ದಾರಿಯಾಗಿದೆ. ಸಂವಿಧಾನದ ರಾಜನೀತಿ ನಿರ್ದೇಶಕ ತತ್ವಗಳು ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರ ಭುತ್ವದ ಆಶಯಗಳಾಗಿವೆ. ಇವುಗಳನ್ನು ಸ್ಥಾಪಿಸುವಂತಹ ಸರ್ಕಾರಗಳನ್ನ ಪ್ರಜ್ಞಾವಂತ ಮತದಾರರು ಎಲ್ಲಿಯವರೆಗೆ ಚುನಾಯಿಸುವುದಿಲ್ಲವೋ ಅಲ್ಲಿಯವರೆಗೆ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವಗಳು ಅರ್ಧಬೆಂದ ಪರಿಕಲ್ಪನೆಗಳಾಗಿ ಉಳಿದುಕೊಳ್ಳುತ್ತವೆ. ೨೦೨೦ರ ಅವಧಿಗೆ ಬಲಿಷ್ಠ ಭಾರತದ ನಿರ್ಮಾಣದ ಕನಸನ್ನು ನನಸು ಮಾಡುವ ವೇಗದಲ್ಲಿ ಸಾಗುತ್ತಿರುವ ಭಾರತದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವಗಳು ಇನ್ನೂ ಸದೃಢಗೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ ದಲಿತ ರಾಜಕಾರಣವನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಬಹು ಮುಖ್ಯವೆನಿಸುತ್ತದೆ.

ಚುನಾವಣೆಗಳಲ್ಲಿ ಅಂಬೇಡ್ಕರ್ ಅವರನ್ನ ಸೋಲಿಸಿದಂತಹ ಭಾರತದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ದಲಿತ ರಾಜಕಾರಣದ ಸ್ವರೂಪವು ಹೇಗಿರಬೇಕೆಂಬುದನ್ನು ಅರಿಯುವುದು ಅಗತ್ಯ. ದಲಿತ ರಾಜಕಾರಣಕ್ಕೆ ಸ್ಫೂರ್ತಿ ಮತ್ತು ದಾರಿ ಅಂಬೇಡ್ಕರ್. ಅಂಬೇಡ್ಕರ್ ಅವರನ್ನ ಮೂಲಭೂತವಾದಿಗಳು, ಜಾತಿವಾದಿಗಳು, ಮತೀಯವಾದಿಗಳಿಂದ ಕೂಡಿರುವ ಸಮಾಜವು ಸ್ವೀಕರಿಸಲಿಲ್ಲ. ಸಮಾಜಕ್ಕೆ ಪ್ರೀತಿಯನ್ನ ನೀಡಿದ ಅಂಬೇಡ್ಕರ್ ಅವರನ್ನ ಈ ಶಕ್ತಿಗಳು ದ್ವೇಷಿಸುತ್ತಲೇ ಸಾಗಿದವು. ಅಂಬೇಡ್ಕರ್ ಅವರ ಶತಮಾನೋತ್ಸವ ಆಚರಣೆಯಿಂದೀಚೆಗೆ ಅಂಬೇಡ್ಕರ್ ಅವರನ್ನ ಸ್ವೀಕರಿಸುವಂತಹ ಮನೋಭಾವಗಳು ಹೆಚ್ಚುತ್ತಿವೆ. ಇದಕ್ಕೆ ಕಾರಣ ದಲಿತರಲ್ಲಿ ಮೂಡಿದ ಅರಿವು ಮತ್ತು ದಲಿತೇತರಲ್ಲಿ ಅಂಬೇಡ್ಕರ್ ಅವರ ಅಗತ್ಯತೆಯ ಅನಿವಾರ್ಯತೆ.

೨೦೦೧ರ ಜನಗಣತಿಯ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ಕ್ರಮವಾಗಿ ಶೇ. ೧೬.೨ ಮತ್ತು ಶೇ. ೮.೨ ಜನಸಂಖ್ಯೆಯಷ್ಟಿದ್ದು, ದಲಿತ ರಾಜಕಾರಣವನ್ನು ನಿರ್ಧರಿಸುವ ಶಕ್ತಿಯಾಗಿ ಹೊರಹೊಮ್ಮಿದವು. ದಲಿತ ರಾಜಕಾರಣದಲ್ಲಿ ಪ್ರಧಾನವಾಗಿ ಈ ಜಾತಿ ಸಮುದಾಯವಿದ್ದು, ಇದರ ಜೊತೆಗೆ ಹಿಂದುಳಿದ ಹಾಗೂ ಇತರೆ ಹಿಂದುಳಿದ ವರ್ಗಗಳನ್ನು ಮತ್ತು ಅಲ್ಪಸಂಖ್ಯಾತರನ್ನು ಒಳಗೊಂಡಂತೆ ದಲಿತ ರಾಜಕಾರಣವು ಸೃಷ್ಟಿಯಾಗಬೇಕು. ಆಗ ಮಾತ್ರ ದಲಿತ ರಾಜಕಾರಣ ಕೋಮುವಾದದ ರಾಜಕಾರಣಕ್ಕೆ ಪ್ರಬಲ ಪೈಪೋಟಿಯನ್ನು ನೀಡುವದಲ್ಲದೇ ಅಧಿಕಾರವನ್ನು ಪಡೆಯುವಂತಾಗುತ್ತದೆ. ಈ ಕಾರಣಕ್ಕಾಗಿ ಅಂಬೇಡ್ಕರ್ ಅವರ ಮೊದಲನೆಯ ಪ್ರಯೋಗ ಸ್ವತಂತ್ರ ಕಾರ್ಮಿಕ ಪಕ್ಷ. ಪಕ್ಷದ ಹೆಸರೇ ಶೋಷಿತ ಸಮುದಾಯವನ್ನು ಸೂಚಿಸುತ್ತದೆ. ಈ ಪಕ್ಷವು ೧೯೩೭ರ ಚುನಾವಣೆಯಲ್ಲಿ ಗಣನೀಯವಾದ ಯಶಸ್ಸನ್ನ ದಲಿತ ರಾಜಕಾರಣಕ್ಕೆ ತಂದುಕೊಟ್ಟಿತು.

ಆದರೆ, ಇದನ್ನು ಮುಂದುವರೆಯದಂತೆ ಮತೀಯ ಶಕ್ತಿಗಳು ಅಂದು ತಡೆಯೊಡ್ಡಿ ಅಂಬೇಡ್ಕರ್ ಅವರು ಮತ್ತೆ ಮರಳಿ ತನ್ನ ಸಮುದಾಯದತ್ತ ಪ್ರಯಾಣಿಸುವಂತಹ ಸ್ಥಿತಿ ನಿರ್ಮಾಣವಾಯಿತು. ಅದರ ಫಲವಾಗಿ ಷೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್ ಸ್ಥಾಪನೆಯಾಯಿತು. ಇದು ದಲಿತ ರಾಜಕಾರಣದ ಎರಡನೇಯ ಕಾಲಘಟ್ಟವಾಗಿದ್ದು, ಸ್ವತಂತ್ರ ನಂತರದ ಮೊದಲನೆಯ ಪ್ರಯೋಗವಾಗಿದೆ. ಈ ಪ್ರಯೋಗದಲ್ಲಿ ಜಾತಿವಾದಿಗಳು ಮೇಲುಗೈ ಸಾಧಿಸಿದರು. ಅಂಬೇಡ್ಕರ್ ಅವರು ಮತ್ತೆ ತಮ್ಮ ಪ್ರಜಾಪ್ರಭುತ್ವದ ವ್ಯಾಖ್ಯಾನಕ್ಕೆ ಹತ್ತಿರವಾಗಿ ಗಣರಾಜ್ಯದ ಪರಿಕಲ್ಪನೆಯ ರಾಜಕೀಯ ಪಕ್ಷವನ್ನು ಸ್ಥಾಪಿಸುವ ಬಯಕೆಯನ್ನು ಹೊಂದಿದ್ದರು. ಇದು ಸ್ಪಷ್ಟವಾಗಿ ದಲಿತ ರಾಜಕಾರಣದ ಸ್ವರೂಪವನ್ನ ತಿಳಿಯ ಪಡಿಸುತ್ತದೆ. ದಲಿತ ರಾಜಕಾರಣವು ವಿಸ್ತಾರವಾದ ನೆಲೆಯ ಸ್ವರೂಪವನ್ನು ಕಂಡುಕೊಳ್ಳಬೇಕಿದೆ. ಇದನ್ನೇ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ತಮ್ಮ ರಾಜಕೀಯ ಪಕ್ಷಗಳ ಮೂಲಕ ಪ್ರಾರಂಭಿಸಿದರು. ದಲಿತ ರಾಜಕಾರಣ ಸ್ವತಂತ್ರವಾಗಿ ನಿಲ್ಲುವ ಶಕ್ತಿಯ ಸ್ವರೂಪವನ್ನು ಇನ್ನೂ ಹೊಂದಿರುವದಿಲ್ಲ. ದಲಿತ ರಾಜಕಾರಣ ಸೈದ್ಧಾಂತಿಕವಾಗಿ ಬಲಿಷ್ಠವಾಗಿದೆ. ಆದರೆ ಇದನ್ನು ಕೆಲವರು ಒಪ್ಪುವದಿಲ್ಲ.

(ಮುಂದುವರೆಯುವುದು) □

ಕಿಚ್ಚು ಆರಲೇ ಇಲ್ಲ...



ಕಥೆ

ಎಸ್ ಬಿ ಜೋಗುರ

ಅಂಥಾ ಸಣ್ಣ ಊರಲ್ಲಿಯೂ ಕರ್ಫ್ಯೂ...!

ಹೀಗೆ ಪೊಲೀಸರು ಹಿಂಡಿಂಡಾಗಿ ಊರಲ್ಲಿ ಹಗಲು ಹೊತ್ತಿನ್ಯಾಗೇ ಗಸ್ತಿ ತಿರುಗಿದ್ದು ಇದೇ ಮೊದಲು...

ಹತ್ತು ವರ್ಷದ ಹಿಂದ, ಕಟ್ಟೀಮನಿ ಮಲಕಾಜಿ ಮತ್ತ ಅವನ ತಮ್ಮ ಭೀಮರಾಯನ ನಡುವ ಹೊಲದ ಬಾಂದಾ ದಂಡಿಗಿ ಇರೋ ಬೇವಿನ ಗಿಡದ ಕಾಲಾಗ ಹೊಡಪೆಟ್ಟ ಆಗಿ, ಇಬ್ಬರೂ ಒಂದೆ ತಂದಿಗಿ ಹುಟ್ಟದವರು ಅನ್ನೋ ಖಬರ್ ಇಲ್ಲದೇ ತಮ್ಮ ಭೀಮರಾಯನ ನೆತ್ತಿ ಮ್ಯಾಲ ಕಲ್ಲ ಹೇರಿ, ಮುಂಜಮುಂಜಾನೆ ಊರಿಗೆ ಪೊಲೀಸರು ಬರುವಂಗ ಮಾಡಿದ್ದು ಬಿಟ್ಟರ ಈ ಊರಾಗ ಮತ್ತ ಪೊಲೀಸರನ್ನು ಕಂಡಿದ್ದು ಇವಾಗಲೇ..

'ಷೋಡಿಗಳು.. ಪಂಚಾಯತಿಯೊಳಗ ಸರಳ ಆಗಿ ಮುಗಿಯೋ ಜಗಳಕ್ಕ, ಪೊಲೀಸರು ಬರುವಂಗ ಮಾಡದರು.' ಅಂತ ಇಡೀ ಊರಿಗೆ ಊರೇ ಮಲಕಾಜಿ ಮತ್ತ ಭೀಮರಾಯಗ ಉಗದು ಉಪ್ಪಿನಕಾಯಿ ಹಾಕಿದ್ದರು. ಅವರು ಹೇಳೂದೂ ಖರೇನೇ ಇತ್ತು. ಅಲ್ಲೀಮಟ ಆ ಹಳ್ಳಿಯೊಳಗ ಯಾವದೇ ಒಬ್ಬ ಪೊಲೀಸರವನು ಕಾಲ ಊರಿರಲಿಲ್ಲ. ದೊಡಮನಿ ಬಾಪೂಗೌಡ ಇರೋಮಟ ಅಂತೂ ಊರಾಗ ಯಾರೂ ಏರದನಿಯಿಂದ ಸೈತ ಮಾತಾಡತಿರಲಿಲ್ಲ. ಅಂವಾ ಮೆತ್ತಗಾಗಿ ಹಾಸಿಗೆ ಹಿಡದು, ಸುತ್ತಿ ಸುತ್ತಿ ಮಲಕೊಂಡು, ಮುಂದ ತಿಂಗಳ ಒಪ್ಪತ್ತಿನ್ಯಾಗ ಮಣ್ಣ ಆಗಿದ್ದೇ ತಡ, ಊರಾಗಿರೋ ಲಪುಟರು ದೊಡ್ಡ ಬಂಡೆಗಲ್ಲು ಸರದ ಮ್ಯಾಲ ಕೆಳಗಿನ ಹುಳಹುಪಟಿ ಪುಟುಪುಟು ಅಂತ ಹೊರಗ ಬರುವಂಗ ಬಯಲಾಗಿದ್ದರು. ಊರಮಂದಿ ಬಾಪೂಗೌಡನ ಹಿರಿಮಗನಿಗಿ ಊರ ಹಿರೇತನ ಮತ್ತ ನ್ಯಾಯ ಪಂಚಾಯತಿಕಿ ಒಪ್ಪಿಸಿದರ, ಮಾತನ್ಯಾಗರೇ ಆಗಲೀ ನಡುವಳಿಕೆಯೊಳಗರೇ ಆಗಲಿ ಅವರಪ್ಪನ ಬಿಸ್ತ ಎಲ್ಲೂ ಕಾಣಲೇ ಇಲ್ಲ.

ಅವತ್ತು ಇಡೀ ಹಳ್ಳಿ ಬೆಂಕಿ ಹತಗೊಂಡು ಉರದಿತ್ತು!

'ಹ್ಯಾಂಗಿದ್ದ ಊರ ಹ್ಯಾಂಗ ಆಯ್ತು ಮಾರಾಯಾ...?'

'ಏನೋ ಹೋಗೂದು ಬಂದೈತಿ ಇವರಿಗಿ. ಅದಕ್ಕೇ ಹಿಂಗ ಮಾಡಾಕತ್ತಾರ'

'ಅಲ್ಲೋ ಸಿದ್ದಲಿಂಗ, ಹೋಗಿ ಹೋಗಿ ಲಿಂಬೂ ಮಾರೋ ಬಾಶ್ಯಾಸಾಬಗ ಹೊಡದಾರಂತಲ್ಲ...?'

'ಹೊಡಿಲಾರದೇ ಬಿಡತರನೂ... ಅವರ ಕಡಿ ಹುಡುಗರು ನಮ್ಮ ಕರಿಬಸಣ್ಣನ ಮಗನಿಗಿ ಮತ್ತ ತಳವಾರ ಸುಭಾಶಗ ದನಕ್ಕ ಹೊಡದಂಗ ಹೊಡದಾರಂತಲ್ಲ..?'

'ಸಾವಕಾಶ ಮಾತಾಡರಿ ಮಾರಾಯ...!ಇಲ್ಲೇ ಪೊಲೀಸರು ತಿರಗಾಕತ್ತಾರ'

'ಆದರೂ ಈ ಮುಸಲರದು ಬಾಳ ಐತು'.

'ಈಗ ಅಂಗಡಿ ಸುಟ್ಟಿದ್ದು ಯಾರದು..?'

'ಅದೇ ಲಿಂಬೂ ಮಾರೋ ಬಾಶ್ಯಾಸಾಬದು, ಇನ್ನೊಂದು ಬಜಿ ಮಾಡೊ ಕಾಸೀಮದು.'

'ಒಂದು ಕಾಲಕ್ಕ ನಾವೆಲ್ಲಾ ಹ್ಯಾಂಗಿದ್ದಿವಿ ಮಾರಾಯಾ... ಅದ್ಯಾವ ಬೋಳಿಮಗಂದು ಕಣ್ಣ ಬಿತ್ತೋ ಏನೋ ಇಡೀ ಊರಿಗೆ ಊರೇ ಭಯ ಹುಟ್ಟಿಸುವಂಗ ಆಗ್ಯೆತೆಲ್ಲ..!'

'ಅದ್ಯಾವನೋ ಬಂದು ಊರ ಅಗಸಿಯೊಳಗೆ ಒಂದು ಪ್ರತಿಗಾಮಿ ಪಕ್ಷದ ಕೇಸರಿ ಜಂಡಾ ನೆಟ್ಟಿದ್ದೇ ಶುರು ಆಯ್ತು ನೋಡು ಕಿರಕಿರಿ. ಮುಂದ ಕೆಲವೇ ದಿಂದಾಗ ಕಾಸೀಮನ ಹೊಟೆಲ್ ಮ್ಯಾಲ ಹಸರ ಬಣ್ಣದ್ದು ಜಂಡಾ ಹುಟ್ಟಗೊಂತು. ಅಲ್ಲಿಂದ ಶುರು ಆಯ್ತು ನೋಡ್ರಿ ಅವರಿಗಿ ಇವರಿಗಿ ಕಣಪಿಣಿ ಕುಸ್ತಿ.'

ಹಿಂಗ ಜನಾ ಅಲ್ಲಿ ತಮತಮಗೆ ಬೇಕಾದವರ ಮನ್ಯಾಗ ಕುತಗೊಂಡು ಮಾತಾಡತಿದ್ದರು.

ಕಾಸೀಮನ ಹೊಟೆಲ್ ಬೆಳ್ಳ ಬೆಳತಾನ ಉರದು, ಇನ್ನೂ ಹೊಗಿ ಏಳಾಕತ್ತಿತ್ತು. ಅವನ ಹೆಂಡತಿ, ಮಕ್ಕಳು ಅದನ್ನ ಆರಸಲಿಕ್ಕ ಬೆಳತನ ಹರಸಾಹಸ ಮಾಡಿದ್ದರೂ ಕೈ ಮೀರಿತ್ತು. ಬ್ಯಾಸಗಿ ದಿನ ಬ್ಯಾರೆ ಭಗ್...! ಅಂತ ಹತಗೊಂಡಿದ್ದು ಅರ್ಧಘಂಟೆಯೊಳಗ ಧಗ..ಧಗ.. ಅಂತ ತನ್ನ ದಳ್ಳುರಿ ಚಾಚಿ ಎಲ್ಲಾ ನಿಗಟಬಿಟ್ಟಿತ್ತು.

ಹಿಂದೊಮ್ಮೆ ಇದೇ ಊರಾಗ ಬಾರೀತೋಟದ ಮಾನಿಂಗಪ್ಪನ ಬಣವಿಗೆ ಬೆಂಕಿ ಬಿದ್ದರ, ಇಡೀ ಊರಿಗೆ ಊರೇ ಒಂದಾಗಿ ಆರಿಸಿತ್ತು. ಇದೇ ಕಾಸೀಮ ಅದು ತಂದೇ ಬಣಿವಿ ಅನ್ನೂವಂಗ ಅವತ್ತು ಖಾಳಜಿ ತಗೊಂಡು ಆರಿಸಿದ್ದ. ಮೈಯಾಗ ದೆವ್ವ ಹೊಕ್ಕವರಂಗ ಮಟ್ಟೀ ಬಾವಿಯೊಳಗ ಧಡ ಧಡ ಇಳದು, ದುಬು ದುಬು ಅಂತ ನೀರು ತಂದು ಸುರುವತಿದ್ದ. ಅಲ್ಲಿರೋ ಮಂದಿ ಅವತ್ತು ಕಾಸೀಮನ ಹಾಡಿ ಹೊಗಳಿದ್ದೇ ಹೊಗ

ಳಿದ್ದು. ಆದರ ಇವತ್ತು ಆ ಊರ ಪರಿಸ್ಥಿತಿ ಬ್ಯಾರೇನೇ ಐತಿ. ಅಲ್ಲಿ ಅದ್ಯಾರೋ ಅವರ ನಡುವ ಗ್ವಾಡಿ ಎಬ್ಬಸ್ಯಾರ. ಹಿಂಗಾಗಿ ಮುಸಲರು, ಹಿಂದುಗೋಳು ಅಂತ ಇಡೀ ಊರು ಎರಡು ಹೋಳ ಆಗಿದ್ದು ನೆಟ್ಟಗ ಕಣ್ಣಿಗಿ ಕಾಣತಿತ್ತು. ಇನ್ನ ಕಾಣಲಾರದ ಅದಷ್ಟೊ ಹೋಳುಗಳು ಊರಾಗಿದ್ದು. ಅನ್ನೂದು ಖರೇನೇ ಇತ್ತು.

****

ಆ ಊರ ಹೆಸರು ಸಂಗಮ. ಬಿಜಾಪುರ ಜಿಲ್ಲೆಯೊಳಗ ಮಹಾರಾಷ್ಟ್ರದ ಗಡಿಯೊಳಗ. ಇಂಡಿ ತಾಲೂಕಿನ್ಯಾಗ ಬರೋ ಕಟ್ಟ ಕಡೆಯ ಹಳ್ಳಿ ಅದು. ಅಲ್ಲಿರೋ ಜನಸಂಖ್ಯೆ ಅಬ್ಬಬ್ಬಾ ಅಂದರೂ ನಾಕುನೂರು. ಅದರಾಗ ಒಂದ್ಯೆವತ್ತು ಜನ ಮುಸ್ಲಿಮರು, ಎಂಟತ್ತು ಜೈನರು, ಮಿಕ್ಕವರೆಲ್ಲಾ ಹಿಂದುಗಳೇ. ಒಂದಾನೊಂದು ಕಾಲದಲ್ಲಿ ಹೈದರಾಬಾದ್ ನಿಜಾಮರ ಆಳ್ವಿಕೆಯೊಳಗ ತ್ವಾಡೆ ಮಂದಿ ಮಾಹಾರಾಷ್ಟ್ರದಿಂದ, ಇನ್ನ ತ್ವಾಡೆ ಮಂದಿ ಕರ್ನಾಟಕದಿಂದ ಬಂದು ಈ ಹಳ್ಳಿಯೊಳಗ ಠಿಕಾಣಿ ಹೂಡಿದ್ದರಿಂದ ಈ ಊರಿಗೆ ಸಂಗಮ ಅಂತ ಕರೀತಾರ ಅಂತ ಕೆಲವು ಮಂದಿ ಹೇಳದರ, ಇನ್ನ ಕೆಲ ಮಂದಿ ಇಲ್ಲಿ ಎರಡು ಮೂರು ನದಿ ಕೂಡೂದರಿಂದ ಹಿಂಗ ಸಂಗಮ ಅಂತ ಬಂದ್ಯೆತಿ ಅಂತ ಹೇಳತಿದ್ದರು. ಇಲ್ಲಿ ಜನರ ಮೂಲ ಉದ್ಯೋಗ ಒಕ್ಕಲುತನ. ಅದು ಬಿಟ್ಟರೆ ಸಣ್ಣ ಪುಟ್ಟ ವ್ಯಾಪಾರ. ಈ ಊರಾನ ಜನರು ಸಂತಿಗೆ ಅಂತ ಇಂಡಿಗೆ ಹೋಗತಿದ್ದರು. ಇನ್ನೇನರೆ ದೊಡ್ಡ ಪ್ರಮಾಣದ ಖರೀದಿ ಐತೆಂದರೆ ಬಾಜೂದಾಗ ಇರೋ ಸೊಲ್ಲಾಪುರಕ್ಕ ಹೋಗವರು. ನಾಗರಿಕತೆಯ ಡೌಲು ಈ ಊರಿಗೆ ಶುರುವಾಗಿದ್ದು ತೀರಾ ಇಕಾಡಿದಿಕಾಡಿ. ಮೊದಲು ಈ ಊರ ಹ್ಯಾಂಗ ಇತ್ತಂದ್ರ, ಹೆಸರಿಗಿ ತಕ್ಕಂಗ ಇದು ಎಲ್ಲ ಜಾತಿ, ಧರ್ಮಗಳ ಸಂಗಮ ಇದ್ದಂಗಿತ್ತು. ಆ ಊರಲ್ಲಿ ಮೊನ್ನೆ ಮೊನ್ನೆ ತನ ಗೌಡಕಿ ದರ್ಪ ನಡದಿದ್ಯೆತಿ. ಹಂಗಂತ ಆ ಗೌಡ ಮಳ್ಳ ದರಭಾರ್ ನಡಸ್ತಿರಲಿಲ್ಲ. ಊರಾಗ ಜಗಳ, ಜುಬುಟಿ ಆಗಲಾರದಂಗ ನೋಡಕೋತಿದ.

ದೊಡಮನಿ ಬಾಪೂಗೌಡ ಇಡೀ ಊರಿಗೇ ಶ್ರೀಮಂತ. ನೂರಾರು ಕೂರಗಿ ಜಮೀನ, ಎಂಟೆತ್ತು, ಎಮ್ಮಿ, ಆಕಳ, ಕುದರೆ, ಆಳು, ಕಾಳ ಎಲ್ಲಾ ರೀತಿಯಿಂದಲೂ ವೈನ್ ಇದ್ದ. ಮನುಷ್ಯಾನೂ ಬಾಳ ಧಾಡಸಿ ಅಂಥ ಹೆಸರು ತಗೊಂಡಿದ್ದ. ಕಚ್ಚಿ ಹರಕ ಗುಣ ಇಲ್ಲಾಂದ್ರ ಅದು ಗೌಡಕೀನೇ ಅಲ್ಲ ಅನ್ನೋ ನಂಬಿಕೆಗೆ ಇಂವಾ ವಿರುದ್ಧ ಆಗಿದ್ದ. ಹೆಣ್ಣ ಮಕ್ಕಳು ಅಂದ್ರ ಬಾಳ ಮರ್ಯಾದೆ ಕೊಟ್ಟು ಮಾತಾಡವನು. ಈ ಗೌಡಗೆ ಮೂರು ಜನ ಮಕ್ಕಳು ಎರಡು ಗಂಡು ಒಂದು ಹೆಣ್ಣು. ಹಿರಿಯ ಮಗನ ಹೆಸರು ರುದ್ರಪ್ಪ, ನಡುವಿನವನ ಹೆಸರು ಸಂಗಮೇಶ, ಹುಡುಗಿ ಹೆಸರು ಕಸ್ತೂರಿ. ಗೌಡ ಮನೆಯಲ್ಲಿ ಅದಾನಂದ್ರ ಯಾರದೂ ಅವಾಜ್ ಇರತಿರಲಿಲ್ಲ. ಗೌಡನ ಧ್ವನಿ ಅಷ್ಟೆ ಕೇಳಬೇಕು. ಗೌಡನ ಮನಿಗಿ ಹೊಂದಿಕೊಂಡೇ ಮುಜಾವರ ಬಾಶ್ಯಾಸಾಬನ ಮನಿ ಇತ್ತು. ಎರಡೂ ಮನಿ ನಡುವ ಒಂದೇ ಗ್ವಾಡಿ. ಆ ಬಾಶ್ಯಾಸಾಬನೂ ಬಾಳ ಗಟ್ಟಿ ಕುಳ. ಅವರಪ್ಪ ಲಾಳೇಸಾಬ ನೂರಾರು ಎಕರೆ ತೋಟ ಮಾಡಿಟ್ಟು ಕಣ್ಣು ಮುಚ್ಚಿದ್ದ. ಮಗ ಬಾಶ್ಯಾಸಾಬ್ ಎರಡು ಮೂರು ತೋಟದಾಗ ನಿಂಬಿ ಪಡಾ ಮಾಡಿ, ಲಿಂಬಿಹಣ್ಣಿನ ವ್ಯಾಪಾರ ಶುರು ಮಾಡದ. ವ್ಯಾಪಾರ ಬಾಳ ಜೋರಿತ್ತು. ಸೀಜನ್‌ದಾಗ ವಾರಕ್ಕ ಒಂದು ಲೋಡ್ ಸೊಲ್ಲಾಪುರ ಮಾರ್ಕಿಟ್‌ಗೆ ಹೊಡೀತಿದ್ದ. ಆ ಬಾಶ್ಯಾಸಾಬಗ ಇಬ್ಬರು ಹೆಂಡರು. ಮೊದಲಿನಕಿಗಿ ಮಕ್ಕಳಾಗಲಿಲ್ಲ ಅಂತ ಹೇಳಿ ಎರಡನೇದಕ್ಕಿನ ಆದ. ಅಕಿ ಹೊಟ್ಟೀಲೆ ಆರು ಮಕ್ಕಳು. ಮೂರು ಹೆಣ್ಣ, ಮೂರು ಗಂಡು. ಬಾಪೂಗೌಡ ಮತ್ತ ಬಾಶಾಸಾಬ್ ನಡುವ ಬಾಳ ದಿನದ ದೋಸ್ತಿ. ಬರೀ ಇವರು ಮಾತ್ರ ಅಲ್ಲ. ಅವರ ಮಕ್ಕಳು ಇವರ ಮಕ್ಕಳು ಕೂಡಾ ಗೆಳೇರು ಅನ್ನೂವಂಗ ಇದ್ದರು. ಅವರ ಹಬ್ಬದಾಗ ಇವರು, ಇವರ ಹಬ್ಬದಾಗ ಅವರು ಹಂಚಗೊಂಡು ಊಟಾ ಮಾಡವರು. ಗೌಡನ ಹೆಂಡತಿ ರತ್ನಾಬಾಯಿ ಮತ್ತ ಬಾಶ್ಯಾಸಾಬನ ಹೆಂಡರಾದ ನಜಮಾ ಮತ್ತ ಅಲ್ಲಮಾ ಎಲ್ಲಾ ಕೆಲಸ ಮುಗಿಸಿ ಸಂಜಿ ಮುಂದ ಮ್ಯಾಳಿ ಮ್ಯಾಲ ಹತ್ತಿ ಮಾತಾಡಕೊಂತ ಕೂಡವರು. ಇಡೀ ಊರಿಗೆ ಊರೇ ಗೌಡ ಮತ್ತ ಬಾಶ್ಯಾಸಾಬ್‌ನ ದೋಸ್ತಿ ಬಗ್ಗೆ ಮಾತಾಡವರು. ಬಾಶ್ಯಾಸಾಬ ವಾರದಾಗ ಎರಡು ಮೂರು ಸಾರಿ, ಬಾಪೂಗೌಡನ ಬಳಿ ಬಂದು ಕುತ್ಗೊಂಡು ಮಾತಾಡಿ ಹೋಗವನು. ಅವನ ಮಕ್ಕಳ ಮದುವಿ ಮಾಡುವಾಗ ಬಾಪೂಗೌಡನ್ನ ಕರಕೊಂಡು ಹೋಗಿ ಕನ್ಯೆ, ವರ ನೋಡಿದ್ದಿತ್ತು. ಸ್ವಾತಂತ್ರ್ಯ ಹೋರಾಟದಾಗ ಬಾಪೂಗೌಡನ ಅಪ್ಪ ಶಂಕ್ರಪ್ಪಗೌಡ ಮತ್ತ ಬಾಶ್ಯಾಸಾಬನ ಅಪ್ಪ ದಸ್ತಗೀರಸಾಬ ಕೂಡಕೊಂಡು ಹಳ್ಳಿ ಹಳ್ಳಿ ತಿರುಗಿ, ಜನರಿಗಿ ಜಾಗೃತಿ ಮಾಡಿದ್ಯೆತಿ. ಹಿಂಗ ಮಾಡೂವಾಗ ಬ್ರಿಟಿಷರಿಗಿ ಗೊತ್ತಾಗಿ, ಕೆಲ ದಿವಸ ಇಬ್ಬರೂ ಭೂಗತರಾಗಿ ಪೊಲೀಸರ ಕೈಗೆ ಸಿಕ್ಕು, ತೊಗಲು ನೀರಾಗ ಎದ್ದಿ ಬೆನ್ನ ಮ್ಯಾಲ ಚಪಾ ಚಪ್ ಆತ ಬ್ರಿಟಿಷರು ಭಾರಿಸಿದ್ದನ್ನು ಕಥಿ ಮಾಡಿ ಹೇಳತಿದುರು. ಅವಾಗ ಇವರಿಬ್ಬರೂ ಹೆಚ್ಚೂ ಕಮ್ಮಿ ಹತ್ತು ವರ್ಷದವರಿರಬಹುದು ಅಂತ ಅವರೇ ಲೆಕ್ಕಾ ಮಾಡಿ ಹೇಳೂದೂ ಐತಿ. ಇಡೀ ಊರಿಗೆ ಊರೇ ಅವಾಗ ಹತ

ಅವತ್ತೊಂದಿನ ಕುರುಬರ ಲಗಮಣ್ಣ ಲಮಾಣಿಗೇರ ತುಕ್ಯಾ ತನ್ನ ಹೊಲದಾಗಿನ ಕಬ್ಬ ಮುರದಾನ ಅಂತ ಹೇಳಿ ಗೌಡನ ಹತ್ತರ ಫಿರ್ಯಾದು ತಂದ್ರ, ಗೌಡ ಅದೆಷ್ಟು.. ಏನು.. ಎಂದೆಲ್ಲಾ ಕೇಳಿ ಲಗಮಣ್ಣನ ಹೊಲದಾಗ ಎರಡು ದಿನ ಕೆಲಸಾ ಮಾಡಬೇಕು ಅಂತ ತೀರ್ಪು ಕೊಡ್ತು, ನಂತರ ತನಗೆ ಭೇಟಿಯಾಗಲು ಹೇಳಿ ಅವನಿಗೆ ಒಮ್ಮನ ಜ್ವಾಳ ಕೊಟ್ಟು ಕಳಿಸಿದ್ದು ಆ ತುಕ್ಯಾ ಇಡೀ ಊರಿಗೊರೇ ಹೇಳಿ ಗೌಡನ ಗುಣಗಾನ ಮಾಡಿದ್ದ. ಇದು ಒಂದೇ ಅಲ್ಲ ಇಂಥಾ ನೂರೆಂಟು ತಿಪಲಗಳನ್ನು ಗೌಡ ಸಲೀಸಾಗಿ ಬಗಿಹರಸತಿದ್ದ. ಸಮಗಾರ ಬರಮಣ್ಣನ ಮಗಳು ಲಚ್ಚಿ ಅವರದೇ ಜಾತಿ ಸೋಮಣ್ಣನೊಂದಿಗೆ ಓಡಿ ಹೋಗಿ, ವರ್ಷದ ಮ್ಯಾಲ ತಿರುಗಿ ಊರಿಗೆ ಬಂದರ ಸೋಮಣ್ಣನ ಅಪ್ಪ ಅವರಿಬ್ಬರ ಮದಿವಿಗೆ ತಕರಾರು ಮಾಡಿದಾಗ, ಆ ನ್ಯಾಯ ಗೌಡರ ಅಂಗಳಕ್ಕೇ ಬಂದಿತ್ತು.

ಗೊಂಡು..ಹೊಂದಕೊಂಡು ಇತ್ತು. ಊರ ಗೌಡನೇ ಜಾತಿ, ಧರ್ಮದ ಗೊಡವೆ ಇಟ್ಗೊಂಡಿಲ್ಲ ಅಂದ್ರ ಉಳಿದವರಿಗರೆ ಯಾಕ ಬೇಕು..? ಕೆಲವು ಹಳ್ಳಿಯೊಳಗ ಪಂಚಾಯತಿಕಿ ಅಂದ್ರ ಅವರವರ ಜಾತಿ ಮುಖಂಡರ ಮುಂದೇ ಅವು ಬಗಿ ಹರೀಬೇಕು. ಆದರ ಸಂಗಮದ ಕಥೀನೇ ಬೇರೆ. ಇಲ್ಲಿ ಎಲ್ಲಾ ಜಾತಿ ಜಗಳ, ಜುಬಟಿ ಏನೇ ಇದ್ದರೂ ಈ ಬಾಪೂಗೌಡನ ಮುಂದೆ ಬರತಿದ್ದು. ಗೌಡ ತನ್ನ ಮನಿ ಅಂಗಳದ ಜೇಜಿಯೊಳಗ ಹಳದಿ ರೇಷ್ಮೆ ಪಟಗಾ ಸುತಗೊಂಡು, ಹಸರ ದಡಿದು ಮಲಮಲ ದೋತರ ಉಟಗೊಂಡು, ತೆಕ್ಕೆಕ ಬೆನ್ನ ಹಚ್ಚಿ ಒಂದು ಗತ್ತಿನ್ಯಾಗ ಕುಂತ ಅಂದ್ರ ಅರ್ಧ ಪಂಚಾಯತಿಕಿ ಮುಗಂದಗೇ. ಆ ಗಡಸು ಧ್ವನಿ, ದೊಡ್ಡ ಕಣ್ಣು, ಹುರಿ ಮೀಸೆ, ಅಗಲ ಮುಖ, ಕೆಂಪ ಬಣ್ಣ ಗೌಡನ ಗತ್ತಿಗೆ ಬರೊಬ್ಬರಿ ಸಾಥಿ ಆಗಿದ್ದು. ಮನಿ ಬಿಡೊವಾಗ ಜಗಳಾಡ್ತಾ 'ಆಗೇ ಹೋಗಲಿ ನೋಡಮ್ಮು' ಅನಕೊಂತ ಬಂದವರೆಲ್ಲಾ ಈಗ ಗೌಡನ ಎದುರು ಕಣ್ ಬಿಟ್ಗೊಂಡು, ಗೌಡನ ಗತ್ತು ನೋಡೊದರಲ್ಲಿಯೇ ಸುಸ್ತಾಗತಿದ್ದರು.

ಅವತ್ತೊಂದಿನ ಕುರುಬರ ಲಗಮಣ್ಣ ಲಮಾಣಿಗೇರ ತುಕ್ಯಾ ತನ್ನ ಹೊಲದಾಗಿನ ಕಬ್ಬ ಮುರದಾನ ಅಂತ ಹೇಳಿ ಗೌಡನ ಹತ್ತರ ಫಿರ್ಯಾದು ತಂದ್ರ, ಗೌಡ ಅದೆಷ್ಟು.. ಏನು.. ಎಂದೆಲ್ಲಾ ಕೇಳಿ ಲಗಮಣ್ಣನ ಹೊಲದಾಗ ಎರಡು ದಿನ ಕೆಲಸಾ ಮಾಡಬೇಕು ಅಂತ ತೀರ್ಪು ಕೊಡ್ತು, ನಂತರ ತನಗೆ ಭೇಟಿಯಾಗಲು ಹೇಳಿ ಅವನಿಗೆ ಒಮ್ಮನ ಜ್ವಾಳ ಕೊಟ್ಟು ಕಳಿಸಿದ್ದು ಆ ತುಕ್ಯಾ ಇಡೀ ಊರಿಗೊರೇ ಹೇಳಿ ಗೌಡನ ಗುಣಗಾನ ಮಾಡಿದ್ದ. ಇದು ಒಂದೇ ಅಲ್ಲ ಇಂಥಾ ನೂರೆಂಟು ತಿಪಲಗಳನ್ನು ಗೌಡ ಸಲೀಸಾಗಿ ಬಗಿಹರಸತಿದ್ದ. ಸಮಗಾರ ಬರಮಣ್ಣನ ಮಗಳು ಲಚ್ಚಿ ಅವರದೇ ಜಾತಿ ಸೋಮಣ್ಣನೊಂದಿಗೆ ಓಡಿ ಹೋಗಿ, ವರ್ಷದ ಮ್ಯಾಲ ತಿರುಗಿ ಊರಿಗೆ ಬಂದರ ಸೋಮಣ್ಣನ ಅಪ್ಪ ಅವರಿಬ್ಬರ ಮದಿವಿಗೆ ತಕರಾರು ಮಾಡಿದಾಗ, ಆ ನ್ಯಾಯ ಗೌಡರ ಅಂಗಳಕ್ಕೇ ಬಂದಿತ್ತು. ಬಾಪೂಗೌಡ ಬರೀ ನ್ಯಾಯಾ ಬಗಿಹರಿಸಿದ್ದು ಮಾತ್ರ ಅಲ್ಲ, ಅವರದೇ ಮನಿ ಅಂಗಳದಾಗ ಅದೇ ಗಳಿಗೆಯೊಳಗ ಅವರಿಬ್ಬರ ಲಗ್ನ ಮಾಡಿಸಿ ಎಲ್ಲರಿಗೂ ಊಟಾ ಹಾಕಿ ಕಳುಹಿಸಿದ್ದ.

ಸಂಗಮದಲ್ಲಿ ಕುಂತು ಉಣ್ಣವರು ಇಬ್ಬರೇ ಇಬ್ಬರು. ದುಡಿಲಿಕ್ಕ ಆಗದೇ ಇರೋ ಮುದಕರು ತಪ್ಪದರ ಎಳೆ ಮಕ್ಕಳು. ಆ ಊರಾಗಿನ ವಿರಕ್ತ ಮಠದ ಸ್ವಾಮಿ ಸೈತಾ ಮಠದ ಹೊಲದಾಗ ಕೆಲಸಾ ಮಾಡೇ ಊಟಾ ಮಾಡೂದು. ಹಿಂಗಾಗಿ ಇಡೀ ಊರಾಗ ಬಡತನ ಅನ್ನೂದೇ ಇರಲಿಲ್ಲ. ಮೇಲಾಗಿ ಈ ಸೀಮೆಯೊಳಗಿನ ಭೂಮಿ. ಬಂಗಾರ ಬಿತ್ತಿ. ಬಂಗಾರ ಬೆಳೆಯೂ ಪೈಕಿ. ಬಾಪೂಗೌಡ ಸೈತ ಮನ್ಯಾಗ ಅಷೆಲ್ಲಾ ಆಳು ಮಕ್ಕಳು ಇದ್ದರೂ ನಸುಕೀಲೇ ಎದ್ದು, ತೋಟದ ಕಡೆ ಹೋಗಿ, ಕಬ್ಬಿಗೆ ನೀರು ಉಣಿಸಿ ಬರವನು. ಊರಾಗ ಏನರೇ ಹಬ್ಬ ಹುಣ್ಣಿವಿ ಆದಾವ ಅಂದರ ಎಲ್ಲಾ ಜಾತಿ, ಧರ್ಮದವರು ಕೂಡೇ ಆಚರಿಸವರು. ಮಹಾನವಮಿ ಹಬ್ಬದಾಗ ದೊಡ್ಡಾಟ ಮಾಡೂಮುಂದ ಸತಃ ಗೌಡನೇ ಕಥಿ ಹುಡಕಿ, ಅದರಾಗ ಬಾಶ್ಯಾಸಾಬನ ಮಗನಿಗೊಂದು, ಕಾಸೀಮನ ಮಗನಿಗೊಂದು ಪಾತ್ರ ಕೊಡಸತಿದ್ದ. ಗೌಡನ ಮಗ ರುದ್ರಪ್ಪಗ ಆ ವರ್ಷ ಸಹದೇವನ ಪಾತ್ರವಿತ್ತು. ಅವನು 'ಪ್ರತೀ ಸಾರಿ ಕುರುಬರ ಲಚ್ಚಪ್ಪನೇ ಅರ್ಜುನ ಪಾತ್ರ ಯಾಕ ಮಾಡಬೇಕು...? ಅಂತ

ಕೇಳಿದಾಗ ಗೌಡ ಅಂವಾ ಮತ್ತ ಪ್ರೆಶ್ನೆ ಕೇಳಲಾರದಂಗ ಉತ್ತರಿಸಿದ್ದ. ಹಿಂಗ ಬಾಳ ನೇರ, ನಿಷ್ಟುರ, ನ್ಯಾಯಪರ ಮನುಷ್ಯಾ ಬಾಪೂಗೌಡ ಅಂತ ಸಂಗಮದಾಗ ಗುರತಿಸಿಕೊಂಡಿದ್ದ. ಸಂಗಮ ನಸುಕುನ್ಯಾಗೇ ಏಳತಿತ್ತು. ಇಡೀ ಊರಿಗೇ ಒಂದು ಗಡಿಯಾರದ ರೀತಿಯಲ್ಲಿ ಬಸರೀ ಗಿಡದ ಮಸೂತಿ ಬುಂಗಾ ಇತ್ತು. ನಸುಕಿನ್ಯಾಗ ಮುಲ್ಲಾ ಕೂಗಿದ್ದೇ ಎಲ್ಲರ ಮನೆಗಳಲ್ಲಿ ಚಟುವಟಿಕೆ ಶುರು ಆಗತಿದ್ದು. ಎಲ್ಲರ ಮನೆಗಳಲ್ಲಿ ಟಪ...ಟಪ... ಅಂತ ರೊಟ್ಟಿ ಬಡಿಯೋ ಅವಾಜ ಕೆಳಸತಿತ್ತು. ಆ ಅವಾಜಲ್ಲೂ ಒಂದು ಥರಾ ನಾದ ಇತ್ತು, ಏಕತಾನತೆ ಇತ್ತು. ಒಗ್ಗಟ್ಟಿತ್ತು.

****

ಊರೂ ಬೆಳೀತಾ ಹೊಯ್ತು. ಹಂಗೇ ಗೌಡನ ಮಕ್ಕಳೂ ದೊಡ್ಡವರಾದರು. ಇತ್ತ ಬಾಶ್ಯಾಸಾಬನ ಮಕ್ಕಳೂ ಕೈಗೆ ಬಂದರು. ಹೆಣ್ಣು ಮಕ್ಕಳ ಮದುವೆನೂ ಆಯ್ತು. ಗೌಡ ಹಿರಿ ಮಗ ರುದ್ರಪ್ಪನ ಮದುವಿ ಮಾಡಿದ್ದ. ಅವನ ಹೆಂಡತಿ ಅಲ್ಲೇ ಬಾಜೂ ಹಳ್ಳಿಯ ಗೌಡನ ಮಗಳು. ರುದ್ರಪ್ಪ ಬಿ.ಎ. ಮಟ ಕಲತರೂ ಕಟಕಟಿ ಅಂಕಗಳು. ಗೌಡಗೆ ಮಗನ್ನ ನೌಕರಿಗೆ ಕಳಸಬೇಕು ಅಂತೆನೂ ಇರಲಿಲ್ಲ. ಹೀಗಾಗಿ ರುದ್ರಪ್ಪ ಊರಾಗ ಸಣ್ಣಪುಟ್ಟ ರಾಜಕಾರಣ ಮಾಡಕೊಂಡು ದಿನಚರಿ ನಡೆಸಾಕತ್ತಿದ್ದ. ಇನ್ನು ಎರಡನೇ ಮಗ ಸಂಗಮೇಶ ಇನ್ನೂ ಪದವಿಯೊಳಗಿದ್ದ. ಬಾಶ್ಯಾಸಾಬನ ಹಿರಿಯ ಮಗ ಅಬ್ದುಲ್ಲಾ ಇಂಡಿಯೊಳಗ ಉರ್ದು ಶಾಲೆಯೊಳಗ ಮಾಸ್ತರ ಆಗಿದ್ದ. ಮತ್ತೊಬ್ಬ ದಂಧೆ ನೋಡಕೋತಿದ್ದ. ಕೊನೆಯವನು ಇನ್ನೂ ಓದುವದರಲ್ಲಿದ್ದ. ಬಾಶ್ಯಾಸಾಬ್ ಸೈತ ತನ್ನ ಮೂರೂ ಹುಡಗಿಯರಿಗೆ ಅದಗಾಲೇ ಮದುವೆ ಮಾಡಿದ್ದ. ಚುಲೋ ಚುಲೋ ಮನಿತನ ನೋಡಿ ಕೊಟ್ಟಿದ್ದ. ಗೌಡ ಮತ್ತು ಬಾಶ್ಯಾಸಾಬ್ ನಡುವಿನ ದೋಸ್ತಿ ಮೊದಲಿನಂಗೇ ಇತ್ತು. ಅದರಾಗೂ ಗೌಡನ ಹೆಂಡತಿ ಮತ್ತ ಬಾಶ್ಯಾಸಾಬನ ಹೆಂಡತೇರ ನಡುವ ಇರೋ ದೋಸ್ತಿಯಲ್ಲಿ ಮಾತ್ರ ಯಾವದೇ ಫರಕ್ ಕಾಣಸ್ತಿರಲಿಲ್ಲ. ಬಾಪೂಗೌಡ ಮತ್ತ ಬಾಶ್ಯಾಸಾಬ್ ಮಾತ್ರ ಈಗ ಮೊದಲಿನಂಗ ತಾಸುಗಟ್ಟಲೆ ಕುತಗೊಂಡು ಮಾತಾಡುದು ಕಮ್ಮಿ ಆಗ್ಯೆತಿ. ಹಂಗಂತ ಹೇಳಿ ಅವರ ನಡುವ ಯಾವದೇ ತೆಳ್ಳನೆಯ ಗೆರೆಯೂ ಮೂಡಿಲ್ಲ.

ಗೌಡನ ಹಿರಿ ಮಗ ರುದ್ರಪ್ಪ. ಈಗೀಗ ಅಪ್ಪಗ ಪ್ರೆಶ್ನೆ ಮಾಡಲಿಕ್ಕ ಶುರು ಮಾಡಿದ್ದ. ಅಂವಂದು ಒಂದೆ ತಕರಾರು. 'ನೀನು ಮುಸಲರನ್ನು ಬಾಳ ನಂಬತಿ. ಅಷ್ಟೆಲ್ಲಾ ಚುಲೋ ಅಲ್ಲ..!' ಅಂತ. ಅದಕ್ಕ ಬಾಪೂಗೌಡ 'ನೋಡು ನೀನು ನಿನ್ನೆ ಮೊನ್ನೆ ಹುಟ್ಟದವನು. ಇನ್ನೂ ನಿನ್ನ ತಲೆ ಮಾಸ ಆರಿಲ. ನಾವು ಅವರು ನೂರಾರು ವರ್ಷಗಳಿಂದ ಅಣ-ತಮದೇರಂಗ ಬಂದೀವಿ. ನಿನಗ ಅದೆಲ್ಲಾ ಗೊತ್ತಾಗಂಗಿಲ್ಲ ಹೋಗು ನಿನ್ನ ಕೊಳಕು ರಾಜಕಾರಣ ನನ್ನ ಮುಂದ ತರಬ್ಯಾಡ. ಇನ್ನೊಂದು ಸಾರಿ ನಿನ್ನ ಹೆಂಡತಿ ಮುಂದ ನಿನಗ ಬೈಯೂವಂಗ ಮಾಡಕೋಬ್ಯಾಡ' ಎಂದಿದ್ದ. ಆಗ ರುದ್ರಪ್ಪ ಮುಖ ಸಣ್ಣ ಮಾಡಕೊಂಡು ಮರು ಮಾತಾಡದೇ ನಡದಿದ್ದ. ಮೊದಲು ಅಂವಾ ಹಿಂಗ ಇರಲಿಲ್ಲ. ಯಾವಾಗ ಅವನು ಪ್ರತಿಗಾಮಿ ಪಕ್ಷ ಸೇರಕೊಂಡನೋ ಆವಾಗಿನಿಂದ ಅವನ ವಿಚಾರೇ ಬದಲೀ ಆಗ್ಯಾವ. ಸೊಲ್ಲಾಪುರದಿಂದ ಆಗಾಗ ಬರೋ ದೇಸಯಿ ಊರಾಗಿನ ಕೆಲ ಹುಡಗರನ್ನು ಊರ ಹೊರಗಿನ ಮಲಕಣ್ಣ ದೇವರ ಗುಡಿಯೊಳಗ ಕೂಡಿಸಿಕೊಂಡು ಅದೇನು ಆ ಹುಡುಗರ ಕಿವಿಯೊಳಗ ಊದ್ತಾನೋ ಗೊತ್ತಿಲ್ಲ. ಅವು ಮನಿಗಿ ಬಂದಿದ್ದೇ ಅವರ ಅಪ್ಪ ಅವ್ವನ ಮುಂದ ಮುಸಲರು ಹಂಗ, ಅವರು ಹಿಂಗ ಅಂತ ಕಾರಕೋಳಿಕ್ಕೇ ಶುರು ಮಾಡ್ತಾವ. ಈ ಹುಡುಗರು ಹೇಳುದು ಕೇಳಿ, ಕೇಳಿ ಅವರಿಗೂ ತಲೆ ಚಿಟ್ಟು ಹಿಡದೈತಿ. ಆದರೂ ಇವು ಹುಡುಗ ಬುದ್ಧಿ ಏನೋ ಮಾತಾಡತಾವ ಅಂತ ಅವರು ನಿರ್ಲಕ್ಷ ಮಾಡತಿದ್ದರು. ಯಾವಾಗ ಒಂದು ದಿನ ಹನುಮಂತ ದವರ ಗುಡಿ ಮುಂದ ಬಾಪೂಗೌಡನ ಮಗ ರುದ್ರಪ್ಪ ಇಡೀ ದೇಶದ ಚರಿತ್ರೆ ತನ್ನ ಕಣ್ಣ ಮುಂದೇ ನಡೀತು ಅನ್ನೂವಂಗ ಎಲ್ಲಾ ಮುಸ್ಲಿಮ್ ಅರಸರನ್ನು ಸಾರಾಸಗಟಾಗಿ ಬೈಯ್ಯೋಂತ ಭಾಷಣ ಮಾಡೋದು ಕೇಳಿ, ಬಾಶ್ಯಾಸಾಬ್ ಮಗಾ ಅಬ್ದುಲ್ಲಾ, ವಿಷಯ ಬಾಪೂಗೌಡನ ಕಿವಿಗಿ ಹಾಕಿದ್ದ. ಗೌಡ ಗರಮ್ ಆಗಿ, ಅವನು ಬರೋದನ್ನೇ ಕಾಯ್ತಿದ್ದ. ಸಂಜೀಮಟ ಅವನು ಬರಲೇ ಇಲ್ಲ. ಹೊತ್ತು ಮುಳಗಿದ ಮ್ಯಾಲ ಅವನ ಧ್ವನಿ ಕೇಳಸತು. ಗೌಡರು ಇನ್ನೂ ಅದೇ ಕಾವಿನಲ್ಲಿದ್ದರು. ಅವನು ಬರೋದೇ ತಡ

'ಬಾ ಕೂತ್ಗೋ ಇಲ್ಲಿ. ಗುಡಿಮುಂದೆ ಏನು ಭಾಷಣ ಮಡಿದೆ..?'

'ನಿನ್ನ ಮುಂದ ಹೇಳುದು ಅಲ್ಲ'

'ಝಾಡಿಸಿ ಎದಿಗೆ ಒದ್ದು ಬಿಡ್ತೀನಿ..! ಹಲ್ಕಟ್ ಬೋಳೀಮಗನ್ನ ತಗೊಂಡು ಬಂದು.. ಊರ ಒಡದು ಲೀಡರಕಿ ಮಾಡ್ತೀಯಾ..?'

'ಅಪ್ಪಾ, ನಿನಗೆ ಏನೂ ಗೊತ್ತಿಲ್ಲಾ ಸುಮ್ಗ ಮಾತಾಡಬ್ಯಾಡ.'

'ನಿನಗೆ ಏನು ಗೊತ್ತೈತಿ ಬೊಗಳು' ತಾಯಿ ಮತ್ತು ಹೆಂಡತಿ ಅಲ್ಲೇ ಮರೆಗೆ ನಿಂತಿದ್ದರು.

'ಚಾವಡಿ ಬಾಜೂ ಮತ್ತೊಂದು ಮಸೀದಿ ಕಟ್ಯಾರ'

'ಅವರು ಕಟ್ಟಿದರೆ, ನಿನಗೇನಾಯ್ತು..?'

'ಇದೇ ನಿನಗೆ ಗೊತ್ತಿಲ್ಲ ಅನ್ನೋದು'

'ಬೋಳಿಮಗನೇ ಅದೇನು ಹೇಳು. ಸುಮ್ಮನೇ ಹೊಯ್ಕೋಬೇಡ'

'ಹೀಗೇ ಆದರೆ ಮುಂದೆ ಇಡೀ ಹಳ್ಳಿ ತುಂಬಾ ಬರೀ ಮಸೀದಿಗಳೆ ಕಾಣ್ತಾವೆ'

'ನೀನೂ ಗುಡಿಗಳನ್ನು ಮಾಡು ಇಡೀ ಊರ ತುಂಬಾ. ನಿನಗ್ಯಾರು ಬ್ಯಾಡ ಅಂದವರು..?

'ಅವರಿಗೆ ಫಾರೆನ್‌ದಿಂದ ದುಡ್ಡು ಬರತೈತಿ ನಮಗ್ಯಾರು ಕೋಡ್ತಾರೆ..?'

'ನಿಮ್ಮವರೂ ಫಾರೆನ್‌ದಲ್ಲಿ ಇದ್ದರೆ ತರಿಸಿಕೊಳ್ರಿ'

'ನೀವು ಅವರ ಪರವಾಗಿ ಮಾತಾಡ್ತೀರಿ ಅಂತ ನನಗ ಗೊತ್ತೈತಿ'

'ಲೇ.. ನಾನು ಯಾರ ಪರವಾಗಿನೂ ಇಲ್ಲ. ಮನುಷ್ಯತ್ವದ ಪರವಾಗಿ ಮಾತಾಡ್ತಾ ಇದೀನಿ. ಒಂದು ತಿಳಕೊ.. ಎಲ್ಲರಲ್ಲಿ ಎಲ್ಲರೂ ಒಳ್ಳೆಯವರಿಲ್ಲ.. ಹಾಗೆನೇ ಎಲ್ಲರೂ ಕೆಟ್ಟವರಿಲ್ಲ. ಈ ನೀನೇ ನೋಡು ನನ್ನ ಹೊಟ್ಟೆಯಲ್ಲಿ ನಿನ್ನಂಥಾ ಕಮಂಗಿ ಹುಟ್ಟದಾ.. ಏನು ಮಾಡೂದು..? ಅದೆಲ್ಲಾ ಹೋಗಲಿ ಈಗ ಅವರು ಮಸೀದಿ ಕಟ್ಟಿದರು ನೀ ಮುಂದ ಏನು ಮಡಬೇಕು ಅಂತ ಮಾಡೀದಿ..?

'ನಮಗೊತ್ತಿದೆ ಏನು ಮಾಡಬೇಕು ಅಂತ. ಮುಂದಿನ ಸೋಮವಾರ ನಮ್ಮ ಲೀಡರು ಬರ್ತಾರ. ಆಗ ನಾವು ಏನು ಮಾಡಬೇಕು ಅಂತ ತೀರ್ಮಾನ ತಗೋತೀವಿ.'

'ಅವನು ಯಾವನೋ ನಿಮ್ಮ ಲೀಡರು ಕೊಳಕು ಬೋಳಿಮಗ..? ಕೂಡಿ ಬದುಕೋ ಮಂದಿ ನಡುವ ಗೋಡೆ ಕಟ್ಟಂವ. ಅದೇನು ಕಿಸಿತೀರೋ ನೋಡತೀನಿ. ಇನ್ನೊಂದು ಸಾರಿ ನೀ ಹಿಂಗೇ ಯಾರದರೇ ಧರ್ಮ, ಜಾತಿ ಬೈದ ಬಗ್ಗೆ ನನಗ ಗೊತ್ತಾದರೆ ಒದ್ದು ಮನಿ ಬಿಟ್ಟು ಹೊರಗ ಹಾಕ್ತೀನಿ..!'

'ನೀನೇನು ಹಾಕೋದು ನಾನೇ ಹೋಗತೀನಿ' ಅಂದದ್ದೇ ಧರಧರ ಹೆಂಡತಿ ಕೈಹಿಡಿದು ಎಳೆದು ನಡದೇ ಬಿಟ್ಟ,

'ಹೋಗೋಗು ಏನು ಹೆದರ್ತೀನಿ ಅಂತ ಮಾಡಿಯನೂ..? ಪ್ರಸಂಗ ಬಂದರ ಎಲ್ಲಾ ಆಸ್ತಿ ಬಡ ಬಗ್ಗರಿಗೆ ದಾನ ಮಾಡ್ತೀನಿ ನಿನ್ನಂಥ ನೀಚಗ ಕೊಡಲ್ಲ.' ಹೋಗುವಾಗ ಹೊರಳಿ,

'ನಿನಗೆ ಈಗ ಗೊತ್ತಾಗಲ್ಲ ಅವರೇನು ಅಂತ.. ಇಡೀ ಊರಿಗೆ ಊರೇ ಹತ್ತಿ ಉರಿಯುವಾಗ ನಿನಗೆ ನನ್ನ ಮತು ನೆನಪಾಗ್ತದೆ'

'ಏ ನೀಚಾ ಹೋಗೋ.. ನಿನ್ನಂತ ಭಂಡನೇ ಗಾಂಧೀಯಂಥಾ ಮಹಾತ್ಮನ ಎದೆಗೆ ಗುಂಡಿಟ್ಟದ್ದು. ನಡಿ ಒಂದ್ನಿಮಿಷನೂ ನನ್ನ ಮುಂದ ನಿಲ್ಲಬ್ಯಾಡ' ಎಂದು ಗಧರಿಸಿದ್ದ. ಗೌಡನ ಮುಖದಲ್ಲಿ ಸಿಟ್ಟು ಇನ್ನೂ ಇಳದಿರಲಿಲ್ಲ. ಬಾಪೂಗೌಡಗೆ ಈಗ ತನ್ನ ಮಗ

ಬಾಪೂಗೌಡನಿಗೆ ಅದಾಗಲೇ ವಯಸ್ಸಾಗಿತು. ಅನಾರೊಗ್ಯ ಬೇರೆ, ಹಾಸಿಗೆ ಹಿಡಿದು ತಿಂಗಳೇ ಕಳೆದಿವೆ. ಇಂದೋ ನಾಳೆನೋ ಅನ್ನುವ ಸ್ಥಿತಿ. ಮಗ ರುದ್ರಪ್ಪ ಹೆಂಡತಿಯ ಸಮೇತ ಕೊನೆಯ ಗಳಿಗೆಯಲ್ಲಿ ಊರವರು ಬೈದಿದ್ದಕ್ಕಾಗಿ ಬಂದಿದ್ದಾನೆ. ಸರಿಯಾಗಿ ಮಾತನಾಡಲೂ ಆಗುತ್ತಿಲ್ಲ. ಮಗ ರುದ್ರಪ್ಪನನ್ನು ಹತ್ತಿರ ಕರೆದು, ಕೊನೆಯ ಒಂದೇ ಒಂದು ಮಾತನ್ನು ಆತ ಎಲ್ಲ ರುದುರಿಗೆ ಮಾತಾಡಿ ನಿಸ್ತೇಜನಾಗಿದ್ದ. ಆ ಮಾತು ಎಲ್ಲರಿಗೂ ಕೇಳಿಸುವ ಹಾಗಿತ್ತು. 'ಊರು ಒಡೆಯೋ ಕೆಲಸಾ ಮಾಡ ಬೇಡಾ' ಅಂತ. ಅಪ್ಪನ ಮಣ್ಣು ಮಾಡಿದ್ದೇ ರುದ್ರಪ್ಪ ತನ್ನ ರಣ ರಂಗಕ್ಕೆ ಸಜ್ಜಾದ. ಹಿಂದಿನ ದಿನ ದೇಸಾಯಿ ಇವನ ಮೆದುಳನ್ನು ಚೆನ್ನಾಗಿ ತಿಕ್ಕಿ ತೊಳೆದಿದ್ದ. ಇನ್ನೂ ಅದೇ ಗುಂಗಿನಲ್ಲಿದ್ದ. ಒಂದು ನೆಪಕ್ಕಾಗಿ ಕಾಯುತ್ತಿದ್ದ. ಅವ್ವ ರತ್ನಾಬಾಯಿ ಮಾತು ಅವನಿಗೆ ಲೆಕ್ಕಕ್ಕೇ ಇರಲಿಲ್ಲ.

ಸೇರಿರುವ ಪ್ರತಿಗಾಮಿ ಪಕ್ಷದ ತತ್ವಗಳೇನು.. ಸಿದ್ಧಾಂತಗಳೇನು.. ಎನ್ನುವದರ ಬಗ್ಗೆ ಚಿತ್ರಣ ಮೂಡತೊಡಗಿತು. ತನ್ನ ಮಗ ಹೀಗೆ ಮನೆ ಬಿಟ್ಟು ಹೋದದ್ದರ ಬಗ್ಗೆ ಖಂಡಿತಾ ಬಾಪೂಗೌಡನ ಮುಖದಲ್ಲಿ ನೋವಿರಲಿಲ್ಲ. ಬದಲಾಗಿ ಮಗ ಹೋಗಿ ಹೋಗಿ ಇಂಥಾ ಪಕ್ಷವನ್ನು ಆಯ್ದುಕೊಂಡನಲ್ಲ! ಎನ್ನುವ ಬೇಸರವಿತ್ತು. ಮುಂದಾಗಬಹುದಾದ ಅನಾಹುತ ಗಳ ಬಗ್ಗೆಯೂ ಆತ ಲೆಕ್ಕಿಸಿದ್ದ. ಬಾಶ್ಯಾಸಾಬ್ ತನ್ನ ಜೋಡಿ ಇತ್ತಿತ್ತಲಾಗಿ ಮಾತು ಕಡಿಮೆ ಮಾಡಿದ್ದು ಇದೇ ಕಾರಣಕ್ಕಾಗಿಯೋ ಏನೋ? ಎಂದುಕೊಂಡ. ಅದೇ ವೇಳೆಗೆ ಇಂಥಾ ಸಾಮರಸ್ಯದ ಹಳ್ಳಿಗಳಲ್ಲಿಯೂ ಈ ಬಗೆಯ ಪಕ್ಷದ ಜನ ಅದು ಹೇಗೆ ವಿಷ ಬಿತ್ತುವಲ್ಲಿ ಯಶಸ್ವಿಯಾಗುತ್ತಾರೆ ಎನ್ನುವ ಬಗ್ಗೆ ಬಾಪೂಗೌಡ ತುಂಬಾ ನೊಂದುಕೊಂಡ.

ಹತ್ತಿಪ್ಪತ್ತು ಮುಸ್ಲಿಮ್ ಇತ್ತೀಚೆಗೆ ಗುಲಬರ್ಗಾದಲ್ಲಿ ನಡೆದ ಜಮಾತ ಕಾರ್ಯಕ್ರಮಕ್ಕೆ ಹೋಗಿ ಬಂದ ಮೇಲೆ ಸಂಗಮದಲ್ಲಿ ಇನ್ನಷ್ಟು ಬಿರುಕುಗಳು ಕಾಣಿಸತೊಡಗಿದವು. ಈ ತಂಡದ ಲೀಡರ್ ಆಗಿದ್ದವನು ಬಾಶ್ಯಾಸಾಬನ ಹಿರಿಯ ಮಗ ಅಬ್ದುಲ್ಲಾ. ಈಗೀಗ ಅವನು ಶಾಲೆ ಮುಗಿಸಿ ಬಂದದ್ದೇ, ಇಡೀ ಹಳ್ಳಿಯಲ್ಲಿ ತಿರುಗಿ, ತನ್ನ ಧರ್ಮದ ಜನರಿಗೆ ನಮಾಜ್‌ಗೆ ಬರುವಂತೆ ಮನ ಒಲಿಸುತ್ತಿದ್ದಾನೆ. ಪ್ರತಿ ಶುಕ್ರವಾರಕ್ಕೊಮ್ಮೆ ಇವನೇ ಮುಂದಾಗಿ ಮಸೀದಿಯಲ್ಲಿಯ ಕಾರ್ಯಕ್ರಮ ನಡಿಸಿಕೊಡ್ತಿದ್ದ. ಅದು ಹೇಗೋ ಬಾಶಾಸಾ ಬನೂ ಕೂಡಾ ಈಗೀಗ ಪಕ್ಕಾ ಮುಸ್ಲಿಂ ಆಗಿ ಬದಲಾಗಿದ್ದ. ಐದು ಹೊತ್ತು ತಪ್ಪದೇ ನಮಾಜ್ ಮಾಡುತ್ತಿದ್ದ. ಆಗಾಗ ಧರ್ಮ ಪ್ರಚಾರಕ್ಕಾಗಿ ಬರು ಮೌಲ್ವಿಗಳಿಗೆ ತನ್ನ ಮನೆಯ ಲ್ಲಿಯೇ ಸತ್ಕಾರ ಮಾಡತ್ತಿದ್ದ. ಈಗ ಊರಾಗ ಅಲ್ಲಲ್ಲಿ ಹಸಿರು ಜಂಡಾಗಳು ಹರಾಡುದು ಕಾಣಸತಿತ್ತು. ಅದರಲ್ಲೂ ಬಜೆ ಕಾಸೀಮನ ಅಂಗಡಿ ಮೇಲಿನ ಜಂಡಾ ಎದ್ದು ಕಾಣು ವಂತಿತ್ತು., ಕಣ್ಣು ಕುಕ್ಕುವಂಗಿತ್ತು. ಈಗ ಬಶ್ಯಾಸಾಬ ಮುಂಚಿನಂತೆ ಬಾಪೂಗೌಡನ ಮನೆಕ ಡೆಗೆ ಅಷ್ಟಾಗಿ ಹಾಯುವದಿಲ್ಲ. ಗೌಡನೇ ಮುಂದಾಗಿ ಮಾತನಾಡಿಸಿದರೆ ಒಂದೆರಡು ಮಾತು ಅಷ್ಟೇ. ಅವನಿಗೂ ತನ್ನ ಧರ್ಮದ ಗುರುಗಳ ಒತ್ತಡ ಒಂದು ಬಗೆಯ ಕಿರಕಿರಿ ಯನ್ನುಂಟು ಮಾಡಿತ್ತು. ಸಂಗಮದಂಥ ಊರು ಹೀಗೆ ಸಾಮರಸ್ಯವಿಲ್ಲದೇ ಹೋಳಾಗುತ್ತಿ ರುವದು ಕಂಡು ಒಳಗೊಳಗೇ ಕುದಿಯುತಿದ್ದ. ಇಂದು ತನ್ನದೇ ಊರಲ್ಲಿ ತನ್ನನ್ನು ಜನ ಗುಮಾನಿಯಿಂದ ನೋಡುವ ಬಗ್ಗೆ, ಎದೆ ತುಂಬಾ ಚೂಪಾದ ಮುಳ್ಳು ಚುಚ್ಚಿದಂಗಾಗ ತಿತ್ತು. ಎಲ್ಲಿಯವರೆಗಂದರೆ ಇಂಥಾ ಸಣ್ಣ ಊರುಗಳಲ್ಲಿಯೂ ತಮ್ಮವರ ಉಳಿವಿನ ಪ್ರಶ್ನೆ ಯಾಗಿ ಕಾಡತಿತ್ತು. ಆದರೂ ಬಾಶ್ಯಾಸಾಬನ ಮನದ ಮೂಲೆಯಲ್ಲಿ ಎಲ್ಲೋ ಒಂದು ಕಡೆ ತಪ್ಪು ಭಾವನೆ ಕಟಿಯುತ್ತಿದೆ. ಧರ್ಮದ ಹೆಸರಲ್ಲಿ ಏನೋ ಆಗಬಾರದ್ದು ಆಗುತ್ತಿದೆ. ಅದು ತನ್ನ ಬಾಲ್ಯದ ಗೆಳೆಯ ಬಾಪೂಗಾಗಲೀ ತನಗಾಗಲಿ ಗೊತ್ತಾಗುತ್ತಿಲ್ಲ ಎಂದಲ್ಲ, ಗೊತ್ತಿದೆ ಆದರೆ ಯಾವದೋ ಒಂದು ಬಗೆಯ ಅನಿವಾರ್ಯತೆ ತಮ್ಮನ್ನು ಬಲವಾಗಿ ಕಟ್ಟಿ ಹಾಕುತ್ತಿದೆ ಎಂದು ಯೋಚ್ನೆ ಮಾಡೋದರೊಳಗೆ ಎತ್ತಿನ ಗಾಡಿಯಲ್ಲಿ 'ಮಹಾಜನ ಗಳೆ ಇಂದು ನಮ್ಮೂರಿಗೆ ಸೊಲ್ಲಾಪೂರದ ಪ್ರತಿಗಾಮಿ ಪಕ್ಷದ ಮಹಾನೇತಾರ ದೇಸಾಯಿ ಆಗಮಿಸುತ್ತಿದ್ದಾರೆ. ಯಾವತ್ತೂ ಹಿಂದುಗಳು ಹನುಮಂತ ದೇವರ ಗುಡಿಯ ಪಟಂಗ ಣದಲ್ಲಿ ಸಂಜೆ ನಾಲ್ಕು ಘಂಟೆಗೆ ಸೇರಬೇಕೆಂದು ಕೇಳಿಕೊಳ್ಳಲಾಗಿದೆ.' ಎಂದು ಮೈಕಲ್ಲಿ ಕೂಗುವದು ಕೇಳಿತು. ಆ ದೇಸಾಯಿ ಬರುತ್ತಾನೆ ಎನ್ನುವದೇ ಮುಸ್ಲಿಮರಿಗೆ ಒಂದು ದೊಡ್ಡ ಭಯ. ಆತ ಬಾಯಿ ಬಿಟ್ಟರೆ ಸಾಕು ಬರೀ ಬೆಂಕಿಯನ್ನೇ ಉಗುಳುವವನು. ಅವನ ಸಹವಾಸಕ್ಕೆ ಸಿಕ್ಕ ಸಾವಿರಾರು ಹಳ್ಳಿಗಳು ಐಕ್ಯತೆಯನ್ನು ಕಳೆದುಕೊಂಡು ಹೋಳು ಹೋಳಾಗಿವೆ, ಹಾಳಾಗಿವೆ.

ಬಾಪೂಗೌಡನಿಗೆ ಅದಾಗಲೇ ವಯಸ್ಸಾಗಿತು. ಅನಾರೋಗ್ಯ ಬೇರೆ, ಹಾಸಿಗೆ ಹಿಡಿದು ತಿಂಗಳೇ ಕಳೆದಿವೆ. ಇಂದೋ ನಾಳೆನೋ ಅನ್ನುವ ಸ್ಥಿತಿ. ಮಗ ರುದ್ರಪ್ಪ ಹೆಂಡತಿಯ ಸಮೇತ ಕೊನೆಯ ಗಳಿಗೆಯಲ್ಲಿ ಊರವರು ಬೈದಿದ್ದಕ್ಕಾಗಿ ಬಂದಿದ್ದಾನೆ. ಸರಿಯಾಗಿ ಮಾತನಾಡಲೂ ಆಗುತ್ತಿಲ್ಲ. ಮಗ ರುದ್ರಪ್ಪನನ್ನು ಹತ್ತಿರ ಕರೆದು, ಕೊನೆಯ ಒಂದೇ ಒಂದು ಮಾತನ್ನು ಆತ ಎಲ್ಲರುದುರಿಗೆ ಮಾತಾಡಿ ನಿಸ್ತೇಜನಾಗಿದ್ದ. ಆ ಮಾತು ಎಲ್ಲರಿಗೂ ಕೇಳಿಸುವ ಹಾಗಿತ್ತು. 'ಊರು ಒಡೆಯೋ ಕೆಲಸಾ ಮಾಡಬೇಡಾ' ಅಂತ. ಅಪ್ಪನ ಮಣ್ಣು ಮಾಡಿದ್ದೇ ರುದ್ರಪ್ಪ ತನ್ನ ರಣರಂಗಕ್ಕೆ ಸಜ್ಜಾದ. ಹಿಂದಿನ ದಿನ ದೇಸಾಯಿ ಇವನ ಮೆದು ಳನ್ನು ಚೆನ್ನಾಗಿ ತಿಕ್ಕಿ ತೊಳೆದಿದ್ದ. ಇನ್ನೂ ಅದೇ ಗುಂಗಿನಲ್ಲಿದ್ದ. ಒಂದು ನೆಪಕ್ಕಾಗಿ ಕಾಯು ತ್ತಿದ್ದ. ಅವ್ವ ರತ್ನಾಬಾಯಿ ಮಾತು ಅವನಿಗೆ ಲೆಕ್ಕಕ್ಕೇ ಇರಲಿಲ್ಲ. ತಾನೇ ಮಹಾನ್ ದೇಶಭಕ್ತ ಅನ್ನೋ ಅಮಲು ಬೇರೆ ಮೈ ಹೊಕ್ಕಿತ್ತು. ಇಂಥ ಸಮಯದಲ್ಲಿಯೇ ಒಂದು ಸುದ್ದಿ ರುದ್ರಪ್ಪ ಕಿವಿಗೆ ತಲುಪಿತ್ತು. ಮೊದಲೇ ಅಮಲಲ್ಲಿದ್ದವನಿಗೆ ಆ ಸುದ್ದಿ ಅಫೀಮು ಕೊಟ್ಟಂಗಾ ಗಿತ್ತು. ತಕ್ಷಣವೇ ಓರಿಗೆಯ ಹುಡುಗರನ್ನು ಹನುಮಂತ ದೇವರ ಗುಡಿಯೊಳಗೆ ಸೇರಿ ಸಿದ. ಒಂದು ಬೈಟಕ್ ಮಾಡಿದ. ಆದರೆ ತಾನು ಮಾಡಬೇಕು ಅಂತ ಮಾಡಿದ್ದ ಕಿತಾಪತಿ ಈಗ ಬೇಡ ಯಾಕೆಂದರೆ ಅಪ್ಪ ಸತ್ತು ಇನ್ನೂ ಒಂದು ವಾರನೂ ಕಳೆದಿರಲಿಲ್ಲ. ಇನ್ನೊಂದು ಸಂದರ್ಭಕ್ಕಾಗಿ ಕಾಯೋಣ ಎಂದು ಬೈಟಕ್ ಮುಗಿಸಿ ಆಗಿತ್ತು.

ಅದು ಮಹಾನವಮಿ ಸಂದರ್ಭ. ಮೊದಲ ಆಗಿದ್ದರ ಎಲ್ಲಾರೂ ಕೂಡೇ ಅದನ್ನು ಆಚರಿಸವರು. ಈಗ ಹಂಗಿರಲಿಲ್ಲ, ಅಲ್ಲಿ ಯಾರೊಬ್ಬರೂ ಮುಸ್ಲಿಮರು ಬರ್ತಿರಲಿಲ್ಲ. ಅದೂ ಅಲ್ಲದೆ ಈಗೀಗ ಒಬ್ಬರ ಹಬ್ಬದ ಆಚರಣೆ ಇನ್ನೊಬ್ಬರನ್ನ ಹೊಟ್ಟಿ ಉರಸಲಾಕೇ ಐತಿ ಅನೋ ಥರಾ ಬಾಳ ರಾಪ್ ಆಗಿ ನಡಿತಿದ್ದು. ಹಬ್ಬಕ್ಕಿಂತಲೂ ಊರುಣಗಿ, ಮೆರವ ಣಿಗಿನೇ ಜೋರ್ ಆಗಿರುತಿದ್ದು. ಊರಾಗ ಹಾಯ್ದು ದೇವಿ ಮೆರವಣಿಗಿ ಮಸೀದಿ ಮುಂದ ಬಂದಂಗ ಇವರು ಬಾರಸೋದು, ಊದೋದು ಬಾಳ ಜೋರ್ ಆಯ್ತು. ಮಸೀದಿ ಮುಂದ ಹಿಂದೆಂದೂ ಯಾವದೇ ಮೆರವಣಿಗಿ ನಿಲ್ತಾನೇ ಇರಲಿಲ್ಲ. ಆದರ ಆವತ್ತು ಅಲ್ಲಿ ಬಾಳ ಹೊತ್ತು ಮೆರವಣಿಗೆ ನಿಂತತು. ಬಾಶ್ಯಾಸಾಬನ ಮಗ ಅಬ್ದುಲ್ಲಾ ಮುಂದ ಹೋಗಲಿ..ಮುಂದ ಹೋಗಲಿ.. ಅನ್ನೋ ಥರಾ ಮೆರವಣಿಗಿ ಕಡಿ ಕೈ ಮಾಡದ. ಆದರೂ ಯಾರೂ ಆ ಕಡಿ ನೋಡಲೇ ಇಲ್ಲ. ಊದರವು, ಬಾರಿಸುವವರು ಅದಾಗಲೇ ಫುಲ್ ಟೈಟ್ ಆಗಿದ್ದರು. ಅಷ್ಟರೊಳಗ ಯಾರೋ ಕಿರಾತಕರು ಒಂದೆರಡು ಕಲ್ಲ ಮೆರವಣಿಗಿ ಕಡಿ ಒಗದಿದ್ದೇ ಜನ ಮಸೀದಿಯೊಳಗ ನುಗ್ಗಿ ಹೊಡದಾಡಲಿಕ್ಕ ಶುರು ಮಾಡದರು. ತಳವಾರ ಸುಭಾಷಗ ತಲಿಗೆ ಜೋರ ಏಟು ಬಿತ್ತು. ಬಾಶ್ಯಾಸಾಬ್ ಅದಾ ಗಲೇ ಬಾಳ ಹಣ್ಣ ಆಗಿದ್ದ. ಮಸೀದಿಯಿಂದ ಸವಕಾಸ ಹೊರಗ ಬಂದು ಎಲ್ಲರ ಕಡಿ ಕೈ ಮುಗದು, 'ತಪ್ಪಾಯ್ತು.. ಸಾಕು ಜಗಳಡಬ್ಯಾಡ್ರಿ' ಅಂತ ಹೇಳಿ ಕಣ್ಣೀರ ತಗದ. ಹ್ಯಾಂಗಿದ್ದ ಊರು ಹ್ಯಾಂಗ ಆಯ್ತಲ್ಲ..! ಅಂತ ಮರಗದ. ಇಡೀ ಊರಾಗ ತಮ್ಮನ್ನು ಯಾರೂ ಇಷ್ಟ ಪಡುವವರೇ ಇಲ್ಲ. ಎಲ್ಲರೂ ತಮ್ಮ ಖಿಲಾಫ್ ಮಾತಾಡ್ತಾರ. ಹಂಗಂದರ ಎಲ್ಲಾ ಮುಸ್ಲಿಮರ ಸುಮಾರೇ ಅದಾರಾ? ಹೀಗೇ ಇನ್ನೂ ಏನೇನೋ ವಿಚಾರಗಳು ಬಿಚ್ಕೊಳ್ತಾ ಇದ್ದು. ಮೆರವಣಿಗಿ ಮುಂದ ಹೊಂಟತು. ಹಲ್ಕಟ್ ಬೈಗುಳಗಳು ಹಂಗೇ ಕೇಳಿ ಬರತಿದ್ದು.

******

ಸೇಡಿನ ಕಿಚ್ಚು ಇನ್ನೂ ಆರಿರಲಿಲ್ಲ. ರುದ್ರಪ್ಪ ಒಬ್ಬನೇ ಅಲ್ಲ ಈ ಪ್ರತಿಗಾಮಿ ಪಕ್ಷದಲ್ಲಿರೋ ಎಲ್ಲರೂ ಇವರಿಗೊಂದು ಪಾಠ ಕಲಿಸಬೇಕು ಅಂತ ನಿರ್ಧರಿಸಿದ್ದರು.

'ಹಿಂಗೇ ಬಿಟ್ಟರ ನಾಳೆ ಈ ಊರನ್ನು ಸಂಗಮಬಾದ್ ಅಂತ ಮಾಡಕೋತಾರ'

'ಮೊನ್ನೆ ಮೆರವಣಿಗಿಯೊಳಗ ಕಲ್ಲ ಒಗದಾಗೇ ಒಂದು ಒಪಾಠ ಕಲಸಬೇಕಿತ್ತು'

'ಆ ಮುದುಕ ಬಾಶ್ಯಾಸಾಬ್ ಅಡ್ಡ ಬಂದ ಅಂತ ಉಳಕೊಂಡ್ರು'

'ಮೊದಲ ಒಂದೂ ಹಸರ ಜಂಡಾ ಇರಲಿಲ್ಲ ಈಗ ಊರ ತುಂಬಾ ಕಾಣಸತಾವ'

'ಮೊನ್ನೆ ಇಂಡಿಯೊಳಗ ನೋಡಿರಿಲ್ಲೋ ಒಂದು ಮೂರ್ತಿ ಒಡದಾರ'

'ಅವರ ಹುಡುಗರ ನಮ್ಮ ಹುಡುಗೀರನ್ನ ಚುಡಾಯ್ಸತಾರಂತ'

'ಭಯೋತ್ಪಾದನೆ ಶುರು ಆದಿದ್ದೇ ಇವರಿಂದ'

'ಇಡೀ ದೇಶಕ್ಕೇ ಒಂದು ಕಾನೂನು ಇವರಿಗೇ ಒಂದು ಕಾನೂನು'

ಹೀಗೆ ಹತ್ತು ಬಾಯಿ... ಹತ್ತು ಮಾತು. ಎಲ್ಲರ ಮಾತು ಮುಗಿದ ಮೇಲೆ ರುದ್ರಪ್ಪ ಕೆಲವು ವಿಷಯಗಳ ಬಗ್ಗೆ ಎಲ್ಲರ ಎದುರು ಮಾತಾಡಿ, ಯಾರು ಎಲ್ಲಿ ಯಾವಾಗ ಏನು ಮಾಡಬೇಕು ಅನ್ನೊ ಬಗ್ಗೆ ತಿಳಿಸಿ ಹೇಳದ. ಆ ಬೈಟಕ್‌ದಲ್ಲಿರೋ ಎಲ್ಲಾ ಮಸುಗಳು ಕಾರ್ಲ್ ಮಾರ್ಕ್ಸ್ ಹೇಳೊ ಧರ್ಮ ಅನ್ನೋ ಅಫೀಮನ್ನು ಗಡದ್ದಾಗಿ ಸೇವಿಸಿದ್ದರು. ಯಾವ ಪೂರ್ವಾಪರಗಳ ಲೆಕ್ಕಾಚಾರವೂ ಅವರಿಗಿರಲಿಲ್ಲ. ಅವರೆಲ್ಲಾ ಬಹುತೇಕ ಇಪ್ಪತ್ತೈ ದರ ಆಜೂಬಾಜು. ಇಂಥ ಕೆಲಸಕ್ಕಾಗಿನೇ ಅವರು ಬಾಳ ದಿನದಿಂದ ಕಾಯ್ದಿದ್ದರು. ಎಲ್ಲವೂ ರುದ್ರಪ್ಪ ಅಂದುಕೊಂಡಂತೆಯೇ ಆಗಿತ್ತು. ಅಲ್ಲೀವರೆಗೆ ತಿಳಿಯಾದ ಸಂಗಮದಲ್ಲಿ ಆ ದಿನ ಇದ್ದಕಿದ್ದಂಗ ರಾಡಿ ಎದ್ದಿತ್ತು. ಭಜಿ ಕಾಸೀಮನ ಅಂಗಡಿ ಮತ್ತು ಬಾಶ್ಯಾಸಾಬನ ಲಿಂಬು ಹಣ್ಣಿನ ಅಂಗಡಿ ರಾತ್ರಿಯಿಡೀ ಉರಿದು ಬೂದಿ ಗುಂಪಿ ಆಗಿದ್ದು. ದಿನ್ನಾ ಭರ್ಚಕ್ ವ್ಯಾಪಾರ ಆಗೋ ಜಾಗಕ್ಕ ಈಗ ಹೆಣ ಸುಟ್ಟ ಕಳೆ ಬಂದಿತ್ತು. ಕೊನೆಗೂ ಪೊಲೀಸರಿಗೆ ಸಾಕ್ಷಿಯಾಗಿ ದಕ್ಕಿದ್ದು ಕೇವಲ ಆ ಬೂದಿ ಮಾತ್ರ. ಕಿಡಕೇಡಿಗಳು ಹೊತ್ತಿಸಿದ ಕಿಡಿ ಇಡೀ ಊರಿಗೆ ಕಿಚ್ಚಿಟ್ಟಿತ್ತು. ಆ ಕಿಚ್ಚಿನ ಕಾವು ಇವತ್ತಿಗೂ ಆರಲೇ ಇಲ್ಲ. ಅದಕ್ಕೇ ತುಪ್ಪ ಸುರಿ ಯುವ ಕೈಗಳಿಗೆ ಈಗ ಇನ್ನಷ್ಟು ತ್ರಾಣ ಬಂದಿದೆ. ಆ ಕೈಗಳು ದುಡಿಯುವ ಕೈಗಳಿ ಗಿಂತಲೂ ಬಲಿಷ್ಟವಾಗಿವೆ. ಹಗ್ಗ ಹದಿನಾರು ಮಾರು ಇದ್ದರೂ ಕುಣಿಕೆಯನ್ನು ತನ್ನ ಕೈಗಿಟ್ಟುಕೊಂಡು ಬೇಕೆಂದಾಗ ಕಿಚ್ಚು ಹತ್ತುವಷ್ಟು ಹತೋಟಿ ಈಗ ಆ ಅನಿಷ್ಟ ಕೈಗಳಿಗೆ ಬಂದಂತಾಗಿದೆ. ಅಂಥಾ ಕೈಗಳಿಗೀಗ ಸೈತಾನನ ಹಿಡಿತ ಬಂದಿದೆ. ಹೊಗೆಯನ್ನು ಕಿಚ್ಚಾಗಿಸುವ, ಕಿಚ್ಚನ್ನು ದಳ್ಳುರಿಯಾಗಿಸುವ, ಆ ಉರಿಯಲ್ಲೇ ಸುಖವಾಗಿ ಕಾಯಿಸಿಕೊಳ್ಳುವ ಮನಸೂ ಇದೆ. ಈ ಬಗೆಯ ಮನದ ಮೊನೆಯ ಕೊನೆಯ ಮರ್ಮ ಕಿಚ್ಚು ಹಚ್ಚುವ ದರಲಿ ಅಡಗಿದೆಯೇ ಹೊರತು ಆರಿಸುವದರಲ್ಲಿ ಅಲ್ಲ. □

ಹೊಸ ಚಿಂತನೆಯ ನೆಲೆಗಟ್ಟು

ಮಾನವನ ಅಧ್ಯಯನವನ್ನು ಮಾಡು. ಮಾನವನೇ ಜೀವಂತ ಕಾವ್ಯ

–ಸ್ವಾಮಿ ವಿವೇಕಾನಂದ

ಪ್ರಾಚೀನ ಜೀವನ ಕ್ರಮದ ವಿನ್ಯಾಸಗಳು ಒಂದಲ್ಲ ಒಂದು ರೀತಿಯಲ್ಲಿ ಮರುಕಳಿಸುತ್ತದೆ. ಬದುಕಿನ ಚಿಂತನೆಗಳು ಭ್ರಷ್ಟಗೊಳ್ಳುತ್ತಲೇ ಕ್ರಿಯಾಶೀಲವಾಗಿರುವಂತೆ ಅನಾವರಣಗೊಳ್ಳುವ ಮಾದರಿಗಳು ಹೆಣ್ಣುಭ್ರೂಣ ಹತ್ಯೆಯ ವಿಚಾರವನ್ನು ಕೇಂದ್ರವಾಗಿರಿಸಿಕೊಂಡಿರುವ ಈ ಕೃತಿಯಲ್ಲಿದೆ. ಗತಕಾಲದ ಬದುಕಿನ ನಂಬಿಕೆ, ಆಚಾರಣೆಗಳು ವರ್ತಮಾನದಲ್ಲೂ ವಿಭಿನ್ನ ಪಾತಳಿಯಲ್ಲಿ ಚಾಲ್ತಿಯಲ್ಲಿರುತ್ತದೆ. ಕಾರಣಗಳು ವಿಭಿನ್ನವಾದರೂ ಗುರಿ ಮಾತ್ರ ಭೂತಕಾಲದ ಮುಂದುವರಿಕೆಯೇ ಆಗಿರುತ್ತದೆ. ಮಹಿಳಾ ಸಂಬಂಧಿತ ಧೋರಣೆಗಳು ಪ್ರತಿ ಸಮಾಜದಲ್ಲೂ ಅಲ್ಪಸ್ವಲ್ಪ ಭಿನ್ನತೆಯಿಂದ ಗೋಚರಿಸಿದರೂ, ಆಳದ ಸುಳಿಯ ಸೆಳೆತ ಏಕರೂಪಿಯಾದುದು.

ಬದುಕಿನ ಭೌತಿಕ ಬದಲಾವಣೆಗಳು ಮಾನವನ ಆಂತರ್ಯವನ್ನೂ ಬದಲಾಯಿಸಿರುತ್ತದೆ ಎನ್ನುವಂತಿಲ್ಲ. ನಿರ್ಧಾರಿತ ಚೌಕಟ್ಟು ಅಲುಗಿದಂತೆ ಕಂಡರೂ ಅದರ ವಿನ್ಯಾಸ ಬದಲಾಗಿರುವುದಿಲ್ಲ ಎಂಬುದಕ್ಕೆ ಈ ಕೃತಿ ಪ್ರಸ್ತಾಪಿಸುತ್ತಿರುವ ಅಂಶ ಉದಾಹರಣೆ.

ಒಂದು ನಿಗದಿತ ಭೌಗೋಳಿಕ ಪ್ರದೇಶವನ್ನು ಲೇಖಕರು ಆರಿಸಿಕೊಂಡು, ಹೆಣ್ಣು ಭ್ರೂಣ ಹತ್ಯೆಯನ್ನು ಕುರಿತಂತೆ ಅದರ ತಳಸ್ಪರ್ಶ ಅಧ್ಯಯನವನ್ನು ಕ್ಷೇತ್ರಕಾರ್ಯದ ಮಾಹಿತಿಯನ್ನು ಅವಲಂಭಿಸಿ ವಿಶ್ಲೇಷಣೆ ಮೂಲಕ ನಡೆಸಿದ್ದಾರೆ. ಈ ಶೋಚನೀಯ ಸಮಸ್ಯೆಗೆ ಇರಬಹುದಾದ ರಾಜಕೀಯ, ಧಾರ್ಮಿಕ, ಆರ್ಥಿಕ ಕಾರಣಗಳನ್ನು ಚರ್ಚಿಸುತ್ತಾರೆ. ಬಲಿ, ವರದಕ್ಷಿಣೆ, ಬಂಡವಾಳಶಾಹಿ ಮನೋಧರ್ಮಗಳು ಸಮಸ್ಯೆಯ ಉಲ್ಬಣತೆಗೆ ನೀಡಿರುವ ಕಾಣಿಕೆಯ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರೆ. ಲಿಂಗ ಆದ್ಯತೆ, ಲಿಂಗ ಆಯ್ಕೆ, ಲಿಂಗ ತಾರತಮ್ಯದ ಸ್ವರೂಪ ಪಿತೃಪ್ರಧಾನ ಸಮಾಜದ ಲಕ್ಷಣವಾಗಿರುವುದನ್ನು ಗುರುತಿಸುತ್ತಾರೆ. ಆಧುನಿಕ ಸಂದರ್ಭದಲ್ಲೂ ಇದೆ ಮಾದರಿಯ ಮುಂದುವರಿಕೆಯನ್ನು ಅಂಕಿ ಅಂಶಗಳ ಹಿನ್ನಲೆಯಲ್ಲಿ ಗುರುತಿಸುತ್ತಾರೆ.

ಜಾಗತಿಕ ಮಟ್ಟದಲ್ಲೂ ಹೆಣ್ಣು ಭ್ರೂಣ ಹತ್ಯೆಯಂಥ ಕ್ರೌರ್ಯ ಪ್ರಚಲಿತವಿರುವ ಮಾದರಿಗಳನ್ನು ತಿಳಿಸುತ್ತಾರೆ. ಮೂಢ ನಂಬಿಕೆಗಳಿಗೆ ಈಡಾಗಿರುವರೆಂದು ಭಾವಿಸಲಾಗಿರುವ ಏಷ್ಯಾ ಖಂಡಕ್ಕಿಂತ, ಆಧುನಿಕತೆಯ ತುಟ್ಟ ತುದಿಯಲ್ಲಿರುವ ಯೂರೋಪಿನಲ್ಲಿ ಈ ಸಮಸ್ಯೆಯು ಹೆಚ್ಚು ಗಂಭೀರವಾದ ಸ್ಥಿತಿಯಲ್ಲಿರುವುದನ್ನು ಗುರುತಿಸುತ್ತಾರೆ. ನಿಸರ್ಗದ ಬಗ್ಗೆ ಆರಾಧನೆಯ ಮನೋಭಾವವಿರುವ ಏಷ್ಯಾದ ಜನರು, ಪ್ರಕೃತಿ ಹಾಗೂ ಹೆಣ್ಣನ್ನು ಸಮೀಕರಿಸಿ ನೋಡುವುದರಿಂದ ಮಹಿಳೆಯ ಬಗೆಗಿನ ಅನಾದರ ಗಣನೀಯವಾಗಿ ಕಡಿಮೆಯಾಗಿರುವುದನ್ನು ಸೂಚಿಸುತ್ತಾರೆ. ಜಗತ್ತಿನಲ್ಲೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಚೀನಾದೇಶದಲ್ಲಿ 1949ರ 'ಬೀಜಿಂಗ್ ಪಾಪ್ಯುಲೇಷನ್ ಕಂಟ್ರೋಲ್ ಪಾಲಿಸಿ' ಬಂದ ತರುವಾಯ ಮಕ್ಕಳ ಬಗ್ಗೆ ಆಯ್ಕೆಯ ಪ್ರಶ್ನೆ ತಲೆ ಎತ್ತಿತ್ತು. ಅದರೊಂದಿಗೆ ಹೆಣ್ಣು ಭ್ರೂಣ ಹತ್ಯೆ ವ್ಯಾಪಕಗೊಂಡೂ ಇದನ್ನು ಪ್ರಸ್ತಾಪಿಸುತ್ತಾ, ಇದು ಭವಿಷ್ಯದಲ್ಲಿ ಉಂಟುಮಾಡಬಹುದಾದ ಬರ್ಬರತೆ, ಅನೈತಿಕತೆಗಳ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಈ ಆತಂಕ ಚೀನಾ ದೇಶಕ್ಕೆ ಮಾತ್ರ ಮೀಸಲಾಗದೆ, ಭಾರತದಂಥ ಅನೇಕ ಅಭಿವೃದ್ಧಿಶೀಲ ದೇಶಗಳಿಗೂ ಅನ್ವಯಿಸುತ್ತಿರುವುದು ಚಿಂತನಾರ್ಹ ವಿಚಾರವಾಗಿದೆ.

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣನ್ನು 'ದೇವಿ' ಎಂದು ಪೂಜಿಸುತ್ತಿರುವ ಸಂದರ್ಭದಲ್ಲೇ, ಅವಳ ಭೌತಿಕ ಅಸ್ತಿತ್ವವನ್ನೇ ಇಲ್ಲವಾಗಿಸುವ ತಂತ್ರಗಳು ಚಾಲ್ತಿಯಲ್ಲಿದ್ದವು. ಉದಾಹರಣೆಗೆ ಬಿಹಾರದಲ್ಲಿ ಆಗ ತಾನೇ ಜನಿಸಿದ ಹೆಣ್ಣು ಕೂಸಿಗೆ, ಹಾಲಿನಲ್ಲಿ ಬತ್ತದ ಕಾಳನ್ನು ಹಾಕಿ ಕುಡಿಸುತ್ತಿದ್ದುದು. ಅದು ಮಗುವಿನ ಅನ್ನ ನಾಳವನ್ನು ಕತ್ತರಿಸಿ ಸಾವು ಉಂಟುಮಾಡುತ್ತಿದ್ದುದ್ದನ್ನು ತಿಳಿಸುತ್ತಾರೆ.

> **ಮಂಡ್ಯ ಜಿಲ್ಲೆಯಲ್ಲಿ ನಡೆಸಿದ ಕ್ಷೇತ್ರ ಕಾರ್ಯ, ಅಲ್ಲಿನ ಜನರೊಟ್ಟಿಗೆ ನಡೆಸಿದ ಸಂವಾದ, ಅಂಕಿ ಅಂಶಗಳನ್ನು ಆದರಿಸಿ ಲೇಖಕರು ತಮ್ಮ ಚಿಂತನೆಯ ನೆಲೆಗಳನ್ನು ವಿಶ್ಲೇಷಿಸಿದ್ದಾರೆ.**

ಪುಸ್ತಕ ಅವಲೋಕನ



ಲೇ : ಮಂಜುನಾಥ ಅದ್ದೆ
ಬೆಲೆ : ರೂ.150/-
ಪ್ರ : ಸ್ತ್ರೀಲೇಖ ಪ್ರಕಟಣೆ
33/1-9, ತ್ಯಾಗರಾಜ ಲೇಔಟ್
ಜೈಭಾರತನಗರ, ಮಾರುತಿ ಸೇವಾನಗರ
ಬೆಂಗಳೂರು-560 033

ಡಾ ಬಿ.ಎಸ್.ಶಾರದ

ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಮಾದರಿಗಳಲ್ಲಿ ಹೆಣ್ಣು ಶಿಶು ಹತ್ಯೆ ನಡೆಯುತ್ತಿದ್ದುದನ್ನು ದಾಖಲಿಸುತ್ತಾರೆ. ಅಷ್ಟೇ ಅಲ್ಲದೆ ಗ್ರೀಸ್‌ನಲ್ಲಿ ಕ್ರಿ.ಶ.ದ ಪೂರ್ವದಲ್ಲೇ ಹೆಣ್ಣು ಶಿಶುವನ್ನು ಕೊಲ್ಲುವ ಅಧಿಕಾರವನ್ನು ರಾಜ ಪ್ರಭುತ್ವವು ನೀಡಿದ್ದ ವಿಷಯವನ್ನು ಪ್ರಸ್ತಾಪಿಸುತ್ತಾರೆ. ಬಹಳ ಹಿಂದಿನಿಂದಲೂ ಪ್ರಪಂಚದಾದ್ಯಂತ ಹೆಣ್ಣಿನ ವಿರುದ್ಧ ಬಹಳ ವ್ಯವಸ್ಥಿತವಾಗಿ ಸಂಚು ನಡೆಸುತ್ತಿರುವುದು ತಿಳಿದು ಬರುತ್ತದೆ.

ಮಂಡ್ಯ ಜಿಲ್ಲೆಯಲ್ಲಿ ನಡೆಸಿದ ಕ್ಷೇತ್ರಕಾರ್ಯ, ಅಲ್ಲಿನ ಜನರೊಟ್ಟಿಗೆ ನಡೆಸಿದ ಸಂವಾದ, ಅಂಕಿ ಅಂಶಗಳನ್ನು ಆದರಿಸಿ ಲೇಖಕರು ತಮ್ಮ ಚಿಂತನೆಯ ನೆಲೆಗಳನ್ನು ವಿಶ್ಲೇಷಿಸಿದ್ದಾರೆ. ಅಲ್ಲಿನ ಜನರ ಶ್ರೀಮಂತಿಕೆ, ವ್ಯವಸಾಯದಲ್ಲಿ ಬಳಸಲಾಗುತ್ತಿರುವ ಶೋಷಣೆಗೂ, ಹೆಣ್ಣು ಭ್ರೂಣ ಹತ್ಯೆಗೂ ಸಂಬಂಧವಿರುವುದನ್ನು ಆರ್ಥಿಕ ದೃಷ್ಟಕೋನದ ಹಿನ್ನಲೆಯಲ್ಲಿ ವಿವರಿಸಿಕೊಳ್ಳುತ್ತಾರೆ.

ಇಲ್ಲಿ ಮನಸ್ಸಿಗೆ ಬರುವ ಪ್ರಶ್ನೆಯೆಂದರೆ, ಯಾವ ನಿಶ್ಚಿತ ಕಾರಣಗಳು ಇಲ್ಲದೆ ಲೇಖಕರು, ಕಬ್ಬು ಹಾಗೂ ಭತ್ತ ಬೆಳೆಯುವ ಮಂಡ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆಯ ಸಂಖ್ಯೆ ಹೆಚ್ಚಾಗಿರುವುದು –ಎಂದು ಹೇಳುವುದರ ಬಗ್ಗೆ. ಕೃಷಿ, ಪಶು ಸಂಗೋಪನೆಯಂಥ ವೃತ್ತಿಗಳು ಪುರುಷರ ಕೈವಶವಾಗಿ, ಅವಳು ಆರ್ಥಿಕವಾಗಿ ದುರ್ಬಲಳಾಗಿ ಮೂಲೆಗುಂಪಾದುದು ಹಾಗೂ ಅವಳ ಸಾಮಾಜಿಕ ಪ್ರಸ್ತುತತೆ ಕುಂದಿರುವುದು ಸತ್ಯ. ಆದರೆ ಅದು ಕೇವಲ ಒಂದು ಭೌಗೋಳಿಕ ಪ್ರದೇಶದ ಚಿತ್ರವಲ್ಲ. ಪುರುಷರ ನಿರ್ಣಯಗಳಿಂದಲೇ ಬದುಕು ಕಟ್ಟಲ್ಪಡುತ್ತಿದೆ. ಕೈಗಾರಿಕೀಕರಣ ಹಾಗೂ ಶ್ರೀಮಂತಿಕೆಗಳು ಪುರುಷನ ದಬ್ಬಾಳಿಕೆಗೆ ಅವನ ಪ್ರಾಮುಖ್ಯತೆಗೆ ಇನ್ನಷ್ಟು ಗರಿಮೂಡಿಸಿವೆ. ಇವೆಲ್ಲದರ ನೇರ ಪ್ರಭಾವ 'ವಿವಾಹ' ಎಂಬ ಸಂಸ್ಥೆಯಲ್ಲೂ ಕಾಣುತ್ತಿದೆ. ವರದಕ್ಷಿಣೆಯ ಪಿಡುಗು ಪಡೆದುಕೊಂಡಿರುವ ತೀವ್ರ ಸ್ವರೂಪ, ಹೆಣ್ಣು ಮಕ್ಕಳು ಕುಟುಂಬದ ಆರ್ಥಿಕ ಹೊರೆ ಎಂದು ಪರಿಗಣಿಸುವಂತೆ ಮಾಡಿದೆ. ಅವಳು ಅನಪೇಕ್ಷಿತ ಸದಸ್ಯೆ ಎಂದು ಭಾವಿಸುವಂತಾಗಿದೆ. ಹೀಗಾಗಿ ಶ್ರೀಮಂತಿಕೆ, ಕೈಗಾರಿಕೀಕರಣ, ಗಂಡಿನ ಯಜಮಾನಿಕೆ, ವರದಕ್ಷಿಣೆಯ ಪಿಡುಗುಗಳು ಎಲ್ಲಾ ಪ್ರದೇಶಗಳಿಗೂ ಅನ್ವಯಿಸುವಂಥದ್ದು. ಕೇವಲ ಕಬ್ಬು, ಭತ್ತಗಳು ಬೆಳೆವ ಭೌಗೋಳಿಕ ಪ್ರದೇಶಕ್ಕೆ ಮಾತ್ರ ಅಲ್ಲವೇನೋ ಎನಿಸುತ್ತದೆ.

ಮಂಡ್ಯದಲ್ಲಿ ಹೆಣ್ಣು ಭ್ರೂಣಹತ್ಯೆಯ ಜೊತೆಗೆ, ಅಲ್ಲಿ ಮಹಿಳೆಯರ ಸಂಖ್ಯೆ ಇಳಿಮುಖವಾಗುತ್ತಿದೆ ಅದಲ್ಲದೆ ಒಣ ಬೇಸಾಯ ಪದ್ಧತಿ, ಬೃಹತ್ ನೀರಾವರಿ ಯೋಜನೆಗಳು ಶ್ರೀಮಂತ ವರ್ಗದ ಮಹಿಳೆಯರನ್ನು ನಿಷ್ಕ್ರೀಯರನ್ನಾಗಿಸಿದೆ. ಆದರೆ ಕೆಳವರ್ಗದ ಮಹಿಳೆಯರು ಯಂತ್ರದಂತೆ ದುಡಿಯುತ್ತಲೇ ಇದ್ದಾರೆ. ಶ್ರೀಮಂತ ಕುಟುಂಬಗಳಲ್ಲಿ ಆಚರಣೆಯಲ್ಲಿರುವ ವರದಕ್ಷಿಣೆ ಪದ್ಧತಿಗೂ, ಹೆಣ್ಣು ಭ್ರೂಣ ಹತ್ಯೆಗೂ ಆಂತರ್ಯದಲ್ಲಿ ಸಂಬಂಧವಿದೆ. ಇದು ಗಂಡು-ಹೆಣ್ಣುಗಳ ನಡುವೆ ಅನಾರೋಗ್ಯಕರ ಪೈಪೋಟಿ ಉಂಟುಮಾಡುವ ಸ್ಪಷ್ಟ ಸಧ್ಯತೆಗಳನ್ನು ಗುರುತಿಸುತ್ತಾರೆ.

ಈ ಕೃತಿಯು ಪ್ರಾದೇಶಿಕ ವಿಸ್ತಾರ, ರೈತಾಪಿ ವರ್ಗದವರ ಆರ್ಥಿಕ ಸ್ಥಿತಿಗತಿ, ಪುರುಷ–ಮಹಿಳೆಯರ ಸರಾಸರಿಯ ಅಂಕಿಅಂಶಗಳನ್ನು ಭಾರತದ 2001ರ ಜನಗಣತಿಯ ಆಧಾರದ ಮೇಲೆ ಸ್ಪಷ್ಟವಾಗಿ ದಾಖಲಿಸಿದೆ. ಮಹಿಳೆಯರ ಮೇಲಿನ ದೌರ್ಜನ್ಯ, ಹೆಣ್ಣು ಭ್ರೂಣ ಹತ್ಯೆಗಳು ಕೆಳಜಾತಿ–ವರ್ಗದವರಿಗಿಂತ, ಮೇಲ್ಜಾತಿ–ಮೇಲ್ವರ್ಗದವರಲ್ಲಿ ಹೆಚ್ಚಾಗಿರುವುದನ್ನು ಗುರುತಿಸುತ್ತಾರೆ. ಕೌಟುಂಬಿಕ ಕಿರುಕುಳ, ಸೊಸೆಯರಿಗೆ ನೀಡುತ್ತಿರುವ ಹಿಂಸೆ, ಸ್ತ್ರೀಯರ ಬಗೆಗಿನ ಅನಾದರ ಹೆಣ್ಣು ಭ್ರೂಣ ಹತ್ಯೆಗೆ ಕಾರಣಗಳು ಎನ್ನಲಾಗಿದೆ.

ಭಾರತೀಯ ಸಮಾಜದಲ್ಲಿ ಮಹಿಳೆಯರ ಬಗೆಗಿನ ಅನಾದರದ ನಿಲುವು ಹಿಂದಿನಿಂದಲೂ ನಡೆದು ಬಂದಿರುವುದರಿಂದ, ಈ ಕೃತಿಯಲ್ಲಿ ಗುರುತಿಸಿರುವ ಕಾರಣಗಳು ಹೊಸದೆನಿಸುವುದಿಲ್ಲ. ಹಿಂದಿನಿಂದಲೂ ಹೆಣ್ಣನ್ನು ಅನುತ್ಪಾದಿಕ ನೆಲೆಯಲ್ಲಿರಿಸಿ, ಅವಳು 'ಹೊರೆ' ಎಂದು ಪರಿಗಣಿಸುತ್ತಿರುವ ಸಮಾಜದಲ್ಲಿ ಈ ಕಾರಣಗಳು ಇಂದಿನ ಸಾಮಾಜಿಕ ವ್ಯವಸ್ಥೆಯಿಂದ ಉದ್ಭವವಾದುದಲ್ಲ. ಬದಲಿಗೆ ಹೆಣ್ಣು ಇಂದು ಅರ್ಥಿಕವಾಗಿ ಉತ್ಪಾದಕಳಾದರೂ ಇದೇ ಸ್ಥಿತಿಯ ಮುಂದುವರಿಕೆಗೆ ಕಾರಣಗಳನ್ನು ಹುಡುಕಬೇಕಾದ ಹಂತದಲ್ಲಿದ್ದೇವೆ, ಎನಿಸುತ್ತದೆ.

ಈ ಕೃತಿ ತಾಯಿ–ತಂದೆಯರ, ಆಸ್ಪತ್ರೆಯ ವೈದ್ಯರ–ದಾದಿಯರ ಅಮಾನವೀಯತೆಯ ಪರಾಕಾಷ್ಠತೆಯನ್ನು ತೊಟ್ಟಿಗೆ–ಚರಂಡಿಗೆ ಸೇರುವ ಹೆಣ್ಣು ಭ್ರೂಣಗಳ ಹಿನ್ನಲೆಯಲ್ಲಿ ಕಟ್ಟಿಕೊಡುತ್ತಾರೆ. 'ಮದುವೆಯ ಸೀಜನ್ ಮುಗಿದ ನಂತರ ಭ್ರೂಣ ಹತ್ಯೆಯ ಸೀಜನ್ ಬರುತ್ತದೆ 'ಎನ್ನುವ ಮಾತು ಹಾಸ್ಯಾಸ್ಪದವೆನಿಸಿದರೂ, ಅದು ವಾಸ್ತವಕ್ಕೆ ಹಿಡಿದಿರುವ ಕನ್ನಡಿ. ಗೌರವ, ಪ್ರತಿಷ್ಠೆ ಹಾಗೂ ವರದಕ್ಷಿಣೆಯ ಆಸೆಗಾಗಿ ಗಂಡು ಸಂತಾನ ಬಯಸುವ ಜನರು, ಮುಂದಿನ ತಲೆಮಾರಿನಲ್ಲಿ ಹೆಣ್ಣು ಮಕ್ಕಳ ಅಭಾವ ಉಂಟಾಗುವುದನ್ನು ಚಿಂತಿಸಿಲ್ಲ. ಹೆಣ್ಣಾಗಿ ಹುಟ್ಟಿರುವುದೇ 'ಪಾಪ' ಎಂಬ ನಂಬಿಕೆಯನ್ನು ಮೂಡಿಸುವ ಮೂಲಕ, ಇಚ್ಛೆಯಿಲ್ಲದಿದ್ದರೂ ಒತ್ತಡಕ್ಕೆ ಒಳಗಾಗಿ ಗರ್ಭಪಾತ ಮಾಡಿಸಿಕೊಂಡು, ಪಾಪಪ್ರಜ್ಞೆಗೆ ಒಳಗಾಗಿರುವ ಮಹಿಳೆಯರ ಅಂತರಂಗವನ್ನು ಈ ಕೃತಿ ಬಿಚ್ಚಿಡುತ್ತದೆ.

ಕಮಿಷನ್ನಿನ ಆಸೆಗೆ ಹೆಣ್ಣು ಭ್ರೂಣಹತ್ಯೆ ಮಾಡಿಸುವ ಏಜೆಂಟರು, ಹೆಣ್ಣು ಮಕ್ಕಳಿಗಿಂತ ಮನೋವಿಕಲ ಗಂಡು ಮಕ್ಕಳೇ ವಾಸಿ ಎನ್ನುವ ಜನರ ದುರಾಸೆ ಅಜ್ಞಾನಗಳು ಇಲ್ಲಿ ಬಹಿರಂಗಗೊಂಡಿವೆ. ಪುರುಷರ ಸ್ವಾರ್ಥಕ್ಕೆ ಮಾದರಿಯಾಗಿ, ಮಳವಳ್ಳಿಯಲ್ಲಿ ರೇಷ್ಮೇ ನೇಯ್ಗೆ ಕೆಲಸಕ್ಕೆ ಮಹಿಳೆಯರ ಅಗತ್ಯವಿರುವುದರಿಂದ, ಅಲ್ಲಿ ಹೆಣ್ಣು ಭ್ರೂಣ ಹತ್ಯೆ ಕಡಿಮೆಯಿರುವುದು ಗೋಚರಿಸುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ, ಕೆಳಜಾತಿ–ವರ್ಗಗಳಲ್ಲಿ ದೇವರ ಬಗೆಗಿನ ಭಯವಿದ್ದು ಗರ್ಭಪಾತ ಮಾಡಲು, ಮಾಡಿಸಿಕೊಳ್ಳಲು ಸ್ವಲ್ಪಮಟ್ಟಿನ ಹಿಂಜರಿಕೆಯಿದೆ. ಆದರೆ ನಗರಗಳ ಪ್ರಭಾವ, ಸ್ಕ್ಯಾನಿಂಗ್ ಏಜೆಂಟರ ಒತ್ತಡಗಳಿಂದಾಗ, ಗ್ರಾಮೀಣ ಜನರೂ ಗರ್ಭಪಾತಗಳಿಗೆ ಮೊರೆಹೋಗುತ್ತಿದ್ದಾರೆ ಬಡವರು ಹೆಚ್ಚು ಬಡ್ಡಿಗೆ ಸಾಲವನ್ನು ಪಡೆದು, ನಗರಗಳಿಗೆ ಬಂದು ಭ್ರೂಣ ಲಿಂಗಪತ್ತೆ, ಹೆಣ್ಣು ಭ್ರೂಣದ ಗರ್ಭಪಾತ ಮಾಡಿಸಿಕೊಳ್ಳುತ್ತಿರುವುದನ್ನು ಈ ಕೃತಿ ತಿಳಿಸುತ್ತಿದೆ.

ಸರಕಾರದ ಕಾಯ್ದೆಗಳ ಅನ್ವಯದಲ್ಲಿರುವ ದೋಷ, ಆರೋಗ್ಯ ಹಾಗೂ ಪೊಲೀಸ್ ಇಲಾಖೆಯವರ ನಿರ್ಲಕ್ಷ್ಯ, ವೈದ್ಯರ ದುರಾಸೆ, ಹಣದಾಹ ಹಾಗೂ ಅನೀತಿಯ ನಡವಳಿಕೆ ಈ ಸ್ಥಿತಿಯ ಉಲ್ಬಣತೆಗೆ ಕಾರಣವಾಗಿದೆ.

ಹೆಣ್ಣು ಆರ್ಥಿಕವಾಗಿ ಹೊರೆ ಎಂದು ಪರಿಗಣಿಸುವ ಸಿದ್ಧಾಂತದ ಮುಂದುವರಿಕೆ ಇಲ್ಲಿದೆ. ಅಪಮಾನ–ನೋವಿಗೆ ಒಳಗಾಗುವ ಹೆಣ್ಣು, ತನ್ನಂತೆ ತನ್ನ ಮುಂದಿನ ಪೀಳಿಗೆಯ ಹೆಣ್ಣು ಅಪಮಾನ, ಸಂಕಷ್ಟಕ್ಕೆ ಈಡಾಗಬಾರದೆಂಬ ಉದಾರ ನಿಲುವು (ಮೇಲ್ನೋಟದ್ದು ಮಾತ್ರ) ವ್ಯಕ್ತವಾಗುತ್ತದೆ. ಆ ರೀತಿ ಯೋಚಿಸಲು ಹೆಣ್ಣನ್ನು ಸಿದ್ಧಗೊಳಿಸಿರುವುದು ಪಿತೃ ಪ್ರಧಾನ ಸಮಾಜದ ಹುನ್ನಾರವೆನಿಸದಿರದು. ವೈಜ್ಞಾನಿಕ ಅರಿವು, ವೈದ್ಯಕೀಯ ಸೌಲಭ್ಯಗಳು ಹೆಚ್ಚಾದಂತೆ, ಆರ್ಥಿಕ ಸ್ಥಿತಿಯಲ್ಲಿ ಗಣನೀಯ ಪ್ರಗತಿಯಾದ ಹಾಗೆಲ್ಲಾ ಹೆಣ್ಣಿನ ಮೇಲಿನ ದೌರ್ಜನ್ಯ ಹೆಚ್ಚಾಗುತ್ತಿರುವುದಕ್ಕೆ ಹೆಣ್ಣು ಭ್ರೂಣ ಹತ್ಯೆ ನಿದರ್ಶನವಾಗಿದೆ. ಈ ಕೃತ್ಯಕ್ಕೆ ವೈದ್ಯರ, ರಾಜಕಾರಣಿಗಳ ಬೆಂಬಲವಿದ್ದು, ಹೆಚ್ಚು ಆದಾಯ ತರುವ ಉದ್ಯಮವಾಗಿದೆ. ಇದನ್ನು ವಿರೋಧಿ ಸುವ ಚೈತನ್ಯವಿಲ್ಲದೆ ಜನ ಮೂಕ ಪ್ರೇಕ್ಷಕರಾಗಿದ್ದಾರೆ. ಭ್ರೂಣ ಆರೋಗ್ಯ ತಪಾಸಣೆಯ ನೆವದಿಂದ ಭಾರತಕ್ಕೆ ಕಾಲಿಟ್ಟ ಸ್ಕ್ಯಾನಿಂಗ್‌ಯಂತ್ರ, ನಂತರದ ದಿನಗಳಲ್ಲಿ ಭ್ರೂಣ ಲಿಂಗ ಪತ್ತೆ, ಹೆಣ್ಣು ಭ್ರೂಣ ಹತ್ಯೆಗಳ ಸಂಖ್ಯೆಯನ್ನು ಹೆಚ್ಚಿಸಿರುವುದನ್ನು ವಿವಿಧ ವರ್ಷಗಳಲ್ಲಿ ನಡೆಸಲಾದ ಗರ್ಭಪಾತಗಳ ಅಂಕಿಅಂಶಗಳ ಹಿನ್ನಲೆಯಲ್ಲಿ ನೀಡಿದ್ದಾರೆ. ಜಾಗತಿಕ ಆರ್ಥಿಕ ನೀತಿಗೂ, ಭಾರತದಲ್ಲಿನ ಹೆಣ್ಣು ಭ್ರೂಣಹತ್ಯೆಗೂ, ಆರ್ಥಿಕ ಲಾಭಕ್ಕೂ ನೇರ ಸಂಬಂಧ ವಿರುವುದನ್ನು ಲೇಖಕರು ಗುರುತಿಸುತ್ತಾರೆ.

"ಹೆಣ್ಣಿನ ಮಹತ್ವವು ಅವಳ ಸಂಖ್ಯೆ ಕಡಿಮೆಯಿದ್ದಾಗ ಮಾತ್ರ ತಿಳಿಯುತ್ತದೆ" ಎಂಬ ಹುಸಿವಾದವನ್ನು ಈ ಸಮಸ್ಯೆಯೊಡನೆ ತಳುಕು ಹಾಕಿ, ಜವಾಬ್ದಾರಿಯಿಂದ ಕೈ ತೊಳೆದುಕೊಳ್ಳುವ ಪ್ರಯತ್ನಗಳೂ ನಡೆದಿದೆ. ಈ ಸಮಸ್ಯೆಯ ತೀವ್ರತೆಯನ್ನು ಅರಿತು ಅದನ್ನು ನಿಶೇಧಿಸಲು ಮುಂದಾಗಬೇಕಾದ ಅಧಿಕಾರಿ, ಆಡಳಿತ ವರ್ಗದವರು ತಟಸ್ಥವಾಗಿರುವುದು 'ಇದು' ಸಮಸ್ಯೆಯೇ ಅಲ್ಲದೆ, ಬದುಕಿನ ಸಹಜ ಲಯ ಎಂಬಂತೆ ಪರಿಗಣಿಸಿದ ಹಾಗಿದೆ.

ಅನಾಥ ಶಿಶುಗಳ ಬಗ್ಗೆ ಮಾಧ್ಯಮ ನೀಡುವ ಮಾಹಿತಿಯನ್ನು ಕೇಳಿ ಕನಿಕರ ವ್ಯಕ್ತಪಡಿಸುವ ನಾವು, ಜಗತ್ತನ್ನು ಕಾಣುವ ಮೊದಲೇ ಅಳಿಯುತ್ತಿರುವ ಹೆಣ್ಣು ಭ್ರೂಣಗಳ ಬಗ್ಗೆ, ಅಂಥ ವ್ಯವಸ್ಥೆಯನ್ನು ಬೆಂಬಸಲಿಸುತ್ತಿದ್ದೇವೆ, ಜೈಕಿಡುತ್ತೇವೆ ಎಂಬುದೇ ಬಿಡಿಸಲಾಗದ ಕಗ್ಗಂಟಾಗಿದೆ.

ಭಾರತೀಯ ಸಮಾಜದಲ್ಲಿ ಮಹಿಳೆಯರ ಬಗೆಗಿನ ಅನಾದರದ ನಿಲುವು ಹಿಂದಿನಿಂದಲೂ ನಡೆದು ಬಂದಿರುವುದರಿಂದ, ಈ ಕೃತಿಯಲ್ಲಿ ಗುರುತಿಸಿರುವ ಕಾರಣಗಳು ಹೊಸದೆನಿಸುವುದಿಲ್ಲ. ಹಿಂದಿನಿಂದಲೂ ಹೆಣ್ಣನ್ನು ಅನುತ್ಪಾದಿಕ ನೆಲೆಯಲ್ಲಿರಿಸಿ, ಅವಳು 'ಹೊರೆ' ಎಂದು ಪರಿಗಣಿಸುತ್ತಿರುವ ಸಮಾಜದಲ್ಲಿ ಈ ಕಾರಣಗಳು ಇಂದಿನ ಸಾಮಾಜಿಕ ವ್ಯವಸ್ಥೆಯಿಂದ ಉದ್ಭವವಾದುದಲ್ಲ. ಬದಲಿಗೆ ಹೆಣ್ಣು ಇಂದು ಅರ್ಥಿಕವಾಗಿ ಉತ್ಪಾದಕಳಾದರೂ ಇದೇ ಸ್ಥಿತಿಯ ಮುಂದುವರಿಕೆಗೆ ಕಾರಣಗಳನ್ನು ಹುಡುಕಬೇಕಾದ ಹಂತದಲ್ಲಿದ್ದೇವೆ, ಎನಿಸುತ್ತದೆ.

ಇಂಥ ಸೂಕ್ಷ್ಮಗಳನ್ನು ಕೇವಲ ಅನುಕಂಪ, ಕರುಣೆಗಳಿಂದ ಮಾತ್ರ ನೋಡದೆ ಕಾರ್ಯಪ್ರವೃತ್ತವಾಗಿರುವ 'ವಿಮೋಚನಾ'ಸಂಸ್ಥೆಯ ಹೋರಾಟ, ವಿಚಾರಸಂಕಿರಣಗಳು ಆಶಾದಾಯಕವಾದ ನೆಲೆಗಳಲ್ಲಿ ಅರಿವನ್ನು ಮೂಡಿಸುತ್ತಿದೆ. "ಹೆಂಗಸರ ಬದುಕಿನ ಘನತೆ"ಗಾಗಿ ಶ್ರಮಿಸುತ್ತಿರುವ ಈ ಸಂಸ್ಥೆ ಹೆಣ್ಣು ಭ್ರೂಣಹತ್ಯೆಯ ವಿರುದ್ಧ ಪ್ರಚಾರ ನಡೆಸಿದೆ. ಮಹಿಳೆಯರ ಬಗೆಗಿನ ದೌರ್ಜನ್ಯ, ಶಿಶು ಹತ್ಯೆಗಳ ಬಗ್ಗೆ ಬೇಳಗಾವಿ, ಮಂಡ್ಯ ಜಿಲ್ಲೆಯಲ್ಲಿ ವ್ಯಾಪಕ ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿ ಮಾಹಿತಿ ಈ ಕೃತಿಯ ನಿರ್ಮಿತಿಗೆ ಬುನಾದಿಯಾಗಿದೆ.

ಮಂಡ್ಯ ಹಾಗು ಬೆಳಗಾವಿಯಲ್ಲಿ ವ್ಯಾಪಕವಾಗಿರುವ ಹೆಣ್ಣು ಭ್ರೂಣಹತ್ಯೆಯ ತೀವ್ರ ಸ್ವರೂಪ, ಅದರಿಂದಾಗುವ ಪರಿಣಾಮ, ಅದರ ಹೊಣೆಗಾರಿಕೆ ಯಾರದು? ಅದರ ಲಾಭ ಯಾರಿಗಾಗಿದೆ– ಹೀಗೆ ಹಲವು ಹತ್ತು ವಿಷಯಗಳ ಕಡೆ ಈ ಕೃತಿ ಬೆಳಕು ಚೆಲ್ಲಿದೆ. ಲೇಖಕರು ಈ ಪ್ರಶ್ನೆಗಳಿಗೆ ಇನ್ನೂ ಹೆಚ್ಚಿನ ವ್ಯಾಪ್ತಿಯನ್ನು ನೀಡುವ ಸಾದ್ಯತೆ ಇತ್ತೆಂದು ಅನಿಸುತ್ತದೆ. ಅಂದರೆ ಹೆಣ್ಣು ಭ್ರೂಣ ಹತ್ಯೆಯ ಕಾರಣ–ಪರಿಣಾಮಗಳು ಎಲ್ಲೆಡೆ ಏಕರೂಪಿಯಾಗಿರುವ ಹಿನ್ನಲೆಯಲ್ಲಿಯೇ ವಿಶ್ಲೇಷಣೆಗೊಂಡಿದೆ. ಅದರ ಹೊರತಾಗಿ ಪ್ರಾದೇಶಿಕ ನೆಲೆಯಲ್ಲಿ ಇದ್ದಿರಬಹುದಾದ ಇತರ ಸೂಕ್ಷ್ಮ ಅಂಶಗಳನ್ನು ಹೆಕ್ಕಿ ತೆಗೆಯಬಹುದಿತ್ತು. ಪಾರಂಪರಿಕ ದೃಷ್ಟಿಕೋನಕ್ಕಿಂತ ಭಿನ್ನವಾಗಿ, ಗರ್ಭದಲ್ಲಿ ಭ್ರೂಣಗಳ ನಿರ್ಮಾಣದಲ್ಲೇ ಗಂಡು ಮಕ್ಕಳ ಭ್ರೂಣದ ಸಂಖ್ಯೆ ಹೆಚ್ಚಾಗಿದ್ದು ಹೆಣ್ಣು ಶಿಶುಗಳು ಅನುಪಾತದಲ್ಲಿ ಕಡಿಮೆಯಾಗುವ ಸಾಧ್ಯತೆಯನ್ನು ಜೈವಿಕವಾಗಿ ತಳ್ಳಿಹಾಕಲು ಸಾಧ್ಯವಿಲ್ಲ. ವೈದ್ಯಕೀಯ ಹಾಗೂ ಜೈವಿಕ ತಜ್ಞರ ಮೂಲದಿಂದಲೂ ಈ ಅಂಶವನ್ನು ಕುರಿತಾಗಿ ಮಾಹಿತಿ ಒದಗಿಸಿದ್ದರೆ ಈ ವಿಷಯಕ್ಕೆ ಮತ್ತೊಂದು ಮಗ್ಗಲು ಒದಗುತ್ತಿತ್ತು. ಆದರೆ ಇಲ್ಲಿ ನೀಡಿರುವ ಅಂಕಿ ಅಂಶಗಳು, ಮಾಹಿತಿಯ ನಿರಾಕರಣೆ ಎಂದು ಭಾವಿಸದೆ, ಅದರಾಚೆಗೂ ಇರಬಹುದಾದ ಸಾಧ್ಯತೆಯನ್ನು ಗುರತಿಸಬಹುದೆಂಬ ಸೂಚನೆ ಅಷ್ಟೆ

ಅಪಾರ ಶ್ರಮ, ಚಿಂತನೆ, ವಿಶ್ಲೇಷಣೆಯಿಂದ ಮೈತಾಳಿರುವ ಈ ಕೃತಿ ಹೊಸ ಚಿಂತನೆಗೆ ನೆಲೆಗಟ್ಟನ್ನು ನಿರ್ಮಿಸಿದೆ. ಇದಕ್ಕೆ ಪೂರಕವಾಗುವಂತೆ ಮಾಹಿತಿ ಒದಗಿಸಿರುವ 'ವಿಮೋಚನಾ ಸಂಸ್ಥೆ'ಯ ಶ್ರಮ ವಿವರಣೆಗೆ ನಿಲುಕದಂಥದ್ದು ಅವರ ಕಾಳಜಿ ಶ್ಲಾಘನೀಯವಾದುದು. ಈ ವಿಷಯವನ್ನು ಇನ್ನೂ ವ್ಯಾಪಕಗೊಳಿಸುವ ಕಡೆ ಪ್ರಯತ್ನಿಸಬಹುದು ಎನಿಸುತ್ತದೆ. ಪಿತೃಪ್ರಧಾನ ಕುಟುಂಬದ ಮಾದರಿಗಳು ನಗರೀಕರಣ, ಕೈಗಾರಿಕೀಕರಣ, ಮಹಿಳೆಯರ ಶೈಕ್ಷಣಿಕ, ಆರ್ಥಿಕ ಸಬಲತೆಯ ಕಾರಣ ಇಂದು ಬದಲಾಗುತ್ತಿರುವ, ಸ್ಥಿತ್ಯಂತರದ ಸ್ಥಿತಿಯಲ್ಲಿದೆ. ಈ ಸಂದರ್ಭದ ಕೌಟುಂಬಿಕ ಹಾಗೂ ಸಾಮಾಜಿಕ ಒತ್ತಡಗಳು ವಿಭಿನ್ನವಾಗಿರುವುದರಿಂದ ಅದರ ಹಿನ್ನಲೆಯಲ್ಲಿ ಹೆಣ್ಣು ಭ್ರೂಣ ಹತ್ಯೆಯ ಸಮಸ್ಯೆಯ ಮರು ಅವಲೋಕನ ಭಿನ್ನ ಚಿತ್ರವನ್ನು ನೀಡುತ್ತದೆ, ಬೆಂಗಳೂರಿನಂಥ ನಗರಗಳಲ್ಲಿ ಈ ವಿಷಯದ ಬಗ್ಗೆ ಅಧ್ಯಯನ ನಡೆದರೆ ಆಗ ಒಂದು ಲೌಕಿಕ ಅಧ್ಯಯನ ಈ ಕೃತಿಗೆ ಇನ್ನೂ ಹೆಚ್ಚಿನ ಮಹತ್ತರತೆ ಒದಗಿಸುತ್ತದೆ ಎಂದು ಭಾವಿಸುತ್ತೇನೆ. □

ಅರವತ್ತು ವರ್ಷಗಳ ಪಾಪ

ಎರಡನೇ ಮಹಾಯುದ್ಧದ ನಂತರದಲ್ಲಿ ಏಷ್ಯಾ ಮತ್ತು ಐರೋಪ್ಯ ಖಂಡಗಳಲ್ಲಿ ಅನೇಕ ರಾಷ್ಟ್ರಗಳು ವಸಾಹತು ಶಾಹಿಯ ಆಳ್ವಿಕೆಯಿಂದ ವಿಮೋಚನೆ ಹೊಂದಿದವು. ಸೋವಿಯತ್ ಸಂಘ ಮತ್ತು ಅಮೆರಿಕಾದ ನಡುವಣ ಏರ್ಪಟ್ಟಿದ್ದ ಶೀತಲ ಸಮರದ ಹಿನ್ನೆಲೆಯಲ್ಲಿ ಪ್ರಜಾತಾಂತ್ರಿಕ ಚಳುವಳಿಗಳು ವಿಶ್ವದಾದ್ಯಂತ ಯಶಸ್ಸು ಕಾಣುತ್ತಿದ್ದವು. ವಿವಿಧ ದೇಶಗಳ ಧುಡಿಯುವ ಜನತೆ ಪ್ರಜಾತಾಂತ್ರಿಕ ಹೋರಾಟಗಳ ಮೂಲಕ ಸಾಮ್ರಾಜ್ಯಶಾಹಿಗಳ ದಬ್ಬಾಳಿಕೆಯನ್ನು ಹಿಮ್ಮೆಟ್ಟಿಸಿ ಸ್ವಾತಂತ್ರ್ಯ ಗಳಿಸಿದ್ದು ಈ ಅವಧಿಯಲ್ಲೇ. ಆದರೆ ಇದೇ ಸಮಯದಲ್ಲಿ ಪ್ರಜಾತಂತ್ರದ ಸಿದ್ಧಾಂತವನ್ನೇ ಬುಡಮೇಲು ಮಾಡುವ ಐತಿಹಾಸಿಕ ಘಟನೆಯೂ ಜರುಗಿತ್ತು. ಎಲ್ಲೆಡೆ ಆಕ್ರಮಣ ಶಾಹಿ ಶಕ್ತಿಗಳು ಪ್ರಜಾ ಹೋರಾಟಗಳಿಗೆ ಮಣಿದು ತಮ್ಮ ಆಳ್ವಿಕೆಯನ್ನು ಅಂತ್ಯಗೊಳಿಸುತ್ತಿದ್ದ ಸಮಯದಲ್ಲೇ, ಅರಬ್ ಸಮುದಾಯದ ಪ್ರಮುಖ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದ್ದ ಪಾಲೆಸ್ಟೈನ್‌ನಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳು ಒಂದು ಹೊಸ ಇತಿಹಾಸ ಬರೆಯುತ್ತಿದ್ದರು. ಪಾಲೆಸ್ಟೈನಿನ ಮೂಲ ನಿವಾಸಿಗಳನ್ನು ತಮ್ಮ ಜನ್ಮ ಸ್ಥಾನದಿಂದ ಉಚ್ಚಾಟಿಸಿ, ಬೇರೊಂದು ಸಂಸ್ಕೃತಿಯನ್ನು ಅವರ ಮೇಲೆ ಹೇರುವ ಹವಣಿಕೆಗೆ ಅಮೆರಿಕಾ ಮತ್ತು ಬ್ರಿಟನ್ ರಾಷ್ಟ್ರಗಳು ಸಜ್ಜಾಗುತ್ತಿದ್ದವು. ಈ ಘಟನೆಯ ಹಿನ್ನೆಲೆಯಲ್ಲೇ ಜಾಗತಿಕ ಭೂಪಟದಲ್ಲಿ ಅಸ್ತಿತ್ವವೇ ಇಲ್ಲದಿದ್ದ ಇಸ್ರೇಲ್ ಎಂಬ ರಾಷ್ಟ್ರ ಉದಯವಾಗಿತ್ತು. ವಿಶ್ವದ ಬಹುತೇಕ ರಾಷ್ಟ್ರಗಳು ತಮ್ಮ ವಿಮೋಚನೆಯನ್ನು ಆಚರಿಸುತ್ತಿರುವ ಸಮಯದಲ್ಲಿ ಪಾಲೆಸ್ಟೈನಿನ ಜನತೆ ಸ್ವಾತಂತ್ರ್ಯವನ್ನು ಕಳೆದು ಕೊಂಡು ತಮ್ಮ ರಕ್ಷಣೆಗಾಗಿ ಹೋರಾಡುತ್ತಿದ್ದರು.

ಈ ಘಟನೆ ಸಂಭವಿಸಿದ ಮೇ 14 1948 ಜಾಗತಿಕ ಇತಿಹಾಸದ ಕರಾಳ ದಿನ. ಸಾಮ್ರಾಜ್ಯಶಾಹಿಗಳಿಗೆ ಈ ದಿನವೇ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ದಿನ. ಏಕೆಂದರೆ ಈ ದಿನದಂದೇ ಜಗತ್ತಿನ ಭೂಪಟದಲ್ಲಿ ಇಸ್ರೇಲ್ ಎಂಬ ರಾಷ್ಟ್ರದ ಉದಯವಾಗಿತ್ತು. ಸಾಮ್ರಾಜ್ಯ ಶಾಹಿಗಳ, ವಸಾಹತುಶಾಹಿಗಳ ಆಳ್ವಿಕೆಯಿಂದ ವಿಮೋಚನೆ ಹೊಂದಿದ ರಾಷ್ಟ್ರವಾಗಿ ಇಸ್ರೇಲ್ ಉದಯಿಸಲಿಲ್ಲ. ಅಮೆರಿಕಾ ಮತ್ತು ಬ್ರಿಟನ್ ರಾಷ್ಟ್ರಗಳ ರಾಜಕೀಯ ಪಿತೂರಿಯಿಂದ ಸ್ಥಾಪಿತವಾದ ಇಸ್ರೇಲ್ ಎಂಬ ರಾಷ್ಟ್ರಕ್ಕೆ ತನ್ನದೇ ಆದ ಪರಂಪರೆಯಾಗಲೀ, ಸಂಸ್ಕೃತಿಯಾಗಲೀ ಅಗತ್ಯವಾಗಿರಲಿಲ್ಲ. ಪಾಲೆಸ್ಟೈನ್ ಪ್ರಾಂತ್ಯಗಳ ಮೇಲೆ ಬ್ರಿಟೀಷರ ಆಡಳಿತಾಧಿಕಾರ ಅಂತ್ಯವಾಗುತ್ತಿದ್ದಂತೆಯೇ, ಆಗಸ್ಟ್ 1, 1948ರಂದು ಬ್ರಿಟೀಷ್ ಆಡಳಿತವು ಈ ಪ್ರಾಂತ್ಯದ ಶೇ. 58 ರಷ್ಟು ಭೂಪ್ರದೇಶವನ್ನು ಯಹೂದಿಗಳ ರಾಷ್ಟ್ರಕ್ಕೆ ಬಳುವಳಿಯಾಗಿ ನೀಡಿತ್ತು. ಆದರೆ ಈ ಸಂದರ್ಭದಲ್ಲಿ ಪಾಲೆಸ್ಟೈನಿನಲ್ಲಿ ಯಹೂದಿಗಳ ಜನಸಂಖ್ಯೆ ಆರು ಲಕ್ಷವಿದ್ದರೆ, ಪಾಲೆಸ್ಟೈನಿಯರ ಸಂಖ್ಯೆ 12 ಲಕ್ಷಕ್ಕೂ ಹೆಚ್ಚಾಗಿತ್ತು. 1922ರ ಜನಗಣತಿಯ ಪ್ರಕಾರ ಪಾಲೆಸ್ಟೈನ್ ರಾಷ್ಟ್ರದಲ್ಲಿ ಮುಸ್ಲಿಮರು ಶೇ. 78, ಯಹೂದಿಗಳು ಶೇ. 11 ಮತ್ತು ಕ್ರೈಸ್ತರು ಶೇ.9.6ರಷ್ಟಿದ್ದರು. 1945ರ ವೇಳೆಗೆ ಯಹೂದಿಗಳ ಸಂಖ್ಯೆ ಶೇ.31 ರಷ್ಟಾಗಿತ್ತು.

ಇಸ್ರೇಲ್‌ನ ಸ್ಥಾಪನೆಯ ಎರಡು ತಿಂಗಳ ಮುನ್ನ ಮಾರ್ಚ್ 10 1948ರಂದು ತಮ್ಮ ಅಂತಿಮ ಯೋಜನೆಯನ್ನು ರೂಪಿಸಲು ಡೇವಿಡ್ ಬೆನ್ ಗುರಿಯನ್ ನೇತೃತ್ವದಲ್ಲಿ ಸೇರಿದ್ದ ಸಭೆಯಲ್ಲಿ ಪಾಲೆಸ್ಟೈನಿಯರ ಜನಾಂಗವನ್ನೇ ನಿರ್ನಾಮ ಮಾಡುವ "ಪ್ಲಾನ್ ಡಲೆಟ್" ಎಂಬ ತಂತ್ರವನ್ನು ರೂಪಿಸಲಾಗಿತ್ತು. 1930ರಲ್ಲೇ ಪ್ರಾರಂಭವಾಗಿದ್ದ, ನ್ಯಾಷನಲ್ ಮಿಲಿಟರಿ ಸಂಘಟನೆ ಮತ್ತು ಸ್ಟರ್ನ್ ಗುಂಪು ಮುಂತಾದ ಯಹೂದಿಗಳ ಉಗ್ರಗಾಮಿ ತಂಡಗಳ ಕಾರ್ಯಾಚರಣೆಯನ್ನು ತೀವ್ರಗೊಳಿಸಿ, ಈ ಕಾರ್ಯವನ್ನು ಸಾಧಿಸಲು ತೀರ್ಮಾನಿಸಲಾಯಿತು. ಈ ಯೋಜನೆಯ ಪ್ರಕಾರ ಪಾಲೆಸ್ಟೈನಿಯರು ವಾಸಿಸುವ ನಗರಗಳ, ಗ್ರಾಮಗಳ ಮೇಲೆ ಬಾಂಬ್ ದಾಳಿ ನಡೆಸಲಾಯಿತು.

ಇಸ್ರೇಲ್‌ನ ಸ್ಥಾಪನೆಯ ಎರಡು ತಿಂಗಳ ಮುನ್ನ ಮಾರ್ಚ್ ೧೦, ೧೯೪೮ರಂದು ತಮ್ಮ ಅಂತಿಮ ಯೋಜನೆಯನ್ನು ರೂಪಿಸಲು ಡೇವಿಡ್ ಬೆನ್ ಗುರಿಯನ್ ನೇತೃತ್ವದಲ್ಲಿ ಸೇರಿದ್ದ ಸಭೆಯಲ್ಲಿ ಪಾಲೆಸ್ಟೈನಿಯರ ಜನಾಂಗವನ್ನೇ ನಿರ್ನಾಮ ಮಾಡುವ "ಪ್ಲಾನ್ ಡಲೆಟ್" ಎಂಬ ತಂತ್ರವನ್ನು ರೂಪಿಸಲಾಗಿತ್ತು. ೧೯೩೦ರಲ್ಲೇ ಪ್ರಾರಂಭವಾಗಿದ್ದ, ನ್ಯಾಷನಲ್ ಮಿಲಿಟರಿ ಸಂಘಟನೆ ಮತ್ತು ಸ್ಟರ್ನ್ ಗುಂಪು ಮುಂತಾದ ಯಹೂದಿಗಳ ಉಗ್ರಗಾಮಿ ತಂಡಗಳ ಕಾರ್ಯಾಚರಣೆಯನ್ನು ತೀವ್ರಗೊಳಿಸಿ, ಈ ಕಾರ್ಯವನ್ನು ಸಾಧಿಸಲು ತೀರ್ಮಾನಿಸಲಾಯಿತು. ಇಸ್ರೇಲನ್ನು ಬಹಳ ವರ್ಷಗಳ ಕಾಲ ಆಳಿದ ಪ್ರಥಮ ಪ್ರಧಾನಿ ಬೆನ್‌ಗುರಿಯನ್ ೧೯೩೭ರಲ್ಲೇ "ಅರಬ್ಬರು ಎಂದಾದರೂ ಈ ಪ್ರದೇಶದಿಂದ ನಿರ್ಗಮಿಸಲೇಬೇಕು, ಅದಕ್ಕೆ ಸದವಕಾಶಗಳು ಯುದ್ಧದ ರೂಪದಲ್ಲಿ ಒದಗಿಬರಬೇಕು " ಎಂದು ಹೇಳಿದ್ದರು.

ನಾಡಿ ಬಂಗಾರ ಪೇಟೆ

ಲಕ್ಷಾಂತರ ಜನರನ್ನು ಉಚ್ಚಾಟಿಸಲಾಯಿತು. ಇಸ್ರೇಲನ್ನು ಬಹಳ ವರ್ಷಗಳ ಕಾಲ ಆಳಿದ ಪ್ರಥಮ ಪ್ರಧಾನಿ ಬೆನ್ ಗುರಿಯನ್ 1937ರಲ್ಲೇ "ಅರಬ್ಬರು ಎಂದಾದರೂ ಈ ಪ್ರದೇಶದಿಂದ ನಿರ್ಗಮಿಸಲೇಬೇಕು. ಅದಕ್ಕೆ ಸದವಕಾಶಗಳು ಯುದ್ಧದ ರೂಪದಲ್ಲಿ ಒದಗಿಬರಬೇಕು" ಎಂದು ಹೇಳಿದ್ದರು.

ಬೆನ್ ಗುರಿಯನ್ ನೇತೃತ್ವದಲ್ಲೇ ನಡೆದ ಪಾಲೆಸ್ತೈನಿಯರ ವಿರುದ್ಧದ ಆಕ್ರಮಣಗಳು ಅಷ್ಟೇ ಪ್ರಳಯಾಂತಕವಾಗಿದ್ದವು. "ಪ್ರತಿಯೊಂದು ದಾಳಿಯೂ ಪಾಲೆಸ್ತೈನಿಯರ ಹತ್ಯೆಯಲ್ಲಿ, ವಿನಾಶದಲ್ಲಿ, ಉಚ್ಚಾಟನೆಯಲ್ಲಿ ಕೊನೆಗೊಂಡು ಅವರ ಪ್ರದೇಶಗಳನ್ನು ಯಹೂದಿಗಳು ಆಕ್ರಮಿಸಿಕೊಳ್ಳಬೇಕು" ಎಂಬ ಗುರಿಯನ್ ಅವರ ಆದೇಶದಂತೆಯೇ ಹತ್ಯಾಕಾಂಡಗಳು ಸಂಭವಿಸಿದವು. ಮೇ 15 1948ರಂದು ಪ್ರಾರಂಭವಾದ "ನಖ್ಬ"(ಮಹಾದುರಂತ) ಅವ್ಯಾಹತವಾಗಿ, ನಿರ್ಭಯವಾಗಿ ಮುಂದುವರೆದಿತ್ತು. ಟೆಲ್ ಅವಿವ್, ಹೈಫ, ಜೆರುಸಲೆಮ್ ಮತ್ತಿತರ ಪ್ರದೇಶಗಳಲ್ಲಿ ನಡೆದ ಮಾರಣಾಂತಿಕ ಆಕ್ರಮಣಗಳಿಂದ ಇಡೀ ಗ್ರಾಮಗಳೇ ನಿರ್ಜನವಾದವು. ಇದಕ್ಕೂ ಮುನ್ನ ಏಪ್ರಿಲ್ 9ರಂದು ಸ್ಟರ್ನ್ ಗುಂಪಿನ ಉಗ್ರಗಾಮಿಗಳು ಜೆರುಸಲೆಮ್‌ನ ಗ್ರಾಮದ ಮೇಲೆ ದಾಳಿ ಮಾಡಿ ಒಂದೇ ರಾತ್ರಿ 200 ಮಂದಿಯನ್ನು ಹತ್ಯೆ ಮಾಡಿದ್ದರು. 300ಕ್ಕೂ ಹೆಚ್ಚು ಗ್ರಾಮಗಳನ್ನು ಖಾಲಿ ಮಾಡಲಾಯಿತು. ಸಾವಿರಾರು ಜನರನ್ನು ಬಲಾತ್ಕಾರದಿಂದ ಉಚ್ಚಾಟಿಸಲಾಯಿತು. ಲಕ್ಷಾಂತರ ಪಾಲೆಸ್ತೈನಿಯರ ಹತ್ಯೆಗೈಯಲಾಯಿತು. 8 ಲಕ್ಷ ಜನ ನಿರಾಶ್ರಿತರಾದರು. ಕೆಲವರು ಜೋರ್ಡಾನ್ ಆಡಳಿತದಲ್ಲಿದ್ದ ಪಶ್ಚಿಮ ದಂಡೆ (ವೆಸ್ಟ್ ಬ್ಯಾಂಕ್)ಗೆ ವಲಸೆ ಹೋದರು. ಇನ್ನು ಕೆಲವರು ಲೆಬನಾನಿಗೆ, ಈಜಿಪ್ಟ್ ಆಡಳಿತದ ಗಾಝಾ ಪ್ರದೇಶಕ್ಕೆ ವಲಸೆ ಹೋದರು. ಸಾವಿರಾರು ಜನ ಪಶ್ಚಿಮ ಏಷ್ಯಾದಲ್ಲಿ ಹಂಚಿಹೋದರು. ಈ ಹಂತದಲ್ಲೇ ಹಲವಾರು ಸಮುದಾಯದ ನಾಯಕರನ್ನು ಮರಣದಂಡನೆಗೆ ಗುರಿಮಾಡಲಾಯಿತು. ಅರಬ್ಬರ ಗ್ರಾಮಗಳಿದ್ದೆಡೆಯಲ್ಲಿ ಯಹೂದಿಗಳ ಗ್ರಾಮಗಳ ನಿರ್ಮಾಣವಾದವು. ಈ ರೀತಿ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯಗಳ ಸಾಮೂಹಿಕ ಉಚ್ಚಾಟನೆಯ ಮೂಲಕವೇ 60 ವರ್ಷಗಳ ಹಿಂದೆ ಇಸ್ರೇಲ್ ಎಂಬ ರಾಷ್ಟ್ರ ಉದಯಿಸಿತ್ತು.

ಈ ಪ್ರಳಯಾಂತಕ ಸಂದರ್ಭವನ್ನು ಸ್ವತಂತ್ರ ಸಂಗ್ರಾಮವೆಂದು ಯಹೂದಿಗಳು ಸಂಭ್ರಮದಿಂದ ಆಚರಿಸಿದರೆ, ಪಾಲೆಸ್ತೈನಿಯರು ಮಹಾದುರಂತವೆಂದು ಶೋಕಾಚರಣೆ ನಡೆಸುತ್ತಾರೆ. 1947ರಲ್ಲಿ ಸಂಯುಕ್ತ ರಾಷ್ಟ್ರಗಳ ಸಂಸ್ಥೆಯು ಪಾಲೆಸ್ತೈನ್ ರಾಷ್ಟ್ರವನ್ನು ಅರಬ್ ಮತ್ತು ಯಹೂದಿ ರಾಷ್ಟ್ರಗಳಾಗಿ ವಿಭಜಿಸಲು ನೀಡಿದ್ದ ನಿರ್ಣಯವನ್ನು ಎಲ್ಲ ಅರಬ್ ರಾಷ್ಟ್ರಗಳೂ ತಿರಸ್ಕರಿಸಿದ್ದವು. ಯಹೂದಿಗಳ ಆಕ್ರಮಣವನ್ನು ಎದುರಿಸಲು ಸಜ್ಜಾಗಿದ್ದ ಅರಬ್ ಸೇನೆಗಳು ಜೆರುಸಲೆಮ್ ನಗರದ ಸುತ್ತ ಬೀಡುಬಿಟ್ಟಿದ್ದವು. ನಗರದಲ್ಲಿ ಯಹೂದಿಗಳು ಆಕ್ರಮಿಸಿಕೊಂಡಿದ್ದ ಪ್ರಾಂತ್ಯವನ್ನು ಹಲವು ತಿಂಗಳುಗಳ ಕಾಲ ಅರಬ್ ಸೈನಿಕರು ಸುತ್ತುವರೆದಿದ್ದರು. ಯುದ್ಧದ ಪ್ರಥಮ ಹಂತದಲ್ಲಿ, ಯುದ್ಧ ವಿರಾಮ ಘೋಷಿಸುವವರೆಗೂ ಅರಬ್ ಸೇನೆಗಳು ಮೇಲುಗೈ ಸಾಧಿಸಿದ್ದವು. ಆದರೆ ನಂತರದ ಯುದ್ಧದಲ್ಲಿ ಅಮೆರಿಕಾ ಮತ್ತು ಬ್ರಿಟನ್‌ನ ಸಹಾಯದಿಂದ ಯಹೂದಿಗಳು ಅನೇಕ ಅರಬ್ ಪ್ರದೇಶಗಳನ್ನೂ ಆಕ್ರಮಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದರು. 1930–40ರ ದಶಕದಲ್ಲಿ ಐರೋಪ್ಯ ರಾಷ್ಟ್ರಗಳಲ್ಲಿ ಯಹೂದಿಗಳ ವಿರುದ್ಧ ನಡೆದ ನರಮೇಧದ ಹಿನ್ನೆಲೆಯಲ್ಲಿ ಯಹೂದಿ ರಾಷ್ಟ್ರ ನಿರ್ಮಾಣಕ್ಕಾಗಿ ಎಂತಹುದೇ ಸಾಹಸಕ್ಕೂ ಸಿದ್ಧರಾಗಿದ್ದ ಯಹೂದಿ ನಾಯಕರಿಗೆ ತಮ್ಮ ಜನಾಂಗವು ಅನುಭವಿಸಿದ ಕಷ್ಟ ಕಾರ್ಪಣ್ಯಗಳು ಅರಬ್ಬರ ವಿರುದ್ಧ ಆಕ್ರಮಣ ನಡೆಸಲು ಪ್ರೇರೇಪಣೆಯಾಗಿದ್ದವು. ಎರಡನೇ ಮಹಾಯುದ್ಧದಲ್ಲಿ ಸಂಭವಿಸಿದ ಸಾವು ನೋವುಗಳು ಪಾಲೆಸ್ತೈನಿಯರ ದುರಂತಗಳನ್ನು ಮರೆಮಾಡುವ ಪರದೆಗಳಾಗಿದ್ದವು. ಇಡೀ ಪಾಶ್ಚಿಮಾತ್ಯ ರಾಷ್ಟ್ರಗಳ ಮಾಧ್ಯಮಗಳಲ್ಲಿ ತಮ್ಮ ಪವಿತ್ರ ಸ್ಥಾನಕ್ಕೆ ಇಸ್ರೇಲಿಯರ ಪುನರಾಗಮನವೇ ಮಹತ್ವದ ಸುದ್ದಿಯಾಗಿತ್ತು.

ಒಂದು ಸಂದರ್ಭದಲ್ಲಿ ಅಮೆರಿಕಾದ ಅಧ್ಯಕ್ಷ ಜಿಮ್ಮಿ ಕಾರ್ಟರ್ ಅವರು ಪಾಲೆಸ್ತೈನಿಯರ ಬವಣೆಯನ್ನು ಆಫ್ರಿಕದ ವರ್ಣಬೇಧ ನೀತಿಗೆ ಹೋಲಿಸಿದ್ದರು. ಅವರ ಈ ಪ್ರತಿಪಾದನೆಗೆ ಕಾರಣಗಳೂ ಇದ್ದವು. ಇಸ್ರೇಲ್‌ನಲ್ಲಿ ಪಾಲೆಸ್ತೈನಿಯರನ್ನು ದೂರವಿಡಲು ಅಡ್ಡಗೋಡೆಗಳನ್ನು ನಿರ್ಮಿಸಲಾಗಿದೆ. ಯಹೂದಿಗಳು ಓಡಾಡಲು ಪ್ರತ್ಯೇಕ ರಸ್ತೆಗಳೂ ಇವೆ. ಆಫ್ರಿಕಾದಲ್ಲಿ ವರ್ಣಬೇಧ ನೀತಿ ಜಾರಿಯಲ್ಲಿದ್ದಾಗ ಕರಿಯರಿಗಾಗಿ ನಿರ್ಮಿಸಲಾಗುತ್ತಿದ್ದ ಪ್ರತ್ಯೇಕ ವಾಸಸ್ಥಾನಗಳನ್ನು ಇಸ್ರೇಲಿನಲ್ಲಿ ಪಾಲೆಸ್ತೈನಿಯರಿಗೆ ನಿರ್ಮಿಸಲಾಗಿದೆ. ಅದನ್ನು "ಬಂಟುಸ್ಥಾನ್" ಎಂದು ಕರೆಯಲಾಗುತ್ತದೆ. ಯಾವುದೇ ಮೂಲಭೂತ ನಾಗರಿಕ ಸೌಲಭ್ಯಗಳಿಲ್ಲದ ಈ ಪ್ರದೇಶ ಗಳಲ್ಲಿ ವಾಸಿಸುವುದು ಕಠೋರ ಶಿಕ್ಷೆಯೇ ಸರಿ.

ಪಾಲೆಸ್ತೈನ್‌ನಲ್ಲಿ ವಾಸವಾಗಿದ್ದ ಕ್ರೈಸ್ತ ಮತ್ತು ಮುಸ್ಲಿಂ ಸಮುದಾಯಗಳನ್ನು ನಿಷ್ಕಾರುಣ್ಯವಾಗಿ ಉಚ್ಚಾಟಿಸಿ, ಸ್ಥಾಪಿಸಲಾದ ಯಹೂದಿಗಳ ಇಸ್ರೇಲ್ ಸಾಮ್ರಾಜ್ಯ ಒಂದು ಸ್ವತಂತ್ರ ರಾಷ್ಟ್ರವೆಂದು ಘೋಷಿಸಿಕೊಂಡು ವಿಶ್ವ ಮಾನ್ಯತೆ ಪಡೆದ ನಂತರದಲ್ಲಿ ಜನಾಂಗೀಯ ಹತ್ಯೆಯನ್ನು ನಿಲ್ಲಿಸಲಾಯಿತಾದರೂ, ಅಲ್ಪಸಂಖ್ಯಾತರಾಗಿ ಪರಿವರ್ತಿತರಾಗಿದ್ದ ಉಳಿದ ಪಾಲೆಸ್ತೈನಿಯರ ಶೋಷಣೆಯನ್ನು ಅವ್ಯಾಹತವಾಗಿ ಮುಂದುವರೆಸಿಕೊಂಡು ಹೋಗಿತ್ತು. 1948ರಲ್ಲಿ ನಡೆದ ಪ್ರಥಮ ಇಸ್ರೇಲ್–ಅರಬ್ಬರ ಯುದ್ಧದಲ್ಲಿ ಅಮೆರಿಕಾ ಮತ್ತು ಬ್ರಿಟನ್‌ಗಳ ನೆರವಿನಿಂದ ಗೆಲುವು ಸಾಧಿಸಿದ ಇಸ್ರೇಲ್‌ನ ಆಳುವ ವರ್ಗಗಳು ಅಲ್ಲಿಯೇ ಉಳಿದಿದ್ದ 2ಲಕ್ಷಕ್ಕೂ ಹೆಚ್ಚು ಅರಬ್ಬರನ್ನು ಎರಡನೇ ದರ್ಜೆಯ ನಾಗರಿಕರಂತೆ ಪರಿಗಣಿಸಲಾರಂಭಿಸಿತ್ತು. ಅವರ ಅನೇಕ ಮೂಲ ಭೂತ ಹಕ್ಕುಗಳನ್ನು ಕಸಿದುಕೊಳ್ಳಲಾಗಿತ್ತು. ಯಹೂದಿಗಳು ಇತರ ಧರ್ಮದ ಜನರಿಗೆ ಯಾವುದೇ ಸ್ಥಿರಾಸ್ತಿಗಳನ್ನು ಮಾರುವುದಾಗಲೀ, ಕೊಳ್ಳುವುದಾಗಲೀ ಮಾಡುವಂತಿಲ್ಲ ಎಂಬ ನಿರ್ಬಂಧ ಹೇರಲಾಗಿತ್ತು. 1948ರ ಯುದ್ಧದಲ್ಲಿ ಅರೆ ಮನಸ್ಸಿನಿಂದಲೇ ಪಾಲೆಸ್ತೈನಿಯರ ಬೆಂಬಲಕ್ಕೆ ನಿಂತ ಜೋರ್ಡಾನ್‌ನಂತಹ ಬಲಿಷ್ಠ ಅರಬ್ ರಾಷ್ಟ್ರಗಳು ಬ್ರಿಟಿಷರಿಂದ ಗಾಝಾ ಪ್ರದೇಶವನ್ನು ಬಳುವಳಿಯಾಗಿ ಪಡೆದ ನಂತರ ಪಾಲೆಸ್ತೈನಿಯರಿಗಿದ್ದ ನೈತಿಕ–ಸೇನಾ ಬೆಂಬಲವೂ ಕ್ಷೀಣಿಸಿತ್ತು. 60 ವರ್ಷಗಳ ನಂತರ ಇಂದಿಗೂ ಶೇ. 25ರಷ್ಟು ಪಾಲೆಸ್ತೈನಿಯರು ನಿರಾಶ್ರಿತರಾಗಿರುವುದು ಕಂಡುಬರುತ್ತದೆ. ವಿಶ್ವಸಂಸ್ಥೆಯ ಅನೇಕ ಆಶ್ವಾಸನೆಗಳ ಹೊರತಾಗಿಯೂ ಪಾಲೆಸ್ತೈನಿಯರು ತಮ್ಮ ಮೂಲ ಸ್ಥಾನಕ್ಕೆ ಹಿಂದಿರುಗಲು ಸಾಧ್ಯವಾಗುತ್ತಿಲ್ಲ.

ಒಂದು ಸಂದರ್ಭದಲ್ಲಿ ಅಮೆರಿಕಾದ ಅಧ್ಯಕ್ಷ ಜಿಮ್ಮಿ ಕಾರ್ಟರ್ ಅವರು ಪಾಲೆಸ್ತೈನಿಯರ ಬವಣೆಯನ್ನು ಆಫ್ರಿಕದ ವರ್ಣಬೇಧ ನೀತಿಗೆ ಹೋಲಿಸಿದ್ದರು. ಅವರ ಈ ಪ್ರತಿಪಾದನೆಗೆ ಕಾರಣಗಳೂ ಇದ್ದವು. ಇಸ್ರೇಲ್‌ನಲ್ಲಿ ಪಾಲೆಸ್ತೈನಿಯರನ್ನು ದೂರವಿಡಲು ಅಡ್ಡಗೋಡೆಗಳನ್ನು ನಿರ್ಮಿಸಲಾಗಿದೆ. ಯಹೂದಿಗಳು ಓಡಾಡಲು ಪ್ರತ್ಯೇಕ ರಸ್ತೆಗಳೂ ಇವೆ. ಆಫ್ರಿಕಾದಲ್ಲಿ ವರ್ಣಬೇಧ ನೀತಿ ಜಾರಿಯಲ್ಲಿದ್ದಾಗ ಕರಿಯರಿಗಾಗಿ ನಿರ್ಮಿಸಲಾಗುತ್ತಿದ್ದ ಪ್ರತ್ಯೇಕ ವಾಸಸ್ಥಾನಗಳನ್ನು ಇಸ್ರೇಲಿನಲ್ಲಿ ಪಾಲೆಸ್ತೈನಿಯರಿಗೆ ನಿರ್ಮಿಸಲಾಗಿದೆ. ಅದನ್ನು "ಬಂಟುಸ್ಥಾನ್" ಎಂದು ಕರೆಯಲಾಗುತ್ತದೆ. ಯಾವುದೇ ಮೂಲಭೂತ ನಾಗರಿಕ ಸೌಲಭ್ಯಗಳಿಲ್ಲದ ಈ ಪ್ರದೇಶಗಳಲ್ಲಿ ವಾಸಿಸುವುದು ಕಠೋರ ಶಿಕ್ಷೆಯೇ ಸರಿ.

ಅಮೆರಿಕಾದ ಪ್ರೋತ್ಸಾಹದಿಂದ ಇಸ್ರೇಲಿ ಸರ್ಕಾರವು ಗಾಝಾ ಪ್ರದೇಶವನ್ನು ಬಹುತೇಕ ಹೊರಾಂಗಣ ಕಾರಾಗೃಹವನ್ನಾಗಿ ಪರಿವರ್ತಿಸಿದ್ದು, ಮಿಲಿಟರಿ ತಾಲೀಮು ನಡೆಸಲಾಗುತ್ತಿದೆ. ಇಲ್ಲಿ ವಾಸಿಸುವ ಹದಿನೈದು ಲಕ್ಷಕ್ಕೂ ಹೆಚ್ಚು ಜನರ ಜೀವನ ಖೈದಿಗಳ ಜೀವನಕ್ಕಿಂತಲೂ ದುಸ್ತರವಾಗಿದ್ದು ಹಸಿವು ದಾರಿದ್ರ್ಯತೆ ಇಲ್ಲಿ ತಾಂಡವಾಡುತ್ತಿರುತ್ತದೆ. ಇಲ್ಲಿ ನೆಲೆಸಿರುವವರಲ್ಲಿ ಶೇ. 80ಕ್ಕೂ ಹೆಚ್ಚು ಜನ ತಮ್ಮ ಮೂಲಸ್ಥಾನದಿಂದ ಉಚ್ಚಾಟಿಸಲ್ಪಟ್ಟವರಾಗಿದ್ದಾರೆ. ಇಸ್ರೇಲಿನಲ್ಲಿರುವವರು ತ್ಯಾಜ್ಯ ವಸ್ತುಗಳನ್ನು ಮತ್ತು ಗಟಾರದ ಕೊಳಚೆಯನ್ನು ಗಾಝಾ ಪ್ರದೇಶಕ್ಕೆ ಹರಿಯಬಿಡುವುದರಿಂದ ಇಲ್ಲಿನ ಭೂಜಲ ಕಲುಷಿತವಾಗಿದೆ. ಇದರ ದುರಸ್ತಿಗಾಗಿ ಸಿಮೆಂಟ್ ಮತ್ತು ಪೈಪುಗಳನ್ನು ಸರಬರಾಜು ಮಾಡಲು ಇಸ್ರೇಲ್ ಸರ್ಕಾರ ನಿರಾಕರಿಸುತ್ತದೆ. ಸೆಪ್ಟೆಂಬರ್ 2000ದಲ್ಲಿ ಪಾಲೆಸ್ತೈನಿಯರ ಎರಡನೆ ದಂಗೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ 900 ಮಕ್ಕಳೂ ಸೇರಿದಂತೆ ಐದು ಸಾವಿರಕ್ಕೂ ಹೆಚ್ಚು ಪಾಲೆಸ್ತೈನಿಯರು ಇಸ್ರೇಲಿ ಸೈನಿಕರಿಂದ ಹತ್ಯೆಗೀಡಾಗಿದ್ದಾರೆ. 1967ರ ನಂತರದ ಅವಧಿಯಲ್ಲಿ ಇಸ್ರೇಲಿನ ಸೇನೆಗಳು 18 ಸಾವಿರಕ್ಕೂ ಪಾಲೆಸ್ತೈನಿಯರ ಮನೆಗಳನ್ನು ಧ್ವಂಸ ಮಾಡಿದ್ದು, 7ಲಕ್ಷಕ್ಕೂ ಹೆಚ್ಚು ಜನರನ್ನು ದಸ್ತಗಿರಿ ಮಾಡಿದೆ. ಇಂದಿಗೂ ಇಸ್ರೇಲ್‌ನ ಬಂದಿಖಾನೆಗಳಲ್ಲಿ 20 ಸಾವಿರ ಪಾಲೆಸ್ತೈನಿಯರು ಕೊಳೆಯುತ್ತಿದ್ದಾರೆ.

ಯಾವುದೇ ಸಂಭ್ರಮವನ್ನು ಆಚರಿಸುವ ಮುನ್ನ ಗಟ್ಟಿಯಾಗಿ ರೋದಿಸಿ ಗೋಳಾಡುವುದು ಯಹೂದಿ ಸಂಸ್ಕೃತಿಯ ವೈಶಿಷ್ಟ್ಯ. ಈಗಲೂ ಇದನ್ನು ಅನುಸರಿಸಲಾಗುತ್ತದೆ. ಯಹೂದಿಗಳ ವಿವಾಹ ಸಂದರ್ಭಗಳಲ್ಲೂ ವರ ಗಾಜನ್ನು ತುಳಿಯುವುದು ಸಂಪ್ರದಾಯವಾಗಿ ಬೆಳೆದು ಬಂದಿದೆ. ಪ್ರತಿ ವರ್ಷ ಸ್ವತಂತ್ರ ದಿನಾಚರಣೆಯ ಮುನ್ನಾದಿನ 1948ರ ಯುದ್ಧದಲ್ಲಿ ಮಡಿದವರನ್ನು ನೆನೆಯುವ

ನಿಟ್ಟಿನಲ್ಲಿ ಶೋಕಾಚರಣೆ ಆಚರಿಸಲಾಗುತ್ತದೆ. ಎಲ್ಲ ವಾಹನಗಳೂ ಸ್ಥಗಿತಗೊಳ್ಳುತ್ತವೆ. ಜನರೂ ನಿಂತಲ್ಲೇ ನಿಲ್ಲುತ್ತಾರೆ. 24 ಗಂಟೆಗಳ ಕಾಲ ಎಲ್ಲ ಮನರಂಜನಾ ಕಾರ್ಯಕ್ರಮಗಳೂ ರದ್ದಾಗುತ್ತವೆ. ಸೈರನ್ನುಗಳ ಮೂಲಕ ಸೂಚನೆಯನ್ನು ನೀಡಿದ ನಂತರವೇ ಶೋಕಾಚರಣೆಯನ್ನು ಅಂತ್ಯಗೊಳಿಸಿ ಸ್ವಾತಂತ್ರ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಇಸ್ರೇಲಿಯರ ದೇಶಭಕ್ತಿ ಮತ್ತು ಸ್ವಾಭಿಮಾನ ಪರಾಕಾಷ್ಠೆಯನ್ನು ತಲುಪುವ ಈ ಸಂದರ್ಭದಲ್ಲಿ ಪ್ರತಿಯೊಬ್ಬ ಯಹೂದಿಯೂ ತನ್ನ ದೇಶದ ಬಗ್ಗೆ ಹೆಮ್ಮೆಯಿಂದ ಬೀಗುತ್ತಾನೆ.

ಹಿರಿಯ ನಾಗರಿಕರು ತಮ್ಮ ಕಾಲದ ಸುಮಧುರ ಕ್ಷಣಗಳನ್ನು ನೆನೆದು ವಾಸ್ತವ ಸನ್ನಿವೇಶದ ಬಗ್ಗೆ ಪರಿತಪಿಸುತ್ತಾರೆ. ಸ್ವಾತಂತ್ರ್ಯಾನಂತರದ ಪ್ರಾರಂಭಿಕ ಹಂತದಲ್ಲಿ ಇಸ್ರೇಲಿನ ನಾಯಕರಲ್ಲಿ ಕಂಡುಬರುತ್ತಿದ್ದ ನಿಷ್ಠೆ, ವಿಶ್ವಾಸ, ಸತ್ಯ ಸಂಧತೆ ಎಲ್ಲವೂ ಈಗ ಮಾಯವಾಗಿದೆ ಎಂದು ಹಲುಬುತ್ತಾರೆ. ಆದರೂ ಒಮ್ಮೆಯಾದರೂ ತಮ್ಮ ಸ್ವಂತ ನೆಲದಲ್ಲೇ ನಿರಾಶ್ರಿತರಾಗಿ ಬಾಳುತ್ತಿರುವ ಪಾಲೆಸ್ಟೈನ್ ಅರಬ್ಬರ ದುಸ್ಥಿತಿಯ ಬಗ್ಗೆ ಚಕಾರ ಎತ್ತುವುದಿಲ್ಲ. ಪಾಲೆಸ್ಟೈನಿನ ಜನತೆಯ ದುಃಖ ದುಮ್ಮಾನಗಳು, ಕಷ್ಟ ವ್ಯಸನಗಳು, ಪ್ರಜಾತಂತ್ರ ಮತ್ತು ಸಮಾನತೆ ಎಂಬ ಪದಪುಂಜಗಳ ಹಿಂದೆ ಮರೆಯಾಗಿಬಿಟ್ಟಿರುತ್ತವೆ. ಯಹೂದಿಗಳ ದೃಷ್ಟಿಯಲ್ಲಿ ನಿಷ್ಠಾವಂತರೂ, ಸತ್ಯಸಂಧರೂ ಆಗಿದ್ದ ಇಸ್ರೇಲಿ ನಾಯಕರು, ಪಾಲೆಸ್ಟೈನಿಯರ ಪಾಲಿಗೆ ಯಮದೂತರಾಗಿದ್ದುದು 1956ರ ಇಸ್ರೇಲ್-ಇಜಿಪ್ಟ್ ಯುದ್ಧದಲ್ಲೇ ನಿರೂಪಿತವಾಗಿತ್ತು. ಸೂಯಜ್ ಕಾಲುವೆಯನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ ಇಜಿಪ್ಟ್ ಮೇಲೆ ಆಕ್ರಮಣ ಮಾಡಿ ಅಬ್ದೆಲ್ ನಾಸೆರ್ ಸರ್ಕಾರವನ್ನು ಉರುಳಿಸಲು, ಫ್ರಾನ್ಸ್-ಬ್ರಿಟನ್ ನೆರವಿನೊಂದಿಗೆ ಸಂಚು ಹೂಡಿದ್ದ ಇಸ್ರೇಲ್ ಈ ಯುದ್ಧದ ಸಮಯದಲ್ಲೇ ಇಸ್ರೇಲಿನ ಸೇನೆಯ ಒಂದು ತುಕಡಿ ಕೇಂದ್ರ ಭಾಗದಲ್ಲಿದ್ದ ಕಾಫ್‌ರ್ ಕಸ್ಸೆಮ್ ಪ್ರಾಂತ್ಯದ ಮೇಲೆ ಹಲ್ಲೆ ನಡೆಸಿ ಗ್ರಾಮದಲ್ಲಿದ್ದ ಎಲ್ಲ ಪಾಲೆಸ್ಟೈನಿಯರನ್ನೂ ಹತ್ಯೆಗೈದಿತ್ತು. ಈ ಪ್ರಕರಣದಲ್ಲಿ ಹಲವು ಸೈನಿಕರು ಅಪರಾಧಿಗಳೆಂದು ಸಾಬೀತಾದರೂ, ಶಿಕ್ಷೆಗೊಳಗಾಗಲಿಲ್ಲ. ಅರಬ್ ಪ್ರಜೆಗಳ ಜೀವಕ್ಕೆ ಇಸ್ರೇಲಿ ಆಡಳಿತದಲ್ಲಿ ಯಾವುದೇ ಮೌಲ್ಯವಿರಲಿಲ್ಲ. ಈ ಸಂಸ್ಕೃತಿ ಇಂದಿಗೂ ಪ್ರಚಲಿತವಾಗಿದೆ. 60ನೆಯ ಸ್ವತಂತ್ರ ದಿನಾಚರಣೆಯ ಸಂದರ್ಭದಲ್ಲೂ ಸಹ ಆಕ್ರಮಿತ ಪ್ರದೇಶಗಳ ಸುತ್ತ ಬೇಲಿ ನಿರ್ಮಿಸಿ ಪಾಲೆಸ್ಟೈನಿಯರನ್ನು ನಿರ್ಬಂಧಿಸಲಾಗಿತ್ತು.

ಆದರೆ ಪಾಲೆಸ್ಟೈನಿಯರ ಅವಿರತ ಪರಿಶ್ರಮ ಮತ್ತು ಹೋರಾಟಗಳ ಪರಿಣಾಮವಾಗಿ ಪಾಲೆಸ್ಟೈನ್ ಹೋರಾಟ ಒಂದು ಪ್ರಮುಖ ಹಂತಕ್ಕೆ ತಲುಪಿದೆ. ಯಾಸೆರ್ ಅರಾಫತ್, ಜಾರ್ಜ್ ಹಬಾಷ್ ಮುಂತಾದ ನಾಯಕರ ವೀರೋಚಿತ ಹೋರಾಟಗಳಿಗೆ ಮಣಿದ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಪಾಲೆಸ್ಟೈನಿಯರಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಸ್ವಲ್ಪಮಟ್ಟಿಗಾದರೂ ಶ್ರಮವಹಿಸುತ್ತಿದ್ದಾರೆ. ಇಸ್ರೇಲಿನ ಜನತೆ ತಮ್ಮ ಯಹೂದಿ ರಾಷ್ಟ್ರದ ಉಳಿವಿನ ಬಗ್ಗೆ ಮುಂಚಿನಷ್ಟು ಭರವಸೆ ಹೊಂದಿಲ್ಲದಿರುವುದು ಇತ್ತೀಚಿನ ದಿನಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಇಸ್ರೇಲಿನ ರಾಜಕೀಯ ವಿಶ್ಲೇಷಕ ನಹೋಂ ಬ್ರೂನಿಯವರ ಅಭಿಪ್ರಾಯದಲ್ಲಿ ಇಸ್ರೇಲಿನ ಮಿಲಿಟರಿ ಸಾಮರ್ಥ್ಯ ಮತ್ತು ಆರ್ಥಿಕ ಸಾಮರ್ಥ್ಯಗಳು ಉತ್ಪ್ರೇಕ್ಷಿತವಾದದ್ದು. ಇಸ್ರೇಲಿ ಜನತೆಯೂ ಸಹ ದೇಶದಲ್ಲಿನ ಭ್ರಷ್ಟಾಚಾರ, ಅಸಮಾನತೆ, ದಾರಿದ್ರ್ಯತೆಗಳಿಂದ ಭ್ರಮನಿರಸನರಾಗಿರುವುದು ಅಲ್ಲಲ್ಲಿ ವ್ಯಕ್ತವಾಗುತ್ತಿದೆ. ಇನ್ನೊಂದೆಡೆ ತಮ್ಮ ಮೂಲಸ್ಥಾನಕ್ಕಾಗಿ ವಿಮೋಚನಾ ಹೋರಾಟದಲ್ಲಿ ತೊಡಗಿರುವ ಪಾಲೆಸ್ಟೈನಿಯರ ಸ್ಥೈರ್ಯ ದಿನೇ ದಿನೇ ಹೆಚ್ಚಾಗುತ್ತಿದೆ. ಹಾಮಾಸ್ ಪಡೆಗಳು ಈಗಾಗಲೇ ಕೆಲವು ಪ್ರಾಂತ್ಯಗಳಲ್ಲಿ ಆಳ್ವಿಕೆ ನಡೆಸುತ್ತಿವೆ. ಇಸ್ರೇಲಿನಿಂದ ಹೊರಗುಳಿದಿರುವ ಯಹೂದಿಗಳು ತಮ್ಮ ಸ್ವದೇಶಕ್ಕೆ ಮರಳಲು ಅನುಮಾನಿಸುತ್ತಿರುವುದೂ ಕಂಡುಬರುತ್ತಿದೆ. ಸೋವಿಯತ್ ಪತನದ ನಂತರ ಇಸ್ರೇಲಿಗೆ ಬಂದ ರಷ್ಯನ್ನರು, ಶೇ. 20ರಷ್ಟು, ಈಗ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ವಲಸೆ ಹೋಗಲಾರಂಭಿಸಿದ್ದಾರೆ.

ಯಾಸೆರ್ ಅರಾಫತ್

ತೈಲ ಸರಬರಾಜಿನಲ್ಲಿ ಉಂಟಾಗಿರುವ ವ್ಯತ್ಯಯದಿಂದ ಗಾಝಾ ಪಟ್ಟಿಯಲ್ಲಿ ದಿನಕ್ಕೆ 16 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಇರುವುದಿಲ್ಲ. ಇಡೀ ಪ್ರಾಂತ್ಯದಲ್ಲಿ ಕೇವಲ ಒಂದೇ ಒಂದು ವಿದ್ಯುತ್ ಉತ್ಪಾದನಾ ಘಟಕವಿದ್ದು, ವಿದ್ಯುತ್ ತೊಂದರೆಯಿಂದ ಆಸ್ಪತ್ರೆಗಳಲ್ಲಿ ತುರ್ತು ಸೇವಾ ಘಟಕಗಳು ನಿಷ್ಕ್ರಿಯವಾಗಿವೆ. ಗಾಝಾದ ಆಸ್ಪತ್ರೆಗಳಲ್ಲಿ ರೋಗಿಗಳ ಶುಶ್ರೂಷೆಗೆ ಅಗತ್ಯವಾದ ಪರಿಕರಗಳೇ ಇಲ್ಲದಿರುವುದು, ಔಷದಿಗಳು ಅಲಭ್ಯವಾಗಿರುವುದು, ಅನೇಕ ರೋಗಿಗಳನ್ನು ಸಾವಿನ ದವಡೆಗೆ ನೂಕುತ್ತಿದೆ. ಇಲ್ಲಿನ ಆಸ್ಪತ್ರೆಗಳಲ್ಲಿ ಕೃತಕ ಶಾಖೋಪಕರಣಗಳು (Incubators) ಮತ್ತು ಡಯಾಲಿಸಿಸ್ ಉಪಕರಣಗಳು ನಿಷ್ಕ್ರಿಯವಾಗಿವೆ. ಪರಿಣಾಮವಾಗಿ ರೋಗಿಗಳ ಸಾವಿನ ಪ್ರಕರಣಗಳು ಹೆಚ್ಚಾಗುವ ಸಂಭವಗಳಿವೆ ಎಂದು ಹೇಳಲಾಗುತ್ತಿದೆ.

ಮತ್ತೊಂದೆಡೆ ಪಾಲೆಸ್ಟೈನ್ ವಿಮೋಚನೆಗಾಗಿ ಹೋರಾಡುತ್ತಿರುವ ಸಂಘಟನೆಗಳು "ಪಾಲೆಸ್ಟೈನ್ ಏಕ ರಾಷ್ಟ್ರ ವೇದಿಕೆ" ಯನ್ನು ಪ್ರಾರಂಭಿಸಿದ್ದು, ಒಂದೇ ರಾಷ್ಟ್ರದ ಸ್ಥಾಪನೆಗೆ ಪಣತೊಟ್ಟು ನಿಂತಿವೆ. ಮೆಡಿಟರೇನಿಯನ್ ಪ್ರದೇಶದಿಂದ ಜೋರ್ಡಾನ್ ನದಿಯವರೆಗೆ ವ್ಯಾಪಿಸಿರುವ ವಿಶಾಲ ಪ್ರದೇಶದಲ್ಲಿ ಪಾಲೆಸ್ಟೈನ್ ರಾಷ್ಟ್ರ ನಿರ್ಮಾಣ ಮಾಡಿ, ಅಲ್ಲಿ ಯಹೂದಿಗಳು, ಅರಬ್ ಸಮುದಾಯಗಳು ಸೌಹಾರ್ದದಿಂದ ಬಾಳುವ ವಾತಾವರಣ ನಿರ್ಮಾಣ ಮಾಡಲು ಈ ವೇದಿಕೆ ನಿರ್ಧರಿಸಿದ್ದು ಈ ನಿಟ್ಟಿನಲ್ಲಿ ಪ್ರಣಾಳಿಕೆಯನ್ನೂ ಹೊರಡಿಸಿದೆ. ಒಂದು ವೇಳೆ ಇಸ್ರೇಲ್ 1967ರಲ್ಲಿ ವಿಧಿಸಿದ ಗಡಿ ರೇಖೆಗಳನ್ನು ನಿರಾಕರಿಸದಿದ್ದಲ್ಲಿ, ಇಡೀ ಪಾಲೆಸ್ಟೈನ್ ರಾಷ್ಟ್ರದ ನಿರ್ಮಾಣಕ್ಕಾಗಿ ಹೋರಾಡಲು ಸಿದ್ಧ ಎಂದೂ ಈ ವೇದಿಕೆ ಸ್ಪಷ್ಟಪಡಿಸಿದೆ. ತಮ್ಮ ತಾಯ್ನಾಡಿಗೆ ಹಿಂದಿರುಗುವ ಹಕ್ಕನ್ನು ಪ್ರತಿಪಾದಿಸುವುದರೊಂದಿಗೇ, ತಾಯ್ನಾಡಿನಿಂದ ಉಚ್ಚಾಟಿತರಾಗಿ ಆರು ದಶಕಗಳ ಕಾಲ ಅನುಭವಿಸಿದ ಚಿತ್ರಹಿಂಸೆಗೆ ಪರಿಹಾರವನ್ನೂ ಪಾಶ್ಚಿಮಾತ್ಯ ರಾಷ್ಟ್ರಗಳು ಮತ್ತು ಇಸ್ರೇಲ್ ಸರ್ಕಾರ ನೀಡಬೇಕೆಂದು ಈ ಪ್ರಣಾಳಿಕೆಯಲ್ಲಿ ಹೇಳಲಾಗಿದೆ.

ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳ, ಪ್ರಮುಖವಾಗಿ ಅಮೆರಿಕದ ಬೆಂಬಲ ಪಡೆದಿರುವ ಇಸ್ರೇಲ್ ತನ್ನ ಆಕ್ರಮಣಕಾರಿ ಧೋರಣೆಯನ್ನು ಬದಲಾಯಿಸಲು ಸಿದ್ಧವಾಗಿಲ್ಲ. ವಿಶ್ವ ಸಂಸ್ಥೆಯ ಸಭೆಗಳಲ್ಲಿ ಇದುವರೆಗೂ 39 ಬಾರಿ ಇಸ್ರೇಲಿನ ಪರವಾಗಿ ತನ್ನ ವಿಟೋ ಅಧಿಕಾರವನ್ನು ಚಲಾಯಿಸಿರುವ ಅಮೆರಿಕಾಗೆ ಅರಬ್ ರಾಷ್ಟ್ರಗಳ ವಿರುದ್ಧ ಸಮರ ಸಾರಲು, ತೈಲ ಸಂಪತ್ತನ್ನು ದೋಚಲು, ಇಸ್ರೇಲ್ ಕೇಂದ್ರ ಆವಾಸ ಸ್ಥಾನವಾಗಿದೆ. ಪಾಲೆಸ್ಟೈನ್ ಜನತೆಯ ವೀರೋಚಿತ ಹೋರಾಟವನ್ನು ಅಂತಾರಾಷ್ಟ್ರೀಯ ಭಯೋತ್ಪಾದನೆಯೆಂದೇ ಪರಿಗಣಿಸುವ ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗೆ, ತಮ್ಮ ನೆಚ್ಚಿನ ಮಿತ್ರ ರಾಷ್ಟ್ರವಾದ ಇಸ್ರೇಲಿನಲ್ಲಿ ಯಹೂದಿಯರಲ್ಲದ ಎಲ್ಲರನ್ನೂ ನಿರ್ನಾಮ ಮಾಡುವ ಕೈಂಕರ್ಯ ನಡೆಯುತ್ತಿರುವುದು ಗಂಭೀರವಾದ ಸಮಸ್ಯೆ ಎನಿಸುವುದೇ ಇಲ್ಲ. ಪಾಲೆಸ್ಟೈನ್ ಹೋರಾಟಕ್ಕೆ ಬೆಂಬಲ ನೀಡುವವರೆಲ್ಲರನ್ನೂ ಭಯೋತ್ಪಾದಕರೆಂದೇ ಚಿತ್ರಿಸುವ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಮತ್ತು ಪ್ರೇರೇಪಿತ ಮಾಧ್ಯಮಗಳು, ಇಸ್ರೇಲ್ ಸರ್ಕಾರವು ಪ್ರಜಾತಾಂತ್ರಿಕ ಹೋರಾಟಗಾರರ ವಿರುದ್ಧ ಅವ್ಯಾಹತವಾಗಿ ನಡೆಸುತ್ತಿರುವ ಹತ್ಯಾಕಾಂಡವನ್ನು ಮರೆಮಾಚುತ್ತಿರುವುದು, ಸಾಮ್ರಾಜ್ಯಶಾಹಿಗಳ ಠಕ್ಕುತನಕ್ಕೆ ಸಾಕ್ಷೀಭೂತವಾಗಿದೆ.

ಜನಪರ ಹೋರಾಟಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕುವುದು ಜಾಗತೀಕರಣ ಪ್ರಕ್ರಿಯೆಯ ಒಂದು ಕೊಡುಗೆಯೂ ಆಗಿದ್ದು, ವಿಶ್ವದಾದ್ಯಂತ ಪ್ರಜಾತಾಂತ್ರಿಕ ಚಳುವಳಿಗಳು ಪ್ರಬಲವಾಗುತ್ತಿರುವ ಸಂದರ್ಭದಲ್ಲೇ ಮಾನವ ಹಕ್ಕುಗಳ ಉಲ್ಲಂಘನೆ ಹೆಚ್ಚಾಗುತ್ತಿದ್ದು ಪ್ರಭುತ್ವಗಳ ದಮನಕಾರಿ ಪ್ರವೃತ್ತಿ ಬಲಗೊಳ್ಳುತ್ತಿದೆ. ಜಾಗತಿಕ ಮಟ್ಟದಲ್ಲಿ ಭಯೋತ್ಪಾದನೆಯ ವಿರುದ್ಧ ಸಮರ ಸಾರುವ ನೆಪದಲ್ಲಿ ವಿವಿಧ ದೇಶಗಳ ಮೇಲೆ ಆಕ್ರಮಣ ಮಾಡಿ, ಮಿಲಿಯಾಂತರ ಜನರ ಹತ್ಯೆಗೈಯ್ಯುವ ಕೈಂಕರ್ಯದಲ್ಲಿ ಸಾಮ್ರಾಜ್ಯಶಾಹಿ ರಾಷ್ಟ್ರಗಳು

ತೊಡಗಿದ್ದರೆ, ಭಾರತದಲ್ಲಿ ಭಯೋತ್ಪಾದನೆಯ ನಿಯಂತ್ರಣದ ನೆಪದಲ್ಲಿ ಒಂದು ಇಡೀ ಧಾರ್ಮಿಕ ಸಮುದಾಯವನ್ನು ಹಿಂಸೆಗೀಡುಮಾಡಲಾಗುತ್ತಿದೆ. ಭಾರತದ ರಾಜಕಾರಣದಲ್ಲೂ ಇಸ್ರೇಲ್ ರಾಷ್ಟ್ರದ ಪರಂಪರೆಯ ದಟ್ಟ ಛಾಯೆ ಹರಡಿಕೊಂಡಿರುವುದು ವ್ಯಕ್ತವಾಗುತ್ತಿದ್ದು, ಭಾಜಪದಂತಹ ಪಕ್ಷಗಳು ಇಸ್ರೇಲನ್ನು ಮಿತ್ರ ರಾಷ್ಟ್ರವೆಂದೇ ಪರಿಗಣಿಸುತ್ತವೆ. ಭಯೋತ್ಪಾದನೆಯನ್ನು ಹತ್ತಿಕ್ಕುವಲ್ಲಿ ಇಸ್ರೇಲ್ ನಮಗೆ ಮಾದರಿಯಾಗಬೇಕು ಎಂದು ಹಲವು ನಾಯಕರು ಪ್ರತಿಪಾದಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಈ ಹಿನ್ನೆಲೆಯಲ್ಲೇ ಇತ್ತೀಚೆಗೆ ಸಂಭವಿಸಿದ ಗಾಜಾ ಪಟ್ಟಿಯ ಮೇಲಿನ ಇಸ್ರೇಲಿ ಆಕ್ರಮಣವನ್ನು ವಿಶ್ಲೇಷಿಸಬಹುದು.

ಮಾರಣಾಂತಿಕ ಆಕ್ರಮಣ

ಪಾಲೆಸ್ತೈನಿಯರ ಗಾಝಾ ಪ್ರದೇಶದ ಅಮಾಯಕ ಜನಗಳ ಮೇಲೆ ಇಸ್ರೇಲ್ ನಡೆಸಿದ ದಾಳಿಗೆ ಅಂತಾರಾಷ್ಟ್ರೀಯ ಸಮುದಾಯ ಮೂಕ ಪ್ರೇಕ್ಷಕನಾಗಿತ್ತು. ಬಹುಶಃ ಕೆಲವು ರಾಷ್ಟ್ರಗಳ ಅಭಿಪ್ರಾಯದಲ್ಲಿ ಗಾಝಾ ಪ್ರದೇಶದಲ್ಲಿರುವ ಜನತೆಯ ಜೀವಗಳಿಗೆ ಬೆಲೆಯೇ ಇಲ್ಲವೆನಿಸುತ್ತದೆ. ಕಳೆದ ಒಂದೂವರೆ ವರ್ಷದಿಂದ ಇಸ್ರೇಲಿನ ಸೈನ್ಯದ ಮುತ್ತಿಗೆಗೆ ಸಿಲುಕಿ ಬಳಲುತ್ತಿರುವ ಹದಿನೈದು ಲಕ್ಷ ಗಾಝಾ ಜನತೆಯ ಬದುಕು ಮೂರಾಬಟ್ಟೆಯಾಗುತ್ತಿದ್ದರೂ, ಅಂತಾರಾಷ್ಟ್ರೀಯ ಸಮುದಾಯ ನಿರುಮ್ಮಳವಾಗಿದೆ. ಜಾಗತಿಕ ಆರ್ಥಿಕ ಹಿಂಜರಿತ, ಮುಂಬೈ ಮೇಲಿನ ಭಯೋತ್ಪಾದಕ ದಾಳಿ, ಇರಾಕ್ ಮತ್ತು ಆಫ್ಘಾನಿಸ್ತಾನದಲ್ಲಿನ ವಿಷಮ ಪರಿಸ್ಥಿತಿ ಈ ಗಂಭೀರ ಸಮಸ್ಯೆಗಳ ನಡುವೆ ಇಸ್ರೇಲಿನ ಬಹಿಷ್ಕಾರಕ್ಕೆ ಸಿಲುಕಿ ಒಂದೂವರೆ ವರ್ಷದಿಂದ ಅನ್ನಾಹಾರಗಳಿಲ್ಲದೆ, ಔಷದಿಗಳಿಲ್ಲದೆ ಕುಡಿಯುವ ನೀರಿಲ್ಲದೆ ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿರುವ ಗಾಝಾ ಜನತೆಯ ಬವಣೆ ಅಗೋಚರವಾದಂತಿದೆ. ಈ ಬವಣೆಯನ್ನು ಸ್ಪಷ್ಟವಾಗಿ ಅರಿತಿದ್ದರೂ ದಿವ್ಯಮೌನ ವಹಿಸಿರುವ ಅಮೆರಿಕಾ ಮತ್ತು ಇಂಗ್ಲೆಂಡ್, ಗಾಝಾ ಜನತೆಯ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಸಮರ್ಥಿಸುತ್ತಿರುವುದು ಸಾಮ್ರಾಜ್ಯಶಾಹಿಯ ಅಮಾನವೀಯತೆಗೆ ಸ್ಪಷ್ಟ ನಿದರ್ಶನವಾಗಿದೆ.

ವಿಶ್ವಸಂಸ್ಥೆಯು ಗಾಝಾ ಪಟ್ಟಿಯ ಜನತೆಗೆ ಒದಗಿಸಿದ ಮಾನವೀಯ ನೆರವಿನ ದಿನನಿತ್ಯದ ಆಹಾರ ಪದಾರ್ಥಗಳ ಸರಬರಾಜನ್ನು ಇಸ್ರೇಲ್ ನವಂಬರ್‌ನಿಂದಲೇ ಸ್ಥಗಿತಗೊಳಿಸಿತು. ಆರು ದಶಕಗಳ ಇಸ್ರೇಲ್–ಪಾಲೆಸ್ತೈನ್ ಸಮರದಲ್ಲಿ ಯಾವುದೇ ಪಾತ್ರವಹಿಸದ, ಗಾಝಾ ಪಟ್ಟಿಯ ಹಸುಳೆಗಳು ಈ ರಾಜಕಾರಣದ ಬಲಿಪಶುಗಳಾಗಿವೆ. ಗಾಝಾದ ಒಟ್ಟು ಜನಸಂಖ್ಯೆಯ ಶೇ. 55ರಷ್ಟಿರುವ ಈ ಹಸುಳೆಗಳಲ್ಲಿ ಶೇ. 46ರಷ್ಟು ರಕ್ತಹೀನತೆಯಿಂದ ಬಳಲುತ್ತಿವೆ. ಶೇ. 18ರಷ್ಟು ಮಕ್ಕಳು ಕುಂಠಿತ ಬೆಳವಣಿಗೆಯಿಂದ ಬಳಲುತ್ತಿವೆ. ಇಸ್ರೇಲಿನ ಜೆಟ್ ವಿಮಾನಗಳ ಅಬ್ಬರದಿಂದ ಅನೇಕ ಮಕ್ಕಳ ಶ್ರವಣ ಶಕ್ತಿ ಮಂದವಾಗಿದೆ. ಗಾಝಾ ಪಟ್ಟಿಗೆ ಆಹಾರ ಪದಾರ್ಥಗಳನ್ನು ಮತ್ತು ಸಹಾಯಕ ಪಡೆಗಳನ್ನು ಕಳುಹಿಸುವಂತೆ ವಿಶ್ವಸಂಸ್ಥೆಯ ಮುಖ್ಯಸ್ಥ ಬನ್ ಕಿ ಮೋನ್ ಅವರು ಆಗ್ರಹಿಸಿದರೂ, ಇಸ್ರೇಲ್ ಸರ್ಕಾರ ತಿರಸ್ಕರಿಸಿದೆ. ಗಾಝಾದ ಜನತೆಯ ಬವಣೆಯನ್ನು ವರದಿ ಮಾಡದಂತೆ ಪತ್ರಕರ್ತರಿಗೂ ಇಸ್ರೇಲ್ ಸರ್ಕಾರ ನಿರ್ಬಂಧ ವಿಧಿಸಿದ್ದು, ಪತ್ರಕರ್ತರ ವರದಿಯಿಂದ ಜನತೆಯ ಬವಣೆ ಇನ್ನೂ ಹೆಚ್ಚಾಗುತ್ತದೆ ಎಂದು ಇಸ್ರೇಲಿನ

> **ಪಾಲೆಸ್ತೈನಿಯರ ಗಾಝಾ ಪ್ರದೇಶದ ಅಮಾಯಕ ಜನಗಳ ಮೇಲೆ ಇಸ್ರೇಲ್ ನಡೆಸಿದ ದಾಳಿಗೆ ಅಂತಾರಾಷ್ಟ್ರೀಯ ಸಮುದಾಯ ಮೂಕ ಪ್ರೇಕ್ಷಕನಾಗಿತ್ತು. ಬಹುಶಃ ಕೆಲವು ರಾಷ್ಟ್ರಗಳ ಅಭಿಪ್ರಾಯದಲ್ಲಿ ಗಾಝಾ ಪ್ರದೇಶದಲ್ಲಿರುವ ಜನತೆಯ ಜೀವಗಳಿಗೆ ಬೆಲೆಯೇ ಇಲ್ಲವೆನಿಸುತ್ತದೆ. ಕಳೆದ ಒಂದೂವರೆ ವರ್ಷದಿಂದ ಇಸ್ರೇಲಿನ ಸೈನ್ಯದ ಮುತ್ತಿಗೆಗೆ ಸಿಲುಕಿ ಬಳಲುತ್ತಿರುವ ಹದಿನೈದು ಲಕ್ಷ ಗಾಝಾ ಜನತೆಯ ಬದುಕು ಮೂರಾಬಟ್ಟೆಯಾಗುತ್ತಿದ್ದರೂ, ಆಂತಾರಾಷ್ಟ್ರೀಯ ಸಮುದಾಯ ನಿರುಮ್ಮಳವಾಗಿದೆ. ಮುಂಬೈ ಮೇಲಿನ ಭಯೋತ್ಪಾದಕ ದಾಳಿ, ಇರಾಕ್ ಮತ್ತು ಆಫ್ಘಾನಿಸ್ತಾನದಲ್ಲಿನ ವಿಷಮ ಪರಿಸ್ಥಿತಿ ಈ ಗಂಭೀರ ಸಮಸ್ಯೆಗಳ ನಡುವೆ ಇಸ್ರೇಲಿನ ಬಹಿಷ್ಕಾರಕ್ಕೆ ಸಿಲುಕಿ ಒಂದೂವರೆ ವರ್ಷದಿಂದ ಅನ್ನಾಹಾರಗಳಿಲ್ಲದೆ, ಕುಡಿಯುವ ನೀರಿಲ್ಲದೆ ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿರುವ ಗಾಝಾ ಜನತೆಯ ಬವಣೆ ಅಗೋಚರವಾದಂತಿದೆ.**

ರಕ್ಷಣಾಮಂತ್ರಿಗಳು ಹೇಳುತ್ತಾರೆ.

ಡಿಸೆಂಬರ್‌ನಲ್ಲಿ ಇಸ್ರೇಲ್ ಸರ್ಕಾರದಿಂದ ಹೊರದೂಡಲ್ಪಟ್ಟ ಮಾನವ ಹಕ್ಕುಗಳ ಕಾರ್ಯಕರ್ತ ರಿಚರ್ಡ್ ಫಾಕ್ ಇಸ್ರೇಲ್‌ನ ಆಕ್ರಮಣಕಾರಿ ನೀತಿಯನ್ನು ಎರಡನೇ ಮಹಾಸಮರದ ನಾಝಿ ಆಕ್ರಮಣಗಳಿಗೆ ಹೋಲಿಸುತ್ತಾರೆ. ಗಾಝಾದಲ್ಲಿ ನೆಲೆಸಿರುವ ಪಾಲೆಸ್ತೈನ್ ಸೈನಿಕರು ಇಸ್ರೇಲಿನ ಮೇಲೆ ವೈಮಾನಿಕ ದಾಳಿ ನಡೆಸಿರುವುದನ್ನೇ ನೆಪ ಮಾಡಿಕೊಂಡು, ಗಾಝಾದ ಮೇಲೆ ಆಕ್ರಮಣ ಮಾಡುತ್ತಿರುವ ಇಸ್ರೇಲ್‌ನ ಕ್ರಮ ಖಂಡನೀಯವೆಂದು ಫಾಕ್ ಪ್ರತಿಪಾದಿಸುತ್ತಾರೆ. ಗಾಝಾದ ಜನತೆ ಪ್ರಜಾತಾಂತ್ರಿಕವಾಗಿ ಚುನಾಯಿಸಿದ್ದ ಹಾಮಾಸ್ ಸಂಘಟನೆಯ ಸರ್ಕಾರವನ್ನು ಅಧಿಕಾರ ವಹಿಸಿಕೊಳ್ಳಲು ಬಿಡದೆ, ತನ್ನ ಸೇನಾ ಪ್ರಾಬಲ್ಯದಿಂದ ಗಾಝಾಪಟ್ಟಿಯನ್ನು ಸುತ್ತುವರೆದಿರುವ ಇಸ್ರೇಲ್‌ನ ನೀತಿ ಮನುಕುಲ ವಿರೋಧಿ ಕ್ರಮವಾಗಿದೆ.

ಗಾಝಾ ಪಟ್ಟಿ ಎಂಬ ಸೆರೆ ಶಿಬಿರ

ಪ್ರಸ್ತುತ ಪರಿಸ್ಥಿತಿಯಲ್ಲಿ ಗಾಝಾ ಪಟ್ಟಿಯನ್ನು ವಿಶ್ವದ ಅತಿದೊಡ್ಡ ಸೆರೆಯಾಳುಗಳ ಶಿಬಿರ (Concentration Camp) ಎಂದು ಬಣ್ಣಿಸಬಹುದು. ನವಂಬರ್ ಮೊದಲ ವಾರದಿಂದಲೇ ಗಾಝಾ ಪ್ರದೇಶಕ್ಕೆ ನೆಲ, ಜಲ ಮತ್ತು ವಾಯುಮಾರ್ಗಗಳನ್ನು ಬಂದ್ ಮಾಡಿದ ಇಸ್ರೇಲ್ ಸರ್ಕಾರಕ್ಕೆ ಈಜಿಪ್ಟ್ ಮಧ್ಯಸ್ಥಿಕೆಯಲ್ಲಿ ಏರ್ಪಟ್ಟಿದ್ದ ಐದು ತಿಂಗಳಿನ ಕದನವಿರಾಮ ಒಪ್ಪಂದ ಅಡ್ಡಗೋಡೆಯಾಗಿತ್ತು. ಗಾಝಾದಲ್ಲಿನ ಹಮಾಸ್ ಸಂಘಟನೆ ಈ ಒಪ್ಪಂದವನ್ನು ಪಾಲಿಸಿ ಯಾವುದೇ ಆಕ್ರಮಣಗಳನ್ನು ನಡೆಸಿರಲಿಲ್ಲ. ಆದರೆ ನವಂಬರ್ 4, 2008ರಂದು ಇಸ್ರೇಲ್ ಈ ಒಪ್ಪಂದವನ್ನು ಉಲ್ಲಂಘಿಸಿ ತನ್ನ ಸೇನೆಯನ್ನು ನುಗ್ಗಿಸಿದ್ದು, ಪಾಲೆಸ್ತೈನಿಯರ ಆಕ್ರಮಣಕ್ಕೆ ಎಡೆಮಾಡಿಕೊಟ್ಟಿತು. ಇಸ್ರೇಲಿನ ಆಕ್ರಮಣಕ್ಕೆ ಹಸುಳೆಗಳನ್ನೂ ಸೇರಿದಂತೆ ನೂರಾರು ಪಾಲೆಸ್ತೈನಿಯರು ತುತ್ತಾದರು. ಈ ಸಂದರ್ಭದಲ್ಲಿ ಹಾಮಾಸ್ ಸಂಘಟನೆ ಪ್ರತಿದಾಳಿ ನಡೆಸುವುದು ಅನಿವಾರ್ಯವಾಗಿತ್ತು. ಹಾಮಾಸ್‌ನ ವೈಮಾನಿಕ ದಾಳಿಯಲ್ಲಿ ಯಾವುದೇ ಸಾವು ಸಂಭವಿಸಿರಲಿಲ್ಲ. ಆದರೂ ಇಸ್ರೇಲಿನ ದಾಳಿ ನಿಲ್ಲುವವರೆಗೂ ತಾವು ಪ್ರತಿದಾಳಿ ನಡೆಸುವುದಾಗಿ ಹಾಮಾಸ್ ಘೋಷಿಸಿದ್ದು ಯುದ್ಧದ ವಾತಾವರಣಕ್ಕೆ ಎಡೆಮಾಡಿಕೊಟ್ಟಿತು.

ವಿಶ್ವಸಂಸ್ಥೆಯ ಮೂಲಗಳ ಪ್ರಕಾರ ಗಾಝಾ ಜನತೆಗೆ ಆಹಾರ ಪದಾರ್ಥಗಳ ಸರಬರಾಜನ್ನು ಸ್ಥಗಿತಗೊಳಿಸಿರುವುದರಿಂದ ಗಾಝಾದಲ್ಲಿ ತೀವ್ರತರನಾದ ಕ್ಷೋಭೆ ಉಂಟುಮಾಡಿದೆ. ಕಳೆದ ಎಂಟು ವರ್ಷಗಳಲ್ಲಿ ಹಸಿವಿನಿಂದ ಈ ಪ್ರಮಾಣದ ಸಾವುಗಳು ಸಂಭವಿಸಿರಲಿಲ್ಲ ಎಂದು ಹೇಳಲಾಗಿದೆ. ಗಾಝಾದ ಜನತೆ ಕೇವಲ ಆಕ್ರಮಣಕ್ಕೊಳಗಾಗದೆ, ಇಸ್ರೇಲಿನ ಮುತ್ತಿಗೆಯಿಂದ ಬಳಲುತ್ತಿರುವುದು ಸ್ಪಷ್ಟವಾಗಿದೆ. ಈ ವಿಷಮ ಪರಿಸ್ಥಿತಿಯಲ್ಲೂ ಇಸ್ರೇಲಿನ ವಿದೇಶಾಂಗ ಮಂತ್ರಿ ಮತ್ತು ರಕ್ಷಣಾ ಮಂತ್ರಿಗಳು, ಹಾಮಾಸ್ ಸರ್ಕಾರವನ್ನು ದಮನಮಾಡಲು ಮಿಲಿಟರಿ, ಆರ್ಥಿಕ ದಿಗ್ಬಂಧನ ಮತ್ತು ರಾಜಕೀಯ ತಂತ್ರಗಾರಿಕೆಯನ್ನು ಪ್ರಯೋಗಿಸುವುದಾಗಿ ಘೋಷಿಸಿರುವುದು ಇಸ್ರೇಲ್‌ನ ದಮನಕಾರಿ ನೀತಿಗೆ ನಿದರ್ಶನ.

ತೈಲ ಸರಬರಾಜಿನಲ್ಲಿ ಉಂಟಾಗಿರುವ ವ್ಯತ್ಯಯದಿಂದ ಗಾಝಾ ಪಟ್ಟಿಯಲ್ಲಿ ದಿನಕ್ಕೆ 16 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಇರುವುದಿಲ್ಲ. ಇಡೀ ಪ್ರಾಂತ್ಯದಲ್ಲಿ ಕೇವಲ ಒಂದೇ ಒಂದು ವಿದ್ಯುತ್ ಉತ್ಪಾದನಾ ಘಟಕವಿದ್ದು, ವಿದ್ಯುತ್ ತೊಂದರೆಯಿಂದ ಆಸ್ಪತ್ರೆಗಳಲ್ಲಿ ತುರ್ತು ಸೇವಾ ಘಟಕಗಳು ನಿಷ್ಕ್ರಿಯವಾಗಿವೆ. ಗಾಝಾದ ಆಸ್ಪತ್ರೆಗಳಲ್ಲಿ ರೋಗಿಗಳ ಶುಶ್ರೂಷೆಗೆ ಅಗತ್ಯವಾದ ಪರಿಕರಗಳೇ ಇಲ್ಲದಿರುವುದು, ಔಷದಿಗಳು ಅಲಭ್ಯವಾಗಿರುವುದು, ಅನೇಕ ರೋಗಿಗಳನ್ನು ಸಾವಿನ ದವಡೆಗೆ ನೂಕುತ್ತಿದೆ. ಇಲ್ಲಿನ ಆಸ್ಪತ್ರೆಗಳಲ್ಲಿ ಕೃತಕ ಶಾಖೋಪಕರಣಗಳು (Incubators) ಮತ್ತು ಡಯಾಲಿಸಿಸ್ ಉಪಕರಣಗಳು ನಿಷ್ಕ್ರಿಯವಾಗಿವೆ. ಪರಿಣಾಮವಾಗಿ ರೋಗಿಗಳ ಸಾವಿನ ಪ್ರಕರಣಗಳು ಹೆಚ್ಚಾಗುವ ಸಂಭವಗಳಿವೆ ಎಂದು ಹೇಳಲಾಗುತ್ತಿದೆ. ವಿದ್ಯುತ್ ಸರಬರಾಜು ಇಲ್ಲದಿರುವುದರಿಂದ ಜನಕ್ಕೆ ಕುಡಿಯುವ ನೀರು ದೊರೆಯುತ್ತಿಲ್ಲ. ಚರಂಡಿಗಳು ದುರ್ನಾತ ಹೊರಸೂಸುತ್ತಿದ್ದು, ಶುದ್ಧೀಕರಿಸಲಾಗುತ್ತಿಲ್ಲ. ಇದರಿಂದ ಸಾಂಕ್ರಾಮಿಕ ರೋಗಗಳು ಉಲ್ಬಣಿಸುತ್ತಿವೆ. ಈ ಪರಿಸ್ಥಿತಿಯಲ್ಲಿ ಕೂಳಿಲ್ಲದೆ ಸಾಯುತ್ತಿರುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ.

ಏತನ್ಮಧ್ಯೆ ಪಾಲೆಸ್ತೈನಿಗಾಗಿ ಹೋರಾಡುತ್ತಿರುವ ಸಂಘಟನೆಗಳ ನಡುವೆ ಏರ್ಪಟ್ಟಿರುವ ಭಿನ್ನಾಭಿಪ್ರಾಯಗಳೂ ಇಸ್ರೇಲಿಗೆ ನೆರವಾಗಿವೆ. ಫತಾಃ ಸಂಘಟನೆಯ ನೇತೃತ್ವದ ಪಾಲೆಸ್ತೈನ್ ಪ್ರಾಧಿಕಾರದ ಅಧ್ಯಕ್ಷ ಮಹಮೂದ್ ಅಬ್ಬಾಸ್ ಹಾಮಾಸ್ ಸಂಘಟನೆಯನ್ನು ಶಿಥಿಲಗೊಳಿಸಲು ಹೊಂಚುಹಾಕುತ್ತಿದೆ. ಇಸ್ರೇಲ್‌ನ ಅಮಾನವೀಯ ಆಕ್ರಮ

(45 ನೇ ಪುಟಕ್ಕೆ)

ಅಲ್ಲಮಪ್ರಭುವಿನ ವಚನಗಳಲ್ಲಿ ಪ್ರಕ್ರಿಯಾಮೀಮಾಂಸೆ

ಡಾ. ಎಸ್. ನಟರಾಜ್ ಬೂದಾಳು

ಅಲ್ಲಮಪ್ರಭುವಿನ ವಚನಗಳಲ್ಲಿ ಪ್ರಕ್ರಿಯಾಮೀಮಾಂಸೆಯ ಪರಿಕಲ್ಪನೆಯನ್ನು ಹೆಕ್ಕಿ ತೆಗೆಯುವ ಪ್ರಯತ್ನದಲ್ಲಿ ಅನೇಕ ತೊಡಕುಗಳು ಗೋಚರಿಸುತ್ತವೆ. ಅಲ್ಲಮಪ್ರಭು ನಾಗಾರ್ಜುನನಂತೆ ತಾರ್ಕಿಕನಲ್ಲ. ತಾತ್ವಿಕ ಪ್ರಸ್ಥಾನವೊಂದನ್ನು ಕಟ್ಟಲು ಮತ್ತು ಅದಕ್ಕೆ ಬೇಕಾದ ತಾತ್ವಿಕತೆಯನ್ನು ಒದಗಿಸಿಕೊಳ್ಳಲು ನಾಗಾರ್ಜುನನಿಗೆ ಆಕರ ಸಿದ್ಧವಿತ್ತು. ಅದಕ್ಕೆ ಕಾರಣವಾದ ಒತ್ತಡಗಳನ್ನು ಗುರುತಿಸಿಕೊಳ್ಳಲು ಸಾಧ್ಯವಿತ್ತು. ಒಟ್ಟಿನಲ್ಲಿ ಅವನ ಚೌಕಟ್ಟು ಸಿದ್ಧವಾಗಿತ್ತು. ಆದರೆ ಅಲ್ಲಮಪ್ರಭುವಿನ ರೀತಿ ಬೇರೆ. ಮೊದಲಿಗೆ ಪ್ರಭು ಒಬ್ಬ ಸಾಧಕ. ಅವನ 'ಶ್ರಾವಕರು' ಸಾಧಕರು ಅಥವಾ ಸಾಧನೆಯ ಹಾದಿಯಲ್ಲಿರುವವರು. ಈಗ ದೊರಕಿರುವ ಅಲ್ಲಮನ ವಚನಗಳು ಈ ಶ್ರಾವಕರ ಸಂಕಥನಕ್ಕೆ ಈಗಾಗಲೇ ಒಳಗಾಗಿವೆಯಾದುದರಿಂದ, ಈಗ ನಡೆಸುವ ಸಂಕಥನ 'ಇನ್ನೊಂದಾಗಿ' ನಿಲ್ಲಲೇಬೇಕಾಗುತ್ತದೆ. ಅಲ್ಲಮನ ವಚನಗಳ ಸಂಪಾದನಾಕಾರರ ಸ್ಥಲಕಟ್ಟಿನ ಜೋಡಣೆಗಳಲ್ಲಿ ಒಂದು ಹಂತದ ಕ್ರಿಯೇಟಿವಿಟಿ ಇದೆಯಾದರೂ, ಅಂತಹ ಜೋಡಣೆಯ ಆಚೆಗಿನ ವಚನಗಳ ರಾಶಿಯೂ ದೊಡ್ಡದಿದೆ. ಮರು ಜೋಡಣೆಯ ಅನೇಕ ಪ್ರಯತ್ನಗಳು ನಡೆದಿವೆ. ಅಲ್ಲಮನನ್ನು ಪಂಥಾತೀತವಾಗಿ ವ್ಯಾಖ್ಯಾನಿಸಬಹುದೆ? ಎಂಬ ಪ್ರಶ್ನೆಯನ್ನು ಎದುರಿಗಿಟ್ಟುಕೊಂಡು ನಡೆಸಬಹುದಾದ ಪ್ರಯತ್ನಗಳು ಆಕರ್ಷಕವೆನ್ನಿಸಿಯಾವು. ಇದೂ ಅಂತಹ ಒಂದು ಪ್ರಯತ್ನವೆಂದು ಭಾವಿಸಬಹುದು.

ಅಲ್ಲಮನ ವಚನಗಳನ್ನಷ್ಟೆ 'ಪರಾಮರ್ಶನ ಪಠ್ಯ' ಎಂದು ಭಾವಿಸಿ ನಡೆಸುವ ಅಧ್ಯಯನಕ್ಕೂ ಅವನ ಬಗೆಗಿನ ಕಾವ್ಯಗಳು, ಸಂಪಾದನೆಗಳು ಇತ್ಯಾದಿಗಳನ್ನು ಸೇರಿಸಿಕೊಂಡು ನಡೆಸಬಹುದಾದ ಅಧ್ಯಯನಗಳಿಗೂ ಪ್ರಮುಖ ವ್ಯತ್ಯಾಸಗಳಿರಲು ಸಾಧ್ಯ. ಅಲ್ಲಮನ ವಚನಗಳನ್ನು ಸ್ಥಲಕಟ್ಟಿಗೆ ಒಳಪಡಿಸುವುದಾಗಲೀ, ಸಂವಾದ ರೂಪದಲ್ಲಿ ಸಂಗ್ರಹಿಸುವುದಾಗಲೀ, ಅವನ ಬದುಕಿನ ಬಗೆಗೆ ರೋಚಕವೆನಿಸುವ ಕಾವ್ಯರಚನೆಯಾಗಲೀ ನಿರ್ದಿಷ್ಟ ಪಾಂಥಿಕ ಸಂಕಥನದಾಚೆಗೆ ಚಾಚಿಕೊಳ್ಳಲಾರವು. ಎಂದಿನಂತೆ ಜಾನಪದ ಅಭಿವ್ಯಕ್ತಿಗಳಲ್ಲಿ (ಉದಾ: ಮಂಟೆಸ್ವಾಮಿ ಕಾವ್ಯ) ಅಂತಹ ಭಿನ್ನ ಸಂಕಥನಗಳು ಅಭಿವ್ಯಕ್ತಗೊಂಡಿವೆ. ಅಲ್ಲಿಯೂ ಸಹ 'ಪ್ರತಿಪಠ್ಯ ನಿರ್ಮಾಣ'ದ ನೆಲೆಗಳು ಪ್ರಭಾವಶಾಲಿಯಾಗಿ ಕೆಲಸ ಮಾಡಿವೆ. ಇಂತಹ ಪ್ರತಿಪಠ್ಯ ನಿರ್ಮಾಣದ ಪ್ರಯತ್ನಗಳು ಕೇಂದ್ರವನ್ನು ಪಲ್ಲಟಗೊಳಿಸುವ ಮಹದಾಸೆಯಿಂದ ಆರಂಭಗೊಂಡರೂ ನಂತರ ದುರ್ಬಲಗೊಳ್ಳಬಹುದು. ಇಲ್ಲವೇ ತಮ್ಮ ಪ್ರಯತ್ನವನ್ನು ಬಿಟ್ಟುಕೊಟ್ಟು ಅಲಾಯಿದವಾಗಿ ನಿಂತುಬಿಡಬಹುದು. ಈ ವಿವರಣೆಯ ಹಿಂದಿನ ಉದ್ದೇಶ ವಿಷ್ಟು :

1. ಅಲ್ಲಮನ ವಚನಗಳಲ್ಲಿ ಅಂತರ್ಗತವಾಗಿರುವ ಪಂಥಾತೀತ ತಾತ್ವಿಕತೆಯು ಅವನ ವಚನಗಳ ಮರುಸಂಕಥನದ ಪ್ರಯತ್ನಗಳಿಗೆ ಪ್ರಚೋದನೆಯನ್ನು ನೀಡುತ್ತದೆ.

2. ಅಲ್ಲಮನ ವಚನಗಳಲ್ಲಿ ಗೋಚರಿಸುವ 'ಮುಕ್ತ-ಅಂತ್ಯ'ವು ವಚನಗಳಿಗೆ ಅನೇಕ ಸಂಕಥನ ಸಾಧ್ಯತೆಗಳನ್ನು ಮುಂದಿಡುತ್ತದೆ.

3. ತೊಡೆಯಲಾಗದ ಲಿಪಿಯ ಬರೆಯಲಾಗದು- ಇದು ಪರಿಕಲ್ಪನೆಗಳ ಬಗೆಗೆ ಅಲ್ಲಮಪ್ರಭು ತಳೆದಿರುವ ನಿಲುವು. ಹೀಗೆ ಬರೆಯುವ -ಅಳಿಸುವ ಪ್ರಕ್ರಿಯೆಗೆ ಸ್ಥಿತ ವಿವರಣೆಗಳಿರಲು ಸಾಧ್ಯವಿಲ್ಲ. ವಿವರಣೆಯ ಪ್ರಯತ್ನಗಳನ್ನು ಮಿತಗೊಳಿಸುವುದು ಯುಕ್ತವಲ್ಲ.

4. ಅಲ್ಲಮನ ಲೋಕ ಗ್ರಹಿಕೆಯ ಬಗೆಗೆ ಚರ್ಚೆ ಮುಂದಿನ ಪುಟಗಳಲ್ಲಿದೆ. ವಿಶೇಷವಾಗಿ ಅಲ್ಲಮನಿಗೆ ವಿಶಿಷ್ಟವಾದ ಕ್ರಿಯೇಟಿವ್ ಮಿಸ್ ರೀಡಿಂಗ್ ಪ್ರಚೋದಿಸುವ ಅನೇಕ ಸಂಕಥನಗಳಿಗೆ ಅವನ ವಚನಗಳು ಒಡ್ಡಿಕೊಳ್ಳುತ್ತವೆ. ಅಲ್ಲಮ ಯಾವುದನ್ನು ಎದುರಾದರೂ ಅದರ ಮೂಲಕ ಸಿದ್ಧ ಸತ್ಯವೊಂದನ್ನು ವ್ಯಾಖ್ಯಾನಿಸಲು ತೊಡಗುವುದಿಲ್ಲ. ಬದಲಿಗೆ ಸತ್ಯವೊಂದನ್ನು ಕಟ್ಟುವ ಕ್ರಿಯೆಯಲ್ಲಿ ತೊಡಗುತ್ತಾನೆ. ಅವನಿಗೆ ಎದುರಿನ ಎಲ್ಲವೂ ನೀರಲಾದ ನಿರ್ಮಿತಂಗಳು. ಹಾಗೆಯೇ ಅಲ್ಲಮನೂ ರೂಪಳಿದ ನಿರಾಳ. ಅಲ್ಲಮನಿಗೆ ಸಂಸ್ಕಾರಗಳ ಹಂಗಿಲ್ಲ, ಚರಿತ್ರೆಯ ಹಂಗಿಲ್ಲ, ಕುರುಹಿನ ಹಂಗಿಲ್ಲ, ಯಾವ ಪಾಂಥಿಕ ಬಂಧನಗಳೂ ಇಲ್ಲ. ತಾನುಂಟು ಎದುರುಂಟು, ತಾನೂ ಇಲ್ಲ ಇದಿರೂ ಇಲ್ಲ. ಇಂತಹ ಚಲನೆಯಲ್ಲಿ (ನಿಲುವಲ್ಲ!) ಲೋಕ ಗ್ರಹಿಕೆಯ ಭಿನ್ನ ವಿಧಾನವೊಂದನ್ನು ಕ್ರಿಯೇಟಿವ್ ಮಿಸ್ ರೀಡಿಂಗ್ ಮುಂದಿಡುತ್ತದೆ. ಬಂಧಮುಕ್ತತೆಯೇ ಇಂತಹ ಅಭಿವ್ಯಕ್ತಿಗಳ ಮಾರ್ಗ. ಇದು ಮುಂದಿನ ಓದುಗಳಿಗೂ ಇಂತಹದೇ ದಾರಿಯನ್ನು ತೆರೆಯುತ್ತದೆ ಆದುದರಿಂದ ಅಲ್ಲಮನ ವಚನಗಳನ್ನು ಸಂದರ್ಭಮುಕ್ತವಾಗಿಯೂ ವ್ಯಾಖ್ಯಾನಿಸಬಹುದು.

5.ಅಲ್ಲಮನ ವಚನಗಳಲ್ಲಿ ನಿರ್ದಿಷ್ಟ ಪರಿಕಲ್ಪನೆಯೊಂದರ ಶೋಧನೆಗೆ ವಿಧಾನವೊಂದನ್ನು ಮುಂದಿಡುವುದು ತೀರಾ ಕಷ್ಟ. ಹೆಚ್ಚೆಂದರೆ, ನಾಗಾರ್ಜುನ ಬುದ್ಧನ ಸೂತ್ರಗಳ ವ್ಯಾಖ್ಯಾನ ಸಂದರ್ಭದಲ್ಲಿ ತಾನು ಬುದ್ಧ ತೋರಿದ ದಾರಿಯಿಂದ ದೂರವಾಗಿಲ್ಲ ಎಂದು ಆಗಾಗ್ಗೆ ಖಚಿತಪಡಿಸಿಕೊಳ್ಳುವಂತೆ ಅಲ್ಲಮನ ವಚನಗಳು ತೋರುವ ದಾರಿಯಿಂದ ಇಂತಹ ಸಂಕಥನಗಳು ದೂರವಾಗದಂತೆ ಎಚ್ಚರದಿಂದ ನಡೆಯಲು ಪ್ರಯತ್ನಿಸಬಹುದು.

6. ಅಲ್ಲಮನ ವಚನಗಳ ಜೋಡಣೆಯ ಕ್ರಮವೊಂದು ದೀರ್ಘಕಾಲದಿಂದ ಚಾಲ್ತಿಯಲ್ಲಿದೆ. ಮರು ಜೋಡಣೆಯ ಹೊಸ ಪ್ರಯತ್ನಗಳು ಈಗಾಗಲೇ ಇರುವ ಜೋಡಣೆಯ ಕ್ರಮಕ್ಕೆ ಪ್ರತಿ ಜೋಡಣೆ ಆಗ'ಬೇಕಿಲ್ಲ. ಅಥವಾ ವಚನಗಳನ್ನು ಜೋಡಣೆಯ ಕ್ರಮವೊಂದಕ್ಕೆ ಬದ್ಧಗೊಳಿಸದೆ ಹಾಗೆಯೇ ಅಧ್ಯಯನ ನಡೆಸಲು ಸಾಧ್ಯ. ಜೋಡಣೆಯ ಕ್ರಮವು ಸಂಕಥನದ ದಿಕ್ಕನ್ನು ನಿರ್ದೇಶಿಸುತ್ತದೆ. ಆದ್ದರಿಂದ ಜೋಡಣೆ ಮುಕ್ತ ಓದು ಮುಕ್ತ ಸಂಕಥನವೊಂದಕ್ಕೆ ಪ್ರೇರಣೆ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಶೂನ್ಯತೆಯ ಪರಿಕಲ್ಪನೆಯನ್ನು ಅಲ್ಲಮನ ವಚನಗಳ ಮೂಲಕ ಕಟ್ಟುವ ಒಂದು ಪ್ರಯತ್ನವಾಗಿ ಕೆಲವು ಸಾಧ್ಯತೆಗಳನ್ನು ಪರಿಶೀಲಿಸಬಹುದು. ಅವುಗಳಲ್ಲಿ (1) ತಾನು ಇದಿರಿನ ನಿರಸನ (2) ನಿರಾಳ ಬಯಲು (3) ಭಿನ್ನಾಭಿನ್ನ ನಿರಾಕರಣೆ ಇತ್ಯಾದಿ.



ಅಲ್ಲಮಪ್ರಭುವಿನ ಲೋಕವಿವರಣೆ:

ಲೋಕಾರ್ಥ ಮತ್ತು ಪರಮಾರ್ಥಗಳ ನಡುವಿನ ಕ್ರಿಯಾ ಲೋಕವೇ ಅಲ್ಲಮನ ಸಾಧನೆಯ ಕ್ಷೇತ್ರ, ಅಂಗ-ಲಿಂಗಗಳು ಒಂದೆಡೆಯಾದರೆ, ಬಯಲು-ಗುಹೇಶ್ವರ ಇನ್ನೊಂದೆಡೆ. ಈ ಕಾರಣ-ಪರಿಣಾಮಗಳ

ಅಲ್ಲಮನ ವಚನಗಳನ್ನಷ್ಟೆ 'ಪರಾಮರ್ಶನ ಪಠ್ಯ' ಎಂದು ಭಾವಿಸಿ ನಡೆಸುವ ಅಧ್ಯಯನಕ್ಕೂ ಅವನ ಬಗೆಗಿನ ಕಾವ್ಯಗಳು, ಇತ್ಯಾದಿಗಳನ್ನು ಸೇರಿಸಿಕೊಂಡು ನಡೆಸಬಹುದಾದ ಅಧ್ಯಯನಗಳಿಗೂ ಪ್ರಮುಖ ವ್ಯತ್ಯಾಸಗಳಿರಲು ಸಾಧ್ಯ. ಅಲ್ಲಮನ ವಚನಗಳನ್ನು ಸ್ಥಲಕಟ್ಟಿಗೆ ಒಳಪಡಿಸುವುದಾಗಲೀ, ಸಂವಾದ ರೂಪದಲ್ಲಿ ಸಂಗ್ರಹಿಸುವುದಾಗಲೀ, ಅವನ ಬದುಕಿನ ಬಗೆಗೆ ರೋಚಕವೆನಿಸುವ ಕಾವ್ಯ ರಚನೆಯಾಗಲೀ ನಿರ್ದಿಷ್ಟ ಪಾಂಥಿಕ ಸಂಕಥನದಾಚೆಗೆ ಚಾಚಿಕೊಳ್ಳಲಾರವು. ಎಂದಿನಂತೆ ಜಾನಪದ ಅಭಿವ್ಯಕ್ತಿಗಳಲ್ಲಿ ಅಂತಹ ಭಿನ್ನ ಸಂಕಥನಗಳು ಅಭಿವ್ಯಕ್ತಗೊಂಡಿವೆ. ಅಲ್ಲಿಯೂ ಸಹ 'ಪ್ರತಿಪಠ್ಯ ನಿರ್ಮಾಣ'ದ ನೆಲೆಗಳು ಪ್ರಭಾವಶಾಲಿಯಾಗಿ ಕೆಲಸ ಮಾಡಿವೆ. ಇಂತಹ ಪ್ರತಿಪಠ್ಯ ನಿರ್ಮಾಣದ ಪ್ರಯತ್ನಗಳು ಕೇಂದ್ರವನ್ನು ಪಲ್ಲಟಗೊಳಿಸುವ ಮಹದಾಸೆಯಿಂದ ಆರಂಭಗೊಂಡರೂ ನಂತರ ದುರ್ಬಲಗೊಳ್ಳಬಹುದು. ಇಲ್ಲವೇ ತಮ್ಮ ಪ್ರಯತ್ನವನ್ನು ಬಿಟ್ಟುಕೊಟ್ಟು ಅಲಾಯಿದವಾಗಿ ನಿಂತುಬಿಡಬಹುದು.

ಸಂಬಂಧವನ್ನು ಅಲ್ಲಮನೂ ನಾಗಾರ್ಜುನನಂತೆಯೇ ಬಿಚ್ಚಿ ಹರಹುತ್ತಾನೆ. ಆದರೆ ನಾಗ್ಸಾರ್ಜುನ ಶುದ್ಧ ತಾರ್ಕಿಕ. ಅಲ್ಲಮನಾದರೋ ಸಾಧಕ ಮತ್ತು ಕವಿ! ಇಬ್ಬರೂ ಕಾರಣ ಮತ್ತು ಫಲಮೀಮಾಂಸೆಯನ್ನು ಪಕ್ಕಕ್ಕೆ ಸರಿಸಿದವರೇ. ಅಲ್ಲಮನೂ 'ನಡುರಂಗ'ವನ್ನೇ ಕಾರ್ಯಕ್ಷೇತ್ರವಾಗಿಸಿಕೊಂಡವನು.

ಪದವನರ್ಪಿಸಬಹುದಲ್ಲದೆ ಪದಾರ್ಥವನರ್ಪಿಸ ಬಾರದು
ಓಗರನರ್ಪಿಸಬಹುದಲ್ಲದೆ ಪ್ರಸಾದವನರ್ಪಿಸ ಬಾರದು
ಗೊಹೇಶ್ವರ, ನಿಮ್ಮ ಶರಣರ ಹಿಂದ ನೋಡಿ– ಮುಂದನರ್ಪಿಸುವರು.

–ಪದ–ಪದಾರ್ಥಗಳು ಪರಸ್ಪರ ಅವಲಂಬನೆಯಲ್ಲಿ ಅಸ್ತಿತ್ವಕ್ಕೆ ಬರುವಂಥವು. ಪದ ಅರ್ಥವಾಗಿ ಪರಿಣಮಿಸುವ ಪ್ರಕ್ರಿಯೆಯಲ್ಲಿ ಎಲ್ಲವೂ ಉಂಟಾಗಬೇಕು. ಫಲವೆಂಬುದು ಕಾರಣರಹಿತವಾಗಿ ಸಂಭವಿಸದು. ಓಗರ ಪ್ರಸಾದವಾಗುವುದೂ ಕ್ರಿಯಾ ಮಥನದಲ್ಲಿಯೇ. ಓಗರವೆಂಬ ಕಾರಣವಾಗಲೀ ಪ್ರಸಾದವೆಂಬ ಪರಿಣಾಮವಾಗಲೀ ಅಂತಹ ರೂಪಾಂತರಕ್ಕೆ ಕಾರಣವಾಗುವ ಪ್ರತ್ಯಯವಾಗಲೀ ಯಾವುದೂ ಸ್ವತಂತ್ರವಾಗಿ ಉಂಟಾಗದು. ಅಂತೆಯೇ ಶರಣರು ಹಿಂದು ಎಂಬ ಕಾರಣವನ್ನು ಮುಂದು ಎಂಬ ಪರಿಣಾಮದೊಡನೆಯೇ ಗ್ರಹಿಸುವರು.

ತೆಗೆದು ವಾಯುವ ನೇಣ, ಗಗನದಲ್ಲಿ ಗಂಟಿಕ್ಕಿ
ತ್ರಿಜಗಾಧಿಪತಿಯ ಕೋಣೆಯಲ್ಲಿ ಹಸುವಿದ್ದು
ಕರುವ ಕೊಂದು, ಕಂದಲನೊಡೆದು
ಕರೆಯಬಲ್ಲವಗಲ್ಲದೆ ಹಯನಾಗದು ನೋಡಾ!
ಹಯನೇ ಬರಡು, ಬರಡೇ ಹಯನು!
ಅರುಹಿರಿಯರ ಬಾಯ ಕರು ಒದೆಯಿತ್ತು
ಎರಡಿಲ್ಲದ ನಿರಾಳ ಗುಹೇಶ್ವರ.

'ಹಯನೇ ಬರಡು ಬರಡೇ ಹಯನು' ಎಂಬುದು Form is emptiness ಎಂಬುದಕ್ಕೆ ಸಂವಾದಿಯಾದುದು. ನಾಗಾರ್ಜುನನೆಲ್ಲೂ ತನ್ನ ಕೃತಿಗಳಲ್ಲಿ ಈ ಮಾತನ್ನು ಬಳಸದಿದ್ದರೂ, ಇತರ ಮಾಧ್ಯಮಿಕರು ಬಳಸಿದ್ದಾರೆ. ಅಲ್ಲಮನ ಈ ನುಡಿಯ ಹಿಂದೆ ಅದರ ಪ್ರಭಾವವಿರುವುದು ನಿಚ್ಚಳ. ಕರುವೆಂಬ ಕಾರಣ, ಕಂದಲವೆಂಬ ಸ್ಥಾಯಿ ಪರಿಣಾಮಗಳನ್ನು ಸರಿಸಿಕ್ಕಿ, ಕರೆವ ಪ್ರಕ್ರಿಯನ್ನಷ್ಟೇ ಸತ್ಯವೆಂದುಕೊಂಡವನಿಗೆ ಮಾತ್ರ ಹಯನು ದೊರಕುವುದು. ದೊರಕಿದ ಹಯನಾದರೂ ಸ್ಥಿತ ಪ್ರತ್ಯಯವಲ್ಲ. ದೊರಕಿದ ಶೂನ್ಯತೆಯೂ ಅಂತಿಮವಾಗಿ ಶೂನ್ಯವೇ. ಕಾರಣ–ಪರಿಣಾಮಗಳೆಂಬ ಎರಡೂ ತುದಿಗಳನ್ನು ನಿರಸನಗೊಳಿಸಿದರೆ ಮಧ್ಯದ ಗುಹೇಶ್ವರನೂ ನಿರಾಳವೇ.

ಅಂಗದಲ್ಲಿ ಮಾಡುವ ಸುಖವದು ಲಿಂಗಕ್ಕೆ ಭೂಷಣವಾಗಿತ್ತು
ಕಾಡುಗಿಚ್ಚಿನ ಕೈಲಿ ಕರಡವ ಕೊಯಿಸುವಂತೆ–
ಹಿಂದೆ ಮೆದೆಯಿಲ್ಲ ಮುಂದೆ ಹುಲ್ಲಿಲ್ಲ!
ಅಂಗ ಲಿಂಗವೆಂಬನ್ನಕ್ಕರ ಫಲದಾಯಕ
ಲಿಂಗೈಕ್ಯವದು ಬೇರೆ ಗುಹೇಶ್ವರ.

ಹಿಂದೆ ಮೆದೆಯಿಲ್ಲ ಮುಂದೆ ಹುಲ್ಲಿಲ್ಲ–ಇದು ನಿರನ್ವಯೋತ್ಪತ್ತಿವಿನಾಶ ತತ್ವದ ವಿವರಣೆ. ಹಿಂದಿನಿಂದ ಏನನ್ನೂ ತಾರದೆ ಮುಂದಕ್ಕೆ ಏನನ್ನೂ ಉಳಿಸಿದೆ ಕೇವಲ ಪ್ರಕ್ರಿಯೆಯಷ್ಟೆ ನಿರಂತರ ಚಲನಶೀಲವಾಗಿದೆ. ಅಂಗಲಿಂಗ ಸಂಬಂಧವೆಂದರೆ ಪೂರ್ಣ ಶಮಗೊಂಡ ಸ್ಥಿತಿ. ಕಾಡುಗಿಚ್ಚು ಹುಲ್ಲಿನ ಕರಡವ ಸುಡುತ್ತಾ ಹೋದಂತೆ ಕಿಚ್ಚು ಮುಂದುವರೆಯುತ್ತದೆಯೇ ಹೊರತು ಸ್ಥಿತವಾಗಿ ಕಿಚ್ಚೂ ಸಹ ಉಳಿಯದು. ಕರಡವೂ ನಿಶ್ಶೇಷ. ಪ್ರಕ್ರಿಯೆ ಮಾತ್ರ ಮುಂದುವರೆದು ಕಾರಣ ಪರಿಣಾಮಗಳು ಶೂನ್ಯವಾಗುತ್ತವೆ.

> **ಅಲ್ಲಮನಿಗೆ ವಿಶಿಷ್ಟವಾದ ಕ್ರಿಯೇಟಿವ್ ಮಿಸ್‌ರೀಡಿಂಗ್ ಪ್ರಚೋದಿಸುವ ಅನೇಕ ಸಂಕಥನಗಳಿಗೆ ಅವನ ವಚನಗಳು ಒಡ್ಡಿಕೊಳ್ಳುತ್ತವೆ. ಅಲ್ಲಮ ಯಾವುದನ್ನು ಎದುರಾದರೂ ಅದರ ಮೂಲಕ ಸಿದ್ಧ ಸತ್ಯವೊಂದನ್ನು ವ್ಯಾಖ್ಯಾನಿಸಲು ತೊಡಗುವುದಿಲ್ಲ. ಬದಲಿಗೆ ಸತ್ಯವೊಂದನ್ನು ಕಟ್ಟುವ ಕ್ರಿಯೆಯಲ್ಲಿ ತೊಡಗುತ್ತಾನೆ. ಅವನಿಗೆ ಎದುರಿನ ಎಲ್ಲವೂ ನೀರಲಾದ ನಿರ್ಮಿತಂಗಳು. ಹಾಗೆಯೇ ಅಲ್ಲಮನೂ ರೂಪಳಿದ ನಿರಾಳ. ಅಲ್ಲಮನಿಗೆ ಸಂಸ್ಕಾರಗಳ ಹಂಗಿಲ್ಲ, ಚರಿತ್ರೆಯ ಹಂಗಿಲ್ಲ, ಕುರುಹಿನ ಹಂಗಿಲ್ಲ, ಯಾವ ಪಾಂಥಿಕ ಬಂಧನಗಳೂ ಇಲ್ಲ. ತಾನುಂಟು ಎದುರುಂಟು, ತಾನೂ ಇಲ್ಲ ಇದಿರೂ ಇಲ್ಲ. ಇಂತಹ ಚಲನೆಯಲ್ಲಿ (ನಿಲುವಲ್ಲ!) ಲೋಕ ಗ್ರಹಿಕೆಯ ಭಿನ್ನ ವಿಧಾನವೊಂದನ್ನು ಕ್ರಿಯೇಟಿವ್ ಮಿಸ್ ರೀಡಿಂಗ್ ಮುಂದಿಡುತ್ತದೆ. ಬಂಧ ಮುಕ್ತತೆಯೇ ಇಂತಹ ಅಭಿವ್ಯಕ್ತಿಗಳ ಮಾರ್ಗ.**

ಶಿಲೆಯೊಳಗಣ ಪಾವಕನಂತೆ
ಉದಕದೊಳಗಿನ ಪ್ರತಿಬಿಂಬದಂತೆ
ಬೀಜದೊಳಗಿನ ವೃಕ್ಷದಂತೆ
ಶಬ್ದದೊಳಗಿನ ನಿಶ್ಶಬ್ದದಂತೆ
ಗುಹೇಶ್ವರ ನಿಮ್ಮ ಶರಣ ಸಂಬಂಧ

ವ್ಯಕ್ತವಾಗಿಯೇ ಇದೊಂದು ಸಂಬಂಧದ ವಚನ. ಗುಹೇಶ್ವರ–ಶರಣರ ನಡುವಿನ ಸಂಬಂಧದ ವಿನ್ಯಾಸವನ್ನು ನಾಲ್ಕು ರೂಪಕಗಳೊಡನೆ ವಿವರಿಸಲಾಗಿದೆ. ಶಿಲೆಯೊಳಗಣ ಪಾವಕ ಉದಕದೊಳಗಿನ ಪ್ರತಿಬಿಂಬ, ಬೀಜದೊಳಗಿನ ವೃಕ್ಷ, ಶಬ್ದದೊಳಗಿನ ನಿಶಬ್ದ– ಈ ರೂಪಕಗಳು ನಾಗಾರ್ಜುನನಲ್ಲಿ ವ್ಯಾಪಕವಾಗಿ ಪ್ರಯೋಗವಾಗಿವೆ. ಅಗ್ನಿ–ಇಂಧನ ಪರೀಕ್ಷಾ ಎಂಬ ಅಧ್ಯಾಯವೇ ಇದಕ್ಕೆ ಮೀಸಲಾಗಿದೆ. ಈ ವಚನ ಕೂಡಾ ನಾಗಾರ್ಜುನನ ಕಾರಿಕೆಗಳಂತೆ ಸಾಮಾನ್ಯ ತರ್ಕವನ್ನು ಪ್ರಚೋದಿಸುತ್ತದೆ. ಇಲ್ಲಿ ಶರಣನಿಗಾಗಲೀ ಗುಹೇಶ್ವರನಿಗಾಗಲೀ ಪೂರ್ವಾಪರ ಸಿದ್ಧ ಅಸ್ತಿತ್ವವಿಲ್ಲ. ಇದಕ್ಕೆ ನಾಗಾರ್ಜುನ ನೀಡುವ ತಾರ್ಕಿಕ ವಿವರಣೆಯ ವಿನ್ಯಾಸ ಇದು : ಶಿಲೆ–ಪಾವಕ, ಉದಕ–ಪ್ರತಿ ಬಿಂಬ, ಬೀಜ–ವೃಕ್ಷ, ಶಬ್ದ–ನಿಶಬ್ದ, ಭಿನ್ನ ಭಿನ್ನವೆಂದು ಕೊಂಡಾಗ ಉಂಟಾಗುವ ಪರಿಣಾಮಗಳಿಗೂ ಅವೆರಡೂ ಒಂದೇ ಎಂದುಕೊಂಡಾಗ ಉಂಟಾಗುವ ಪರಿಣಾಮಗಳಿಗೂ ವ್ಯತ್ಯಾಸವೇನೂ ಇಲ್ಲ. ಎರಡೂ ಬದಲಾವಣೆಗಳೇ ಇಲ್ಲದ ಕ್ರಿಯಾ ಹೀನ ಜಡಜಗತ್ತಾಗುತ್ತದೆ. ಒಂದೇ ಆಗಿರು ವಾಗಲೂ ಸಂಬಂಧ ಸಾಧ್ಯವಾಗದೆ ಕ್ರಿಯಾ ಸಾಮರ್ಥ್ಯವಿಲ್ಲದ ಮೃತ ಸ್ಥಿತಿಯೊಂದು ನಿರ್ಮಾಣವಾಗುತ್ತದೆ.

ಅನ್ಯ ಸಂಗವಿಲ್ಲಾಗಿ ಮತ್ತೊಂದ ವಿವರಿಸಲಿಲ್ಲಯ್ಯ
ಮತ್ತೊಂದ ವಿವರಿಸಲಿಲ್ಲಾಗಿ ನಿಸ್ಸಂಗವಾಯಿತ್ತಯ್ಯ
ಗುಹೇಶ್ವರ ನಿಮ್ಮ ನಾಮವಿಂತುಟಯ್ಯ.

ನಾಮ ರೂಪಗಳ ಮೂಲಕ ಗ್ರಹಿಸುವ ವಸ್ತು ಪ್ರಪಂಚದ ಸಂಬಂಧವು ಅಂಗಾನುಭವಗಳ ಮೂಲಕ ವ್ಯಾಖ್ಯಾನಗೊಳ್ಳುತ್ತದೆ. ಎಲ್ಲ ಅನುಭವಗಳೂ ನಮಗೆ ಇಂದ್ರಿಯಗಳ ಮೂಲಕವೇ ದೊರಕಬೇಕು. ಹಾಗಾಗಿ ನಮಗೆ ಸಿಗುವ ಅನುಭವಗಳೆಲ್ಲ ನಮ್ಮ ಇಂದ್ರಿಯಗಳ ಮಿತಿಗಳಿಗೆ ಒಳಗಾಗಿಯೇ ದೊರಕುತ್ತವೆ. ಈ ಮಿತಿಗಳನ್ನು ದಾಟುವುದು ಹೇಗೆ? ಅಂಗಾನುಭವಗಳ ಮಿತಿಗಳು ನಿರಸನಗೊಳ್ಳುವುದು ಹೇಗೆ? ಈ ಪ್ರಶ್ನೆಗೆ ಸಾಧಕರು ಮಾತ್ರ ಉತ್ತರಿಸಿಯಾರು. ಅಂಗಾನುಭವಗಳು ನಿರಸನಗೊಂಡರೆ ಎದುರಿನ ಶೂನ್ಯತೆಯು ಗೋಚರವಾಗುತ್ತದೆ. ಅಲ್ಲಮ ಕಾರಣ ಮೀಮಾಂಸೆಯನ್ನು ಅತ್ತ ಅತ್ತ ದೂರ ತಳ್ಳುತ್ತಲೇ ಇರುತ್ತಾನೆ. ಪ್ರಕ್ರಿಯೆಯಲ್ಲಿಯ ಸಾಪೇಕ್ಷಕಾರಣವು ಒಂದು ಸ್ವತಂತ್ರ ಘಟಕದಂತೆ ಸ್ವೀಕೃತವಾದರೆ ಅದರ ಪ್ರಾರಂಭ, ಮಧ್ಯ, ಅಂತ್ಯಗಳೆಂಬ ಗ್ರಹಿಕೆ ಆರಂಭವಾಗುತ್ತದೆ. ಹಾಗಾಗಿ ಅಂಗ ಸಂಗದ ನಿರಸನ ಪ್ರಕ್ರಿಯೆಯ ಪ್ರಾರಂಭವನ್ನಾಗಿ ಅಂಗವನ್ನು ಗುರುತಿಸಿಕೊಳ್ಳಲು ಅಲ್ಲಮ ಸಿದ್ಧನಿಲ್ಲ. ಆದಿಯಿಲ್ಲದಾದಾಗ ಅದರ ಸ್ಥಿತ ಮುಂದುವರಿಕೆಯಾಗಿ ಮತ್ತೊಂದನ್ನು ಗುರುತಿಸಿಕೊಳ್ಳಲು ಸಾಧ್ಯವಾಗದು.

ಆದಿಸ್ವಯಂಭುವಿಲ್ಲದ ಮುನ್ನ, ಸಂಗ ನಿಸ್ಸಂಗವಿಲ್ಲದ ಮುನ್ನ
ನಕ್ಷತ್ರ ಗ್ರಹಗಳಿಲ್ಲದ ಮುನ್ನ, ಯೋಗಕರಣಗಳಿಲ್ಲದ ಮುನ್ನ
ಖೇಚರ ಭೂಚರರಿಲ್ಲದ ಮುನ್ನ, ಆರೂ ಆರೂ ಇಲ್ಲದ ಮುನ್ನ
ಆಕಾಶ ಮಾರುತವಿಲ್ಲದ ಮುನ್ನ, ಅಂಬುಧಿ ಕಮಠವಿಲ್ಲದ ಮುನ್ನ
ಹರಿಬ್ರಹ್ಮಾದಿಗಳಾರ ನಿಲವಿಲ್ಲದ ಮುನ್ನ, ಹಿಮಕರ ದಿನಕರರ ಸುಳುಹಿಲ್ಲದ ಮುನ್ನ
ಹಿಂದಿಲ್ಲ ಮುಂದಿಲ್ಲ ಒಂದೂ ಇಲ್ಲದ ಮುನ್ನ,
ಗುಹೇಶ್ವರ ತಾನಿದ್ದ ತನ್ನ ತಾನರಿಯದಂತೆ.

ನಾಮ ರೂಪಗಳನ್ನು ಪಡೆದ ಸಂರಚನೆಗಳನ್ನು ನಿರಸನಗೊಳಿಸಿ ನೋಡಬೇಕಾದ ಅಗತ್ಯವನ್ನು; ನಾನಾ ರೀತಿಯಲ್ಲಿ ಅಲ್ಲಮ ತಿರುತಿರುಗಿ ನುಡಿಯುತ್ತಾನೆ. ಲೋಕ ತನ್ನಿಂದ ತಾನೇ ಉಂಟಾದುದೋ ಪರದಿಂದ ಉಂಟಾದುದೋ ಎಂಬ ಪ್ರಶ್ನೆಯನ್ನು ಕೂಡ ದಾಟಲು ಸೂಚಿಸುತ್ತಾನೆ. ಹೀಗೆ ಎಲ್ಲವನ್ನು ದಾಟಿ ನೋಡಲು ಸಾಧ್ಯವಾಗುವ ಕ್ರಮವೊಂದನ್ನು ಕಟ್ಟಿಕೊಳ್ಳಲು ಬಯಸುತ್ತಾನೆ.

ಅಲ್ಲಮಪ್ರಭು ಮತ್ತು ನಾಗಾರ್ಜುನರ ಲೋಕವಿವರಣೆಯ ವಿನ್ಯಾಸದಲ್ಲಿ ಅನೇಕ ಭಿನ್ನತೆಗಳಿವೆ. ಮಾತು ಮಾತಿಗೆ ನಾಗಾರ್ಜುನ ಬುದ್ಧನ ಆಸರೆಯನ್ನಾಶ್ರಯಿಸಿದರೆ, ಅಲ್ಲಮ ಪರಂಪರೆಯ ಮಹಾವಿರೋಧಿ. ಚರಿತ್ರೆಯ ಹಂಗು, ಹಿರಿಯರ ಹಂಗು ಅವನಿಗೆ ಇಲ್ಲ. ಆದರೆ ಇಬ್ಬ

ರದ್ದೂ ನಿರಚನೆಯ ಉದ್ಯೋಗವೇ. ನಾಗಾರ್ಜುನನೂ ಸಾಧಕನಿದ್ದಿರಬಹುದು ಆದರೆ ಮೂಲಮಾಧ್ಯಮಕಕಾರಿಕಾದ ಮಟ್ಟಿಗೆ ಅವನು ನಿರ್ವಹಿಸುತ್ತಿರುವ ಭೂಮಿಕೆ ಕೇವಲ ವ್ಯಾಖ್ಯಾನಕಾರನದ್ದು. ಪ್ರತೀತ್ಯ ಸಮುತ್ಪಾದವು ಸಾಮಾನ್ಯ ಮಾನವ ಮತಿಗೆ ಅಗ್ರಾಹ್ಯ ಮತ್ತು ವಿಷ ಸರ್ಪವನ್ನು ನಿರ್ವಹಿಸುವ ಎಚ್ಚರದ ಅಗತ್ಯವನ್ನು ಈ ಸಂದರ್ಭ ಬೇಡುತ್ತದೆ ಎಂಬ ಎಚ್ಚರವನ್ನು ಬುದ್ಧನೇ ನೀಡಿದ್ದರೂ, ಪ್ರತಿಯೊಬ್ಬ ಮನುಷ್ಯನಲ್ಲಿ ಇರುವ ಬುದ್ಧ ಪ್ರಜ್ಞೆಯನ್ನು ಅನಾವರಣಗೊಳಿಸಿದರೆ ಅದು ದಕ್ಕುವುದೆಂಬ ಆಶಯವನ್ನೂ ವ್ಯಕ್ತ ಪಡಿಸಿದ್ದಾನೆ. ನಾಗಾರ್ಜುನನ ಹಠವಿರುವುದು ಹೀಗೆ ಅಗ್ರಾ ಹ್ಯವಾದುದನ್ನು ಸಾಮಾನ್ಯ ಭಾಷಿಕ ಮಟ್ಟಕ್ಕೆ, ತರ್ಕದ ಮಟ್ಟಕ್ಕೆ ತಂದು ನೀಡುವುದು. ಇಂತಹ ಭಿನ್ನ ನಿಲುವನ್ನು ಆತುಕೊಳ್ಳಲು ನಾಗಾರ್ಜುನನಲ್ಲಿ ಒತ್ತಡವೊಂದು ಕೆಲಸ ಮಾಡಿದೆ. ಅದೇನೆಂದರೆ ಅವನೇ ಅರ್ಪಣೆಯ ವಚನದಲ್ಲಿ ವಿವರಿಸುವಂತೆ ಪ್ರತೀತ್ಯ ಸಮುತ್ಪಾದವು; ಅನಿರೋಧ, ಅನುತ್ಪಾದ, ಅನುಚ್ಛೇದ, ಅಶಾಶ್ವತ ಅನೇಕಾರ್ಥ, ಅನಾನಾರ್ಥ, ಅನಾಗಮ ಮತ್ತು ಅನಿರ್ಗಮ– ಈ ನೇತ್ಯಾತ್ಮಕ ವಿವರಣೆಯು ಪ್ರಜ್ಞೆಯನ್ನು ಕವಿದಿರುವ ವಿಪರ್ಯಯಗಳ ಅನಾವರಣದ ವಿಧಾನವನ್ನು ಮಾತ್ರ ಮುಂದಿಡುತ್ತದೆ. ಆದರೆ ಅಲ್ಲಮಪ್ರಭುವಿನ ಎದುರಿಗೆ ಇತರ ವಚನಕಾರರನ್ನು ತಂದವರು ಸಂಪಾದನಾಕಾರರು. ಸಂಪಾದನಾಕಾರರು ಹೀಗೆ ಅಲ್ಲಮನ ಎದುರಿಗೆ ಒಬ್ಬೊಬ್ಬ ವಚನಕಾರನನ್ನೂ ನಿಲ್ಲಿಸಿ ಅವನ ತಾತ್ವಿಕತೆಯ ಅರಿವನ್ನು ನಿಕಷಕ್ಕೊಡ್ಡಿದ್ದು ಅವರ ಕ್ರಿಯೇಟಿವ್ ಪ್ರತಿಭೆ. ಬುದ್ಧನ ಕಿರಿಯ ಸಮಕಾಲೀನ ವಿಮಲಕೀರ್ತಿಯ ಎದುರಿಗೆ ಹೀಗೇ ಬುದ್ಧನ ಶಿಷ್ಯರೆಲ್ಲರೂ ನಿಂತು ತಾವು ಪಡೆದ ಅರಿವನ್ನು ಒರೆಗೆ ಹಚ್ಚುತ್ತಾರೆ. ಬುದ್ಧನೇ ಅದು ಆಗುವಂತೆ ನೋಡಿಕೊಳ್ಳುತ್ತಾನೆ. ಪ್ರಭುವಿನ ವಚನಗಳು ಸಂಕಲನಗೊಂಡ ಹಿನ್ನೆಲೆಯಲ್ಲಿ ಬೇರೆ ಬೇರೆ ಪಾಂಥಿಕ ದೃಷ್ಟಿಗಳು ಕೆಲಸ ಮಾಡಿರಬಹುದು. ಅಲ್ಲಮನಿಗೆ ಗ್ರಹಿಕೆ ಮತ್ತು ಅಭಿವ್ಯಕ್ತಿ ಒಟ್ಟಿಗೇ ಸಿದ್ಧಿಸುತ್ತವೆ ಎಂಬ ವಿಚಾರವನ್ನು ಹಿಂದೆ ಹೇಳಿದೆ. ಅಲ್ಲಮ ಮುಖಾಮುಖಿಯಾದ ತಾತ್ವಿಕತೆಗಳ ವಿಪರ್ಯಯಗಳ ಸ್ವರೂಪವೆಂತಿದ್ದಿತೋ ಅದು ಅಲ್ಲಮನಿಗೆ ಮಾತ್ರ ಗೊತ್ತು. ಅಕ್ಕಸಾಲಿಯೊಬ್ಬ ಬೇರೆಬೇರೆ ಅವಸ್ಥೆಯಲ್ಲಿನ ಚಿನ್ನವನ್ನು ಕರಗಿಸಿ ಕಂಬಚ್ಚಿಗೆ ಹಾಕಿ ಎಳೆದು ಬಿಡುವಂತೆ ಅಲ್ಲಮನೆದುರಿಗೆ ಯಾವ ತಾತ್ವಿಕತೆ ಬಂದರೂ ಅದು ಒಮ್ಮೆಗೇ ರೂಪಾಂತರಗೊಂಡು ಬರುವುದರಿಂದ, ಅಲ್ಲಮನ ಸ್ವಂತ ಅನುಭವಲೋಕ ವಚನಗಳ ಮೂಲಕ ಅಗ್ರಾಹ್ಯವೇ.

ಆದಿಯ ಸಂಗದಿಂದಾದವನಲ್ಲ
ಸಂಗ ಸುಖದೊಳಗಿದ್ದವನಲ್ಲ
ಇಬ್ಬರ ಸಂಗದಿಂದಾದವನಲ್ಲ
ರವಿಶಶಿಯ ಬೆಳಗಿನಿಂದ ಬೆಳೆದವನಲ್ಲ
ನಾದ ಬಿಂದು ಕಳೆ ಹುಟ್ಟದ ಮುನ್ನ ಅಲ್ಲಿಂದತ್ತತ್ತ ಗುಹೇಶ್ವರ.

'ಆದಿ' ಎಂಬ ಪ್ರಥಮ 'ಪರ'ಕಾರಣವೊಂದನ್ನು ಮೊದಲಿಗೆ ಅಲ್ಲಮ ನಿರಾಕರಿಸುತ್ತಿದ್ದಾನೆ. ಹಾಗೆಯೇ ಈಗಾಗಲೇ ಇದ್ದು ಸಂಗದಿಂದ ಬಂದವನಲ್ಲ ಅಂದರೆ ತನ್ನಿಂತಾನೇ ಆದವನಲ್ಲ ಮತ್ತು ಇವೆರಡರಿಂದಾದವನೂ ಅಲ್ಲ. ಗೊಹೇಶ್ವರನೆಂಬುವನು ತನ್ನಿಂದಾದವನಲ್ಲ, ಪರದಿಂದಾದವನಲ್ಲ, ಸ್ವ–ಪರ ಉಭಯದಿಂದಲೂ ಆದವನಲ್ಲ. ರವಿ–ಶಶಿಯ ಬೆಳಗೆನ್ನುವುದು ಹಠಯೋಗವನ್ನು ನೆನಪಿಸಲೇಬೇಕು. ಅಂತೆಯೇ ಬಿಂದು ತತ್ವವು ಪರಾಮಾಯೆಯ ಕಾರಣವನ್ನು ಮುಂದಿಡುತ್ತದೆ. ಅಲ್ಲಮಪ್ರಭು ಈ ಎಲ್ಲ ಕಾರಣಗಳನ್ನು ನಿರಾಕರಿಸುತ್ತಿದ್ದಾನೆ. 'ಮುನ್ನ' 'ಅಲ್ಲಿಂದ ಅತ್ತ, ಅತ್ತ' ಎನ್ನುವ ಪದಗಳು ಕಾಲ ಸೂಚಕವೆನ್ನುವುದಕ್ಕಿಂತಲೂ ಪ್ರಥಮ ಕಾರಣವೊಂದರ ಹುಡುಕಾಟ ನಿರಾಕರಣೆಯನ್ನೇ ಮಾಡುತ್ತಿವೆ.

ಆಕಾರ ನಿರಾಕಾರವೆಂಬೆರಡೂ ಸ್ವರೂಪಂಗಳು
ಒಂದು ಆಹ್ವಾನ ಒಂದು ವಿಸರ್ಜನ
ಒಂದು ವ್ಯಾಕುಳ ಒಂದು ನಿರಾಕುಳ
ಉಭಯಕುಳರಹಿತ ಗುಹೇಶ್ವರ ನಿಮ್ಮ ಶರಣ ನಿಶ್ಚಿಂತನು.

ಆಕಾರ–ನಿರಾಕಾರಗಳೆಂಬುವು ಒಂದು ಅಸ್ತಿತ್ವ ಇನ್ನೊಂದು ನಾಸ್ತಿತ್ವ ಎರಡೂ ವಿಕಲ್ಪಗಳೇ. ಭಿನ್ನ–ಅಭಿನ್ನ, ದ್ವೈತಾದ್ವೈತ, ಶಾಶ್ವತ–ಉಚ್ಛೇದ, ಮುಂತಾದ ತಾತ್ವಿಕರ ದೃಷ್ಟಿಕೋನಗಳು ಸರಿಯೋ–ತಪ್ಪೋ ಎಂಬ ವಿವಾದಕ್ಕೆ ಮುನ್ನ ಇಂತಹ ದೃಷ್ಟಿಕೋನಗಳುಂಟಾಗಲು ಕಾರಣಗಳಿಲ್ಲ. ವಸ್ತು ಪ್ರಪಂಚನವನ್ನು ಹೀಗೆ ಅವಳಿವೈರುಧ್ಯಗಳಲ್ಲಿ ಗ್ರಹಿಸಿ, ಅದರ ಬಗೆಗೆ ಒಂದಲ್ಲ ಒಂದು ದೃಷ್ಟಿಕೋನವುಳ್ಳವನಾಗಿರುವವರೆಗೆ ದ್ವಂದ್ವದಲ್ಲಿ ಬಂಧಿಯಾಗಿರುತ್ತಾನೆ. ದೃಷ್ಟಿ ಮುಕ್ತನಾಗಿ ವಸ್ತು ಪ್ರಪಂಚದ ನಿಜವಾದ ಅರಿವನ್ನು ಪಡೆದ ಶರಣನು ನಿಶ್ಚಿಂತನಾಗಿರುತ್ತಾನೆ. ದ್ವಂದ್ವಮುಕ್ತ ಸ್ಥಿತಿಯೇ ನಿರ್ವಿಕಲ್ಪ, ನಿಶ್ಚಿಂತ ಸ್ಥಿತಿ.

ಪಂಚಭೂತ ಸಂಗದಿಂದ ಜ್ಯೋತಿಯಾಯಿತ್ತು
ಪಂಚಭೂತ ಸಂಗದಿಂದ ಕರ್ಪೂರವಾಯಿತ್ತು
ಈ ಎರಡರ ಸಂಯೋಗವೇನಾಯಿತ್ತು ಹೇಳಾ?!

ರತ್ನವೆಂಬ ವಸ್ತು ರೂಪವನ್ನು ಈ ವಚನ ದಲ್ಲಿ ಹೀಗೆ ಗ್ರಹಿಸಲಾಗಿದೆ. ರತ್ನತ್ವ (ರತ್ನದ ಲಕ್ಷಣ, ಪ್ರಕೃತಿ) ಮತ್ತು ಅದನ್ನು ಧರಿಸಬಲ್ಲ ಪಾಷಾಣ (ಕಲ್ಲು) ಒಂದು ಕಾರಣ ಇನ್ನೊಂದು ಪ್ರತ್ಯಯ– ಇವೆರಡೂ ಸಂಯೋಜನೆಗೊಂಡು ರತ್ನ ಉಂಟಾಗಿದೆ. ಲಕ್ಷಣವಿಲ್ಲದ ವಸ್ತು ಸಂಭವಿಸಲು ಹೇಗೆ ಸಾಧ್ಯವಿಲ್ಲವೋ ಹಾಗೆ ವಸ್ತುವಿಲ್ಲದೆ ಲಕ್ಷಣಗಳು ಅಸ್ತಿತ್ವಕ್ಕೆ ಬರಲಾರವು. ಅಸ್ತಿತ್ವದ ಈ ಅನಿವಾರ್ಯ ಪರಾವಲಂಬನೆಯೇ ಗೊಹೇಶ್ವರನೆಂಬ ಶೂನ್ಯತೆ. ಕಾರಣ ಮತ್ತು ಪ್ರತ್ಯಯ ಒಗ್ಗೂಡಿದಾಗ ಅದಕ್ಕೆ ಕ್ರಿಯಾ ಸಾಮರ್ಥ್ಯ ದೊರಕಿ ಲೋಕ ವ್ಯವಹಾರದಲ್ಲಿ ತೊಡಗಲು ಸಾಧ್ಯವಾಗುತ್ತದೆ. ಹಾಗೆ ಅರಿವೆಂಬ ಜ್ಞಾನವು ಕ್ರಿಯಾಶೀಲ, ಸಾಮರ್ಥ್ಯವಾಗಿ ಲೋಕವ್ಯವಹಾರದಲ್ಲಿ ತೊಡಗಬೇಕಾದರೆ ಸತ್ಕ್ರಿಯಗಳ ಮೂಲಕ ಮಾತ್ರ ಸಾಧ್ಯ.

ವಾಙ್ಮನಕ್ಕತೀತ ಗುಹೇಶ್ವರ. ವಸ್ತು ಪ್ರಪಂಚ ಸಂಗದಿಂದಾದುದು ಮತ್ತು ಹೀಗೆ ಉಂಟಾದ ಸಂರಚನೆಯಲ್ಲಿ ಶಾಶ್ವತಸತ್ತೆಂಬುದು ಇಲ್ಲವೆಂಬ ಸ್ಪಷ್ಟ ನಿಲುವನ್ನು ಈ ವಚನ ವ್ಯಕ್ತಪಡಿಸುವುದರ ಜೊತೆಗೆ ಅದರ ಕೊನೆಯ ಸಾಲು ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಸತ್ಯಗಳೆರಡನ್ನೂ ಅವುಗಳ ಸಂಬಂಧವನ್ನೂ ಹೇಳುತ್ತಿದೆ. ಇಲ್ಲಿ ಭಾಷೆ ಎಂಬುದು ಲೌಕಿಕ ಪ್ರಪಂಚ ಸೂಚಿಯೂ ಆಗಿರುವುದರಿಂದ ಅದು ಪಂಚಭೂತ ಸಂಗದಿಂದಾದ ಸಂಯೋಜನೆಯನ್ನು ನುಡಿಯಬಲ್ಲುದೇ ಹೊರತು ಶೂನ್ಯತೆಯೆಂಬ ಅದರ 'ಧರ್ಮ'ವನ್ನು ನುಡಿಯಲಾರದು. ಗುಹೇಶ್ವರನೆಂಬುದೊಂದು ಪರಿಕಲ್ಪನೆಯಲ್ಲವಾಗಿ ಅದು 'ಇದ'ಯೆಂಬ ಮಾತಿನಿಂದ ಗ್ರಹಿಸಲಾಗದು.

ರತಿ ಪಾಷಾಣ ಕೂಡೆ ರತ್ನವೆನಿಸಿಕೊಂಬಂತೆ
ಅರಿವ ಜ್ಞಾನ ಮಾಡುವ ಸತ್ಕ್ರಿಯಿಂದಲ್ಲದೆ ಸಾಕಾರದ ಪಟಲ ಹರಿಯದು
ರತಿಯಿಲ್ಲದಿರೆ ಪಾಷಾಣ ರತ್ನಕುಲವೆಂದಿಲ್ಲ
ರತಿಯಡಗುವುದಕ್ಕೆ ಪಾಷಾಣ ಅರಿವಡಗುವುದಕ್ಕೆ ಕುರುಹೆಂಬ ನಾಮ;
ಉಭಯವಡಗಿ ಕುರುಹಿಲ್ಲದೆ ಮತ್ತೆ
ಗೊಹೇಶ್ವರನೆಂಬ ಮಾತು ಕುರುಹಿಲ್ಲದಿರಬೇಕು, ಅಂಬಿಗ ಚೌಡಯ್ಯ.

ರತ್ನವೆಂಬ ವಸ್ತು ರೂಪವನ್ನು ಈ ವಚನದಲ್ಲಿ ಹೀಗೆ ಗ್ರಹಿಸಲಾಗಿದೆ. ರತ್ನತ್ವ (ರತ್ನದ ಲಕ್ಷಣ, ಪ್ರಕೃತಿ) ಮತ್ತು ಅದನ್ನು ಧರಿಸಬಲ್ಲ ಪಾಷಾಣ (ಕಲ್ಲು) ಒಂದು ಕಾರಣ ಇನ್ನೊಂದು ಪ್ರತ್ಯಯ– ಇವೆರಡೂ ಸಂಯೋಜನಗೊಂಡು ರತ್ನ ಉಂಟಾಗಿದೆ. ಲಕ್ಷಣವಿಲ್ಲದ ವಸ್ತು ಸಂಭವಿಸಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ವಸ್ತುವಿಲ್ಲದೆ ಲಕ್ಷಣಗಳು ಅಸ್ತಿತ್ವಕ್ಕೆ ಬರಲಾರವು. ಅಸ್ತಿತ್ವದ ಈ ಅನಿವಾರ್ಯ ಪರಾವಲಂಬನೆಯೇ ಗೊಹೇಶ್ವರನೆಂಬ ಶೂನ್ಯತೆ. ಕಾರಣ ಮತ್ತು ಪ್ರತ್ಯಯ ಒಗ್ಗೂಡಿದಾಗ ಅದಕ್ಕೆ ಕ್ರಿಯಾ ಸಾಮರ್ಥ್ಯ ದೊರಕಿ ಲೋಕ ವ್ಯವಹಾರದಲ್ಲಿ ತೊಡಗಲು ಸಾಧ್ಯವಾಗುತ್ತದೆ. ಹಾಗೆಯೇ ಅರಿವೆಂಬ ಜ್ಞಾನವು ಕ್ರಿಯಾಶೀಲ, ಸಾಮರ್ಥ್ಯವಾಗಿ ಲೋಕವ್ಯವಹಾರದಲ್ಲಿ ತೊಡಗಬೇಕಾದರೆ ಸತ್ಕ್ರಿಯೆಗಳ ಮೂಲಕ ಮಾತ್ರ ಸಾಧ್ಯ. ಇಲ್ಲಿ ಎರಡು ಅಂಶಗಳು ಗಮನಾರ್ಹ. ಒಂದು; ಶುದ್ಧ ಜ್ಞಾನವೆಂಬುದು ಏಕಾಕಿಯಾಗಿ ಉಂಟಾಗಲಾರದು. ಕೇವಲ ತಾತ್ವಿಕತೆ ಕ್ರಿಯಾಹೀನ ಮತ್ತು ಅಮೂರ್ತ. ಅದು ಮೂರ್ತವಾಗಬೇಕಾದರೆ ಕ್ರಿಯಾರೂಪ ತಾಳಿಬರುವುದು ಅನಿವಾರ್ಯ. ಎರಡನೆಯದಾಗಿ ಲೋಕಕ್ಕೆ ಅನ್ವಯವಾಗದ ಜ್ಞಾನ ಅನುಪಯುಕ್ತ. ಕೇವಲ ಊಹಾಪೋಹಗಳ ತಾತ್ವಿಕತೆ ಅಲ್ಲಮನಿಗೆ ಮಾನ್ಯವಲ್ಲ. ರತಿಯೆಂಬುದು ಮೈದೋರಲು ಪಾಷಾಣ ಅಗತ್ಯವಾದ ಹಾಗೆ ಅರಿವು ಮೈದೋರಲು ನಾಮವೆಂಬ ರೂಪ ಅಗತ್ಯ. ಅಲ್ಲಮ ಇಲ್ಲಿ ರಚನೆ ಮತ್ತು ನಿರಚನೆ ಎರಡನ್ನು ಒಟ್ಟಿಗೇ ಸಾಧಿಸುತ್ತಿದ್ದಾನೆ. ನಿರಚನೆಯ ಬೀಜ ರಚನೆಯಲ್ಲಿಯೇ ಇರಬೇಕು, ಇದೆ. ನಿರಚನೆ ಎಂಬ ಪ್ರಜ್ಞೆ ಭಾಷಿಕ ರೂಪದಲ್ಲಿಯೂ ಉಳಿಯಬಾರದು. ರಚನೆ ಮತ್ತು ನಿರಚನೆ ಎರಡೂ ಶಾಶ್ವತ ಅಸ್ತಿತ್ವಗಳಲ್ಲ. ಉಭಯವಡಗಲೇಬೇಕು.

ಲೋಕಸತ್ಯ ಅಥವಾ ವ್ಯಾವಹಾರಿಕ ಸತ್ಯವು ಲೋಕದ ನಿತ್ಯ ಚಲನೆಗೆ ಅಗತ್ಯವಾದ ನೈತಿಕತೆಯ ತಳಹದಿಯಾಗಿದ್ದು, ಈ ಲೋಕ ನೈತಿಕತೆಯನ್ನು 'ವ್ಯವಹಾರ' ಎನ್ನುವ ಅರ್ಥದಲ್ಲಿ ಬಳಸಲಾಗಿದೆ. ನೈತಿಕತೆಯೇ ಆಧಾರ

ವಾದ ವ್ಯವಹಾರ ಸತ್ಯವನ್ನು ಒಳಗೊಳ್ಳದ, ಅದಕ್ಕೆ ವ್ಯತಿರಿಕ್ತವಾದ ಯಾವುದೇ ಅರಿವು ಅರ್ಥಹೀನ ಮತ್ತು ಕೇಡೆಂದೇ ಭಾವಿಸಲಾಗಿದೆ. ಲೋಕ ವ್ಯವಸ್ಥೆಯ ಹಿತವನ್ನು ಕಾಯದ ಜ್ಞಾನಕ್ಕೆ ಮಾನ್ಯತೆ ಇಲ್ಲ. ವ್ಯಾವಹಾರಿಕ ಸತ್ಯವನ್ನಾಶ್ರಯಿಸದೆ ಪಾರಮಾರ್ಥಿಕ ಸತ್ಯವನ್ನು ನುಡಿಯಲಾಗದು. ಆದರೆ ಈ ಅರಿವು ಸ್ವಯವಾಗಿ ದ್ವಂದ್ವಗಳಡಗಿ ಕುರುಹಳಿದರೆ ಮಾತ್ರ ಅಲ್ಲಿ ಗೊಹೇಶ್ವರನೆಂಬ ಪ್ರಜ್ಞೆಯೂ ಪರಿಕಲ್ಪನೆಯಾಗಿ ಉಳಿಯುವುದಿಲ್ಲ.

ಅಸ್ತಿತ್ವ-ನಾಸ್ತಿತ್ವವೆರಡನ್ನೂ ನಿರಾಕರಿಸಿದ, ಪರಸ್ಪರ ಅವಲಂಬನೆಯ ಸಂಬಂಧದ ಅರಿವು-ಪ್ರತೀತ್ಯಸಮುತ್ಪಾದವೇ-ಗೊಹೇಶ್ವರ. ಗೊಹೇಶ್ವರನೆಂಬ ಅರಿವೂ ರಚನೆಯಾಗಿ ಉಳಿಯಬಾರದೆಂಬುದು ಈ ವಚನದ ಇಂಗಿತ.

ಅರಿವ ಆತ್ಮ ಕಂಗಳ ಮರೆಯಲ್ಲಿ ಕಾಬಂತೆ
ಕಿವಿಯ ಮರೆಯಲ್ಲಿ ಕೇಳುವಂತೆ,
ಕಂಗಳು ನಷ್ಟವಾದಲ್ಲಿ ಕರ್ಣ ಬಧಿರವಾದಲ್ಲಿ
ಕಾಂಬುದು ಕೇಳುವುದು ಅಲ್ಲಿಯೆ ನಿಂದಿತ್ತು
ಆತ್ಮನ ಅರಿವಾವುದು ಗೊಹೇಶ್ವರನೆಂಬ ಕುರುಹಾವುದು
ಅಂಬಿಗ ಚೌಡಯ್ಯ?

ಕುರುಹು ನಿಜವಲ್ಲ. ಮತ್ತೊಂದನ್ನಾಧರಿಸಿ ಅಸ್ತಿತ್ವಕ್ಕೆ ಬರುವಂಥದ್ದು ಸ್ವತಂತ್ರ ಶಾಶ್ವತ ಅಸ್ತಿತ್ವವುಳ್ಳದ್ದಾಗಿರಲು ಸಾಧ್ಯವಿಲ್ಲ. ದರ್ಶನಗಳು ತಮ್ಮ ಚಿಂತನೆಯ ಶೃಂಗವನ್ನು ಮುಟ್ಟುವುದು ಆತ್ಮ, ಪರಬ್ರಹ್ಮದಂತಹ ಅಮೂರ್ತ ಮತ್ತು ಕರ್ಮದಂತಹ ನಿರ್ಣಯಾತ್ಮಕ ಮೂರ್ತ ಸಂಗತಿಗಳನ್ನೆ ದುರಾದಾಗ. ಉಪನಿಷತ್ತುಗಳ ಪ್ರಕಾರ ಆತ್ಮವೆಂಬುದು ಅವಿನಾಶಿಯಾದುದು, ನಿತ್ಯವಾದುದು, ಶುದ್ಧಾಸ್ತಿತ್ವವುಳ್ಳದು ಮತ್ತು ವಸ್ತು ಪ್ರಪಂಚದಲ್ಲಿನ ಯಾವುದೇ ಬದಲಾವಣೆಗಳಿಂದಲೂ ಪರಿಣಾಮಗೊಳ್ಳದ ನಿತ್ಯವಸ್ತು. ಪ್ರಭು ಅದು ಅರಿವಿಗೆ ಬರುವ ಕ್ರಿಯಾರೂಪವನ್ನು ವಿಶ್ಲೇಷಣೆಗೆ ಒಡ್ಡುತ್ತಾನೆ. ಜ್ಞಾನ-ಜ್ಞಾತೃ ಮತ್ತು ಜ್ಞೇಯಗಳ ಸಂಬಂಧ ರೂಪವನ್ನು ತೀರಾ ಸರಳವಾಗಿ ಆದರೆ ಅಷ್ಟೇ ದೃಢ ದನಿಯಿಂದ ಪ್ರಶ್ನಿಸುತ್ತಾನೆ. ಇಂದ್ರಿಯಾನುಭವಗಳ ಮೂಲಕ ಜ್ಞಾತೃ ಲೋಕ ವ್ಯವಹಾರವನ್ನು ನಡೆಸುತ್ತಾನೆ. ನೋಡುವ ನೋಟ, ಕೇಳುವ ಶಬ್ದ ಬೋಧೆಯಾಗುವುದು ಜ್ಞಾತೃವಿನಲ್ಲಿ ಶೇಖರಗೊಂಡಿರುವ ಸಂಸ್ಕಾರಗಳ ಮೂಲಕ. ಈ ಸಂಸ್ಕಾರಗಳೂ ಇದುವರೆಗಿನ ಪ್ರಾಪಂಚಿಕ ಅನುಭವಗಳ ಮಾದರಿಗಳೇ ಆಗಿದ್ದು ನಿತ್ಯ ಪರಿಷ್ಕಾರಕ್ಕೆ ಒಳಗಾಗುವ ಕೋಶಗಳಾಗಿವೆ. ಎದುರಿನ ವಸ್ತು, ಇಂದ್ರಿಯ ಸ್ಪರ್ಶ (ಸಂವೇದನೆ) ಮತ್ತು ಸಂಸ್ಕಾರಕೋಶ ಇವುಗಳ ನಡುವೆ ಸಂಬಂಧ ಉಂಟಾದರೆ ಬೋಧೆಯಾಗುವ ಕ್ರಿಯೆ ಜರುಗುತ್ತದೆ. ಇಲ್ಲಿ ಪಾಲ್ಗೊಳ್ಳುವ ಜ್ಞಾತೃವಿಗಾಗಲೀ, ಜ್ಞೇಯಕ್ಕಾಗಲೀ, ಜ್ಞಾನಕ್ಕಾಗಲೀ ಸ್ವತಂತ್ರ ಅಸ್ತಿತ್ವವಿಲ್ಲ. ಸಂಬಂಧದಲ್ಲಿ ಅಸ್ತಿತ್ವಕ್ಕೆ ಬಂದು ಸಂಬಂಧ ಭಂಗಗೊಂಡಾಗ ಅವೂ ಭಂಗಗೊಳ್ಳುತ್ತವೆ. ಜ್ಞಾತೃವಿಗೆ ಆತ್ಮವೆಂಬ ಶಾಶ್ವತ ಸ್ಥಿತಿಯನ್ನು ಆರೋಪಿಸಲು ಇಲ್ಲಿ ಪ್ರೇರಣೆಯೇ ಇಲ್ಲ. ಕಣ್ಣು ಕುರುಡಾದರೆ ಕಿವಿ ಕಿವುಡಾದರೆ, ಇಂದ್ರಿಯಗಳು ನಿಷ್ಕ್ರಿಯವಾದರೆ ಯಾವ ಕ್ರಿಯೆಯೂ ಜರುಗುವುದಿಲ್ಲ. ಕ್ರಿಯಾಹೀನ ಜಡಜಗತ್ತಿನಲ್ಲಿ ಆತ್ಮವೆಂಬುದು ಎಲ್ಲಿ ಎಂದು ಅಲ್ಲಮ ಪ್ರಶ್ನಿಸುತ್ತಾನೆ. ಇಂದ್ರಿಯಹೀನ ಸ್ಥಿತಿಯಲ್ಲಿ ಗೊಹೇಶ್ವರನಿಗಾದರೂ ಕುರುಹು ಯಾವುದು? ಎನ್ನುತ್ತಾನೆ. ಕುರುಹೆಂಬ ರಚನೆಗೆ ಗ್ರಾಸವನ್ನೊದಗಿಸುವುದೇ ಈ 'ಗ್ರಹಿಕೆ' ಎಂಬ ಪ್ರಕ್ರಿಯೆ. ಅದು ಸ್ತಬ್ಧವಾದಾಗ ಸಮಸ್ತವೂ ನಿರಚನೆಗೊಂಡ ಬಯಲು ಮಾತ್ರ.

ಕುರುಹು ನಿಜವಲ್ಲ. ಮತ್ತೊಂದನ್ನಾಧರಿಸಿ ಅಸ್ತಿತ್ವಕ್ಕೆ ಬರುವಂಥದ್ದು ಸ್ವತಂತ್ರ ಶಾಶ್ವತ ಅಸ್ತಿತ್ವವುಳ್ಳದ್ದಾಗಿರಲು ಸಾಧ್ಯವಿಲ್ಲ. ದರ್ಶನಗಳು ತಮ್ಮ ಚಿಂತನೆಯ ಶೃಂಗವನ್ನು ಮುಟ್ಟುವುದು ಆತ್ಮ, ಪರಬ್ರಹ್ಮದಂತಹ ಅಮೂರ್ತ ಮತ್ತು ಕರ್ಮದಂತಹ ನಿರ್ಣಯಾತ್ಮಕ ಮೂರ್ತ ಸಂಗತಿಗಳನ್ನೆ ದುರಾದಾಗ. ಉಪನಿಷತ್ತುಗಳ ಪ್ರಕಾರ ಆತ್ಮವೆಂಬುದು ಅವಿನಾಶಿಯಾದುದು, ನಿತ್ಯವಾದುದು, ಶುದ್ಧಾಸ್ತಿತ್ವವುಳ್ಳದು ಮತ್ತು ವಸ್ತು ಪ್ರಪಂಚದಲ್ಲಿನ ಯಾವುದೇ ಬದಲಾವಣೆಗಳಿಂದಲೂ ಪರಿಣಾಮಗೊಳ್ಳದ ನಿತ್ಯವಸ್ತು. ಪ್ರಭು ಅದು ಅರಿವಿಗೆ ಬರುವ ಕ್ರಿಯಾರೂಪವನ್ನು ವಿಶ್ಲೇಷಣೆಗೆ ಒಡ್ಡುತ್ತಾನೆ. ಜ್ಞಾನ-ಜ್ಞಾತೃ ಮತ್ತು ಜ್ಞೇಯಗಳ ಸಂಬಂಧ ರೂಪವನ್ನು ತೀರಾ ಸರಳವಾಗಿ ಆದರೆ ಅಷ್ಟೇ ದೃಢ ದನಿಯಿಂದ ಪ್ರಶ್ನಿಸುತ್ತಾನೆ. ಇಂದ್ರಿಯಾನುಭವಗಳ ಮೂಲಕ ಜ್ಞಾತೃ ಲೋಕ ವ್ಯವಹಾರವನ್ನು ನಡೆಸುತ್ತಾನೆ.

ಮಂಟೇಸ್ವಾಮಿ ಪರಂಪರೆಯಲ್ಲಿ ಅಲ್ಲಮನ ಲೋಕ ನಿರ್ಮಾಣ:

ಶೂನ್ಯ ಸಂಪಾದನೆಗಳನ್ನು ಸಂಕಲಿಸಿದ ಮನಸ್ಸು ಪ್ರಭುವಿನೆದುರಿಗೆ ಶೂನ್ಯ ಸಂಪಾದನೆಯ ಒಂದು ಮಹತ್ತರ ಜವಾಬ್ದಾರಿಯನ್ನು ಆರೋಪಿಸಿ, ಅದು ಸಿದ್ಧಿಸಿದ ಮೇಲೆ ಬಸವಾದಿ ಶರಣರಿಗೆ ಅದನ್ನು ತೋರಗೊಡುವ ಒಂದು ಮಹತ್ಸಂಕಲ್ಪವನ್ನು ತಾನು ಹೊತ್ತಿದೆ. ಅವರಿಗೆ ಶೂನ್ಯ ಸಿಂಹಾಸನದಲ್ಲಿ ಪ್ರಭುವನ್ನು ಪ್ರತಿಷ್ಠಾಪಿಸುವ ಪ್ರತಿಜ್ಞೆ ಇದೆ. ವೀರಶೈವ ಕವಿಗಳಿಗೆ ಇರುವ ಮಾನವಾನುಕಂಪದ ಜೊತೆಗೆ ಪಾಂಥಿಕ ನಿಷ್ಠೆಯೂ ಇದೆ. ಮಂಟೇಸ್ವಾಮಿಯ ಪರಂಪರೆಗೆ ಸೂತಕ-ನಿರ್ಮಾಲ್ಯಗಳ, ಶುದ್ಧಾಶುದ್ಧಗಳ ಕಲ್ಪನೆ ಇಲ್ಲ. ಲೋಕರಚನೆಯನ್ನು ತನ್ನಿಂತಾನೇ ಮಾಡಿಕೊಳ್ಳಲಾಗಲೀ, ದೈವ, ಪರಬ್ರಹ್ಮ ಇತ್ಯಾದಿ ಪರದಿಂದ ಮಾಡಿಸಲಾಗಲೀ, ಅವೆರಡರಿಂದಾಗಲೀ ಆಗಗೊಡದೆ, ಲೋಕರಚನೆಯನ್ನು ವರ್ತಮಾನದ 'ಜ್ಯೋತಿಗೆ' ವಹಿಸುತ್ತಾರೆ. ಆ ವರ್ತಮಾನದ ಜ್ಯೋತಿಯನ್ನು ತಿಪ್ಪೆ ಮೇಲೆ, ಸಮಾಧಿ ಮೇಲೆ ಉರಿಯಲಿಟ್ಟು ಸೂತಕ-ನಿರ್ಮಾಲ್ಯಗಳ ನಿರಸನವನ್ನು ಸಾಧಿಸಿ ಕೊಂಡೇ (ಸಹಜವಾಗಿಸಿಕೊಂಡು ಎನ್ನುವುದೇ ಸರಿ) ಲೋಕನಿರ್ಮಿತಿಗೆ ತೊಡಗಿಸುತ್ತಾರೆ. ಭೂಲೋಕ, ಸೂರ್ಯ-ಚಂದ್ರ, ಬ್ರಹ್ಮ, ವಿಷ್ಣು, ಈಶ್ವರನನ್ನು ಈ ಪರಂಜ್ಯೋತಿ ಸ್ವರೂಪಿಯಾದ ಪ್ರಭುದೇವರು ಸೃಷ್ಟಿಸುತ್ತಾರೆ.

ಆದಿ ಒಳಗಲ ಜ್ಯೋತಿ ಬೀದಿ ಒಳಗಲ ಜ್ಯೋತಿ
ಅಂಗೈಲಿ ಉರಿವಂಥ ಜ್ಯೋತಿ
ಮುಂಗೈಲಿ ಉರಿವಂಥ ಜ್ಯೋತಿ
ತಿಪ್ಪೆ ಮೇಲೆ ಕಸಿ ಮಡಗಿದ್ರೆ ದೇವಾ
ಭಿನ್ನ ಬೇಧವಿಲ್ಲದಂತೆ ಉರಿವಂತ ಪರಂಜ್ಯೋತಿ
ಸತ್ತವರ ಸಮಾದಿ ಮ್ಯಾಲೆ ಕಸಿ ಮಡಗಿದ್ರೆ ಗುರುವೂ
ಏಕವಾಗಿ ಉರಿವಂಥ ಜಗಂಜ್ಯೋತಿ
ಮೂರು ಕೂಟದ ದಾರಿವೊಳಗೆ ಮಡಗಿದ್ರೆ ಸ್ವಾಮಿ
ಭಿನ್ನ ಬೇಧವಿಲ್ಲದಂತೆ ಉರಿವಂತ ಪರಂಜ್ಯೋತಿ
ಇಂತಹ ಜ್ಯೋತಿ ತಂದವರು ಗುರುವು
ಜ್ಯೋತಿರ್ಲಿಂಗಪ್ಪ
ಅಲ್ಲಮಪ್ರಭು
ಮಂಟೇದಲಿಂಗಯ್ಯ
ಕಂಡಾಯ್ತು ಜ್ಯೋತಿ. . . .
ಇಂತಹ ಭೂಮಿ ಪಡೆದವರು
ನನ್ನ ಭೂಲೋಕ ಪಡೆದವರು.
ಇಂತಹ ಭೂಮಿ ಪಡೆದವರು
ನನ್ನ ಭೂಲೋಕ ಪಡೆದವರು
ಸೂರ್ಯನ ಪಡೆದವರು
ನಮ್ಮ ಚಂದ್ರನ ಪಡೆದವರು
ವಿಷ್ಣುವ ಪಡೆದವರು
ನನ್ನ ಈಶ್ವರನ ಪಡೆದವರು
ಗುರುಬ್ರಹ್ಮನ ಪಡೆದವರು
ಕೈಲಾಸ ಪಡೆದವರು
ಕಲ್ಯಾಣ ಪಡೆದವರು
ಇಂತಹ ಭೂಮಿ ಪಡೆದದ್ದಕ್ಕೆ ದೇವಾ ॥ಸಿದ್ದಯ್ಯ॥
ಭೂಮಿಗೂ ದೊಡ್ಡವರು ಎಂದರು
ಇಂತಹ ಧರೆಯ ತರುಲಾಗಿ ನಿಮ್ಮ
ಧರೆಗೆ ದೊಡ್ಡೋರು ಎಂದರು ॥ಸಿದ್ದಯ್ಯ॥

-ಇದು ಮಂಟೇಸ್ವಾಮಿ ಕಾವ್ಯದ "ಜಗತ್ತು ಸೃಷ್ಟಿಯ ಸಾಲು" ಇದರ ಇನ್ನೊಂದು 'ಓದನ್ನು' ಹೀಗೆ ಮಾಡಬಹುದು.

1. ಎಲ್ಲ ದರ್ಶನಗಳಿಗಿರುವಂತೆ ಈ ಪರಂಪರೆಗೆ ಸಹ ಲೋಕ ಸೃಷ್ಟಿಯ ಬಗೆಗೆ ತನ್ನದೇ ವಿವರಣೆ ಇದೆ.

2. ಈಗಾಗಲೇ ಹೇಳಿದಂತೆ ಜಗತ್ತು ಸೃಷ್ಟಿಯನ್ನು ತನ್ನಿಂದಲೇ ಆಗುವುದನ್ನಾಗಲೀ, ಪರದಿಂದ ಆಗುವುದನ್ನಾಗಲೀ, ಅವೆರಡರಿಂದುಂಟಾಗಲಾಗಲೀ ಬಿಡದೆ ಆ ಕ್ಷಣದ ಜ್ಯೋತಿಗೆ ಜಗತ್ತಿನ ಉತ್ಪತ್ತಿಯ ಕಾರಣವನ್ನು ಆರೋಪಿಸಲಾಗಿದೆ. ಈ ಜ್ಯೋತಿಗೆ ಆರೋಪಿಸಲು ಸಾಧ್ಯವಿರುವ ಪಾವಿತ್ರ್ಯವನ್ನು ಇಚ್ಛಾಪೂರ್ವಕವಾಗಿ ನಿರಸನಗೊಳಿಸಲಾಗದೆ. ಅದನ್ನು ಹಾದಿಯೊಳಗೆ ಬೀದಿಯೊಳಗೆ, ಅಂಗೈಲಿ-ಮುಂಗೈಲಿ ಇಡುವುದರ ಮೂಲಕ ಅದನ್ನು ಕಾಲಮುಕ್ತಗೊಳಿಸಲಾಗಿದೆ. ಅದನ್ನು ನಿರಂತರ ವರ್ತಮಾನದ ಪ್ರವಾಹರೂಪೀ ಶಕ್ತಿಯನ್ನಾಗಿ ನಿರೂಪಿಸಲಾಗಿದೆ.

3. ಪಾವಿತ್ರ್ಯ ಮತ್ತು ನೈರ್ಮಲ್ಯದ ವೈರುಧ್ಯಗಳು ಮೂಡದಿರಲಿ ಎಂದೇ ತಿಪ್ಪೆಯ ಮೇಲೆ, ಸಮಾಧಿಯ ಮೇಲೆ ಇಟ್ಟು ಜ್ಯೋತಿ ಭಿನ್ನಬೇಧವಿಲ್ಲದೆ ಉರಿಯುವ ಜ್ಯೋತಿಯನ್ನಾಗಿಸಲಾಗಿದೆ.

4. ಮೂರು ಕೂಟದ ಹಾದಿಗೆ ಅನೇಕ ಅರ್ಥಗಳು ಸಾಧ್ಯ. ವಸ್ತು ಪ್ರಪಂಚದ ವಿವರಣೆಗೆ ಸಂಬಂಧಿಸಿದುದರಿಂದ ತ್ರಿಲಕ್ಷಣಗಳನ್ನೋ, ಕಾರ್ಯ-ಕಾರಣ-ಪ್ರತ್ಯಯಗಳ ಸಂಯೋಜನೆಯನ್ನೋ ಸೂಚಿಸುತ್ತಿರಲು ಸಾಧ್ಯ □

ಹಡಗಿನ ಅಭಿವೃದ್ಧಿಯ ಚಿತಾವಣೆ



ಕರ್ನಾಟಕದಲ್ಲಿ ಲೋಕಸಭೆಗೆ ಚುನಾವಣೆ ಅತ್ಯಂತ ತುರುಸಿನಿಂದ ನಡೆಯುತ್ತಿದೆ. ರಾಜಕೀಯ ಪಕ್ಷಗಳ ಧೃವೀಕರಣವೂ ನಡೆಯುತ್ತಿದೆ(ಹಾಗೆ ಭಾವಿಸುವುದಾದರೆ)ಮತ್ತು ರಾಜಕಾರಣಿಗಳ ಕ್ರಯ-ವಿಕ್ರಯವೂ ಗೋಪ್ಯವಾಗಿ ಮತ್ತು ಬಹಿರಂಗವಾಗಿ ಜೋರಿನಿಂದಲೇ ನಡೆಯುತ್ತಿವೆಯೆಂದು ಜನರು ಮಾತಾಡಿಕೊಳ್ಳುತ್ತಿದ್ದಾರೆ. ಈ ಪ್ರವೃತ್ತಿಯು ಯಾವ ಸ್ವರೂಪವನ್ನು ಪಡೆದಿದೆಯೆಂದರೆ ರಾಜಕೀಯ ಪಕ್ಷಗಳ ನಡುವೆ ಯಾವುದೆ ಭಿನ್ನತೆಯೇ ಇಲ್ಲದಂತಾಗಿದೆ. ಇಂದು ಪಕ್ಷಗಳ ವಿಚಾರ ಪ್ರಣಾಳಿಕೆಗಳು, ವೈಚಾರಿಕ ಬದ್ಧತೆ, ಜನತಂತ್ರದಲ್ಲಿನ ವಿಶ್ವಾಸ, ತಾತ್ವಿಕ ಭಿನ್ನಾಭಿಪ್ರಾಯ ಎಲ್ಲವು ವಿಕೃತಿಗೊಳಗಾಗಿ ಬಿಟ್ಟಿವೆ. ಪಕ್ಷ-ಪಕ್ಷಗಳ ನಡುವೆ ಮರುಹೊಂದಾಣಿಕೆಯ ಪ್ರಯತ್ನಗಳು ನಡೆಯುತ್ತಿವೆ. ಇದನ್ನು ರಾಜಕೀಯ ಧೃವೀಕರಣವೆನ್ನಬೇಕೋ ಅಥವಾ ರಾಜಕೀಯ ಅನುಕೂಲಸಿಂಧುವೆನ್ನಬೇಕೋ ತಿಳಿಯದಾಗಿದೆ. ಪಕ್ಷ-ಪಕ್ಷಗಳ ನಡುವೆ ರಾಜಕೀಯ ಧುರೀಣರ ವರ್ಗಾ-ವರ್ಗಿಗಳು(ಕ್ರಯ-ವಿಕ್ರಯ)ನಡೆಯುತ್ತಿವೆ. ಈ ದೃಷ್ಟಿಯಿಂದ ನೋಡಿದಾಗ ರಾಜಕೀಯ ಪಕ್ಷಗಳ ನಡುವೆ ಅಂತರ ಬಹಳ ಕಡಿಮೆಯಾಗುತ್ತಿದೆ ಅಥವಾ ಅಳಿಸಿಹೋಗುತ್ತಿದೆಯೆಂದು ಹೇಳಬಹುದು. ಯಾರು ಯಾವ ಪಕ್ಷದಲ್ಲಿದ್ದಾರೆಂಬುದೇ ತಿಳಿಯದಂತಾಗಿಬಿಟ್ಟಿದೆ. ಅವುಗಳ ನಡುವೆ ಭಿನ್ನತೆಯೇ ಇಲ್ಲದಂತಾಗುತ್ತಿದೆ. ದಿನ ಬೆಳಗಾದರೆ ರಾಜಕೀಯ ಧುರೀಣರು ಪಕ್ಷವನ್ನು ಬಟ್ಟೆ ಬದಲಾಯಿಸಿದಂತೆ ಬದಲಾಯಿಸುತ್ತಿದ್ದಾರೆ. ಅವರುಗಳಿಗೆ ಪಕ್ಷ ಬಿಡುವುದಾಗಲಿ ಅಥವಾ ಪಕ್ಷ ಸೇರುವುದಾಗಲಿ ಸಂಕೀರ್ಣವಾದ ಸಂಗತಿಯಾಗಿಲ್ಲ ಅಥವಾ ತಾತ್ವಿಕ ಸಂಗತಿಯಾಗಿಲ್ಲ. ಎಲ್ಲದಕ್ಕೂ ಧುರೀಣರು ಆಷಾಡಭೂತಿತನದ ಉತ್ತರ ನೀಡುತ್ತಿದ್ದಾರೆ.

ಇಲ್ಲಿ ಸಿದ್ಧಾಂತದ ಪ್ರಶ್ನೆಯಂತೂ ಉದ್ಭವವಾಗುವುದಿಲ್ಲ. ರಾಜಕೀಯ ಪಕ್ಷಗಳಿಗೆ ಅಧಿಕಾರ ಹಿಡಿಯವ, ಸ್ಥಾನ ಪಡೆಯುವ ಸಂಗತಿ ಮುಖ್ಯವೇ ವಿನಾ ಅದಕ್ಕಾಗಿ ಅನುಸರಿಸುತ್ತಿರುವ ಮಾರ್ಗ ಮುಖ್ಯ ವಲ್ಲವೇ ಅಲ್ಲ. ಇವರಿಗೆ ಗುರಿಯೇ ಮಾರ್ಗ, ಮಾರ್ಗವೇ ಗುರಿ. ಅಧಿಕಾರಕ್ಕಾಗಿ ಯಾವ ಪಕ್ಷವಾದರೂ ಸರಿಯೆ ಸೇರಿಬಿಡುತ್ತಾರೆ, ಯಾವ ಸಿದ್ಧಾಂತವಾದರೂ ಸರಿಯೇ ಒಪ್ಪಿಕೊಂಡು ಬಿಡುತ್ತಾರೆ. ಪಕ್ಷಗಳಿಗೂ ಜನರನ್ನು ಸೇರಿಸಿಕೊಳ್ಳಲು ಯಾವುದೆ ಸಂಕೋಚವಿಲ್ಲ. ಅಧಿಕಾರವನ್ನು ಭದ್ರಪಡಿಸಿಕೊಳ್ಳುವುದಕ್ಕಾಗಿ, ಅದನ್ನು ಊರ್ಜಿತಗೊಳಿಸಿಕೊಳ್ಳುವುದಕ್ಕಾಗಿ ಪಕ್ಷದಿಂದ ಪಕ್ಷಕ್ಕೆ ಜನರು ಜಿಗಿದಾಡುವುದನ್ನು ಹೆಮ್ಮೆಯಿಂದಲೇ ಪಕ್ಷಗಳು ಮತ್ತು ಅವುಗಳ ಧುರೀಣರು ಸಮರ್ಥಿಸಿಕೊಳ್ಳುತ್ತಿದ್ದಾರೆ.

ನನ್ನ ಮತಕ್ಷೇತ್ರ ಅಭಿವೃದ್ಧಿಯಾಗಬೇಕು! ಚುನಾಯಿತರಾದ ಶಾಸಕರು ಯಾವುದೇ ಬಿಡೆಯಿಲ್ಲದೆ ಆಳುವ ಪಕ್ಷದಲ್ಲಿದ್ದರೆ ಮಾತ್ರ ನನ್ನ ಮತಕ್ಷೇತ್ರವು ಅಭಿವೃದ್ಧಿಯಾಗುತ್ತದೆಯೆಂದು ದೊಡ್ಡ ಬಾಯಿಯಲ್ಲಿ ಹೇಳುತ್ತಿದ್ದಾರೆ. ಅದಕ್ಕಾಗಿ ಯಾವ ನಾಚಿಕೆ-ಹೇಸಿಕೆಯಿಲ್ಲದೆ ತಮ್ಮ ಪಕ್ಷವನ್ನು ತೊರೆದು ಆಳುವ ಪಕ್ಷವನ್ನು ಸೇರುತ್ತಿದ್ದಾರೆ. ಕೇಳಿದರೆ ಸಮೀಕರಣದೋಪಾದಿಯಲ್ಲಿ 'ಮತ ಕ್ಷೇತ್ರದ ಅಭಿವೃದ್ಧಿ'ಯೆಂಬ ಕಾರಣ ನೀಡುತ್ತಿದ್ದಾರೆ. ಈ ಜಿಗಿದಾಡುಪಿಕೆಯಿಂದಾಗಿ ಮರುಚುನಾವಣೆಗಳು ಅನಿವಾರ್ಯವಾಗಿ ಸರ್ಕಾರದ ಬೊಕ್ಕಸಕ್ಕೆ ಉಂಟಾಗುತ್ತಿರುವ ಅಪಾರ ಹಾನಿಯನ್ನು, ತೆರಿಗೆದಾರರಿಗೆ ಉಂಟಾಗುತ್ತಿರುವ ಅನವಶ್ಯಕ ಹೊರೆಯನ್ನು ಪಕ್ಷಗಳು ಒಪ್ಪಲು ಸಿದ್ಧವಿಲ್ಲ. ಇದು ಜನತಂತ್ರಕ್ಕೆ ಮಾಡಿದ ಮೋಸ, ಅಪಚಾರವೆಂಬುದನ್ನು ಅವರು ಮನಗಾಣುತ್ತಿಲ್ಲ. ಆಳುವ ಪಕ್ಷದ ಸದಸ್ಯರ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿ ನಡೆದರೆ ವಿರೋಧ ಪಕ್ಷದವರ ಮತಕ್ಷೇತ್ರಕ್ಕೆ ಮಾತ್ರ ಯಾವುದೇ ವಿಶೇಷ ಅನುದಾನವಿಲ್ಲ. (ಇಲ್ಲಿ ಅಗತ್ಯವಾಗಿ ರಾಜ್ಯದ ಒಂದು ಅತ್ಯಂತ ಹಿಂದುಳಿದ ತಾಲ್ಲೂಕಾದ ಹಡಗಲಿಗೆ ಸರ್ಕಾರವು 2008-09ರಲ್ಲಿ ಬಗೆದ ದ್ರೋಹವನ್ನು ನೆನಪಿಸಿಕೊಳ್ಳಬಹುದು. ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯ ಪ್ರಕಾರ ರಾಜ್ಯದಲ್ಲಿನ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕು ಒಂದು.

ಅದಕ್ಕಾಗಿ ಸರ್ಕಾರವು 2008-09ರಲ್ಲಿ ಹಡಗಲಿಗೆ ಒಂದು ಸರ್ಕಾರಿ ಎಂಜಿನಿಯರಿಂಗ್ ಕಾಲೇಜನ್ನು ನೀಡಿತು. ಆದರೆ ಇಲ್ಲದ-ಸಲ್ಲದ ನೆಪಗಳನ್ನು ಹೇಳಿಕೊಂಡು ರಾಜಕೀಯವಾಗಿ ಪ್ರಬಲರಾದ ಮಂದಿ ಬಳ್ಳಾರಿಗೆ ಅದನ್ನು ವರ್ಗಾಹಿಸಿಕೊಳ್ಳುವುದರಲ್ಲಿ ಯಶಸ್ವಿಯಾದರು. ರಾಜಕೀಯವಾಗಿ ಪ್ರಭಾವಶಾಲಿಗಳಾದವರು ಒತ್ತಡ ತರುವುದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಅಂತಹ ತಾರತಮ್ಯವಾದಿ ತೀರ್ಮಾನವನ್ನು, ಪ್ರಾದೇಶಿಕ ಸಮಾನತೆಗೆ ವಿರುದ್ಧವಾದುದ ಕ್ರಮವೊಂದನ್ನು ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾಗುತ್ತದೆಯೆಂದರೆ ಅದರ ಬಗ್ಗೆ ಏನನ್ನು ಹೇಳದಿರುವುದೇ ಲೇಸು. ಆದರೆ ಜನತಂತ್ರದಲ್ಲಿ ಒಂದು ಆಶಾಕಿರಣವಿದೆಯೆಂಬುದಿದೆ ಎಂಬುದಕ್ಕೆ ಇಲ್ಲೊಂದು ನಿದರ್ಶನವಿದೆ. ಜನರ ಒತ್ತಡಕ್ಕೆ ಮಣಿದು ಎಂಜಿನಿಯರಿಂಗ್ ಕಾಲೇಜನ್ನು ಬಳ್ಳಾರಿಗೆ ಒಯ್ದಿದ್ದ ಮಂದಿಯೇ ಈಗ ಅದು ತಮ್ಮ ವಿರುದ್ಧ ತಿರುಗುತ್ತಿರುವುದನ್ನು ತಿಳಿದು ಅದನ್ನು ಹಡಗಲಿಗೆ ವಾಪಸ್ಸು ನೀಡುವುದಾಗಿ (2009) ಈಗ ಆಶ್ವಾಸನೆ ನೀಡಿ ಸೋಲೊಪ್ಪಿಕೊಳ್ಳುತ್ತಿದ್ದಾರೆ. ಜನತಂತ್ರದಲ್ಲಿ ಜನರ ಒತ್ತಡಕ್ಕೆ ಜನಪ್ರತಿನಿಧಿಗಳು ಹೇಗೆ ತಲೆಬಾಗುತ್ತಾರೆಂಬುದಕ್ಕೆ ಇದೊಂದು ಉದಾಹರಣೆಯಾಗಬಲ್ಲದು).

ಶಾಸಕರು ತಮ್ಮ ಮತಕ್ಷೇತ್ರದಲ್ಲಿ ತಾವು ಶಿಫಾರಸ್ಸು ಮಾಡಿದ ಅಧಿಕಾರಿಗಳೇ ಇರಬೇಕೆಂದು ಒತ್ತಾಯಿಸುತ್ತಾರೆ. ಇದಕ್ಕೂ ಅವರು ಕೊಡುವ ಕಾರಣವೆಂದರೆ ಅಭಿವೃದ್ಧಿ. ತನಗೆ ಬೇಕಾದ ತಹಶೀಲ್ದಾರ್-ಪೊಲೀಸು ಅಧಿಕಾರಿ ಬೇಕೆಂದು ಬಹಿರಂಗವಾಗಿ ಶಾಸಕರು ಕೇಳತೊಡಗಿದ್ದಾರೆ. ಸರ್ಕಾರದಲ್ಲಿ ರೆವನ್ಯೂ ಮತ್ತು ಪೊಲೀಸು ಅಧಿಕಾರಿಗಳನ್ನು ನೇಮಿಸಲು ಏನು ಆಧಾರವಾಗಿರಬೇಕು? ಅದಕ್ಕೆ ನಿಯಮಗಳಿರಬೇಕೋ ಅಥವಾ ಶಾಸಕರ ಮರ್ಜಿಯಲ್ಲಿ ಅದು ನಡೆಯಬೇಕೋ? ಸರ್ಕಾರಗಳು ತನ್ನ ಶಾಸಕರು ನೀಡುವ ಎರಡನೆಯ ಕಾರಣವನ್ನು ಒಪ್ಪಿಕೊಂಡು ಮುಂದುವರಿಯುತ್ತಿವೆ. ಜನತಂತ್ರವೆನ್ನುವುದು ಇಂದು ನಗೆಪಾಟಲಿಗೀಡಾಗಿದೆ. ಒಂದು ಮತಕ್ಷೇತ್ರದ ಅಧಿಕಾರಿ ವರ್ಗಕ್ಕೂ ಮತ್ತು ಅಲ್ಲಿನ ಶಾಸಕರಿಗೂ ಸಂಬಂಧವಿರುವುದು ಅಪೇಕ್ಷಣೀಯವಲ್ಲ. ಸಂಬಂಧವು ಶಾಸನಾತ್ಮಕವಾಗಿರಬೇಕು. ಅಧಿಕಾರಿ ವರ್ಗವು ನಿಯಮಿಸಿದ ನಿಯಮಗಳಿಗನುಗುಣವಾಗಿ ಕೆಲಸ ಮಾಡ

ಚುನಾಯಿತರಾದ ಶಾಸಕರು ಯಾವುದೇ ಬಿಡೆಯಿಲ್ಲದೆ ಆಳುವ ಪಕ್ಷದಲ್ಲಿದ್ದರೆ ಮಾತ್ರ ನನ್ನ ಮತಕ್ಷೇತ್ರವು ಅಭಿವೃದ್ಧಿಯಾಗುತ್ತದೆಯೆಂದು ದೊಡ್ಡ ಬಾಯಿಯಲ್ಲಿ ಹೇಳುತ್ತಿದ್ದಾರೆ. ಅದಕ್ಕಾಗಿ ಯಾವ ನಾಚಿಕೆ-ಹೇಸಿಕೆಯಿಲ್ಲದೆ ತಮ್ಮ ಪಕ್ಷವನ್ನು ತೊರೆದು ಆಳುವ ಪಕ್ಷವನ್ನು ಸೇರುತ್ತಿದ್ದಾರೆ. ಕೇಳಿದರೆ ಸಮೀಕರಣ ದೋಪಾದಿಯಲ್ಲಿ 'ಮತಕ್ಷೇತ್ರದ ಅಭಿವೃದ್ಧಿ' ಯೆಂಬ ಕಾರಣ ನೀಡುತ್ತಿದ್ದಾರೆ. ಈ ಜಿಗಿದಾಡುವಿಕೆಯಿಂದಾಗಿ ಮರುಚುನಾವಣೆಗಳು ಅನಿವಾರ್ಯವಾಗಿ ಸರ್ಕಾರದ ಬೊಕ್ಕಸಕ್ಕೆ ಉಂಟಾಗುತ್ತಿರುವ ಅಪಾರ ಹಾನಿಯನ್ನು ತೆರಿಗೆದಾರರಿಗೆ ಉಂಟಾಗುತ್ತಿರುವ ಅನವಶ್ಯಕ ಹೊರೆಯನ್ನು ಪಕ್ಷಗಳು ಒಪ್ಪಲು ಸಿದ್ಧವಿಲ್ಲ. ಇದು ಜನತಂತ್ರಕ್ಕೆ ಮಾಡಿದ ಮೋಸ, ಅಪಚಾರವೆಂಬುದನ್ನು ಅವರು ಮನಗಾಣುತ್ತಿಲ್ಲ. ಆಳುವ ಪಕ್ಷದ ಸದಸ್ಯರ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿ ನಡೆದರೆ ವಿರೋಧ ಪಕ್ಷದವರ ಮತಕ್ಷೇತ್ರಕ್ಕೆ ಮಾತ್ರ ಯಾವುದೇ ವಿಶೇಷ ಅನುದಾನವಿಲ್ಲ.

ಬೇಕೇ ವಿನಾ ಶಾಸಕರ ಮರ್ಜಿಯಂತೆ ನಡೆಯಬಾರದು. ಆದರೆ ಇಂದು ಅಧಿಕಾರಿಗಳ ವರ್ಗಾ ವರ್ಗಿಯು ಒಂದು ಬೃಹತ್ ಉದ್ದಿಮೆಯಾಗಿ ಬಿಟ್ಟಿದೆ. ಅದಕ್ಕಾಗಿ ನಿಯಮ ಮಾಡುವ ಕೆಲಸ ಹಿಂದೆ ಬಿದ್ದು ಶಾಸಕರ ಶಿಫಾರಸ್ಸು ಮುಂದೆ ಬಂದು ಬಿಟ್ಟಿದೆ. ನಮ್ಮ ಜನತಂತ್ರವು ನಿಯಮಗ ಳಿಗನುಗುಣವಾಗಿ ನಡೆಯುತ್ತಿಲ್ಲ. ಅದು ಶಾಸಕರ, ಮಂತ್ರಿ -ಮಹೋದಯರ ನಿರ್ದೇಶಕ್ಕನುಗುಣವಾಗಿ ನಡೆಯು ವಂತಾಗಿದೆ. ಜನತಂತ್ರವೆನ್ನುವುದು ಇಂದು ಅರ್ಥರಹಿತ ಸಂಗತಿಯಾಗಿದೆ.

ಚುನಾವಣೆ ಮತ್ತು ಅಭಿವೃದ್ಧಿ

ಈಗಾಗಲೇ ಹೇಳಿದಂತೆ ಚುನಾವಣೆಯು ರಾಜ್ಯ ದಲ್ಲಿ ಬಹಳ ತುರುಸಿನಿಂದ ನಡೆದಿದೆ. ಇಲ್ಲಿ ಜನರ ಆಸೆ-ಅಕಾಂಕ್ಷೆಗಳು ಮೂಲೆಗುಂಪಾಗಿ ಬಿಟ್ಟು ವೈಯುಕ್ತಿಕ ಸಂಗ ತಿಗಳೇ ಮುಖ್ಯವಾಗಿಬಿಟ್ಟಿವೆ. ಪ್ರಾದೇಶಿಕ ಅಸಮಾನತೆಯಾ ಗಲಿ ಅಥವಾ ಲಿಂಗ ಸಮಾನತೆಯ ಪ್ರಶ್ನೆಯಾಗಲಿ ಇಲ್ಲಿ ಮುಖ್ಯವಾಗುತ್ತಿಲ್ಲ. ಎಲ್ಲ ಪಕ್ಷಗಳೂ ಮಹಿಳೆಯರ ವಿಷಯ ದಲ್ಲಿ ಅನುಕಂಪದಿಂದ ಮಾತಾಡುತ್ತವೆ. ಆದರೆ ಚುನಾವಣೆ ಯಲ್ಲಿ ಮಾತ್ರ ಅವು ಮಹಿಳೆಯರಿಗೆ ಸ್ಥಾನ ನೀಡುವುದಿಲ್ಲ. ಕೇಳಿದರೆ ಗೆಲ್ಲುವಂತಹ ಅಭ್ಯರ್ಥಿಗಳಿಲ್ಲವೆಂದು ಗೋಳಾಡು ತ್ತವೆ. ಗೆಲ್ಲುವ ಅಭ್ಯರ್ಥಿಗಳು ಯಾವಾಗ ಯಾವ ಪಕ್ಷಗಳಿಗೆ ದೊರೆಯುತ್ತಾರೆ? ಈ ಬಗ್ಗೆ ಪಕ್ಷಗಳು ಪ್ರಯತ್ನ ಮಾಡುತ್ತಿ ವೆಯೇ? ಕಾರ್ಯಕರ್ತರ ಪಡೆಯನ್ನು ಪಕ್ಷಗಳು ಬೆಳೆಸುತ್ತಿ ವೆಯೇ?ಅಯಾರಾಂ-ಗಯಾರಾಂ ಜಗತ್ತಿನಲ್ಲಿ ಸ್ವಾರ್ಥ ರಾಜಕಾರಣವು ಮೆರೆದಾಡುತ್ತಿರುವ ಮತ್ತು ಅದರಲ್ಲಿ ರಾಜಕಾರಣಿಗಳು ಬದುಕುತ್ತಿರುವ ಪ್ರಸ್ತುತ ಸಂದರ್ಭದಲ್ಲಿ 'ಕಾರ್ಯಕರ್ತರು'ಎಂಬುದು ಅರ್ಥ ಕಳೆದುಕೊಳ್ಳುತ್ತಿದೆ. ಕರ್ನಾಟಕದಲ್ಲಿ ಒಂದು ರಾಷ್ಟ್ರೀಯ ಪಕ್ಷವು ಎಲ್ಲ ಪಕ್ಷ ದಿಂದಲೂ ಜನರನ್ನು ಆಹ್ವಾನಿಸುತ್ತಾ ರಾತ್ರೋರಾತ್ರಿ ಪಕ್ಷ ಸೇರಿದವರಿಗೆಲ್ಲ ಲೋಕಸಭೆಗೆ ಸೀಟು ನೀಡುತ್ತಿದೆ. ಇಲ್ಲಿ ಪಕ್ಷದ ಕಾರ್ಯಕರ್ತರು ಎಂಬುದು ಅರ್ಥವಿಲ್ಲದ ಪ್ರಲಾಪ ವಾಗುತ್ತಿದೆ.

ಕರ್ನಾಟಕದ ದೃಷ್ಟಿಯಿಂದ ಪ್ರಸ್ತುತ ಚುನಾವಣೆ ಯಲ್ಲಿ ಹೋರಾಟದ ಪ್ರಮುಖ ವಿಷಯಗಳಾವುವು? ಯಾವುದೇ ಪಕ್ಷವೂ ಇಂದು ರಾಜ್ಯದಲ್ಲಿನ ಪ್ರಾದೇಶಿಕ ಅಸ ಮಾನತೆ ಬಗ್ಗೆ ಮಾತನಾಡುತ್ತಿಲ್ಲ. ಪಬ್ ಸಂಸ್ಕೃತಿ ಬಗ್ಗೆ ಹರಿಹಾಯುತ್ತಿದ್ದ ಪಕ್ಷವೊಂದು ಅದನ್ನು ನಿಷೇದಿಸುವ ಬಗ್ಗೆ ತನ್ನ ಪ್ರಣಾಳಿಕೆಯಲ್ಲಿ ಮಾತನಾಡಿಲ್ಲ. ಹಾಗಾದರೆ ಪಬ್ ಸಂಸ್ಕೃತಿಯ ಬಗ್ಗೆ ಅದು ಟೀಕೆ ಮಾಡಿದ್ದರ ಹಿಂದಿನ ಉದ್ದೇಶವೇನು? ಪಬ್ ಹೆಸರಿನಲ್ಲಿ ಮಹಿಳೆಯ ರನ್ನು ಹೀಗಳೆಯುವುದು ಅದರ ಉದ್ದೇಶವಾಗಿದ್ದಿರಬಹು ದೆಂದು ಭಾವಿಸಬಹುದಲ್ಲವೆ? ಪಬ್‌ಗಳನ್ನು ಟೀಕಿಸುವುದರ ಮೂಲಕ ಅಲ್ಲಿ ನಡೆದ ಮಹಿಳೆಯರ ಮೇಲಿನ ಆಕ್ರಮಣಕ್ಕೆ ಸಂಬಂಧಿಸಿದ ಮೂಲ ಪ್ರಶ್ನೆಯನ್ನು ದಿಕ್ಕು ತಪ್ಪಿಸಬಹು ದೆಂದು ಅದು ಭಾವಿಸಿರಬಹುದು. ಪಕ್ಷವೊಂದರ ಮುಖ ವಾಣಿಯಂತೆ ಮಾತನಾಡುವ ಸ್ವಾಮಿಯೊಬ್ಬರೂ ಸಹ ಪಬ್ ಸಂಸ್ಕೃತಿಯ ಬಗ್ಗೆ ತಮ್ಮ ಅಸಮಧಾನವನ್ನು ಮತ್ತು ವಿರೋಧವನ್ನು ವ್ಯಕ್ತಪಡಿಸಿದರು. ನಮ್ಮ ಹೆಣ್ಣು ಮಕ್ಕಳು ಪಬ್ ಸಂಸ್ಕೃತಿಗೆ ಮರುಳಾಗಬಾರದೆಂಬ ಉಪದೇಶವನ್ನು ಪುಕ್ಕಟ್ಟೆ ನೀಡಿದರು. ಪಬ್ ಸಂಸ್ಕೃತಿಯು ನಮ್ಮ ಸಂಪ್ರ ದಾಯಕ್ಕೆ ಸಲ್ಲದೆಂದು ಒಬ್ಬರು ಹೇಳ ಬೇಕಾದರೆ ಅದರ ಬಗ್ಗೆ ಅವರಿಗೆ ಅನುಭವವಿರಬೇಕು, ಅಥವಾ ಅದರ ಬಗ್ಗೆ ವಿವರವಾದ ಜ್ಞಾನವಿರಬೇಕು ಅಥವಾ ಅದರ ಬಗ್ಗೆ

ಕರ್ನಾಟಕದ ದೃಷ್ಟಿಯಿಂದ ಪ್ರಸ್ತುತ ಚುನಾವಣೆಯಲ್ಲಿ ಹೋರಾಟದ ಪ್ರಮುಖ ವಿಷಯಗಳಾವುವು? ಯಾವುದೇ ಪಕ್ಷವೂ ಇಂದು ರಾಜ್ಯದಲ್ಲಿನ ಪ್ರಾದೇಶಿಕ ಅಸಮಾನತೆ ಬಗ್ಗೆ ಮಾತನಾಡುತ್ತಿಲ್ಲ. ಪಬ್ ಸಂಸ್ಕೃತಿ ಬಗ್ಗೆ ಹರಿಹಾಯುತ್ತಿದ್ದ ಪಕ್ಷವೊಂದು ಅದನ್ನು ನಿಷೇದಿಸುವ ಬಗ್ಗೆ ತನ್ನ ಪ್ರಣಾಳಿಕೆಯಲ್ಲಿ ಮಾತನಾಡಿಲ್ಲ. ಹಾಗಾದರೆ ಪಬ್ ಸಂಸ್ಕೃತಿಯ ಬಗ್ಗೆ ಅದು ಟೀಕೆ ಮಾಡಿದ್ದರ ಹಿಂದಿನ ಉದ್ದೇಶವೇನು? ಪಬ್ ಹೆಸರಿನಲ್ಲಿ ಮಹಿಳೆಯರನ್ನು ಹೀಗಳೆಯುವುದು ಅದರ ಉದ್ದೇಶವಾಗಿದ್ದಿರಬಹುದೆಂದು ಭಾವಿಸಬಹುದಲ್ಲವೆ? ಪಬ್‌ಗಳನ್ನು ಟೀಕಿಸುವುದರ ಮೂಲಕ ಅಲ್ಲಿ ನಡೆದ ಮಹಿಳೆಯರ ಮೇಲಿನ ಆಕ್ರಮಣಕ್ಕೆ ಸಂಬಂಧಿಸಿದ ಮೂಲ ಪ್ರಶ್ನೆಯನ್ನು ದಿಕ್ಕು ತಪ್ಪಿಸಬಹುದೆಂದು ಅದು ಭಾವಿಸಿರಬಹುದು.

ಸಾಕಷ್ಟು ಓದಿಕೊಂಡಿರಬೇಕು. ಈ ಸ್ವಾಮಿಗಳು ಪಬ್‌ಗಳ ನಿಷೇದವನ್ನು ಮಾತ್ರ ಒತ್ತಾಯ ಮಾಡುತ್ತಿಲ್ಲ. ಇದರರ್ಥ ವೇನು? ಅವರ ಪ್ರಕಾರ ಪಬ್ ಮಹಿಳೆಯರಿಗೆ ಮಾತ್ರ ಕೆಟ್ಟ ಸಂಗತಿ. ಅಲ್ಲಿ ಪುರುಷರು ಭಾಗವಹಿಸಿದರೆ ಅದೇನು ಸಂಸ್ಕೃತಿಗೆ ದಕ್ಕೆಯಾಗುವುದಿಲ್ಲವೆಂಬುದು ಅವರ ಇಂಗಿತ ವಿದ್ದಂತೆ ಕಾಣುತ್ತದೆ. ಹಾಗಾದರೆ ಧರ್ಮವೆನ್ನುವುದು ಪುರುಷರಿಗೆ ಬೇರೆ, ಮಹಿಳೆಯರಿಗೆ ಬೇರೆ ಇರುತ್ತ ದೆಯೇ? ಒಂದು ವೇಳೆ ಹಾಗಿದ್ದರೆ ಅದು ತಾರತಮ್ಯವಾದಿ ಯಾಗುವುದಿಲ್ಲವೇ? ಧರ್ಮವು ಜನರಲ್ಲಿ ತಾರತಮ್ಯವೆಸ ಗಬಹುದೇ?(ಈ ಪಬ್ ಬಗ್ಗೆ ಟೀಕೆ ಮಾಡಿದ ಸ್ವಾಮಿಗಳಿಗೆ ಸಂಬಂಧಿಸಿದ ಮಠದಲ್ಲಿ ಗರ್ಭಗುಡಿಯೊಳಗೆ ಮಹಿಳೆಯ ರಿಗೆ ಪ್ರವೇಶವಿಲ್ಲ ಮತ್ತು ಅಲ್ಲಿ ವಿಗ್ರಹವನ್ನು ಮುಟ್ಟಿ ಮಹಿ ಳೆಯರು (ಮಹಿಳೆಯರು ಮಾತ್ರವಲ್ಲ, ಬೇರೆ ಜಾತಿಯ ಪುರುಷರೂ ಅಲ್ಲಿ ಪೂಜೆ ಮಾಡಲು ಅರ್ಹರಲ್ಲ) ದೇವ ರನ್ನು ಪೂಜೆ ಮಾಡುವಂತಿಲ್ಲ. ಈ ರೀತಿಯ ನಿಯಮ ಪಾಲಿಸುತ್ತಿರುವ ಸ್ವಾಮಿಗಳ ಸಂದರ್ಭದಲ್ಲಿ ತಾರತಮ್ಯ ಸಹ ಜವಾದುದಿರಬೇಕು). ಇಂತಹ ಸಂಗತಿಗಳ ಬಗ್ಗೆ ಚುನಾ ವಣೆಯಲ್ಲಿ ಚರ್ಚೆ ನಡೆಯುತ್ತಿಲ್ಲ. ಲಿಂಗ ಸಮಾನತೆ ಬಗ್ಗೆ ರಾಜಕೀಯ ಪಕ್ಷಗಳು ಚಕಾರವೆತ್ತುತ್ತಿಲ್ಲ.

ಹಂಗಿನ-ಯಾಚನೆಯ ಅಭಿವೃದ್ಧಿಯ ಪರಿಚಾರಕರು

ಚುನಾವಣೆಯಲ್ಲಿ ಮತದಾರರಿಗೆ ಹಣವನ್ನು ಬಹಿ ರಂಗವಾಗಿ ನೀಡುವುದು ಬೇರೆ. ಆದರೆ ಅದನ್ನು ಸಮರ್ಥಿ ಸಿಕೊಳ್ಳುವುದು ಬೇರೆ. ರಾಷ್ಟ್ರ ಮಟ್ಟದ ರಾಜಕೀಯ ಧುರೀ ಣರು ತಮ್ಮ ಮತಕ್ಷೇತ್ರದಲ್ಲಿ ಮತದಾರರಿಗೆ ಬಹಿರಂಗ ವಾಗಿ ಹಣ ನೀಡುವುದನ್ನು ಹೋಳಿಯ ನೆಪ ಮಾಡಿ ಕೊಂಡು ಹಬ್ಬದ ಕಾರಣ ಮಾಡಿಕೊಂಡು ಸಮರ್ಥಿಸಿಕೊ ಳ್ಳುತ್ತಿದ್ದಾರೆ. ಇದು ಒಂದು ಸಂಗತಿ. ಆದರೆ ಒಂದು ರಾಷ್ಟ್ರೀಯ ಪಕ್ಷದ ಹಿರಿಯ ನಾಯಕರೊಬ್ಬರು ಬಡವರಿಗೆ ಹಣ ನೀಡುವುದು ಯಾವ ರೀತಿಯಲ್ಲಿ ತಪ್ಪು ಎಂದು ಚುನಾವಣಾ ಆಯೋಗದ ಮೇಲೆ ಹರಿಹಾಯ್ದಿದ್ದಾರೆ. ಬಡವರಿಗೆ ಹಣ ನೀಡುವುದು ನನ್ನ ಪ್ರಕಾರ ಧರ್ಮ ವೆಂದು ಅವರು ವಿವರಣೆ ನೀಡಿದ್ದಾರೆ. ಧರ್ಮವನ್ನು ಆಚ ರಿಸುವುದು ಯಾವ ರೀತಿಯಲ್ಲಿ ಕಾನೂನಿನ ಉಲ್ಲಂಘನೆ ಯಾಗುತ್ತದೆಯೆಂದು ಚುನಾವಣಾ ಆಯೋಗಕ್ಕೆ ಅವರು ಪ್ರಶ್ನೆ ಹಾಕಿದ್ದಾರೆ. ಪರಮಾರ್ಥವಾದಿ ಪಕ್ಷದ ದೃಷ್ಟಿಯಿಂದ ಅದು ಸರಿಯಿರಬಹುದು. ಆದರೆ ಪ್ರಶ್ನೆ ದೇಶವನ್ನಾಳುವು ದಕ್ಕೆ ಪಣ ತೊಟ್ಟಿರುವ ಪಕ್ಷವೊಂದು ಅಭಿವೃದ್ಧಿಯನ್ನು, ಬಡತನದ ನಿವಾರಣೆಯನ್ನು, ದುಸ್ಥಿತಿಯ ಪರಿಹಾರವನ್ನು ಹೇಗೆ ಪರಿಭಾವಿಸಿಕೊಂಡಿದೆಯಂಬುದು ಇದರಿಂದ ಸ್ಪಷ್ಟ ವಾಗುತ್ತದೆ. ಬಡವರಿಗೆ ಹಣ ಕೊಟ್ಟು ಅವರ ಬಡತನ ವನ್ನು ಪರಿಹರಿಸುವುದು ಸಾಧ್ಯವೇ? ಇದು ಪಕ್ಷದ ಅಭಿ ವೃದ್ಧಿ ಪ್ರಣಾಳಿಕೆಯೆ? ಹಾಗಾದರೆ ಅಭಿವೃದ್ಧಿ ಕಾರ್ಯಕ್ರಮ ಗಳೇಕೆ ಬೇಕು? ಅಂದರೆ ಈ ಪಕ್ಷದ ಪ್ರಕಾರ ಜನರು ದುಡ್ಡಿದ್ದವರ ಹಂಗಿನಲ್ಲಿರಬೇಕೆಂದಾಯಿತು. ಇವರಿಂದ ಹಣ ಪಡೆದವರ ಗುಂಪಿನಲ್ಲದ್ದವರೆಲ್ಲ ಬಡವರೆಂದು ಹೇಗೆ ಹೇಳುವುದು? ನಮಗೆ ತಿಳಿದಿರುವಂತೆ ಕರ್ನಾಟಕದಲ್ಲಿ ಬಡವರನ್ನು ಗುರುತಿಸುವುದಕ್ಕಾಗದೆ ಎರಡು ಸರ್ಕಾರಗಳು ವಿಫಲವಾಗಿವೆ. ವರಮಾನದ ಆಧಾರದ ಮೇಲೆ ಬಡವ ರನ್ನು ಗುರುತಿಸುವುದು ಸರಳವಾದ ಮತ್ತು ಸುಲಭವಾದ ಕಾರ್ಯವೇನಲ್ಲ. ಆದರೆ ಈ ಪಕ್ಷದ ನಾಯಕರು ಸಲೀ ಸಾಗಿ ಬಡವರಿಗೆ ಹಣ ನೀಡುವುದು ನನ್ನ ಧರ್ಮವೆನ್ನುತ್ತಿ ದ್ದಾರೆ.

ಅನುಕಂಪ ಮತ್ತು ಬದ್ಧತೆ

ಅಭಿವೃದ್ಧಿಗೆ ಸಂಬಂಧಿಸಿದಂತೆ ಅಮರ್ತ್ಯಸೇನ್ ಎರಡು ಮಾರ್ಗಗಳ ಬಗ್ಗೆ ಮಾತನಾಡುತ್ತಾನೆ. ಮೊದಲನೆ ಯದು ಅನುಕಂಪದ ಧೋರಣೆ ಮತ್ತು ಎರಡನೆಯದು ಬದ್ಧತೆಯ ದೃಷ್ಟಿಕೋನ. ಬಡವರಿಗೆ ಹಣ ನೀಡುವುದನ್ನು ಸಮರ್ಥಿಸಿಕೊಂಡ ರಾಜಕೀಯ ಧುರೀಣರು ಪ್ರತಿನಿಧಿಸುವ ಪಕ್ಷವು ಅಭಿವೃದ್ಧಿಯ ಬಗ್ಗೆ ಅನುಕಂಪದ ಧೋರಣೆ ತಳೆ ದಿರುವಂತೆ ಕಾಣುತ್ತಿದೆ. ಬಡವರಿರುವುದರಿಂದ ಅವರಿಗೆ ಕಸಿವಿಸಿಯಾಗುತ್ತದೆ. ಅದಕ್ಕಾಗಿ ಅದು ನಿವಾರಣೆಯಾಗ ಬೇಕು. ಬಡತನದ ನಿವಾರಣೆಯಿಂದ ಬಡವರ ಬದುಕು ಹಸನಾಗುತ್ತದೆ ಅನ್ನುವ ಕಾರಣಕ್ಕೆ ಬಡತನ ನಿವಾರಣೆಯಾ ಗಬೇಕೆಂಬುದು ಇಲ್ಲಿ ಉದ್ದೇಶವಿಲ್ಲ. ಬಡವರಿಂದಾಗಿ ಬಡ ವರಲ್ಲದವರು ನೋವು ಅನುಭವಿಸುವಂತಾಗಬಾರದು. ಬಡವರಲ್ಲದವರ ಹಿತಾಸಕ್ತಿಯ ರಕ್ಷಣೆಗಾಗಿ ಬಡತನ ನಿವಾ ರಣೆಯಾಗಬೇಕು ಎಂಬುದು ಅನುಕಂಪ ದೃಷ್ಟಿಕೋನ. ಇದು ಈಗಾಗಲೆ ನನ್ನ ಅಂಕಣದ ಲೇಖನಗಳಲ್ಲಿ ಮತ್ತೆ ಮತ್ತೆ ಹಂಗಿನ ಮತ್ತು ಹಕ್ಕಿನ ಅಭಿವೃದ್ಧಿ ಪ್ರಣಾಳಿಕೆ ಬಗ್ಗೆ ಸಾಕಷ್ಟು ಚರ್ಚೆ ಮಾಡಲಾಗಿದೆ. ಇದು ಬಡವರಿಗೆ ಯಾಚ ನೆಯ ಬದುಕನ್ನು ಮಾತ್ರ ನೀಡಬಹುದು. ಸ್ವಾಭಿಮಾನದ, ಘನತೆಯ, ಹಕ್ಕಿನ ಅಭಿವೃದ್ಧಿಯನ್ನು ಅದು ನೀಡಲಾರದು. ಇಂತಹ ಅಭಿವೃದ್ಧಿಯನ್ನು ಪ್ರಣಾಳಿಕೆಯಲ್ಲಿ ಪ್ರತಿಪಾದಿಸು ತ್ತಿರುವ ಪಕ್ಷದ ಬಗ್ಗೆ ನಾವು ಎಚ್ಚರದಿಂದಿರಬೇಕು. ಮನುಷ್ಯ ಮನುಷ್ಯನನ್ನು ಮನುಷ್ಯನಂತೆ ಕಾಣುವಂತಾಗಬೇಕು. ಧಾರ್ಮಿಕ ಬುದ್ಧಿಯಿಂದ ಹಣ ಕೊಡುವವರ ದೃಷ್ಟಿಕೋ ನವು ಶ್ರೇಣೀಕೃತವಾಗಿರುತ್ತದೆ. ತಾವು ಹಣ ಕೊಡುವವರು ಮತ್ತು ಬಡವರು ಹಣ ಪಡೆದುಕೊಳ್ಳುವವರು. ಉಳ್ಳವ ರದು ನೀಡುವ ಕೈಯಾದರೆ ಉಳಿದವರದು ಯಾಚನೆಯ

ಕ್ಕೆ ಇದು ಅಸಮಾನತೆಯ ಅಭಿವೃದ್ಧಿ. ಇಂತಹ ತತ್ವವನ್ನು ಬೋಧಿಸುವ ಪಕ್ಷಕ್ಕೆ ಮತ ನೀಡಬೇಕಾದರೆ ನಾವು ಎರಡು ಸಾರಿ ಯೋಚಿಸಬೇಕಾಗುತ್ತದೆ. ಈ ಬಗೆಯ ಧೋರಣೆಯಲ್ಲಿ ಬಡತನ ನಿವಾರಣೆಯೆಂಬುದು ತಾತ್ವಿಕ ಪ್ರಶ್ನೆಯಲ್ಲ. ಅದಕ್ಕೆ ಅದು ತನ್ನ ಜೀವಿತಾವಧಿಯಲ್ಲಿ ಅಸ್ಪೃಶ್ಯತೆ ನಿವಾರಣೆ ಬಗ್ಗೆ ರಥಯಾತ್ರೆ ತೆಗೆಯುವುದಿಲ್ಲ. ಅನಕ್ಷರತೆ ನಿವಾರಣೆ ಬಗ್ಗೆ ಅದಕ್ಕೆ ಕಾಳಜಿಯಿಲ್ಲ. ಮೊನ್ನೆ ತಾನೆ ವಿಜಾಪುರದ ಪ್ರಸಿದ್ಧ ಪ್ರವಚನಕಾರ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಇಂದು ಶಾಲೆಗಳನ್ನು ಕಟ್ಟಿಸಬೇಕೆ ವಿನಾ ದೇವಾಲಯಗಳನ್ನಲ್ಲವೆಂದು ಉಪದೇಶ ನೀಡಿದ್ದಾರೆ. ಆದರೆ ರಾಷ್ಟ್ರೀಯ ಪಕ್ಷವೊಂದು ದೇವಾಲಯ ಕಟ್ಟುವುದನ್ನೇ ತನ್ನ ಪ್ರಣಾಳಿಕೆಯ ಮುಖ್ಯ ಧಾತುವನ್ನಾಗಿ ಮಾಡಿಕೊಂಡಿದೆ. ಇಂದು ನಮ್ಮ ಸಂದರ್ಭದಲ್ಲಿ ಬಡವರಿಗೆ, ವಂಚಿತರಿಗೆ, ಪರಿಶಿಷ್ಟರಿಗೆ, ಮಹಿಳೆಯರಿಗೆ ಏನುಬೇಕು ಎಂಬುದನ್ನು ಗುರುತಿಸಿಕೊಳ್ಳಲಾರದ ಪಕ್ಷವು ನಮಗೆ ಎಂತಹ ಸರ್ಕಾರ ಕೊಡಬಹುದು ಎಂತಹ ಅಭಿವೃದ್ಧಿಯನ್ನು ನೀಡಬಹುದು ಎಂಬುದನ್ನು ಗಂಭೀರವಾಗಿ ಪರಿಶೀಲಿಸಬೇಕು. ನಮ್ಮ ದೇಶದಲ್ಲಿ ಇವತ್ತಿಗೂ ಗುಡಿಕಟ್ಟುವ, ಮುಖ್ಯಮಂತ್ರಿ ಕಚೇರಿಯಲ್ಲಿ ಯಜ್ಞ-ಯಾಗ ಮಾಡುವ ಧೋರಣೆಯುಳ್ಳ ಮತ್ತು ಪಾರಮಾರ್ಥ ಪರಿಭಾಷೆಯನ್ನಾಡುವ ಪಕ್ಷಗಳಿದ್ದಾವೆ ಎಂಬುದೇ ಆಶ್ಚರ್ಯದ ಸಂಗತಿಯಾಗಿದೆ.

ನಮಗೆ ಬೇಕಾಗಿರುವುದು ಹಕ್ಕಿನ, ಸ್ವಾಭಿಮಾನದ ಅಭಿವೃದ್ಧಿ

ಅಮರ್ತ್ಯಸೇನ್ ಹೇಳುವಂತೆ ಬಡತನದ ನಿವಾರಣೆಗೆ, ಅಭಿವೃದ್ಧಿಗೆ ಬದ್ಧತೆಯ ದೃಷ್ಟಿಕೋನವೊಂದಿದೆ. ಬಡತನವಿರಬಾರದು. ಅದು ಜನತಂತ್ರಕ್ಕೆ ಒಂದು ಅಪಮಾನ. ಅದರ ನಿವಾರಣೆಯು ನಮ್ಮ ಬದ್ಧತೆಯೆಂಬ ದೃಷ್ಟಿಕೋನದ ಪ್ರಣಾಳಿಕೆ ನಮಗೆ ಬೇಕು. ಕೂಲಿಮಾಡಲು ಕೆಲಸಬೇಕು. ಅಲ್ಲಿನ ದುಡಿಮೆಗೆ ಕೂಲಿಬೇಕು. ಕೂಲಿ ನೀಡುವ ಕೂಲಿ ಕಾರ್ಯಕ್ರಮಬೇಕು. ಅನೇಕರು ತಪ್ಪಾಗಿ ತಿಳಿದಿರುವಂತೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯೆಂಬುದು ಸರ್ಕಾರವು ಬಡವರ ಉದ್ಧಾರಕ್ಕೆ ತಾನಾಗಿ ಜಾರಿಗೆ ತಂದ ಕಾರ್ಯತಂತ್ರವಲ್ಲ. ಅದಕ್ಕಾಗಿ ಅನೇಕ ದುಡಿಯುವ ವರ್ಗದ ಸಂಘಟನೆಗಳ ನಿರಂತರ ಮತ್ತು ಪರಿಜ್ಞಾನವುಳ್ಳ ಹೋರಾಟದ ಫಲವಾಗಿ ಜಾರಿಗೆ ಬಂದಿರುವ ಕಾರ್ಯಕ್ರಮವಾಗಿದೆ. ಈ ಕಾಯಿದೆಯಿಂದಾಗಿ ಉದ್ಯೋಗ ಜನರ ಹಕ್ಕಾಗಿ ಪರಿಣಮಿಸಿದೆ. ವಾಸ್ತವವಾಗಿ ಎನ್‌ಆರ್‌ಇಜಿಎ ಒಂದು ಹಕ್ಕಿನ ಅಭಿವೃದ್ಧಿ ಪ್ರಣಾಳಿಕೆ. ವರ್ಷದಲ್ಲಿ ನೂರು ದಿನಗಳ ದುಡಿಮೆಯು ಇದರಲ್ಲಿ ದೊರೆಯುತ್ತದೆ. ಇಲ್ಲಿ ಯಾರೂ ಹಣವನ್ನು ದತ್ತಿಯಾಗಿ ಅಥವಾ ದಾನವಾಗಿ ನೀಡುವುದಿಲ್ಲ. ದುಡಿಮೆಗಾರರು ಬೆವರು,ಕಣ್ಣೀರು ಮತ್ತು ರಕ್ತ ಹರಿಸಿ ದುಡಿದು ಗಳಿಸುವ ವರಮಾನ ಅದಾಗಿದೆ. ಯಜ್ಞ, ಯಾಗ, ಹವನಗಳನ್ನು ಬಹಿರಂಗವಾಗಿ, ಸಾರ್ವಜನಿಕವಾಗಿ ನಡೆಸುವ ಪ್ರಧಾನ ಮಂತ್ರಿ ನಮಗೆ ಬೇಡ. ಏಕೆಂದರೆ ಬಡತನವೆನ್ನುವುದು ಸಾಮಾಜಿಕ-ಆರ್ಥಿಕ ಸಂಗತಿಯೇ ವಿನಾ ಪೂರ್ವ ಜನ್ಮದ ಪಾಪವಾಗಲಿ ಅಥವಾ ಶಾಪವಾಗಲಿ ಅಲ್ಲ. ಅದನ್ನು ಮನುಷ್ಯ ಪ್ರಯತ್ನದಿಂದ ನಿವಾರಿಸಬಹುದು. ಯಜ್ಞ, ಯಾಗ, ಹವನದಿಂದ ಅದನ್ನು ನಿವಾರಿಸಲು ಸಾಧ್ಯವಿಲ್ಲ. ಅದರ ನಿವಾರಣೆಗೆ ಮತ್ತಾರದೋ ಅವತಾರವೂ ಬೇಕಾಗಿಲ್ಲ. ಕನ್ನಡದ ಪ್ರಸಿದ್ಧ ಕವಿ ಹೇಳಿದಂತೆ ಅಭಿವೃದ್ಧಿ ಯೆಂಬುದು ಯಾಕೆ ಬೇಕೆಂದರೆ 'ಸರೀಕರ ಮುಂದೆ ತಲೆಯೆತ್ತಿ ನಡೆಯಲಿಕ್ಕೆ' ಬೇಕು. ಆದರೆ ಬಡವರಿಗೆ ಧರ್ಮ ಬುದ್ಧಿಯಿಂದ ಹಣ ನೀಡುವವರು 'ತಲೆಯೆತ್ತಿ'ನಿಲ್ಲುವವರಿಗೆ ದಾನ ನೀಡುವುದಿಲ್ಲ. ಅವರಿಗೆ ಬೇಕಾಗಿರುವುದು ತಲೆ ತಗ್ಗಿಸಿ ನಮ್ರತೆಯಿಂದ ದಾಸ್ಯ ಮನೋಭಾವದಿಂದ ಹಣ ಪಡೆಯುವವರು ಬೇಕು(ಪ್ರಾಸಂಗಿಕವಾಗಿ ಹೀಗೆ ಬಡವರಿಗೆ ಹಣ ನೀಡುವುದು ಧರ್ಮದ ಕೆಲಸವೆಂದು ಹೇಳಿದ ಪಾರಮಾರ್ಥಿಕ ಪಕ್ಷದ ನೇತಾರ 'ರಾಜವಂಶ'ಕ್ಕೆ ಸೇರಿದವರೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು).ರಾಜವಂಶಸ್ಥರು ಅಧಿಕವಾಗಿರುವ ಪಕ್ಷ ಜನತಂತ್ರ ವ್ಯವಸ್ಥೆಯನ್ನು ಶುದ್ಧ ರೂಪದಲ್ಲಿ ನೀಡಲು ಸಾಧ್ಯವಿಲ್ಲ. ಆದ್ದರಿಂದ ನಮಗೆ ಬೇಕಾಗಿರುವುದು ಹಕ್ಕಿನ, ಘನತೆಯ, ಸರೀಕರ ಮುಂದೆ ತಲೆಯೆತ್ತಿ ನಿಲ್ಲುವಂತಹ ಮತ್ತು ಜನರನ್ನು ಒಳಗೊಳ್ಳುವಂತಹ ಧೋರಣೆಯ ಅಭಿವೃದ್ಧಿ ಪ್ರಣಾಳಿಕೆ.

ವಿದ್ವೇಷದ ರಾಜಕಾರಣ

ರಾಜಕಾರಣವನ್ನು ವಿದ್ವೇಷದ ಕೂಪವನ್ನಾಗಿ ಇಂದು ಮಾಡಲಾಗುತ್ತಿದೆ. ಈ ಬಗೆಯ ರಾಜಕಾರಣಕ್ಕೆ ಸುಮಾರು 18-19 ವರ್ಷಗಳ ಇತಿಹಾಸವಿದೆ. ಈ ಬಗೆಯ ರಾಜಕಾರಣವು 1991ರಲ್ಲಿ ಆರಂಭವಾಯಿತೆನ್ನಬಹುದು. ಅಭಿವೃದ್ಧಿಯ ಬಗ್ಗೆ, ಬಡತನದ ನಿವಾರಣೆ ಬಗ್ಗೆ, ಲಿಂಗ ಸಮಾನತೆ ಬಗ್ಗೆ, ಅನಕ್ಷರತೆ ಬಗ್ಗೆ, ಪರಿಶಿಷ್ಟರ ಬಗ್ಗೆ ಏನು ಹೇಳಲಾಗದವರು ಮಾತ್ರ ಇಂತಹ ವಿದ್ವೇಷದ ಪರಿಭಾಷೆ ಬಳಸಬೇಕಾಗುತ್ತದೆ. ಈ ಬಗೆಯ ಪರಿಭಾಷೆಯು ಹುಟ್ಟಲು ಕಾರಣವಾದ 1991ರ ಬೀಕರ ಕೋಮುದಳ್ಳುರಿಯ ಅಧ್ವರ್ಯರು ಇಂದು ನಮ್ಮ ದೇಶದ ರಾಜಕಾರಣದ ಚುಕ್ಕಾಣಿ ಹಿಡಿಯಲು ಮುಂದಾಗಿದ್ದಾರೆ. ವಿದ್ವೇಷದ ಪರಿಭಾಷೆಯ ಜನನಕ್ಕೆ ಕಾರಣರಾದವರ ರಾಜಕಾರಣದ ವ್ಯಾಪ್ತಿಯು ತುಂಬಾ ಸೀಮಿತವಾದುದಾಗಿರುತ್ತದೆ. ಜನತಂತ್ರದಲ್ಲಿ ಸಂಜಿಕೆಯಿಲ್ಲದವರು ಮಾತ್ರ 'ಕೈ ಕಡಿಯುವ' ಪರಿಭಾಷೆ ಮಾತನಾಡಬಲ್ಲರು. ನಮ್ಮ ಇಂದಿನ ಪ್ರಧಾನ ಮಂತ್ರಿಗಳು 'ಜನರನ್ನು ಒಳಗೊಳ್ಳುವ' ಅಭಿವೃದ್ಧಿ ಪ್ರಣಾಳಿಕೆ ಬಗ್ಗೆ ಮಾತನಾಡುತ್ತಿದ್ದಾರೆ. ಅವರ ಅಭಿವೃದ್ಧಿ ನೀತಿಯ ಇತಿಮಿತಿಗಳೇನೇ ಇರಲಿ. ಅವರು ವಿದ್ವೇಷದ ರಾಜಕಾರಣಕ್ಕೆ ವಿರುದ್ಧವಾದವರಾಗಿದ್ದಾರೆ. ಜನಸಮುದಾಯವನ್ನು ಒಡೆಯುವ ಮಾತನ್ನು ಅವರು ಆಡುತ್ತಿಲ್ಲ. ದ್ವೇಷವು ದ್ವೇಷವನ್ನು ಮಾತ್ರ ಹಡೆಯಬಲ್ಲದು. ಅಮೆರಿಕೆಯ ಒಬಾಮ ಕ್ರಾಂತಿಯಿಂದ ನಾವು ಪಾಠ ಕಲಿಯಬೇಕಾಗಿದೆ. ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್‌ನಿಂದ ಅಮೆರಿಕೆಯು ಪಾಠ ಕಲಿಯುವುದಾದರೆ ನಾವು ಮತ್ತೊಮ್ಮೆ ಗಾಂಧಿಯನ್ನು ಮರುಶೋಧಿಸಬೇಕಾಗಿದೆ. ಗಾಂಧಿಯದು ಜನರನ್ನು ಒಳಗೊಳ್ಳುವ ಪರಿಭಾಷೆಯಾಗಿತ್ತು. ಅವನದು ಅನೇಕರು ತಪ್ಪಾಗಿ ಭಾವಿಸಿರುವಂತೆ ಪಾರಮಾರ್ಥಿಕ ಪರಿಭಾಷೆಯಾಗಿರಲಿಲ್ಲ. ಅವನದು ಮೂಲತಃ ಅನುಭಾವದ ಪರಿಭಾಷೆಯಾಗಿತ್ತು. ಇವತ್ತು ರಾಷ್ಟ್ರೀಯ ಪಕ್ಷವೊಂದು ಮಾತನಾಡುತ್ತಿರುವ ಪಾರಮಾರ್ಥಿಕ ಪರಿಭಾಷೆಗೂ ಮತ್ತು ಗಾಂಧಿ ಮಾತನಾಡುತ್ತಿದ್ದ ಅನುಭಾವದ ಪರಿಭಾಷೆಗೂ ಭಿನ್ನತೆಯಿದೆ. ಪಾರಮಾರ್ಥಿಕತೆಯು ಸಾರಸಗಟಾಗಿ ಅನುಕರಣೆಯ ಸಂಗತಿ. ಆದರೆ ಅನುಭಾವವೆನ್ನುವುದು ವೈಯುಕ್ತಿಕ ಪ್ರಯೋಗದಿಂದ ಕಂಡುಕೊಂಡ ತಥ್ಯವಾಗಿದೆ. ಅದಕ್ಕೆ ಗಾಂಧಿ ತನ್ನ ಆತ್ಮಚರಿತ್ರೆಯನ್ನು 'ಸತ್ಯದೊಂದಿಗಿನ ಪ್ರಯೋಗ'ವೆಂದು ಕರೆದ. ಇಲ್ಲಿ ಸನಾತನವೆನ್ನುವುದನ್ನು ಕುರುಡು-ಕುರುಡಾಗಿ ಅನುಸರಿಸುವುದನ್ನು ಅವನು ನಂಬಿರಲಿಲ್ಲ. ಅದನ್ನು ತನ್ನ ಕಾಲದ ಅನುಭವಕ್ಕೆ ಒಳಪಡಿಸಿ ತಥ್ಯವನ್ನು ಪಡೆಯುತ್ತಿದ್ದ. ಅದರಂತೆ ನಡೆಯುತ್ತಿದ್ದ.

ರಾಜಕಾರಣವನ್ನು ವಿದ್ವೇಷದ ಕೂಪವನ್ನಾಗಿ ಇಂದು ಮಾಡಲಾಗುತ್ತಿದೆ. ಈ ಬಗೆಯ ರಾಜಕಾರಣಕ್ಕೆ ಸುಮಾರು 18-19 ವರ್ಷಗಳ ಇತಿಹಾಸವಿದೆ. ಈ ಬಗೆಯ ರಾಜಕಾರಣವು 1991ರಲ್ಲಿ ಆರಂಭವಾಯಿತೆನ್ನಬಹುದು. ಅಭಿವೃದ್ಧಿಯ ಬಗ್ಗೆ, ಬಡತನದ ನಿವಾರಣೆ ಬಗ್ಗೆ, ಏನು ಹೇಳಲಾಗದವರು ಮಾತ್ರ ಇಂತಹ ವಿದ್ವೇಷದ ಪರಿಭಾಷೆ ಬಳಸಬೇಕಾಗುತ್ತದೆ. ಈ ಬಗೆಯ ಪರಿಭಾಷೆಯು ಹುಟ್ಟಲು ಕಾರಣವಾದ 1991ರ ಬೀಕರ ಕೋಮುದಳ್ಳುರಿಯ ಅಧ್ವರ್ಯರು ಇಂದು ನಮ್ಮ ದೇಶದ ರಾಜಕಾರಣದ ಚುಕ್ಕಾಣಿ ಹಿಡಿಯಲು ಮುಂದಾಗಿದ್ದಾರೆ. ವಿದ್ವೇಷದ ಪರಿಭಾಷೆಯ ಜನನಕ್ಕೆ ಕಾರಣರಾದವರ ರಾಜಕಾರಣದ ವ್ಯಾಪ್ತಿಯು ತುಂಬಾ ಸೀಮಿತವಾದುದಾಗಿರುತ್ತದೆ.

ಇಂದು ನಾವು ವಿದ್ವೇಷದ ಪರಿಭಾಷೆಗೆ ಪ್ರತಿಯಾಗಿ ವಿಶ್ವಾಸದ ಪರಿಭಾಷೆಯನ್ನು ಸಶಕ್ತವನ್ನಾಗಿಸ ಬೇಕಾಗಿದೆ. ಅಂತಹ ಶಕ್ತಿಗಳನ್ನು ಬೆಳೆಸಬೇಕಾಗಿದೆ. ಈ ರೀತಿ ಚಿಂತಿಸುವ ಬಣವನ್ನು ಸಂಘಟಿಸಬೇಕು. ಶ್ರೀರಾಮ ಅಯೋಧ್ಯೆಯಲ್ಲಿ ಮಾತ್ರ, ಅಲ್ಲಿನ ಶ್ರೀರಾಮ ಮಂದಿರದಲ್ಲಿ ಮಾತ್ರ ಇದ್ದಾನೆಂದು ನಂಬುವವರಿಗೆ ಮತ್ತು ಅವನ ಹೆಸರಿನಲ್ಲಿ ವಿದ್ವೇಷದ ಕಿಚ್ಚನ್ನು ಹಬ್ಬಿಸುತ್ತಿರುವವರಿಗೆ ರಾಮಾಯಣವೂ ತಿಳಿದಿಲ್ಲ, ಶ್ರೀರಾಮನೂ ಗೊತ್ತಿಲ್ಲವೆಂದು ಹೇಳಬೇಕಾಗುತ್ತದೆ. ಕರ್ನಾಟಕದಲ್ಲಿ ಬಸವಣ್ಣನ ಅನುಯಾಯಿಗಳೆಂದು ಹೇಳಿಕೊಳ್ಳುವವರು ಅವನು ಬಿತ್ತಿರುವ ಪದಾರ್ಥವಾದಿ, ಆಲಯ ನಿರಾಕರಣವಾದಿ, ಮತ್ತು ಲಿಂಗ ಸಮಾನತಾವಾದಿ ಹಾಗೂ ಪರಿಶಿಷ್ಟವಾದಿ ಚಿಂತನೆಗೆ ವಿರುದ್ಧವಾದ ವಿಚಾರ ಪ್ರಣಾಳಿಕೆ ಬಿತ್ತುತ್ತಿರುವವರ ಅಡಿಯಾಳಾಗುತ್ತಿರುವವರು ಮತ್ತೊಮ್ಮೆ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅವರು ಬೋಧಿಸಿರುವ 'ಶಾಲೆಗಳನ್ನು ಕಟ್ಟಿಸಿ: ಗುಡಿಗಳನ್ನು ಕಟ್ಟಿಸಬೇಡಿ' ಎಂಬ ವಿಚಾರವನ್ನು ಮನನ ಮಾಡಿಕೊಂಡು ಪ್ರಸ್ತುತ ಚುನಾವಣೆಯಲ್ಲಿ ಮತನೀಡುವ ತೀರ್ಮಾನ ಮಾಡಬೇಕಾಗಿದೆ. 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಎಂಬ ವಿಶ್ವಾಸದ ಪರಿಭಾಷೆಯನ್ನು 850 ವರ್ಷಗಳ ಹಿಂದೆ ಪ್ರತಿಪಾದಿಸಿದ ವಚನ ಸಂಸ್ಕೃತಿಯ ವಾರಸುದಾರರಾದ ನಾವು ವಿದ್ವೇಷದ ಕೈ ಕಡಿಯುವ ಪರಿಭಾಷೆಗೆ ಮತ್ತು ರಾಜಕಾರಣಕ್ಕೆ ಸರಿಯಾದ ಪಾಠ ಕಲಿಸಬೇಕಾಗಿದೆ. ನಾವೆಲ್ಲ ವಿಶ್ವಾಸದ ಹರಿಕಾರರಾಗೋಣ ಬನ್ನಿ. ಅಂತಹ ರಾಜಕಾರಣದ ಬೀಜ ಬಿತ್ತೋಣ ಬನ್ನಿ. ನಮ್ಮ ತಳಿ ಬೆಳೆಸೋಣ ಬನ್ನಿ. □

ಅರವತ್ತು ವರ್ಷಗಳ ಪಾಪ

(37ನೇ ಪುಟದಿಂದ)

ಣದ ನಡುವೆಯೂ ಗಾಝಾದ ಜನತೆಗೆ ಯಾವುದೇ ನೆರವು ಒದಗಿಸಲು ಅಬ್ಬಾಸ್ ವಿರೋಧಿಸುತ್ತಾರೆ. ಅರಬ್ ದೇಶಗಳು ಹಾಮಾಸ್‌ಗೆ ಬೆಂಬಲ ಸೂಚಿಸಿದರೆ ಹಾಮಾಸ್ ಬಲಿಷ್ಠವಾಗುತ್ತದೆ ಎಂದು ಪ್ರತಿಪಾದಿಸುವ ಅಬ್ಬಾಸ್ ಹಾಮಾಸ್ ನಾಯಕರನ್ನು ಭೇಟಿ ಮಾಡಿದ ಅರಬ್ ನಾಯಕರ ವಿರುದ್ಧ ಕಿಡಿಕಾರಿದ್ದಾರೆ. ಜನವರಿ 9, 2009ಕ್ಕೆ ತನ್ನ ಅಧಿಕಾರಾವಧಿಯನ್ನು ಪೂರ್ಣಗೊಳಿಸಿರುವ ಫತಾಃ ಸಂಘಟನೆ, ಗಾಝಾ ಜನತೆಗೆ ಒದಗಿಸುವ ಎಲ್ಲ ನೆರವನ್ನು ತಮ್ಮ ಮೂಲಕವೇ ಸರಬರಾಜು ಮಾಡಬೇಕೆಂದು ಆಗ್ರಹಿಸುತ್ತಿದೆ. ಒಂದು ರೀತಿಯಲ್ಲಿ ಇಸ್ರೇಲ್‌ನ ದಾಳಿಗೆ ಪರೋಕ್ಷವಾಗಿ ಫತಾಃ ಸಂಘಟನೆ ಬೆಂಬಲ ನೀಡಿದ್ದು ಅರಬ್ ದೇಶಗಳನ್ನೂ ಇಕ್ಕಟ್ಟಿಗೆ ಸಿಲುಕಿಸಿದೆ.

ಈ ಸಂದರ್ಭದಲ್ಲಿ ಗಾಝಾದ ಜನತೆಯ ವಿರುದ್ಧ ಮಾರಣಾಂತಿಕ ಆಕ್ರಮಣ ನಡೆಸಿದ ಇಸ್ರೇಲಿ ಪಡೆಗಳು 821 ಜನರ ಬಲಿ ತೆಗೆದುಕೊಂಡಿದ್ದು, ಹತ್ತು ಸಾವಿರಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಾಮಾಸ್ ವಿರುದ್ಧ ದಾಳಿಮಾಡುವುದು ಅನಿವಾರ್ಯ ಎಂದು ಇಸ್ರೇಲ್ ಮತ್ತು ಇಸ್ರೇಲ್‌ನ ಬೆಂಬಲಿಗರು ಪ್ರತಿಪಾದಿಸುತ್ತಾರೆ. ಇಸ್ರೇಲನ್ನು ನಿರ್ನಾಮ ಮಾಡುತ್ತೇವೆ ಎಂಬ ಹಾಮಾಸ್‌ನ ಘೋಷಣೆಯನ್ನೇ ಆಧಾರವಾಗಿರಿಸಿಕೊಂಡು ಇಸ್ರೇಲ್ ಗಾಝಾ ಪಟ್ಟಿಯ ಮೇಲೆ ಆಕ್ರಮಣ ನಡೆಸಿತ್ತು. ಹಾಮಾಸ್ ಸಂಘಟನೆಯ ಉಗ್ರಗಾಮಿ ಲಕ್ಷಣಗಳನ್ನು ವಿರೋಧಿಸುವ ಜೋರ್ಡಾನ್, ಈಜಿಪ್ಟ್ ಮತ್ತಿತರ ಅರಬ್ ರಾಷ್ಟ್ರಗಳು ಇಸ್ರೇಲಿಗೆ ಪರೋಕ್ಷವಾಗಿ ಬೆಂಬಲಿಸುತ್ತಿವೆ. ಆದರೆ ಕಳೆದ ಆರು ದಶಕಗಳಿಂದಲೂ ಪಾಲೆಸ್ಟೈನಿಯರನ್ನು ನಿರ್ನಾಮ ಮಾಡುವುದಾಗಿ ಘೋಷಿಸುತ್ತಿರುವ ಇಸ್ರೇಲಿನ ಆಕ್ರಮಣಕಾರಿ ನೀತಿಯನ್ನು ಈ ರಾಷ್ಟ್ರಗಳು ಪ್ರಶ್ನಿಸದಿರುವುದು ದುರದೃಷ್ಟಕರ.

2005ರಲ್ಲಿ ಇಸ್ರೇಲ್ ಗಾಝಾ ಪಟ್ಟಿಯಿಂದ ಹಿಂದೆ ಸರಿದ ನಂತರ 18 ಜನ ಇಸ್ರೇಲಿಯರು ಗಾಝಾದ ವೈಮಾನಿಕ ದಾಳಿಗೆ ಬಲಿಯಾಗಿದ್ದಾರೆ. ಆದರೆ ಇದೇ ಅವಧಿಯಲ್ಲಿ ಇಸ್ರೇಲಿ ಸೇನೆಗಳು 2000ಕ್ಕೂ ಹೆಚ್ಚು ಪಾಲೆಸ್ಟೈನಿಯರ ಹತ್ಯೆಗೈದಿದೆ. ಪ್ರಸ್ತುತ ಸಮರದಲ್ಲಿ ಮೊದಲ ವಾರದಲ್ಲಿ ಗಾಝಾದ 400 ರಾಕೆಟ್‌ಗಳು ನಾಲ್ಕು ಇಸ್ರೇಲಿಯರನ್ನು ಬಲಿತೆಗೆದುಕೊಂಡಿತ್ತು. ಇದಕ್ಕೆ ಪ್ರತಿಯಾಗಿ ಇಸ್ರೇಲ್ ನಡೆಸಿದ ದಾಳಿಯಲ್ಲಿ 400 ಬಾಂಬು ಮತ್ತು ಕ್ಷಿಪಣಿಗಳಿಗೆ ಒಂದೇ ವಾರದಲ್ಲಿ 400 ಜನ ಬಲಿಯಾಗಿದ್ದಾರೆ. ಪ್ರಸ್ತುತ ದಾಳಿಯಲ್ಲಿ ಇಸ್ರೇಲ್ ಎಫ್ 16 ಜೆಟ್‌ಗಳು, ಚಾಲಕರಹಿತ ವೈಮಾನಿಕ ಕ್ಷಿಪಣಿ, ಅಪಾಚ್ ಹೆಲಿಕಾಪ್ಟರ್ ಮುಂತಾದ ಆಧುನಿಕ ಶಸ್ತ್ರಾಸ್ತ್ರಗಳನ್ನು ಬಳಸುತ್ತಿದ್ದರೆ, ಪಾಲೆಸ್ಟೈನಿಯರ ಬಳಿ ವೈಮಾನಿಕ ದಾಳಿಯಿಂದ ರಕ್ಷಿಸಿಕೊಳ್ಳುವ ಸಾಧನಗಳೂ ಇಲ್ಲದೆ, ಪ್ರಬಲ ಶಸ್ತ್ರಾಸ್ತ್ರಗಳಿಲ್ಲದೆ ದಾಳಿಗೆ ತುತ್ತಾಗುತ್ತಿದ್ದಾರೆ. ಹಾಮಾಸ್ ಸಂಘಟನೆಯನ್ನು ಸೋಲಿಸುವ ನಿಟ್ಟಿನಲ್ಲಿ ಇಡೀ ಗಾಝಾ ಪಟ್ಟಿಯ ಜನತೆಯ ಮೇಲೆ ಆಕ್ರಮಣ ಮಾಡುತ್ತಿರುವ ಇಸ್ರೇಲಿ ಪಡೆಗಳು, ಸರ್ಕಾರಿ ಕಟ್ಟಡಗಳೂ, ನಾಗರಿಕರ ಮನೆಗಳು, ಶಾಲಾ ಕಟ್ಟಡಗಳು ಎಲ್ಲವನ್ನೂ ಧ್ವಂಸಮಾಡುತ್ತಿವೆ. ತನ್ನ ರಾಜಕೀಯ ಉದ್ದೇಶಗಳ ಈಡೇರಿಕೆಗಾಗಿ ನಾಗರಿಕರ ಮೇಲೆ ದಾಳಿ ಮಾಡುತ್ತಿರುವ ಇಸ್ರೇಲಿ ಸೈನ್ಯಗಳ ಕ್ರಮವನ್ನು, ಇಸ್ರೇಲಿನ ಮೇಲೆ ದಾಳಿ ಮಾಡುತ್ತಿರುವ ಹಾಮಾಸ್‌ನ ಕೃತ್ಯವನ್ನೂ ಭಯೋತ್ಪಾದನೆಯ ಪರಿಧಿಯಲ್ಲೇ ವಿಶ್ಲೇಷಿಸಬೇಕಾಗುತ್ತದೆ. ಇತ್ತೀಚಿನ ಬೆಳವಣಿಗೆಯಲ್ಲಿ ಹಾಮಾಸ್ ಮತ್ತು ಫತಾಸ್ ಸಂಘಟನೆಗಳು ಒಂದಾಗುವ ಸೂಚನೆಗಳಿದ್ದರೂ, ಭ್ರಾತೃಘಾತಕ ಸಂಘರ್ಷಗಳು ಇಸ್ರೇಲಿಗೆ ಉಪಯುಕ್ತವಾಗುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಹಮಾಸ್ ಕಾರ್ಯಕರ್ತೆ

ಗಾಝಾದ ಜನತೆಯ ವಿರುದ್ಧ ಮಾರಣಾಂತಿಕ ಆಕ್ರಮಣ ನಡೆಸಿದ ಇಸ್ರೇಲಿ ಪಡೆಗಳು 821 ಜನರ ಬಲಿ ತೆಗೆದುಕೊಂಡಿದ್ದು, ಹತ್ತು ಸಾವಿರಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಾಮಾಸ್ ವಿರುದ್ಧ ದಾಳಿಮಾಡುವುದು ಅನಿವಾರ್ಯ ಎಂದು ಇಸ್ರೇಲ್ ಮತ್ತು ಇಸ್ರೇಲ್‌ನ ಬೆಂಬಲಿಗರು ಪ್ರತಿಪಾದಿಸುತ್ತಾರೆ. ಇಸ್ರೇಲನ್ನು ನಿರ್ನಾಮ ಮಾಡುತ್ತೇವೆ ಎಂಬ ಹಾಮಾಸ್‌ನ ಘೋಷಣೆಯನ್ನೇ ಆಧಾರವಾಗಿರಿಸಿಕೊಂಡು ಇಸ್ರೇಲ್ ಗಾಝಾ ಪಟ್ಟಿಯ ಮೇಲೆ ಆಕ್ರಮಣ ನಡೆಸಿತ್ತು. ಹಾಮಾಸ್ ಸಂಘಟನೆಯ ಉಗ್ರಗಾಮಿ ಲಕ್ಷಣಗಳನ್ನು ವಿರೋಧಿಸುವ ಈಜಿಪ್ಟ್ ಮತ್ತಿತರ ಅರಬ್ ರಾಷ್ಟ್ರಗಳು ಇಸ್ರೇಲಿಗೆ ಪರೋಕ್ಷವಾಗಿ ಬೆಂಬಲಿಸುತ್ತಿವೆ.

ಇಡೀ ಪ್ರಕರಣದ ಉದ್ದೇಶ ಇಸ್ರೇಲಿನ ಪರಮಾಧಿಕಾರವನ್ನು ಸ್ಥಾಪಿಸುವುದೇ ಆಗಿದೆ. 2006ರಲ್ಲಿ ಲೆಬನಾನ್ ವಿರುದ್ಧ ಸೋಲನುಭವಿಸಿದ ಇಸ್ರೇಲಿಗೆ ಈ ಯುದ್ಧದಲ್ಲಿ ಗೆಲುವು ಸಾಧಿಸುವುದು ರಾಜಕೀಯ ಅನಿವಾರ್ಯತೆಯಾಗಿದೆ. ಮತ್ತೊಂದೆಡೆ ಪಾಲೆಸ್ಟೈನಿಯರ ಹೋರಾಟವನ್ನು ಜೀವಂತವಾಗಿಡಲು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದು ಹಾಮಾಸ್ ಸಂಘಟನೆಗೂ ಅನಿವಾರ್ಯವಾಗಿದೆ. ಈ ಎರಡೂ ಬಣಗಳ ನಡುವೆ, 60 ವರ್ಷಗಳ ಹಿಂದೆ ತಮ್ಮ ಮೂಲನಿವಾಸದಿಂದ ಉಚ್ಚಾಟಿಸಲ್ಪಟ್ಟ ಪಾಲೆಸ್ಟೈನ್ ಜನತೆ ಬಲಿಪಶುಗಳಾಗುತ್ತಿದ್ದಾರೆ. ಪಾಲೆಸ್ಟೈನಿಯರ ಪ್ರಸ್ತುತ ಪರಿಸ್ಥಿತಿಗೆ ಅವರೇ ಹೊಣೆ ಎಂದು ಹೇಳುವ ಇಸ್ರೇಲ್ ಸರ್ಕಾರಕ್ಕೆ, ಗಾಝಾದಲ್ಲಿ ನೆಲೆಸಿರುವವರ ಪೈಕಿ ಶೇ. 80ರಷ್ಟು ಜನ 1948ರಲ್ಲಿ ತಮ್ಮ ತಾಯ್ನಾಡಿನಿಂದ ಉಚ್ಚಾಟಿಸಲ್ಪಟ್ಟು, ಆರು ದಶಕಗಳ ಕಾಲ ಇಸ್ರೇಲಿನ ಆಕ್ರಮಣಕ್ಕೆ ಬಲಿಯಾದವರು ಎಂಬ ಅಂಶ ಮನದಟ್ಟಾಗಬೇಕು.

ಇಸ್ರೇಲಿನ ದಾಳಿಯನ್ನು ಖಂಡಿಸುವ ನಿಟ್ಟಿನಲ್ಲಿ ವಿಶ್ವಾದಾದ್ಯಂತ ಪ್ರತಿಭಟನೆಗಳು ನಡೆಯುತ್ತಿದ್ದರೂ ನಾಗರಿಕ ಸಮಾಜದ ಒಂದು ವರ್ಗ ಇಸ್ರೇಲ್‌ನ ಕ್ರಮವನ್ನು ಭಯೋತ್ಪಾದನೆಯ ವಿರುದ್ಧ ನಡೆಯುತ್ತಿರುವ ಹೋರಾಟ ಎಂದು ಬಣ್ಣಿಸುವ ಮೂಲಕ, ಅಮಾನವೀಯ ಯುದ್ಧ ಪರಂಪರೆಯನ್ನು ಬೆಂಬಲಿಸುತ್ತಿರುವುದು ವಿಷಾದನೀಯ. 26–11ರ ಮುಂಬೈ ದಾಳಿಯ ಹಿನ್ನೆಲೆಯಲ್ಲಿ ಇಸ್ರೇಲ್ ಕೈಗೊಂಡ ಕ್ರಮವನ್ನೇ ಭಾರತವೂ ಅನುಸರಿಸಬೇಕೇ ಎಂಬ ಪ್ರಶ್ನೆಗಳೂ ಮಾಧ್ಯಮಗಳಲ್ಲಿ ವ್ಯಕ್ತವಾಗುತ್ತಿದೆ. ಆದರೆ ಮಾನವೀಯ ಸಂವೇದನೆಗಳನ್ನು ತುಚ್ಛವಾಗಿ ಕಾಣುವ ಇಸ್ರೇಲಿನ ದಮನಕಾರಿ ನೀತಿ ಭಾರತದ ಪ್ರಜಾತಾಂತ್ರಿಕ ವ್ಯವಸ್ಥೆಗೆ ದಾರಿದೀಪವಾಗಬೇಕಿಲ್ಲ.

1938ರ ನವಂಬರ್ 11ರ ಹರಿಜನ ಪತ್ರಿಕೆಯ ಸಂಪಾದಕೀಯದಲ್ಲಿ ಮಹಾತ್ಮಾಗಾಂಧಿಯವರು "ಇಂಗ್ಲೆಂಡ್ ಇಂಗ್ಲೀಷರಿಗೆ ಸೇರಿದಂತೆ, ಫ್ರಾನ್ಸ್ ಫ್ರೆಂಚ್ ಜನತೆಗೆ ಸೇರಿದಂತೆ, ಪಾಲೆಸ್ಟೈನ್ ಅರಬ್ಬರಿಗೆ ಸೇರಿದ ಪ್ರದೇಶ. ಯಹೂದಿಗಳನ್ನು ಅರಬ್ಬರ ಮೇಲೆ ಹೇರುವುದು ಅಮಾನವೀಯವಾಗುತ್ತದೆ. ಪಾಲೆಸ್ಟೈನ್ ಪ್ರದೇಶವನ್ನು ಯಹೂದಿಗಳಿಗೆ ಅವರ ಮೂಲಸ್ಥಾನದ ರೂಪದಲ್ಲಿ ಬಿಟ್ಟುಕೊಡುವುದು ಅರಬ್ಬರಿಗೆ ಅನ್ಯಾಯ ಮಾಡಿದಂತಾಗುವುದಷ್ಟೇ ಅಲ್ಲದೆ ಇಡೀ ಮನುಕುಲದ ವಿರುದ್ಧ ಅಪರಾಧವೆಸಗಿದಂತಾಗುತ್ತದೆ." ಎಂದು ಹೇಳುತ್ತಾರೆ. ಆದರೆ 60 ವರ್ಷಗಳಿಂದ ಇಸ್ರೇಲಿನಲ್ಲಿ ನಡೆಯುತ್ತಿರುವ ಕೋಮು ಹತ್ಯಾಕಾಂಡಗಳು, ಧಾರ್ಮಿಕ ಸಮುದಾಯಗಳ Ghettoi-sation ಪ್ರಕ್ರಿಯೆಗಳು ವಿಶ್ವದ ಅತಿ ದೊಡ್ಡ ಪ್ರಜಾತಂತ್ರವಾದ ಭಾರತದಲ್ಲೂ ನಡೆಯುತ್ತಿರುವುದು ಗಹನವಾದ ವಿಚಾರವಾಗಿದೆ. □

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅವರ್ಣೀಯರು

ಭಾರತದ ಜಾತಿವ್ಯವಸ್ಥೆ ಬ್ರಾಹ್ಮಣರನ್ನು ಹೊರತುಪಡಿಸಿ ಇತರ ಎಲ್ಲ ಜಾತಿಗಳಿಗೂ ಕೆಳಮಟ್ಟದ ಶ್ರೇಣಿಯನ್ನು ನೀಡಿದೆ. ಕ್ಷತ್ರಿಯರು ಕೂಡ ಬ್ರಾಹ್ಮಣರಿಗಿಂತ ಕೀಳು. ಶ್ರೇಣೀಕರಣ ಹೊಂದಿರುವ ಅಸಮಾನತೆಯ ವ್ಯವಸ್ಥೆಯಿಂದ ದಲಿತರು ಮಾತ್ರ ಹೊರಗುಳಿದ್ದಾರೆ.

ಜಾತಿವ್ಯವಸ್ಥೆಯಲ್ಲಿ ಹಲವಾರು ರೀತಿಯಲ್ಲಿ ತಾರತಮ್ಯಗಳಿದ್ದರೂ, ಜಾತಿಗುಂಪುಗಳು ಅತ್ಯಂತ ನಿರ್ಣಾಯಕವಾಗಿ ಸವರ್ಣೀಯರು ಮತ್ತು ಅವರ್ಣೀಯರಾಗಿ ಬೇರ್ಪಟ್ಟಿವೆ. ಶೂದ್ರರನ್ನು ಒಳಗೊಂಡಂತೆ ವರ್ಣ ಗುಂಪಿನಲ್ಲಿರುವ ಎಲ್ಲ ಜಾತಿಗಳು ತಮ್ಮದೇ ಆದ ಒಂದು ಪ್ರತ್ಯೇಕವಾದ ಜಗತ್ತನ್ನು ಕಟ್ಟಿಕೊಂಡಿವೆ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ವರ್ಣಗಳ ದಬ್ಬಾಳಿಕೆಗೆ ಒಳಗಾಗಿದ್ದರೂ ಶೂದ್ರವರ್ಗ 'ಅಪವಿತ್ರ' ಎಂಬ ಹಣೆಪಟ್ಟಿಯಿಂದ ಮುಕ್ತವಾಗಿದ್ದು ದ್ವಿಜರ ಅಡುಗೆಮನೆಗಳ ಭಾಗವಾಗಿಬಿಟ್ಟಿದ್ದಾರೆ. 'ಪವಿತ್ರ' ಸಾಮಾಜಿಕ ವ್ಯವಸ್ಥೆಯ ಭಾಗವಾಗಿರುವ ಶೂದ್ರರು ಸಾಮಾಜಿಕವಾಗಿ ಮೇಲುಸ್ತರಕ್ಕೆ ಏರುವ ಅರ್ಹತೆಯನ್ನು ತಾಂತ್ರಿಕವಾಗಿಯಾದರೂ ಹೊಂದಿದ್ದಾರೆ.

ದ್ವಿಜರ ಜಗತ್ತನ್ನು ಪ್ರವೇಶಿಸಲು ಶೂದ್ರರ ಬಳಿ 'ಪಾಸ್‌ಪೋರ್ಟ್' ಇದ್ದು, 'ವೀಸಾ' ಸಿಗಬೇಕಿದೆ. ಇತಿಹಾಸದ ಪುಟಗಳಲ್ಲಿ ಹಲವಾರು ಶೂದ್ರರು ಜಾತಿವ್ಯವಸ್ಥೆಯ ಒಳಗಿದ್ದುಕೊಂಡು ಚಕ್ರವರ್ತಿಗಳಾಗಿ ಮೆರೆದಿದ್ದಾರೆ. ತಮ್ಮ ಗತಕಾಲದ ವೈಭವದ ಕಾರಣ ನೀಡಿ ಹಲವಾರು ಶೂದ್ರ ಜಾತಿಗಳು ಕ್ಷತ್ರಿಯ ಸ್ಥಾನಮಾನಕ್ಕಾಗಿ ಬ್ರಿಟಿಷ್ ಸರ್ಕಾರವನ್ನು ಬೇಡಿದ ನಿದರ್ಶನಗಳಿವೆ.

ಇನ್ನು ವರ್ಣವ್ಯವಸ್ಥೆಯ ಹೊರಗಿರುವ ಅಸ್ಪೃಶ್ಯರು ಮತ್ತು ಬುಡಕಟ್ಟು ಸಮುದಾಯಗಳು ಅವರ್ಣೀಯರೆಂದು ಪರಿಗಣಿಸಲ್ಪಡುತ್ತವೆ. ಸಾಮಾಜಿಕ ವ್ಯವಸ್ಥೆಯಲ್ಲಿ ಅವರ್ಣೀಯರಿಗೆ 'ಪಾಸ್‌ಪೋರ್ಟ್' ಲಭ್ಯವಿಲ್ಲದಿರುವುದರಿಂದ 'ವೀಸಾ' ಪಡೆಯಲು ಕೂಡ ಅವರು ಅನರ್ಹರು.

ನೂರಾರು ವರುಷಗಳವರೆಗೆ ದಲಿತರು ವರ್ಣವ್ಯವಸ್ಥೆಯ ಹೊರಗೆ ಉಳಿದಿದ್ದರು. ಆದರೆ ಬ್ರಿಟಿಷ್ ಆಡಳಿತಾವಧಿಯಲ್ಲಿ ಬದಲಾವಣೆಗಳು ಶುರುವಾದವು. ೧೯೫೦ರಲ್ಲಿ ಭಾರತ ಗಣರಾಜ್ಯವಾಗಿ ಉದಯಿಸಿದ ನಂತರ ವರ್ಣವ್ಯವಸ್ಥೆ ಅಧಿಕೃತವಾಗಿ ಕೊನೆಗೊಂಡಿತು. ಆಧುನಿಕ ಭಾರತ ಅಂಬೇಡ್ಕರ್ ಹೇಳಿದ ಹಾಗೆ ವರ್ಣರಹಿತ, ಜಾತಿರಹಿತ ಸಮಾಜವಾಗಿ ಬದಲಾಯಿತು. ಬದಲಾವಣೆಯ ಗಾಳಿ ಬಿರುಸಾಗಿ ತಿರುಗಲಾರಂಭಿಸಿತು. ಸರ್ಕಾರದ ಮೀಸಲಾತಿ ನೀತಿಯ ಅವಕಾಶವನ್ನು ಸದುಪಯೋಗಪಡಿಸಿಕೊಂಡ ದಲಿತರ ಒಂದು ವರ್ಗ ವರ್ಣವ್ಯವಸ್ಥೆಯ ಬಿಗಿಹಿಡಿತದಿಂದ ಮುಕ್ತವಾಗುವಲ್ಲಿ ಯಶಸ್ವಿಯಾಯಿತು. ವರ್ಣವ್ಯವಸ್ಥೆಯ ಗೋಡೆಯನ್ನು ಉರುಳಿಸಿ ಹೊರಬಂದ ದಲಿತರು, ವರ್ಣಕೇಂದ್ರಿತ ಕಸುಬುಗಳ ಹಿಡಿತದಿಂದ ಕೂಡ ಮುಕ್ತವಾದರು.

ವರ್ಣ/ಜಾತಿಯಾಧಾರಿತ ವ್ಯವಸ್ಥೆ "ಉದ್ಯೋಗ ಮತ್ತು ರಕ್ತ"ದ ಪಾವಿತ್ರ್ಯದ ನೀತಿಯ ಮೇಲೆ ನಿಂತಿದೆ. ಈ ಹಿನ್ನೆಲೆಯಲ್ಲಿ ತಮ್ಮ ಮೂಲ ಕಸುಬುಗಳನ್ನು ಬಿಟ್ಟುಬಂದ ದಲಿತರು ಮಾತ್ರ "ಮುಕ್ತ"ರಾಗಿದ್ದಾರೆ ಎಂದು ಹೇಳಬಹುದು. ಈ ರೀತಿ ವರ್ಣವ್ಯವಸ್ಥೆಯ ಸರಪಳಿಯಿಂದ ಮುಕ್ತರಾದ ಕೆಲವು ದಲಿತವರ್ಗಗಳು ಸವರ್ಣೀಯರ ಅಡುಗೆಮನೆಗಳನ್ನು, ಮಲಗುವ ಕೋಣೆಗಳನ್ನು ಪ್ರವೇಶಿಸಲಾರಂಭಿಸಿದರು.

ಐತಿಹಾಸಿಕವಾಗಿ ದಲಿತರು ಬಹುತೇಕ ಕೃಷಿಕಾರ್ಮಿಕರಾಗಿದ್ದವರು. ಆದರೆ ಆಧುನಿಕ ಕೈಗಾರಿಕೀಕರಣ ಮತ್ತು ನಗರೀಕರಣಗಳ ಪರಿಣಾಮವಾಗಿ ದಲಿತರಿಗೆ ಮೊಟ್ಟ ಮೊದಲ ಬಾರಿಗೆ ಜಾತಿಯ ಹಂಗಿಲ್ಲದ ಪ್ರತ್ಯೇಕವಾದ ಉದ್ಯೋಗಾವಕಾಶಗಳು ಕಾರ್ಖಾನೆಗಳಲ್ಲಿ ಲಭಿಸಿತು. ಹಾಗೆಯೇ, ಆಧುನಿಕ ಪ್ರಜಾಸತ್ತಾತ್ಮಕ ಸರ್ಕಾರ ಹಾಗೂ ಮೀಸಲಾತಿ ನೀತಿ ಅಸ್ತಿತ್ವಕ್ಕೆ ಬರುವ ಮೂಲಕ ದಲಿತರಿಗೆ ಜಾತಿರಹಿತ ಸರ್ಕಾರಿ ನೌಕರಿಗಳು ದೊರಕಿದವು. ಆದರೆ ಸರ್ಕಾರಿ ಉದ್ಯೋಗಾವಕಾಶ ಕೆಲವು ದಲಿತರಿಗೆ ಮಾತ್ರ ಸೀಮಿತವಾದುದರಿಂದ, ಬಹುತೇಕ ದಲಿತರು ಕಡಿಮೆ ವೇತನ ದೊರೆಯುವ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ಉಳಿದರು.

ಆದರೆ ಆರ್ಥಿಕ ಸುಧಾರಣೆಯ ನಂತರ ಅಧಿಕ ವೇತನ ಲಭಿಸುವ ಜಾತಿಮುಕ್ತ ಉದ್ಯೋಗಾವಕಾಶಗಳು ಹುಟ್ಟಿಕೊಂಡವು. ಪ್ರಕಾಶನ ಮತ್ತು ಪತ್ರಿಕೋದ್ಯಮ ಇದೇ ರೀತಿಯ ಒಂದು ವೃತ್ತಿ. ಆದರೆ ಈ ವೃತ್ತಿಯಲ್ಲಿ ಗುರುತಿಸಿಕೊಂಡಿರುವ ದಲಿತರು ಇಲ್ಲವೇ ಇಲ್ಲ ಎಂದು ಹೇಳಬಹುದು. ಸರ್ಕಾರ ಕೂಡ ದಲಿತರು ಇಂತಹ ವೃತ್ತಿಗಳಿಗೆ ಪ್ರವೇಶ ಪಡೆಯುವಂತಹ ವಾತಾವರಣ ನಿರ್ಮಿಸುವ ಗೋಜಿಗೆ ಹೋಗಲಿಲ್ಲ. ಖಾಸಗಿ ವಲಯ ದಲಿತ ವಿರೋಧಿಯಾಗಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಹೀಗಾಗಿ ದಲಿತರು ಇಂತಹ ವೃತ್ತಿಗಳಿಗೆ ಕಾಲಿಡಲು ಪ್ರೇರಣೆ ಇಲ್ಲದಂತಾಗಿದೆ.

ಈ ನಿಟ್ಟಿನಲ್ಲಿ ನವಯಾನ ಪ್ರಕಾಶನ ಸಂಸ್ಥೆ ಅತ್ಯಂತ ಮಹತ್ವದ ಹೆಜ್ಜೆಯನ್ನಿರಿಸಿದೆ. ಪತ್ರಕರ್ತ ಎಸ್. ಆನಂದ್ ಮತ್ತು ತಮಿಳುನಾಡಿನ ಪತ್ರಕರ್ತ ಮತ್ತು ಶಾಸಕ ರವಿಕುಮಾರ್ ಈ ಜಾತಿ ವಿರೋಧಿ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿದರು. ದಲಿತ ಯುವಜನಾಂಗ, ಪ್ರಕಾಶನ ಮತ್ತು ಸಂಪಾದಕತ್ವದ ವೃತ್ತಿ ಪ್ರವೇಶಿಸಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಅವರ್ಣ ಫೆಲೋಷಿಪ್ ಆರಂಭಿಸಿದರು. ಜಾಧವ್‌ಪುರ್ ವಿಶ್ವವಿದ್ಯಾನಿಲಯದಲ್ಲಿ ಫೆಲೋಷಿಪ್ ಪಡೆದ ದಲಿತರು ಉಚಿತವಾಗಿ ವಿದ್ಯಾಭ್ಯಾಸ ಮಾಡಲಿದ್ದು, ಮಾಸಿಕ ೫೦೦೦ ಭತ್ಯ ಪಡೆಯುವುತ್ತಾರೆ. ನವಯಾನದ ಈ ಮಹತ್ವಪೂರ್ಣ ಯೋಜನೆ ಈಗ ಫಲಿತಾಂಶ ನೀಡಲಾರಂಭಿಸಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಜಾಧವ್‌ಪುರ ವಿಶ್ವವಿದ್ಯಾನಿಲಯದ ಸಾಂಸ್ಕೃತಿಕ ಪಠ್ಯ ಮತ್ತು ದಾಖಲೆಗಳ ಶಾಲೆ (ಎಸ್‌ಸಿಟಿಆರ್) ದಲಿತರು ಮತ್ತು ಬುಡಕಟ್ಟು ಸಮುದಾಯದ ಐದು ಜನ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದೆ. ಇವರಲ್ಲಿ ಕೆಲವರು ಈಗಾಗಲೇ ಮಂಚೂಣಿಯ ಪ್ರಕಾಶನ ಸಂಸ್ಥೆಗಳಲ್ಲಿ ಇಂಟರ್ನ್‌ಷಿಪ್ ಮಾಡುತ್ತಿದ್ದಾರೆ.

ಇದರರ್ಥ, ಕೇವಲ ಒಂದು ಶೈಕ್ಷಣಿಕ ವರ್ಷದಲ್ಲಿ ಐವರು ದಲಿತರಿಗೆ ಭಾರತದ ಮಂಚೂಣಿಯ ಪ್ರಕಾಶನ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಮಟ್ಟಿಗೆ ತರಬೇತಿ ನೀಡಲಾಗಿದೆ. ಇದರ ಪರಿಣಾಮಗಳು ಐತಿಹಾಸಿಕವಾದುದು. ಬಹುತೇಕ ದಲಿತ ಸಾಹಿತಿಗಳು ತಮ್ಮ ಕೃತಿಗಳನ್ನು ಸಣ್ಣಪುಟ್ಟ

ನೂರಾರು ವರುಷಗಳವರೆಗೆ ದಲಿತರು ವರ್ಣ ವ್ಯವಸ್ಥೆಯ ಹೊರಗೆ ಉಳಿದಿದ್ದರು. ಆದರೆ ಬ್ರಿಟಿಷ್ ಆಡಳಿತಾವಧಿಯಲ್ಲಿ ಬದಲಾವಣೆಗಳು ಶುರುವಾದವು. ೧೯೫೦ರಲ್ಲಿ ಭಾರತ ಗಣರಾಜ್ಯವಾಗಿ ಉದಯಿಸಿದ ನಂತರ ವರ್ಣವ್ಯವಸ್ಥೆ ಅಧಿಕೃತವಾಗಿ ಕೊನೆಗೊಂಡಿತು. ಆಧುನಿಕ ಭಾರತ ಅಂಬೇಡ್ಕರ್ ಹೇಳಿದ ಹಾಗೆ ವರ್ಣರಹಿತ, ಜಾತಿರಹಿತ ಸಮಾಜವಾಗಿ ಬದಲಾಯಿತು. ಬದಲಾವಣೆಯಗಾಳಿ ಬಿರುಸಾಗಿ ತಿರುಗಲಾರಂಭಿಸಿತು. ಸರ್ಕಾರದ ಮೀಸಲಾತಿ ನೀತಿಯ ಅವಕಾಶವನ್ನು ಸದುಪಯೋಗಪಡಿಸಿಕೊಂಡ ದಲಿತರ ಒಂದು ವರ್ಗ ವರ್ಣವ್ಯವಸ್ಥೆಯ ಬಿಗಿಹಿಡಿತದಿಂದ ಮುಕ್ತವಾಗುವಲ್ಲಿ ಯಶಸ್ವಿಯಾಯಿತು. ವರ್ಣ ವ್ಯವಸ್ಥೆಯ ಗೋಡೆಯನ್ನು ಉರುಳಿಸಿ ಹೊರಬಂದ ದಲಿತರು, ವರ್ಣಕೇಂದ್ರಿತ ಕಸುಬುಗಳ ಹಿಡಿತದಿಂದ ಕೂಡ ಮುಕ್ತವಾದರು.

ಕನ್ನಡಕ್ಕೆ:
ಸತ್ಯಪ್ರಕಾಶ್ ಎಂ ಆರ್

ಪ್ರಕಾಶನ ಸಂಸ್ಥೆಗಳ ಮೂಲಕ ಅಥವಾ ತಾವೇ ಪ್ರಕಟಿಸುವುದರಿಂದ, ಮುಖ್ಯವಾಹಿನಿಯ ಮಾರುಕಟ್ಟೆಯನ್ನು ತಲುಪುವುದು ಕಷ್ಟ. ಆದರೆ ದಲಿತ ಸಂಪಾದಕರು ಮುಖ್ಯವಾಹಿನಿಯ ಪ್ರಕಾಶನ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವಂತಾದರೆ ದಲಿತ ಲೇಖಕರು ಮುಖ್ಯವಾಹಿನಿಯಲ್ಲಿ ತಮ್ಮ ಕೃತಿಗಳನ್ನು ಹೊರತರಬಹುದು.

ನವಯಾನ ಸಂಸ್ಥೆ ಲಕ್ಷಾಂತರ ಮಂದಿ ದಲಿತರಿಗೆ ಪ್ರಕಾಶನ ಮತ್ತು ಸಂಪಾದಕತ್ವದ ತರಬೇತಿ ನೀಡಲು ಸಾಧ್ಯವಿಲ್ಲ. ಯುವ ದಲಿತರು ಹೊಸ ವೃತ್ತಿಗಳನ್ನು ಪ್ರವೇಶಿಲು ಅನುವು ಮಾಡಿಕೊಡುವ ಹೊಸ ಸಾಧ್ಯತೆಯನ್ನು ನವಯಾನ ತೋರಿಸಿಕೊಟ್ಟಿದೆ. ನವಯಾನ ಪ್ರಕಾಶನ ಸಂಸ್ಥೆಯ ಅರ್ವಾ ಫೆಲೋಷಿಪ್ ಮಾದರಿಯನ್ನು ಇತರರು ಅನುಸರಿಸಿ ಜಾತಿರಹಿತ ವೃತ್ತಿಗಳಿಗೆ ದಲಿತರಿಗೆ ಯಾಕೆ ಪ್ರವೇಶ ಕಲ್ಪಿಸಿಕೊಡಬಾರದು?

ಬದಲಾವಣೆಯ ಸಂಕೇತವಾಗಿ ಮಾಯಾವತಿ

ಭಾರತ ೧೫ನೇ ಲೋಕಸಭಾ ಚುನಾವಣೆಯ ಬಿಸಿಯಲ್ಲಿರುವಾಗ ದಲಿತ ದೇಶದ ಮುಂದಿನ ಪ್ರಧಾನ ಮಂತ್ರಿಯ ಬಗ್ಗೆ ಚರ್ಚೆಗಳು ಮಂಚೂಣಿಗೆ ಬರುತ್ತಿದೆ. ೧೯೭೭ರಲ್ಲಿ ಜನತಾಪಕ್ಷ ಬಾಬು ಜಗಜೀವನ್ ರಾಂ ಅವರನ್ನು ಪ್ರಧಾನಮಂತ್ರಿ ಅಭ್ಯರ್ಥಿಯಾಗ ಘೋಷಣೆ ಮಾಡಿದ್ದಾಗ ದಲಿತ ಪ್ರಧಾನಮಂತ್ರಿಯ ಬಗ್ಗೆ ಚರ್ಚೆ ನಡೆದಿತ್ತು. ಆದರೆ ಅವರು ಅವಕಾಶದಿಂದ ವಂಚಿತರಾದರು. ಈಗ ಮಾಯಾವತಿ ಪ್ರಧಾನಮಂತ್ರಿಯಾಗುವ ಕನಸು ಕಾಣುತ್ತಿದ್ದಾರೆ. ಅವರಿಗೆ ವಂಚನೆಯಾಗುವುದಿಲ್ಲ ಎಂಬ ಆಶಾವಾದವನ್ನು ನಾವು ಇರಿಸಿಕೊಳ್ಳಬಹುದು. ಬಾಬು ಜಗಜೀವನ್ ರಾಂ ಅವರಿಗೆ ಪ್ರಧಾನಿ ಹುದ್ದೆ ತಪ್ಪಿಸಿದ ಅದೇ ಸಾಮಾಜಿಕ ಶಕ್ತಿಗಳು ಈಗ ಮಾಯಾವತಿ ಪ್ರಧಾನಿಯಾದರೆ ಯಾವುದೇ ಅಭ್ಯಂತರವಿಲ್ಲ ಎಂಬ ಸೂಚನೆ ನೀಡುತ್ತಿವೆ.

ದಲಿತ ಪ್ರಧಾನಿಯ ಬಗ್ಗೆ ಗೊಂದಲವಿಲ್ಲದಿದ್ದರೂ, ಒಂದು ರೀತಿಯ ಕುತೂಹಲವಂತೂ ಇದೆ. ಒಂದು ವೇಳೆ ಪ್ರಧಾನಿಯಾದರೆ ಮಾಯಾವತಿ ಏನು ಮಾಡುತ್ತಾರೆ? ಮಾಯಾವತಿ ಅವರಿಗೆ ಈ ಬಗ್ಗೆ ಸ್ಪಷ್ಟತೆ ಇದೆ. ಪ್ರಧಾನಿಯಾದರೆ "ಸರ್ವಜನರ ಸೇವೆ" ಮಾಡುವುದಾಗಿ ಅವರು ಹೇಳಿದ್ದಾರೆ.

ಮಾಯಾ ಅವರಿಗೆ ದಲಿತ ಅಜೆಂಡಾ ಇಲ್ಲ ಎಂದು ಬಹಳಷ್ಟು ಮಂದಿ ತಿಳಿದಿದ್ದಾರೆ. ಉತ್ತರಪ್ರದೇಶದಲ್ಲಿ ದಲಿತರಿಗಾಗಿ ಸಾಕಷ್ಟು ಕೆಲಸಗಳು ನಡೆದಿಲ್ಲ ಎಂದು ಅಲ್ಲಿನ ದಲಿತರು ಹೇಳುವುದನ್ನು ನಾನು ಕೇಳಿದ್ದೇನೆ. ದಲಿತರ ಅಧಿಕಾರದ ಲಾಭವನ್ನು ಬ್ರಾಹ್ಮಣರು ಪಡೆಯುತ್ತಿದ್ದಾರೆ ಎಂಬ ಕೂಗು ಕೇಳಿಬರುತ್ತಿದೆ. ಈ ಎಲ್ಲ ಗೊಂದಲಗಳನ್ನು ನಿವಾರಿಸುವ ಸಮಯ ಈಗ ಬಂದಿದೆ.

ಬರಾಕ್ ಒಬಾಮ ಡೆಮಾಕ್ರಟಿಕ್ ಪಕ್ಷದ ನಾಮನಿರ್ದೇಶನಕ್ಕಾಗಿ ಹಿಲರಿ ಕ್ಲಿಂಟನ್ ವಿರುದ್ಧ ಹೋರಾಡುತ್ತಿದ್ದಾಗ ನಾನು ಅಮೆರಿಕಾದಲ್ಲಿದ್ದೆ. ಒಬಾಮಾ ಅಧ್ಯಕ್ಷಗಿರಿಯ ಪ್ರಮಾಣವಚನ ಸ್ವೀಕರಿಸಿದ ಬಳಿಕ ಮತ್ತೆ ಅಲ್ಲಿಗೆ ಭೇಟಿ ನೀಡಿದ್ದೆ. ಅಮೆರಿಕಾ ರಾಷ್ಟ್ರಕ್ಕೆ ಕಪ್ಪು ಜನಾಂಗದ ಅಧ್ಯಕ್ಷರ ಆಯ್ಕೆಯ ವಿಚಾರದ ಬಗ್ಗೆ ನಾನು ಮಾತನಾಡಿಸಿದ ಬಹುತೇಕ ಕಪ್ಪು ಜನಾಂಗದ ಬುದ್ಧಿಜೀವಿಗಳು ಒಮ್ಮತದ ಅಭಿಪ್ರಾಯ ಹೊಂದಿದ್ದರು.

"ಒಬಾಮಾ ಅವರ ಗೆಲುವು ಕಪ್ಪು ಜನರ ಆತ್ಮಗೌರವ ಹೆಚ್ಚಿಸಿದೆ" ಎಂದು ಹೇಳಿದ ಅವರು, "ಈಗ ಕಪ್ಪು ಜನರು ಹೆಚ್ಚಿನ ಆತ್ಮ ವಿಶ್ವಾಸ ಹೊಂದಿದ್ದಾರೆ. ಬಿಳಿಯರ ಸಮಾಜ ಕಪ್ಪು ಜನರ ಮಹತ್ವಾಕಾಂಕ್ಷೆಗಳಿಗೆ ಸಾಧ್ಯತೆಗಳನ್ನು ಕಲ್ಪಿಸಿಕೊಟ್ಟಿದೆ. ಒಬಾಮ ಅವರ ಗೆಲುವು ಸಾಮಾನ್ಯ ಬೆಳವಣಿಗೆಯಲ್ಲ. ಒಬಾಮ ಗೆಲುವು ಕಪ್ಪು ಸಮುದಾಯದ ಯುವಕರಲ್ಲಿ ಹೊಸ ಆಶಾವಾದವನ್ನು ಮೂಡಿಸಿದೆ" ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

> **ಐತಿಹಾಸಿಕವಾಗಿ ದಲಿತರು ಬಹುತೇಕ ಕೃಷಿಕಾರ್ಮಿಕರಾಗಿದ್ದವರು. ಆದರೆ ಆಧುನಿಕ ಕೈಗಾರಿಕೀಕರಣ ಮತ್ತು ನಗರೀಕರಣಗಳ ಪರಿಣಾಮವಾಗಿ ದಲಿತರಿಗೆ ಮೊಟ್ಟಮೊದಲ ಬಾರಿಗೆ ಜಾತಿಯ ಹಂಗಿಲ್ಲದ ಪ್ರತ್ಯೇಕವಾದ ಉದ್ಯೋಗಾವಕಾಶಗಳು ಕಾರ್ಖಾನೆಗಳಲ್ಲಿ ಲಭಿಸಿತು. ಹಾಗೆಯೇ, ಆಧುನಿಕ ಪ್ರಜಾಸತ್ತಾತ್ಮಕ ಸರ್ಕಾರ ಹಾಗೂ ಮೀಸಲಾತಿ ನೀತಿ ಅಸ್ತಿತ್ವಕ್ಕೆ ಬರುವ ಮೂಲಕ ದಲಿತರಿಗೆ ಜಾತಿರಹಿತ ಸರ್ಕಾರಿ ನೌಕರಿಗಳು ದೊರಕಿದವು. ಆದರೆ ಸರ್ಕಾರಿ ಉದ್ಯೋಗಾವಕಾಶ ಕೆಲವು ದಲಿತರಿಗೆ ಮಾತ್ರ ಸೀಮಿತವಾದುದರಿಂದ, ಬಹುತೇಕ ದಲಿತರು ಕಡಿಮೆ ವೇತನ ದೊರೆಯುವ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ಉಳಿದರು. ಆದರೆ ಆರ್ಥಿಕ ಸುಧಾರಣೆಯ ನಂತರ ಅಧಿಕ ವೇತನ ಲಭಿಸುವ ಜಾತಿಮುಕ್ತ ಉದ್ಯೋಗಾವಕಾಶಗಳು ಹುಟ್ಟಿಕೊಂಡವು.**

"ಆದರೂ, ಕಪ್ಪು ಜನರಿಗಾಗಿ ಕಪ್ಪು ವರ್ಣದ ಅಧ್ಯಕ್ಷರಿಂದ ಯಾವ ರೀತಿಯ ಪ್ಯಾಕೇಜ್ ನಿರೀಕ್ಷಿಸುತ್ತಿದ್ದೀರಾ" ಎಂಬ ನನ್ನ ಪ್ರಶ್ನೆಗೆ, "ಕಪ್ಪು ಜನರ ಏಳ್ಗೆಗಾಗಿ ಈಗಾಗಲೇ ಹಲವಾರು ಯೋಜನೆಗಳಿದ್ದು, ಇವುಗಳಲ್ಲಿ ಬಹುತೇಕ ಅಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿವೆ. ಆದರೆ ಕಪ್ಪು ಜನರ ಪ್ರತಿನಿಧಿಯಾಗಿ ಒಬಾಮ ಈಗಾಗಲೇ ಅಸ್ತಿತ್ವದಲ್ಲಿರುವ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳ್ಳುವಂತೆ ಮಾಡುತ್ತಾರೆ" ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಕಪ್ಪು ನಾಗರಿಕನಾಗಿ ಒಬಾಮ ಅಸ್ತಿತ್ವದಲ್ಲಿರುವ ಯೋಜನೆಗಳನ್ನು ಸರಿದಾರಿಗೆ ತರುವ ಕ್ಷಮತೆ ಹೊಂದಿದ್ದಾರೆ ಎಂಬುದು ಇದರ ಅರ್ಥ.

ಇನ್ನು ಭಾರತದ ಪ್ರಯೋಗದ ವಿಚಾರಕ್ಕೆ ಬರುವುದಾದರೆ, ಕಳೆದ ದಶಕದಿಂದಾಚೆಗೆ ದಲಿತ ಗುಂಪುಗಳು ಎರಡು ಬೇಡಿಕೆಗಳನ್ನು ಇಡುತ್ತಿವೆ; ೧. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮುಂಗಡ ಪತ್ರಗಳಲ್ಲಿ ಜನಸಂಖ್ಯೆಗನುಗುಣವಾಗಿ ದಲಿತ ಕಲ್ಯಾಣ ಯೋಜನೆಗಳಿಗೆ ಹಣ ಮೀಸಲಿಡಬೇಕು. ೨. ಉದಾರೀಕರಣದ ನಂತರ ಸರ್ಕಾರಿ ಉದ್ಯೋಗ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಖಾಸಗಿ ವಲಯದಲ್ಲಿ ಮೀಸಲಾತಿ ಒದಗಿಸಬೇಕು.

ಈ ಮೇಲಿನ ಮೊದಲ ಬೇಡಿಕೆ ಹಾಸ್ಯಾಸ್ಪದವಾಗಿದೆ. ಬಹುತೇಕ ರಾಜ್ಯಗಳು ದಲಿತರಿಗಾಗಿ ಕೇಂದ್ರ ಸರ್ಕಾರ ನಿಗದಿಪಡಿಸಿದ ಹಣವನ್ನು ಉಪಯೋಗಿಸುವುದೇ ಇಲ್ಲ. ದಲಿತ ಕಲ್ಯಾಣಕ್ಕೆ ಮೀಸಲಿರಿಸಿರುವ ಹಣವನ್ನು ಎಲ್ಲಿ ವಿನಿಯೋಗಿಸಬೇಕೆಂಬ ಬಗ್ಗೆ ಸರ್ಕಾರಗಳಿಗೆ ತಿಳುವಳಿಕೆ ಕೂಡ ಇದ್ದಂತಿಲ್ಲ. ದಲಿತ ಸಂಘಟನೆಗಳಿಗೂ ದಲಿತರ ಕಲ್ಯಾಣಕ್ಕಾಗಿ ಹಣವನ್ನು ಉಪಯೋಗಿಸುವ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ ಎನ್ನುವುದು ಕೂಡ ಕಟುಸತ್ಯ.

ಇನ್ನು ಖಾಸಗಿ ವಲಯದಲ್ಲಿ ಮೀಸಲಾತಿ ಒದಗಿಸುವ ಬಗ್ಗೆ ಸರ್ಕಾರ, ಖಾಸಗಿ ಸಂಸ್ಥೆಗಳು ಮತ್ತು ದಲಿತ ಸಂಘಟನೆಗಳು ಒಮ್ಮತದ ನಿರ್ಧಾರ ಕೈಗೊಳ್ಳಬಹುದು.

ನಾನು ಉತ್ತರಪ್ರದೇಶದ ಗ್ರಾಮಾಂತರ ಪ್ರದೇಶಗಳು ಮತ್ತು ಪಟ್ಟಣಗಳಲ್ಲಿ ಪ್ರವಾಸ ಕೈಗೊಂಡಾಗ ಸಾಮಾನ್ಯ ದಲಿತರು ತಾವು ಉತ್ತರ ಪ್ರದೇಶ ರಾಜ್ಯವನ್ನು ಆಳುತ್ತಿರುವ ಬಗ್ಗೆ ರೋಮಾಂಚನ ಮತ್ತು ಖುಷಿ ವ್ಯಕ್ತಪಡಿಸಿದರು. "ಜಾತಿಯಾಧಾರಿತ ಸಮಾಜದಲ್ಲಿ ನಮ್ಮ ಮಟ್ಟ ಸುಧಾರಿಸಿದೆ. ನಮಗೆ ಇಷ್ಟು ಸಾಕು" ಎಂದು ಸಂತಸಪಡುತ್ತಾರೆ.

ಆದರೆ ಮಧ್ಯಮವರ್ಗದ ದಲಿತರು ಮಾತ್ರ ಆತಂಕ ವ್ಯಕ್ತಪಡಿಸುತ್ತಾರೆ. "ದಲಿತರ ಆಳ್ವಿಕೆಯ ಅವಧಿಯಲ್ಲಿ ಮಹತ್ತರ ಬದಲಾವಣೆಗಳು ನಡೆಯದಿದ್ದರೆ, ದಲಿತೇತರ ಸರ್ಕಾರಗಳಿಂದ ಇವುಗಳನ್ನು ನಿರೀಕ್ಷಿಸಲಾಗುತ್ತದೆಯೇ?" ಎಂದು ಪ್ರಶ್ನಿಸುವ ಬಹುತೇಕ ಮಂದಿ ಅಧಿಕ ವೇತನದ ಸರ್ಕಾರಿ ಉದ್ಯೋಗ ಬಯಸುತ್ತಾರೆ.

ಮಾಯಾವತಿ ಏನು ಮಾಡಲು ಸಾಧ್ಯ? ಉತ್ತರಪ್ರದೇಶದ ಜನಸಂಖ್ಯೆಯಲ್ಲಿ ಕೇವಲ ಶೇ. ೨೧ರಷ್ಟು ಪ್ರಮಾಣ ಹೊಂದಿರುವ ದಲಿತರಿಗೆ ಪ್ರಮುಖ ಹುದ್ದೆಗಳನ್ನು ನೀಡಲು ಸಾಧ್ಯವಿದೆಯೇ? ಸರ್ಕಾರಿ ಉದ್ಯೋಗಾವಕಾಶ ಕಡಿಮೆಯಾಗುತ್ತಿರುವ ಪ್ರಸ್ತುತ ಕಾಲದಲ್ಲಿ ಲಕ್ಷಾಂತರ ಮಂದಿ ದಲಿತರಿಗೆ ಸರ್ಕಾರಿ ಕೆಲಸ ನೀಡಲು ಸಾಧ್ಯವಿದೆಯೇ? ಮಾಯಾವತಿ ದಲಿತ ಗಣರಾಜ್ಯದ ಅಧಿನಾಯಕಿಯೇ? ದಲಿತರು ಈ ಎಲ್ಲ ವಿಚಾರಗಳ ಬಗ್ಗೆ ಚಿಂತನೆ ನಡೆಸಬೇಕಿದೆ.

ಇನ್ನು ದಲಿತೇತರ ಸಮಾಜ, ರಾಜಕೀಯ ಅಧಿಕಾರದ ವಿಚಾರದಲ್ಲಿ ಮಾಡಿದ ಪ್ರಯೋಗಗಳು ಮತ್ತು ಅನುಭವಗಳನ್ನು ಹೊಸ ರೀತಿ ನೋಡಬೇಕಾದ ಅಗತ್ಯತೆ ಇದೆ. ಸ್ವಾತಂತ್ರ್ಯಾನಂತರದ ಭಾರತದ ಪರಿಸ್ಥಿತಿಯನ್ನೇ ಅವಲೋಕಿಸಿ ನೋಡಿ. ದಲಿತೇತರ ಜಾತಿಗಳು ೧೯೪೭ರಿಂದ ಇಲ್ಲಿಯವರೆಗೆ ಅಧಿಕಾರ ನಡೆಸಿವೆ. ಈ ಜಾತಿಗಳು 'ಪ್ರತಿಭೆ,' 'ಮೆರಿಟ್' ಎಂದೆಲ್ಲ ಮಾತನಾಡಿದರೂ ಭಾರತದ ಸಮಸ್ಯೆಗಳನ್ನು ಬಗೆಹರಿಸಿ, ಪರಿವರ್ತನೆ ತರಲು ಇದುವರೆಗೆ ಸಾಧ್ಯವಾಗಿಲ್ಲ.

ಭಾರತವೇನೋ ಸುಧಾರಣೆಯ ಹಾದಿಯಲ್ಲಿದೆ. ಆದರೆ, ಇಲ್ಲಿನ ಸಮಸ್ಯೆಗಳು ಕೂಡ ಅದೇ ವೇಗದಲ್ಲಿ ಬೆಳೆಯುತ್ತಿವೆ. ಬಹುಶಃ ಇದು ಉನ್ನತ ಜಾತಿಗಳ ಸಂಸ್ಕೃತಿಯ ಬಳುವಳಿ ಇರಬೇಕು. ಹೀಗಾಗಿ "ಸಾಂಸ್ಕೃತಿಕವಾಗಿ ಅನ್ಯ" ಎನಿಸಿಕೊಂಡಿರುವ ಮಾಯಾವತಿಗೆ ರಾಷ್ಟ್ರದ ಜವಾಬ್ದಾರಿ ನೀಡಿದರೆ ಅದ್ಭುತಗಳನ್ನು ಸಾಧಿಸುವುದರಲ್ಲಿ ಅನುಮಾನವಿಲ್ಲ.

ಪ್ರಾದೇಶಿಕ ಪಕ್ಷಗಳ ಪ್ರಾಂತೀಯತೆ

ಮಲೇರಿಯಾ ಒಂದು ಸಾಂಕ್ರಾಮಿಕ ರೋಗ ಎಂಬುದು ವಾಸ್ತವ ಸಂಗತಿ. ಇದು ವಾಸ್ತವ ಸಂಗತಿಯಾದ ಮಾತ್ರಕ್ಕೆ ನಾವು ಈ ರೋಗವನ್ನು ಒಪ್ಪಿಕೊಳ್ಳಬೇಕೆ? ಇದೇ ರೀತಿಯಲ್ಲಿ ಬಹಳಷ್ಟು ಮಂದಿ ಬುದ್ಧಿಜೀವಿ

[illegible] ಪ್ರಾದೇಶಿಕ ಪಕ್ಷಗಳ ಬಗ್ಗೆ ಒಂದು ರೀತಿಯ [illegible] ಧೋರಣೆ [illegible]. "ಪ್ರಾದೇಶಿಕ ಪಕ್ಷಗಳು ಕಣ್ಣೆದುರಿಗಿನ ಸತ್ಯ, ನಾವು ಇದನ್ನು ಒಪ್ಪಿಕೊಳ್ಳುತ್ತೇವೆ" ಎಂದು ಹೇಳುತ್ತಾರೆ ಈ ಮಂದಿ.

ಆದರೆ ಈ ಪ್ರಾದೇಶಿಕ ಪಕ್ಷಗಳ ಗುರಿ ಮತ್ತು ಉದ್ದೇಶಗಳ ಬಗ್ಗೆ ನಾವೆಂದಾದರೂ ಚಿಂತನೆ ನಡೆಸಿದ್ದೀವಾ? ರಾಷ್ಟ್ರದ ಆಧುನಿಕ ಧೋರಣೆಯ ಪ್ರಧಾನಿ ರಾಜೀವ್ ಗಾಂಧಿ ಅವರನ್ನು ಎಲ್‌ಟಿಟಿಇ ಹತ್ಯೆಗೈಯಿತು. ಒಂದು ವೇಳೆ ತಮಿಳುನಾಡಿನ ಪ್ರಾದೇಶಿಕ ಪಕ್ಷಗಳ ಯಾವುದಾದರೂ ಓರ್ವ ನಾಯಕರು ಪ್ರಧಾನಿಯಾದರೆ, ಇದೇ ಎಲ್‌ಟಿಟಿಇ ಬಗ್ಗೆ ಎತ್ತಲಾಗುವ ಪ್ರಶ್ನೆಗಳಿಗೆ ಈ ನಾಯಕರು ಯಾವ ರೀತಿಯ ಉತ್ತರ ನೀಡಲು ಸಾಧ್ಯ?

ದೇವೇಗೌಡ ಪ್ರಧಾನಿಯಾಗುವ ದುರಂತವನ್ನು ದೇಶ ಜೀರ್ಣಿಸಿಕೊಂಡಿದೆ. ರಾಷ್ಟ್ರದ ಪ್ರಧಾನಿಯಾಗಿದ್ದರೂ ಅನೇಕ ಸಲ ತವರಿಗೆ ಭೇಟಿ ನೀಡುವ ಮೂಲಕ ಕರ್ನಾಟಕದ ಪರ ಎಂಬ ಹಣೆಪಟ್ಟಿಯಿಂದ ದೇವೇಗೌಡ ಹೊರಬರಲಾಗಲಿಲ್ಲ.

ಕೇಂದ್ರದ ರೈಲ್ವೆ ಸಚಿವ ಲಾಲೂ ಪ್ರಸಾದ್ ಯಾದವ್ ಬಿಹಾರಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಕೃಷಿ ಸಚಿವ ಶರದ್ ಪವಾರ್‌ಗೆ ಮಹಾರಾಷ್ಟ್ರದ ಹೊರಗಿನ ರೈತರು ಕಾಣಿಸುವುದೂ ಇಲ್ಲ.

ಕೆಲವು ತಿಂಗಳ ಹಿಂದೆ ಬಿಹಾರಿ ಯುವಕನೊಬ್ಬ ಮುಂಬೈನ ಬಸ್ಸೊಂದನ್ನು ಅಪಹರಿಸಿದ್ದು ಗೊತ್ತಿರಬಹುದು. ಅಂದು ಆತ ಕೈಯಲ್ಲಿ ಗನ್ ಹಿಡಿದು ಹುಚ್ಚಾಪಟ್ಟೆ ಗುಂಡು ಹಾರಿಸುತ್ತಿದ್ದ. ಲಂಡನ್ ಅಥವಾ ನ್ಯೂಯಾರ್ಕ್‌ನಂತಹ ನಗರಗಳಾಗಿದ್ದಾರೆ ಈ ಯುವಕನ ಗುಂಡಿಗೆಯನ್ನು ಪೊಲೀಸರ ನೂರಾರು ಗುಂಡುಗಳು ಬೇಧಿಸುತ್ತಿದ್ದವು. ಆದರೆ ಇಲ್ಲಿ ಯುವಕನ ಹತ್ಯೆಯಾದ ನಂತರ ಬಿಹಾರದ ಮುಖ್ಯಮಂತ್ರಿ ನಿತೀಶ್‌ಕುಮಾರ್ ತಮ್ಮ ಪಕ್ಷದ ಲೋಕಸಭಾ ಸದಸ್ಯರು ತಂತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕೆಂದು ತಾಕೀತು ಮಾಡಿದರು. ಒಂದು ವೇಳೆ ನಿತೀಶ್ ಕುಮಾರ್ ಪ್ರಧಾನಿಯಾದರೆ ಮಹಾರಾಷ್ಟ್ರ ಹೇಗೆ ಪ್ರತಿಕ್ರಿಯೆ ನೀಡಲಿದೆ? ಒರಿಸ್ಸಾ ರಾಜ್ಯಕ್ಕೆ ಅಕಾಲಿದಳದ ಸದಸ್ಯರು ಯಾವ ರೀತಿಯ ಸಾಮಾಜಿಕ ಯೋಜನೆಗಳ ಬಗ್ಗೆ ಚಿಂತಿಸಲು ಸಾಧ್ಯ? ಅಕಾಲಿದಳದ ಪ್ರಧಾನಿ ಒರಿಸ್ಸಾದಲ್ಲಿ ಗೋಧಿ ಬೆಳೆಯುವುದನ್ನು ಕಡ್ಡಾಯ ಮಾಡಲು ಸಾಧ್ಯವಿದೆಯೇ?

ಚಂದ್ರಬಾಬು ನಾಯ್ಡು ಯಾರನ್ನು ಪ್ರತಿನಿಧಿಸುತ್ತಾರೆ– ಕಮ್ಮ ಜನಾಂಗವನ್ನೋ ಅಥವಾ ಆಂಧ್ರಪ್ರದೇಶ ರಾಜ್ಯವನ್ನೋ? ಲಾಲೂ, ಯಾದವರ ಪ್ರತಿನಿಧಿಯೋ ಅಥವಾ ಬಿಹಾರ ರಾಜ್ಯದ ಪ್ರತಿನಿಧಿಯೋ? ಓಂ ಪ್ರಕಾಶ್ ಚೌತಾಲಾ ಜಾಟ್‌ಗಳ ನಾಯಕರೋ ಅಥವಾ ಹರಿಯಾಣ ರಾಜ್ಯದ ನಾಯಕರೋ? ಕೇರಳ ರಾಜ್ಯದ ಜನರಿಗಾಗಿ ಮುಲಾಯಂ ಸಿಂಗ್ ಯಾದವ್ ಯಾವ ರೀತಿಯ ಸಾಮಾಜಿಕ ನೀತಿಗಳನ್ನು ಅನುಷ್ಠಾನಗೊಳಿಸಲು ಸಾಧ್ಯ? ಈ ಎಲ್ಲ ಪ್ರಶ್ನೆಗಳು ಪ್ರಾದೇಶಿಕ ಭೂಮಾಲೀಕರಿಗೂ ಅನ್ವಯಿಸುತ್ತದೆ. ನಿಜ ಹೇಳಬೇಕೆಂದರೆ ಬಹುತೇಕ ಎಲ್ಲ ಪ್ರಾದೇಶಿಕ ಪಕ್ಷಗಳ ಬೇರುಗಳು ಯಾವುದಾದರೂ ಒಂದು ಭೂಮಾಲೀಕ ಜಾತಿಯಲ್ಲಿದೆ. ಈ ಜಾತಿಗಳು ಹೇಗೋ ಇತರ ಜಾತಿಗಳನ್ನು ತಮ್ಮ ತೆಕ್ಕೆಗೆ ಸೆಳೆದುಕೊಂಡು ಸದೃಢವಾದ ವೋಟ್‌ಬ್ಯಾಂಕ್ ನಿರ್ಮಿಸಿಕೊಂಡಿವೆ. ಎರಡು

ಪ್ರಮುಖ ಸಾಮಾಜಿಕ ಗುಂಪುಗಳನ್ನು ಹೊರತುಪಡಿಸಿ ಇತರ ಗುಂಪುಗಳ ಅಭ್ಯರ್ಥಿಗಳು ತಂತಮ್ಮ ಜಾತಿಗಳಿಂದ ವೋಟ್ ಸೆಳೆದುಕೊಂಡು ಚುನಾವಣೆಯಲ್ಲಿ ಗೆಲುವು ಸಾಧಿಸಲು ನೆರವಾಗುತ್ತಾರೆ. ಅಂತಿಮವಾಗಿ ಪ್ರಾದೇಶಿಕ ಪಕ್ಷಗಳು ತಂತಮ್ಮ ರಾಜ್ಯಗಳನ್ನು ಜಾತಿ ರಾಜ್ಯಗಳನ್ನಾಗಿ ಪರಿವರ್ತಿಸಿಬಿಡುತ್ತವೆ.

ಒಂದು ವೇಳೆ ಯಾವುದಾದರೂ ಒಂದು ಭೂಮಾಲೀಕ ಜಾತಿ ಸಂಖ್ಯಾದೃಷ್ಟಿಯಿಂದ ಕಡಿಮೆಯಿದ್ದು, ಈ ಜಾತಿಯ ಬಳಿ ಅಧಿಕ ಭೂಮಿ ಮತ್ತು ಸ್ಥಳೀಯ ಸಂಸ್ಥೆಗಳನ್ನು ಹೊಂದಿದ್ದು, ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ವಾಸವಾಗಿದ್ದು ತಮ್ಮ ರಾಜ್ಯನಾಯಕರ ಗಮನಸೆಳೆಯುವಲ್ಲಿ ವಿಫಲರಾಗಿದ್ದರೆ, ಅಂತಹ ಜಾತಿಗಳ ನಾಯಕರು ಪ್ರತ್ಯೇಕ ರಾಜ್ಯದ ಬೇಡಿಕೆಯಿಡುತ್ತಾರೆ. ಅಜಿತ್ ಸಿಂಗ್

ಚಂದ್ರಬಾಬು ನಾಯ್ಡು ಯಾರನ್ನು ಪ್ರತಿನಿಧಿಸುತ್ತಾರೆ– ಕಮ್ಮ ಜನಾಂಗವನ್ನೋ ಅಥವಾ ಆಂಧ್ರಪ್ರದೇಶ ರಾಜ್ಯವನ್ನೋ? ಲಾಲೂ, ಯಾದವರ ಪ್ರತಿನಿಧಿಯೋ ಅಥವಾ ಬಿಹಾರ ರಾಜ್ಯದ ಪ್ರತಿನಿಧಿಯೋ? ಓಂ ಪ್ರಕಾಶ್ ಚೌತಾಲಾ ಜಾಟ್‌ಗಳ ನಾಯಕರೋ ಅಥವಾ ಹರಿಯಾಣ ರಾಜ್ಯದ ನಾಯಕರೋ? ಕೇರಳ ರಾಜ್ಯದ ಜನರಿಗಾಗಿ ಮುಲಾಯಂ ಸಿಂಗ್ ಯಾದವ್ ಯಾವ ರೀತಿಯ ಸಾಮಾಜಿಕ ನೀತಿಗಳನ್ನು ಅನುಷ್ಠಾನಗೊಳಿಸಲು ಸಾಧ್ಯ? ಈ ಎಲ್ಲ ಪ್ರಶ್ನೆಗಳು ಪ್ರಾದೇಶಿಕ ಭೂಮಾಲೀಕರಿಗೂ ಅನ್ವಯಿಸುತ್ತದೆ. ನಿಜ ಹೇಳಬೇಕೆಂದರೆ ಬಹುತೇಕ ಎಲ್ಲ ಪ್ರಾದೇಶಿಕ ಪಕ್ಷಗಳ ಬೇರುಗಳು ಯಾವುದಾದರೂ ಒಂದು ಭೂಮಾಲೀಕ ಜಾತಿಯಲ್ಲಿದೆ.

ಪ್ರತ್ಯೇಕ 'ಹುರಿತ್ ಪ್ರದೇಶ'ಕ್ಕಾಗಿ ಬೇಡಿಕೆಯಿಟ್ಟಿರುವುದು ಅಸಲಿ ಜಾಟ್ ರಾಜ್ಯದ ಬೇಡಿಕೆಯಾಗಿದೆ. ವಾಸ್ತವ ಏನೆಂದರೆ, ಬಹುತೇಕ ಪ್ರತ್ಯೇಕ ರಾಜ್ಯಗಳ ಕೂಗು 'ಜಾತಿ ರಾಜ್ಯ'ದ ಪರಿಕಲ್ಪನೆಗಳೇ ಆಗಿರುತ್ತವೆ.

ಆಧುನಿಕತೆ ಮತ್ತು ನೈತಿಕತೆಗೆ ಹೆದರುವ ಈ ಜಾತಿ ನಾಯಕರು ತಮ್ಮ ಪ್ರದೇಶಗಳ ಹಿತ ಕಾಯುವ ಅಧಿನಾಯಕರೆಂದು ಬಿಂಬಿಸಿಕೊಳ್ಳುತ್ತಾರೆ. ಒಟ್ಟಾರೆ ಭಾರತ ಪಾರಂಪರಿಕವಾಗಿ ಹಿಂದುಳಿದಿರುವುದರಿಂದ ಈ ನಾಯಕರು ಕೇಂದ್ರಸರ್ಕಾರಗಳ ಮಲತಾಯಿ ಧೋರಣೆ ಅಥವಾ ಅಲಕ್ಷ್ಯ, ಹಿಂದುಳಿದ ವರ್ಗಗಳ ಇಂತಹ ದುಸ್ಥಿತಿಗೆ ಕಾರಣ ಎಂಬಂತೆ ಬಿಂಬಿಸುತ್ತಾರೆ. ಸಾಮಾನ್ಯ ಜನ ಕೆಲವೊಮ್ಮೆ ಇವರ ಮಾತಿನ ಧಾಟಿಗೆ ಮಾರುಹೋಗುವುದು ಸುಳ್ಳಲ್ಲ.

ಹಾಗಾಗಿ ತೃತೀಯರಂಗ ವಿವಿಧ ಜಾತಿಗಳ ಸಾಮಾಜಿಕ ಗುಂಪುಗಳ ಗಣರಾಜ್ಯವಲ್ಲದೆ ಮತ್ತೇನು ಅಲ್ಲ. ಬಹುತೇಕ ಭೂಮಾಲಿಕತ್ವ ಹೊಂದಿರುವ ಜಾತಿಗಳು ಜನಸಂಖ್ಯಾ ದೃಷ್ಟಿಯಿಂದ ಪ್ರಾದೇಶಿಕ ಎನಿಸಿಕೊಳ್ಳುತ್ತದೆ. ಆಂಧ್ರದಲ್ಲಿ ಕಮ್ಮ ಜನಾಂಗ ಪ್ರಬಲ ಶಕ್ತಿಯಾಗಿದ್ದರೆ, ಉತ್ತರಪ್ರದೇಶದ ಜನರಿಗೆ ಕಮ್ಮ ಜಾತಿಯ ಬಗ್ಗೆ ಏನೂ ಗೊತ್ತಿರುವುದಿಲ್ಲ. ಉತ್ತರಪ್ರದೇಶದ ಬುಂದೇಲ್‌ಖಂಡ್ ಪ್ರಾಂತ್ಯದಲ್ಲಿ ಲೋಧ್ ಜಾತಿ ಭೂಮಾಲೀಕತ್ವ ಹೊಂದಿರುವ ಪ್ರಬಲ ಜಾತಿಯಾಗಿದೆ. ಆದರೆ ಉತ್ತರಪ್ರದೇಶದ ಪೂರ್ವ ಪ್ರಾಂತ್ಯದ ಜನರಿಗೆ ಲೋಧ್ ಜಾತಿಯ ಬಗ್ಗೆ ಹೆಚ್ಚಿನ ತಿಳವಳಿಕೆಯೇ ಇಲ್ಲ.

ಇನ್ನು ಪ್ರಾದೇಶಿಕ ಜಾತಿಗಳ ಅಜೆಂಡಾ ಬಗ್ಗೆ ಚಿಂತಿಸಿ ನೋಡಿ. ತಮ್ಮ ರಾಜ್ಯಗಳ ನಾಯಕರೆಂದು ಹೇಳಿಕೊಳ್ಳುವ ಈ ಪ್ರಬಲ ಜಾತಿನಾಯಕರು ಮೂಲತಃ ಎಲ್ಲ ರೀತಿಯ ಭೂಸುಧಾರಣಾ ನೀತಿಗಳ ವಿರೋಧಿಗಳು. ಭೂಸುಧಾರಣೆಯಲ್ಲಿ ಎರಡು ಪ್ರಮುಖ ವಿಧಗಳನ್ನು ಕಾಣಬಹುದು. ಒಂದು; ಉಳುವವನಿಗೆ ಭೂಮಿಯ ಒಡೆತನ ನೀಡುವುದು. ಎರಡು; ಬೃಹತ್ ಬಂಡವಾಳಶಾಹಿಗಳು ಹೆಚ್ಚು ಹೆಚ್ಚು ಕೃಷಿ ಭೂಮಿಯನ್ನು ಖರೀದಿಸಿ ವೈಜ್ಞಾನಿಕವಾಗಿ ಕಾರ್ಪೊರೇಟ್ ಕೃಷಿ ಕೈಗೊಳ್ಳುವುದು. ತಮ್ಮ ರಾಜ್ಯಗಳ ಹಿತ ಕಾಯುವ ನಾಟಕವಾಡುವ ಪ್ರಾದೇಶಿಕ ಪಕ್ಷಗಳ ನಾಯಕರು, ಈ ಎರಡು ರೀತಿಯ ಭೂಸುಧಾರಣೆಗೆ ತಮ್ಮ ಭೂಮಿಯನ್ನು ನೀಡಲು ಒಪ್ಪುವುದಿಲ್ಲ. ಉಳುವವನೆ ಭೂಮಿಯ ಒಡೆಯನಾಗುವುದು, ಅಥವಾ ಕಾರ್ಪೊರೇಟ್ ಕೃಷಿ ಆರ್ಥಿಕ ದೃಷ್ಟಿಯಿಂದ ಸೂಕ್ತ ಕ್ರಮ. ಆದರೆ ಈ ನಾಯಕರಿಗೆ ಅದು ಬೇಕಿಲ್ಲ.

ಭಾರತದ ಎರಡು ಪ್ರಮುಖ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ವಿಫಲವಾಗಿರುವುದರಿಂದ ಪ್ರಾಂತೀಯತೆಯ ಭೂತ ಕಾಡಲಾರಂಭಿಸಿದೆ. ವಯೋವೃದ್ಧನಾಗಿರುವ ಕಾಂಗ್ರೆಸ್ ಕಾಲಕ್ಕೆ ತಕ್ಕಂತೆ ಬದಲಾಗಿಲ್ಲ. ದೇಶದಲ್ಲಿ ಅತಿವೇಗವಾಗಿ ಬೆಳೆಯುತ್ತಿರುವ ರಾಷ್ಟ್ರೀಯ ಪಕ್ಷ ಬಿಎಸ್‌ಪಿ ಪ್ರಾಂತೀಯತೆಗೆ ಸೂಕ್ತ ಉತ್ತರ ನೀಡಬಲ್ಲದೆ?

"ದಲಿತ್ ಡೈರಿ" ಅಂಕಣ

"ದಲಿತ್ ಡೈರಿ" ಅಂಕಣ ("ಪಯೋನಿಯರ್" ಪತ್ರಿಕೆಯಲ್ಲಿ) ಆರಂಭವಾಗಿ ಇಲ್ಲಿಗೆ ಹತ್ತು ವರುಷಗಳಾದವು. ೧೯೯೮ರ ಏಪ್ರಿಲ್ ೪ರಂದು ಆರಂಭವಾದ ಅಂಕಣವನ್ನು ಎರಡು ಸಲ ಮಾತ್ರ ತಪ್ಪಿಸಿದ್ದೇನೆ. ೨೦೦೨ರ

ಸಂತೃಪ್ತಿಯ ಪಯಣ

ಜನವರಿ ತಿಂಗಳಲ್ಲಿ ನಾನು ಭೋಪಾಲ್‌ನಿಂದ ಫ್ಯಾಕ್ಸ್ ಮಾಡಿದ್ದ ಅಂಕಣ ಸಂಪೂರ್ಣವಾಗಿ ತಲುಪದೆ ಪ್ರಕಟವಾಗಿರಲಿಲ್ಲ. ಇನ್ನೊಮ್ಮೆ ೨೦೦೮ರ ಡಿಸೆಂಬರ್ ತಿಂಗಳಲ್ಲಿ ನಾನು ಜರ್ಮನಿ ಪ್ರವಾಸದಲ್ಲಿದ್ದಾಗ ಗಡುವು ಮುಗಿಯುವುದರೊಳಗಾಗಿ ಅಂಕಣ ಕಳುಹಿಸಲಾಗಿರಲಿಲ್ಲ. ಕೆಲವು ಸಂದರ್ಭಗಳಲ್ಲಿ ಭಾನುವಾರು ಮತ್ತು ಹೋಳಿ ಹಬ್ಬ ಒಂದೇ ದಿನ ಬಂದಾಗ "ಪಯೋನಿಯರ್" ರಜೆಯಲ್ಲಿರುತ್ತಿತ್ತು. ಕೆಲವು ಸಂದರ್ಭಗಳಲ್ಲಿ ನನ್ನ ಅಂಕಣದಲ್ಲಿ ಅತಿಥಿ ಬರಹಗಾರರಿಗೆ ಬರೆಯಲು ಅವಕಾಶ ಮಾಡಿಕೊಟ್ಟಿದ್ದೂ ಇದೆ.

ಕಳೆದ ದಶಕದಲ್ಲಿ ಸುಮಾರು ೪೮೦ ಅಂಕಣಗಳನ್ನು ಬರೆದಿದ್ದೇನೆ. ಹನ್ನೆರಡು ಬಾರಿ ಅಂಕಣ ಬರೆಯುವ ಅವಶ್ಯಕತೆ ಇರಲಿಲ್ಲ. ಈ ಮಧ್ಯೆ "ರಾಷ್ಟ್ರೀಯ ಸಹಾರಾ"ದಲ್ಲಿ ಎರಡು ವರ್ಷಗಳ ಕಾಲ ವಾರದ ಅಂಕಣ ಬರೆಯುತ್ತಿದ್ದೆ. ಈಗ "ನವಭಾರತ್ ಟೈಮ್ಸ್"ನೊಂದಿಗೆ ಕಳೆದ ಮೂರು ವರ್ಷಗಳಿಂದ ವಾರಕ್ಕೆ ಎರಡು ಅಂಕಣ ಬರೆಯುತ್ತಿದ್ದೇನೆ. ಬಹಳಷ್ಟು ಸಲ ಹಿಂದಿ ದೈನಿಕಗಳಿಗೆ ಲೇಖನಗಳನ್ನು ಬರೆದಿದ್ದೇನೆ. ಜೊತೆಗೆ "ಟೈಮ್ಸ್ ಆಫ್ ಇಂಡಿಯಾ," "ಡಿಎನ್‌ಎ," ಮತ್ತಿತರ ಇಂಗ್ಲಿಷ್ ದೈನಿಕಗಳಲ್ಲಿ ಅಂಕಣ ಬರೆಯುವ ಅವಕಾಶ ಕೂಡ ನನಗೆ ದೊರಕಿದೆ. ಕೆಲವು ಸಲ ಶೈಕ್ಷಣಿಕ ನಿಯತಕಾಲಿಕೆಗಳು ಮತ್ತು ವೆಬ್‌ಸೈಟ್‌ಗಳಿಗೆ ಲೇಖನಗಳನ್ನು ಬರೆಯುವ ಅವಕಾಶ ಕೂಡ ಸಿಕ್ಕಿದೆ. ಇದೇ ಅವಧಿಯಲ್ಲಿ "ದಲಿತ್ ಫೋಬಿಯಾ" ಎಂಬ ಪುಸ್ತಕವನ್ನು ಕೂಡ ಪ್ರಕಟಿಸಿದೆ. ೧೯೯೯ರಿಂದ ವಾರಕ್ಕೆ ಕನಿಷ್ಠ ಮೂರು ಅಂಕಣಗಳನ್ನಂತೂ ಬರೆಯುತ್ತಾ ಬಂದಿದ್ದೇನೆ.

ಅಂದರೆ ವಾರಕ್ಕೆ ಮೂರು ವಿಚಾರಗಳ ಬಗ್ಗೆ ಚಿಂತನೆ ಮಾಡಿ ಲೇಖನಗಳನ್ನು ಬರೆಯುವ ಜವಾಬ್ದಾರಿ ನನ್ನ ಮೇಲಿದೆ. ಬರೆಯುವುದಕ್ಕಿಂತ ಚಿಂತಿಸುವುದೇ ಕಷ್ಟಕರ ಕೆಲಸ. ಯಾಕೆಂದರೆ ಚಿಂತನೆ ನಡೆಸುವಾಗ ಮನುಷ್ಯ ಬಹಳಷ್ಟು ಸಲ ತನ್ನೊಂದಿಗೇ ಸಮಸ್ಯೆಯಲ್ಲಿ ಸಿಲುಕಿಕೊಂಡಿರುತ್ತಾನೆ. ಇತರೆ ವಿರೋಧಿಗಳನ್ನು ಎದುರಿಸುವುದಕ್ಕಿಂತ 'ಸ್ವಂತ-ಬಿಕ್ಕಟ್ಟು'ಗಳನ್ನು ಎದುರಿಸುವುದು ಪ್ರಯಾಸದ ಕೆಲಸ.

ನನ್ನ ಹಳ್ಳಿಯ ಕಾಲೇಜಿನಲ್ಲಿ ಬಿ.ಎ ಪದವಿ ಪೂರೈಸಿದ ನಾನು, ನನ್ನ ಸಂಬಂಧಿಕರ ಜೊತೆಗೆ ಸಂಪರ್ಕ ಹೊಂದಿದ್ದು ಆಗಾಗ ಭೇಟಿ ಮಾಡುತ್ತಿರುತ್ತೇನೆ. ಈ ಮಧ್ಯೆ ನಾನು ಹೊಸ ಸಾಮಾಜಿಕ ಗೊಂದಲಗಳನ್ನು ಗಮನಿಸುತ್ತಾ ಬಂದಿದ್ದೇನೆ. ಓಬಿಸಿಗಳನ್ನು ಸಾಮಾಜಿಕ ಸಮಸ್ಯೆಯಾಗಿ ನಾನು ಕಂಡಿದ್ದೇನೆ. ಪ್ರಬಲ ಸಾಮಾಜಿಕ ವರ್ಗವಾಗಿ ಹೊರಹೊಮ್ಮಿದ ಓಬಿಸಿಗಳು ದಲಿತರನ್ನು ತಮಗಿಂತ ಕೆಳಮಟ್ಟದವರು ಎಂದು ಪರಿಭಾವಿಸಿದರು. ಹೀಗಾಗಿ ಇವರಿಗಿಂತ "ಬ್ರಾಹ್ಮಣರೇ ಉತ್ತಮ" ಎಂದು ಯೋಚಿಸಿದ ನಾನು ಈ ಕುರಿತು ಬರೆಯಲು ಆರಂಭಿಸಿದೆ. ನನ್ನ ಚಿಂತನೆಯ ಧಾಟಿಯನ್ನು ದಲಿತ ಬುದ್ಧಿಜೀವಿಗಳು ನಗೆಪಾಟಲಿಗೀಡುಮಾಡಿದರು. ಈಗ ಅದೇ ದಲಿತ ಬುದ್ಧಿಜೀವಿಗಳು ನನಗಿಂತ ಹೆಚ್ಚು ಬ್ರಾಹ್ಮಣಪ್ರಿಯರಾಗಿದ್ದಾರೆ. ಆದರೆ ನಾನು ಸಾಂಪ್ರದಾಯಿಕ ದಲಿತ ಚಿಂತನೆಗೆ ವಿರುದ್ಧವಾಗಿ ಬರೆದದ್ದರಿಂದ ಸಾಕಷ್ಟು ಅವಮಾನ ಅನುಭವಿಸಬೇಕಾಯಿತು.

ಜಾಗತೀಕರಣ ಎಲ್ಲರೂ ಒಪ್ಪಿಕೊಳ್ಳಲೇಬೇಕಾದ ಸತ್ಯ ಎಂಬುದನ್ನು ಮನಗಂಡ ನಾನು ದಲಿತರು ಜಾಗತೀಕರಣವನ್ನು ಸಮಸ್ಯೆಯೆಂದು ಪರಿಗಣಿಸದೆ ಅವಕಾಶ ಎಂದು ತಿಳಿದುಕೊಳ್ಳಬೇಕೆಂದು ಸಲಹೆ ನೀಡಿದೆ. ಜಾಗತೀಕರಣದ ಕಟುಸತ್ಯವನ್ನು ಒಪ್ಪಿಕೊಳ್ಳುವ ಬದಲು ಸಮಯ, ಶಕ್ತಿ ಮತ್ತು ಸಂಪನ್ಮೂಲಗಳನ್ನು ಹಾಳುಮಾಡುವುದರಲ್ಲಿ ಏನೂ ಅರ್ಥವಿಲ್ಲ ಎಂದು ಬರೆದಾಗ ಕೂಡ ನಾನು ಅವಮಾನ ಅನುಭವಿಸಬೇಕಾಯಿತು. ಆಗ ನನಗೆ ಅವಮಾನ ಮಾಡಿದ ಅದೇ ಜನ ಈಗ ಖಾಸಗಿ ಕ್ಷೇತ್ರದಲ್ಲಿ ಸಕಾರಾತ್ಮಕ ಕ್ರಿಯಾ ಯೋಜನೆ ಅಳವಡಿಸಬೇಕೆಂದು ನನ್ನಂತೆ ಬೇಡಿಕೆಯಿಡುತ್ತಿದ್ದಾರೆ. ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳನ್ನು ವಿರೋಧಿಸುತ್ತಾ ಅವರದೇ ಸಂಸ್ಥೆಗಳಲ್ಲಿ ಮೀಸಲಾತಿ ಬಯಸುವುದು ಹೇಗೆ ಸಾಧ್ಯ? ಇನ್ನು ದಲಿತ ಬಂಡವಾಳಶಾಹಿ ವ್ಯವಸ್ಥೆಯ ನನ್ನ ಹೊಸ ಚಿಂತನೆ ಬಹಳಷ್ಟು ಜನರನ್ನು ಅಲುಗಾಡಿಸಿಬಿಟ್ಟಿತು. ದಲಿತರು ಕೇವಲ ಉದ್ಯೋಗಾಸಕ್ತರಾಗದೆ, ಲಕ್ಷಾಂತರ ಮಂದಿ ದಲಿತರು 'ಉದ್ಯೋಗ ನೀಡುವ'ವರಾಗಬೇಕೆನ್ನುವುದು ನನ್ನ ದೃಢವಾದ ನಂಬಿಕೆ.

ಜಾಗತೀಕರಣ ಎಲ್ಲರೂ ಒಪ್ಪಿಕೊಳ್ಳಲೇಬೇಕಾದ ಸತ್ಯ ಎಂಬುದನ್ನು ಮನಗಂಡ ನಾನು ದಲಿತರು ಜಾಗತೀಕರಣವನ್ನು ಸಮಸ್ಯೆಯೆಂದು ಪರಿಗಣಿಸದೆ ಅವಕಾಶ ಎಂದು ತಿಳಿದುಕೊಳ್ಳಬೇಕೆಂದು ಸಲಹೆ ನೀಡಿದೆ. ಜಾಗತೀಕರಣದ ಕಟುಸತ್ಯವನ್ನು ಒಪ್ಪಿಕೊಳ್ಳುವ ಬದಲು ಸಮಯ, ಶಕ್ತಿ ಮತ್ತು ಸಂಪನ್ಮೂಲಗಳನ್ನು ಹಾಳುಮಾಡುವುದರಲ್ಲಿ ಏನೂ ಅರ್ಥವಿಲ್ಲ ಎಂದು ಬರೆದಾಗ ಕೂಡ ನಾನು ಅವಮಾನ ಅನುಭವಿಸಬೇಕಾಯಿತು. ಆಗ ನನಗೆ ಅವಮಾನ ಮಾಡಿದ ಅದೇ ಜನ ಈಗ ಖಾಸಗಿ ಕ್ಷೇತ್ರದಲ್ಲಿ (ಬಹುರಾಷ್ಟ್ರೀಯ ಸಂಸ್ಥೆಗಳು) ಕೂಡ ಸಕಾರಾತ್ಮಕ ಕ್ರಿಯಾ ಯೋಜನೆ ಅಳವಡಿಸಬೇಕೆಂದು ನನ್ನಂತೆ ಬೇಡಿಕೆಯಿಡುತ್ತಿದ್ದಾರೆ. ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳನ್ನು ವಿರೋಧಿಸುತ್ತಾ ಅವರದೇ ಸಂಸ್ಥೆಗಳಲ್ಲಿ ಮೀಸಲಾತಿ ಬಯಸುವುದು ಹೇಗೆ ಸಾಧ್ಯ?

ಇನ್ನು ದಲಿತ ಬಂಡವಾಳಶಾಹಿ ವ್ಯವಸ್ಥೆಯ ನನ್ನ ಹೊಸ ಚಿಂತನೆ ಬಹಳಷ್ಟು ಜನರನ್ನು ಅಲುಗಾಡಿಸಿಬಿಟ್ಟಿತು. ದಲಿತರು ಕೇವಲ 'ಉದ್ಯೋಗಾಸಕ್ತ'ರಾಗದೆ, ಲಕ್ಷಾಂತರ ಮಂದಿ ದಲಿತರು 'ಉದ್ಯೋಗ ನೀಡುವ'ವರಾಗಬೇಕೆನ್ನುವುದು ನನ್ನ ದೃಢವಾದ ನಂಬಿಕೆ. "ಉದ್ಯಮದಲ್ಲಿ ಕೆಲವೇ ವರ್ಗಗಳ ಪ್ರಾಬಲ್ಯವಿರುವಾಗ ಸಮಾಜದಲ್ಲಿ ದಲಿತರು ಸಮಾನತೆ ಬಯಸುವುದು ಸಾಧ್ಯವೆ?" ಎಂದು "ದಲಿತ್ ಡೈರಿ" ಅಂಕಣದ ಮೂಲಕ ಪ್ರಶ್ನೆಗಳನ್ನು ಎತ್ತಿದೆ. ಈ ಅಂಕಣಗಳು ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಅನುವಾದಗೊಂಡು ಪ್ರಕಟಗೊಳ್ಳುವುದರಿಂದ, ದಲಿತ ಬಂಡವಾಳಶಾಹಿ ವ್ಯವಸ್ಥೆಯ ಪರವಾಗಿ ದಕ್ಷಿಣ ಭಾರತದಲ್ಲಿ ಬಹುತೇಕ ಸಹಮತ ಮೂಡಲು ಸಾಧ್ಯವಾಯಿತು. ನಿಜ ಹೇಳಬೇಕೆಂದರೆ, ನನ್ನ ಸೈದ್ಧಾಂತಿಕ ಹೋರಾಟವನ್ನು ರಾಷ್ಟ್ರಮಟ್ಟಕ್ಕೆ ಕೊಂಡೊಯ್ದುವರು ದಕ್ಷಿಣದ ದಲಿತರು.

ಜಮೀನ್ದಾರಿ ಪದ್ಧತಿಗಿಂತ ಬಂಡವಾಳಶಾಹಿ ವ್ಯವಸ್ಥೆ ಉತ್ತಮವಾದುದು ಎಂಬ ನನ್ನ ವಿಚಾರ, ಬುದ್ಧಿಜೀವಿಗಳ ನಡುವೆ ನನ್ನನ್ನು ಅಸ್ಪೃಶ್ಯನನ್ನಾಗಿಸಿತು. "ರಾಜಾ ಭಯ್ಯಾ ಅಥವಾ ರತನ್ ಟಾಟಾ ಈ ಇಬ್ಬರಲ್ಲಿ ನೀವು ಯಾರ ಕೈಕೆಳಗೆ ಉದ್ಯೋಗ ಮಾಡಲು ಬಯಸುತ್ತೀರಾ?" ಎಂಬಂತಹ ಪ್ರಶ್ನೆಗಳನ್ನು ಅಂಕಣದಲ್ಲಿ ಕೇಳಲಾರಂಭಿಸಿದೆ. ರಾಜಾ ಭಯ್ಯಾ ಜಮೀನ್ದಾರಿಕೆಯ ಸಂಕೇತವಾದರೆ, ರತನ್ ಟಾಟಾ ಬಂಡವಾಳಶಾಹಿ ವ್ಯವಸ್ಥೆಯ ಪೋಸ್ಟರ್ ಬಾಯ್. ಈಗ ನನ್ನ ವಿಚಾರಧಾರೆಯನ್ನು ಒಪ್ಪುವ ಈ ಬುದ್ಧಿಜೀವಿಗಳು ನನ್ನನ್ನು ನೇರವಾಗಿ ನೋಡುವುದೂ ಇಲ್ಲ. ಆದರೆ, ಹಲವಾರು ವರ್ಷಗಳ ಕಾಲ ನಾನು ಇವರಿಂದ ಅವಮಾನ ಅನುಭವಿಸಬೇಕಾಯಿತು.

ದಲಿತರು ಭಾರತೀಯ ಭಾಷೆಗಳನ್ನು ಬಿಟ್ಟು ಇಂಗ್ಲಿಷ್ ಭಾಷೆಯನ್ನು ರೂಢಿಸಿಕೊಳ್ಳಬೇಕೆಂಬ ವಿಚಾರ, ನನ್ನ ಹಲವಾರು ಒಳ್ಳೆಯ ಸ್ನೇಹಿತರು ನನ್ನ ಮೇಲೆ ಕೆಂಡ ಕಾರುವಂತಹ ವಾತಾವರಣ ನಿರ್ಮಿಸಿತು. ಆದರೆ ಸ್ವಲ್ಪ ಗಮನಿಸಿ ನೋಡಿ ಇಂಗ್ಲಿಷ್ ಭಾಷೆಯನ್ನು ವಿರೋಧಿಸುವ ಬಹುತೇಕ ಮಂದಿ ತಮ್ಮ ನಾಯಿಮರಿಗಳಿಗೆ ಇಂಗ್ಲಿಷ್ ಹೆಸರನ್ನಿಟ್ಟು, ಅದೇ ಭಾಷೆಯಲ್ಲಿಯೇ ಮಾತನಾಡಿಸುತ್ತಿರುತ್ತಾರೆ. ಹೀಗೆ ಕಳೆದ ಒಂದು ದಶಕದಲ್ಲಿ "ದಲಿತ ಡೈರಿ" ಹಲವಾರು ಕಾಳಗಗಳಿಗೆ ವೇದಿಕೆಯಾಗಿದೆ. ಕ್ಲೈವ್‌ನ ಖಡ್ಗದಿಂದ ಭಾರತದ ಸ್ವಾತಂತ್ರ್ಯ ಹರಣವಾಯಿತು. ಆದರೆ ಅದೇ ಖಡ್ಗದಿಂದ ದಲಿತರ ಸ್ವಾತಂತ್ರ್ಯಕ್ಕೆ ದಾರಿ ಸಿಕ್ಕಿದ್ದೂ ನಿಜ ಅಲ್ಲವೇ?

ಈ ಅಂಕಣವನ್ನು ನಾನು ನನ್ನ ಗುರು ಚಂದನ್ ಮಿತ್ರ ಅವರಿಗೆ ಸಮರ್ಪಿಸುತ್ತೇನೆ. ಇಡೀ ಜಗತ್ತಿನಲ್ಲಿಯೇ ಮೊದಲ ಬಾರಿಗೆ ದಲಿತನೋರ್ವನಿಗೆ ಅಂಕಣ ಬರೆಯುವ ಮಹತ್ವದ ಅವಕಾಶ ಮಾಡಿಕೊಟ್ಟ ಅವರು ಕೂಡ ಇತರರಿಂದ ನಿಂದನೆ, ನೋವು ಅನುಭವಿಸಿರುತ್ತಾರೆ. ಅದೇನೇ ಇರಲಿ, ಚಂದನ್ ಮಿತ್ರ ಇತರ ಸಂಪಾದಕರಿಗೆ ಮಾದರಿಯಾಗುತ್ತಾರೆ ಎಂಬ ಆಶಾವಾದ ನನ್ನದು. □

ಬುದ್ಧಾಯಣ

೪೪

'ಕುಮಾರ, ನೀನು ಈ ಬೇವಿನ ಗಿಡದ ಬಗ್ಗೆ ವರ್ತಿಸಿದಂತೆಯೇ, ನಿನ್ನ ರಾಷ್ಟ್ರದ ಪ್ರಜೆಗಳೂ ಕೂಡ; ಈ ಕುಮಾರನು ಕೋಪಿಷ್ಠನಾಗಿದ್ದಾನೆ. ಕಠೋರ ಸ್ವಭಾವದವನಾಗಿದ್ದಾನೆ. ಈತ ದೊಡ್ಡವನಾಗಿ ರಾಜನಾದ ಮೇಲೆ ಇದೇ ಸ್ವಭಾವವು ಮುಂದುವರೆದರೆ ನಮ್ಮಗಳ ಗತಿ ಏನು? ಇವನಿಂದ ನಮ್ಮ ಉನ್ನತಿ ಸಾಧ್ಯವಿಲ್ಲವೆಂದು ಚಿಂತಿಸಿ ನಿನಗೆ ರಾಜ್ಯವನ್ನು ಕೊಡಲು ಬಿಡುವುದಿಲ್ಲ. ಒಂದು ಪಕ್ಷ ನೀನು ಶಸ್ತ್ರಗಳ ಬಲದಿಂದ ರಾಜನಾದರೂ ಕೂಡ ಬೇವಿನ ಗಿಡದಂತೆ ನಿನ್ನನ್ನು ಕಿತ್ತು ಹೊಸಕಿ ಹಾಕುತ್ತಾರೆ. ಆದುದರಿಂದ ಬೇವಿನ ಗಿಡದ ಸ್ವಭಾವವನ್ನು ಬಿಟ್ಟು ಶಾಂತಿ, ಮತ್ತು ಕರುಣೆಯಿಂದ ಕೂಡಿದವನಾಗು.

ಸಿ ಎಚ್. ರಾಜಶೇಖರ್

ಬೇವಿನೆಲೆಯನ್ನೇಕೆ ಜಗಿದು ಉಗಿದೆ...!?

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ವೇಸಾಲಿಯ ಮಹಾವನದ ಕೂಟಗಾರ ಶಾಲೆಯಲ್ಲಿ ತಂಗಿದ್ದರು. ಅದಕ್ಕೂ ಬಲು ಹಿಂದೆ ವಾರಾಣಾಸಿ ರಾಜ್ಯವನ್ನು ಬ್ರಹ್ಮದತ್ತನೆಂಬ ರಾಜನು ಆಳುತ್ತಿದ್ದ. ಆ ಸಮಯದಲ್ಲಿ ಬೋಧಿಸತ್ವರು ಉದೀಚ್ಯ ಬ್ರಾಹ್ಮಣನ ಮನೆಯಲ್ಲಿ ಹುಟ್ಟಿದರು. ಬೆಳೆದು ದೊಡ್ಡವರಾದ ಬಳಿಕ ತಕ್ಷಶಿಲೆಗೆ ತೆರಳಿ ಶ್ರೇಷ್ಠ ಗುರುವಿನ ಬಳಿ ಮೂರು ವೇದಗಳು ಮತ್ತು ಎಲ್ಲ ವಿದ್ಯೆಗಳನ್ನು ಕಲಿತು, ಮನೆಗೆ ಹಿಂದಿರುಗಿದರು. ತಂದೆ ತಾಯಿಗಳು ಬದುಕಿರುವ ತನಕ ಅವರ ಸೇವೆಯನ್ನು ಮಾಡುತ್ತಿದ್ದರು. ಅವರು ಕಾಲವಾದ ನಂತರ ಭಿಕ್ಷುವಾಗಿ ಹಿಮಾಲಯಕ್ಕೆ ತೆರಳಿದರು.

ದೀರ್ಘಕಾಲ ಅಲ್ಲಿದ್ದು ತಾವು ಸಾಧಿಸಬೇಕಾದ್ದನ್ನು ಸಾಧಿಸಿಯಾದ ಮೇಲೆ ಒಮ್ಮೆ ವಾರಾಣಸಿಗೆ ಬಂದರು. ಅಂದು ರಾತ್ರಿಯನ್ನು ರಾಜ್ಯೋದ್ಯಾನದಲ್ಲಿ ಕಳೆದರು. ಮರು ದಿನ ಬೆಳಗ್ಗೆ ಚನ್ನಾಗಿ ಚೀವರವನ್ನು ಉಟ್ಟ ಆ ತೇಜೋಮಯನಾದ ಭಿಕ್ಷುವು ಅರಮನೆಯ ಮುಂದೆ ಭಿಕ್ಷೆ ಬೇಡಲು ಬರುತ್ತಿದ್ದರು.

ಅದೆ ಸಂದರ್ಭದಲ್ಲಿ ರಾಜನು ತನ್ನ ಅಂತಃಪುರದ ಕಿಟಿಕೆಯ ಮಲಕ ರಾಜ ಬೀದಿಯನ್ನು ಎಂದಿನಂತೆ ವೀಕ್ಷಿಸುತ್ತಿದ್ದನು. ಆಗ ಬೋಧಿಸತ್ವರ ನಡಿಗೆಯ ಸಿಂಹ ಗಾಂಭೀರ್ಯವನ್ನು ಕಂಡು ಪ್ರಸನ್ನನಾದನು. ಈ ತಪಸ್ವಿಯು ಇಂದ್ರಿಯಗಳನ್ನು ಶಾಂತಗೊಳಿಸಿದವನೂ ಮತ್ತು ಶಾಂತ ಮನಸ್ಕನೂ ಆಗಿದ್ದಾನೆ. ನಡೆದರೆ ಕೆಳಗೆ ಎರಡು ಮಾರು ದೂರದವರೆಗೆ ಮಾತ್ರ ದೃಷ್ಟಿಹರಿಸುತ್ತಾನೆ. ಹೆಜ್ಜೆ ಹೆಜ್ಜೆಗೆ ಒಂದೊಂದು ಸಾವಿರ ಚಿನ್ನದ ನಾಣ್ಯ ತುಂಬಿದ ಚೀಲವನ್ನಿಡುತ್ತ ಸಿಂಹದಂತೆ ನೆಡೆದು ಬರುತ್ತಿರುವಂತೆ ಕಾಣುತ್ತದೆ.

ಶಾಂತ ಧರ್ಮವೆಂಬ ವಸ್ತುವೇನಾದರೂ ಎಲ್ಲಿಯಾದರೂ ಇದ್ದರೆ ಅದು ಇವನ ಹೃದಯದಲ್ಲಿರಬೇಕು ಎಂದು ತೀರ್ಮಾನಿಸಿದನು. ತನ್ನ ಅಮಾತ್ಯದ ಕಡೆ ನೊಡಲು ಆತ:

"ದೇವ. ಏನಪ್ಪಣೆ?"

"ಅಗೋ, ರಾಜ ಬೀದಿಯಲ್ಲಿ ಸಿಂಹ ಗಾಂಭೀರ್ಯದಿಂದ ನೆಡೆದು ಭಿಕ್ಷೆಗಾಗಿ ಸಾಗುತ್ತಿರುವ ಆ ಭಿಕ್ಷುವನ್ನು ಕರೆದು ತಾ!" ಎನ್ನಲು ಆತ:

"ಪ್ರಭು, ಆಗಲಿ!" ಎಂದು ಹೇಳಿ ಬೋಧಿಸತ್ವರ ಬಳಿಗೆ ಬಂದು ಅವರಿಗೆ ವಂದಿಸಿ ಅವರ ಭಿಕ್ಷಾಪಾತ್ರೆಯನ್ನು ವಿನಯವಾಗಿ ಕೈಗೆ ತೆಗೆದುಕೊಂಡು:

"ಮಹಾ ಪುಣ್ಯವಂತನೇ, ನಿನಗೆ ವಂದನೆ!"

'ಮಿತ್ರ, ಏನು ಸಮಾಚಾರ?'

"ಭಂತೇ, ಮಹಾರಾಜರು ತಮ್ಮನ್ನು ಅರಮನೆಗೆ ಭಿಕ್ಷೆಗಾಗಿ ಕರೆತರಲು ಆಜ್ಞೆ ಮಾಡಿದ್ದಾರೆ!" ಎನ್ನಲು ಬೋಧಿಸತ್ವರು ನಸುನಕ್ಕು ಅರಮನೆಯನ್ನು ಪ್ರವೇಶಿಸಿದರು.

ರಾಜನು ಅವರನ್ನು ಎದುರುಗೊಂಡು ವಂದಿಸಿದ. ಶ್ವೇತಚ್ಛತ್ರದಿಂದ ಕೂಡಿದ ಸಿಂಹಾಸನದ ಮೇಲೆ ಕೂರಿಸಿದ. ತನಗಾಗಿ ಮಾಡಿದ್ದ ನಾನಾ ವಿಧವಾದ ಭಕ್ಷ್ಯ ಭೋಜನಗಳನ್ನು ಉಣ ಬಡಿಸಿ ಉಪಚರಿಸಿದ. ಆ ನಂತರ:

"ಭಂತೆ, ಎಲ್ಲಿದ್ದೀರಿ? ಎಲ್ಲಿಂದ ಬಂದಿರಿ?" ಎನ್ನಲು

"ಮಹಾರಾಜ, ನಾವು ಹಿಮಾಲಯ ವಾಸಿಗಳು!"

"ಈಗ ಎಲ್ಲಿಗೆ ಹೋಗುತ್ತಿರುವಿರಿ?"

"ಮಹಾರಾಜ, ಮಳೆಗಾಲದ ಋತುವು ಕಳೆಯುವ ಸಲುವಾಗಿ ಅನುಕೂಲವಾದ ವಾಸಸ್ಥಳವನ್ನು ಹುಡುಕಿಕೊಂಡು ಹೋಗುತ್ತಿದ್ದೇವೆ.!"

"ಭಂತೇ, ಹಾಗಾದರೆ ಕೃಪೆ ತೋರಿ ನಮ್ಮ ಉದ್ಯಾನದಲ್ಲಿಯೇ ಇರಿ!" ಎನ್ನಲು ಅವರು ಒಪ್ಪಿದರು. ಅವರು ತಂಗಲು ಬೇಕಾದ ಎಲ್ಲ



ವ್ಯವಸ್ಥೆಯನ್ನೂ ಮಾಡಿದ ಬಳಿಕ ಅವರ ಸೇವೆಗಾಗಿ ಒಬ್ಬ ಸೇವಕನನ್ನು ನೇಮಿಸಿದ. ಅಂದಿನಿಂದ ಬೋಧಿಸತ್ವರು ಉದ್ಯಾನದಲ್ಲಿ ಆಶ್ರಯ ಪಡೆದು ತಂಗಿದರು. ರಾಜನು ನಿತ್ಯವೂ ಎರಡು ಮೂರು ಬಾರಿ ಆಶ್ರಮಕ್ಕೆ ಬಂದು ಬೋಧಿಸತ್ವರ ಯೋಗಕ್ಷೇಮ ವನ್ನು ವಿಚಾರಿಸಿಕೊಳ್ಳುತ್ತಿದ್ದ. ಬಳಿಕ ನಿತ್ಯವು ಅವರಿಂದ ಧರ್ಮೋಪದೇಶವನ್ನು ಪಡೆಯುತ್ತಿದ್ದ. ದಿನಗಳು ಹೀಗೆಯೇ ಉರುಳಲು ರಾಜನಿಗೆ ಬೋಧಿಸತ್ವರ ಬಗ್ಗೆ ಅಪಾರ ಗೌರವ ಮೂಡಿತು.

ಹೀಗಿರಲು ಆ ರಾಜನಿಗೆ ಒಬ್ಬ ದುಷ್ಟ ಮಗನಿದ್ದ. ಅವನು ಮಹಾಕೋಪಿಯು ಪ್ರಚಂಡನು ಮತ್ತು ಕಠೋರ ಸ್ವಭಾವದಿಂದ ಕೂಡಿವನಾಗಿದ್ದ. ದೊಣ್ಣೆಯ ಪೆಟ್ಟುತಿಂದ ವಿಷಸರ್ಪದಂತೆ ಯಾವಾಗಲೂ ಕೋಪದಿಂದ ಉರಿಯುತ್ತಿದ್ದ. ಯಾವೊಬ್ಬನೂ ಆತನ ಮುಂದೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಲು ಸಾಧ್ಯವಾಗುತ್ತಿರಲಿಲ್ಲ. ಸ್ವತಃ ತಂದೆ ತಾಯಿಗಳಾಗಲಿ, ಬಂಧು ಬಳಗದವರಾಗಲಿ– ಸ್ನೇಹಿತರಾಗಲಿ ತಿಳುವಳಿಕೆಯ ಮಾತನ್ನು ಹೇಳಲಾಗುತ್ತಿರಲಿಲ್ಲ. ಆಗ ರಾಜನು ಹೀಗೆ ಯೋಚಿಸಿದ.

'ಈ ಶೀಲವಂತ ಬೋಧಿಸತ್ವರ ಹೊರೆತು ನನ್ನ ಕುಮಾರನನ್ನು ಬೇರ್‍ಯಾರೂ ವಿನಯಶಾಲಿಯನ್ನಾಗಿ ಮಾಡಲಾರರು!' ಎಂದು ತೀರ್ಮಾನಿಸಿದ. ಒಂದು ಗೊತ್ತಾದ ದಿನ ತನ್ನ ಕುಮಾರನೊಂದಿಗೆ ಬೋಧಿಸತ್ವರನ್ನು ಸಂಧಿಸಿ ವಿಷಯವನ್ನು ವಿವರಿಸಿ:

"ಭಂತೇ, ಈ ನನ್ನ ಕುಮಾರನನ್ನು ನಾನು ಬಗ್ಗಿಸುವಲ್ಲಿ ಸೋತಿದ್ದೇನೆ. ತಾವೇ ಹೇಗಾದರೂ ಮಾಡಿ ಇತನನ್ನು ಪಳಗಿಸಬೇಕು!' ಎಂದು ಹೇಳಿ ಕುಮಾರನನ್ನು ಅವರಿಗೆ ಒಪ್ಪಿಸಿದ.

ಅಂದಿನಿಂದ ಆ ಕುಮಾರನು ಬೋಧಿಸತ್ವರ ಆಶ್ರಮದಲ್ಲಿ ಇರತೊಡಗಿದ. ಒಂದು ಮುಂಜಾನೆ ಆತನೊಂದಿಗೆ ವಾಯುವಿಹಾರ ಮಾಡುತ್ತಿದ್ದ ಸಂದರ್ಭದಲ್ಲಿ ಹಾದಿ ಬದಿಯ ವನದಲ್ಲಿ ಒಂದೊಂದು ಕಡೆ ಒಂದು ಎಲೆಯಿಂದ ಕೂಡಿದ ಹಾಗೂ ಮತ್ತೊಂದು ಕಡೆ ಎರಡು ಎಲೆಗಳಿಂದ ಕೂಡಿದ ಬೇವಿನ ಗಿಡವನ್ನು ಬೋಧಿಸತ್ವರು ಕಂಡರು. ಆ ಕುಮಾರನನ್ನು ಕುರಿತು:

"ಕುಮಾರ, ಈ ಗಿಡದ ಎಲೆಯನ್ನು ತಿಂದು ಇದರ ರುಚಿಯನ್ನು ನೋಡು!"

ಎನ್ನಲು ಆತ ಒಂದು ಎಲೆಯನ್ನು ಕಿತ್ತು ಬಾಯಲ್ಲಿಟ್ಟುಕೊಂಡು ಜಗಿಯ ತೊಡಗಿದ. ಅದರ ವಿಷಮಯ ರುಚಿಯು ನಾಲಿಗೆಗೆ ಸ್ಪರ್ಶಿಸಲು ಮುಖವನ್ನು ಕಿವಿಚಿಕೊಂಡು "ಥೂ" ಎಂದು ಬೇವಿನ ಎಲೆಯನ್ನು ಭೂಮಿಯ ಮೇಲೆ ಉಗುಳಿದ.

"ಕುಮಾರ, ಏಕೆ ಆ ಎಲೆಯನ್ನು ಜಗಿದು ತಕ್ಷಣವೇ ಉಗಿದೆ?"

"ಭಂತೇ ಈ ಗಿಡವು ಈಗಲೇ ಹಾಲಾಹಲ ವಿಷಕ್ಕೆ ಸಮನಾಗಿದೆ. ಈ ಗಿಡವು ದೊಡ್ಡದಾಗಿ, ಮರವಾಗಿ ಬೆಳೆದ ಮೇಲೆ ಎಷ್ಟು ಜನರ ಪ್ರಾಣವನ್ನು ತೆಗೆಯಬಹುದು?" ಎನ್ನುತ್ತಾ ಆ ಬೇವಿನ ಗಿಡವನ್ನು ಕಿತ್ತು ಕಾಲಿನಿಂದ ಹೊಸಕಿ ಹಾಕುತ್ತಾ:

ಈ ಗಿಡದಲ್ಲಿ ಒಂದೇ ಎಲೆ ಇದೆ. ಅದು ಭೂಮಿಯಿಂದ ಕೇವಲ ನಾಲ್ಕು ಅಂಗುಲದಷ್ಟು ಎತ್ತರವಿದೆ. ಆಕಸ್ಮಾತ್ ಇದು ಬೆಳೆದು ಹೆಮ್ಮರವಾದರೆ ಇನ್ನೆಂಥಹ ವಿನಾಶಕಾರಿಯಾಗಬಹುದು? ಎಂದ. ಅದನ್ನು ಸೂಕ್ಷ್ಮವಾಗಿ ಗಮನಿಸಿದ ಬೋಧಿಸತ್ವರು:

"ಕುಮಾರ, ಆ ಗಿಡವನ್ನೇಕೆ ನಾಶ ಮಾಡಿದೆ?"

"ಭಂತೇ, ನನಗೂ ಮತ್ತು ಇತರರಿಗೂ ವಿನಾಶಕಾರಿಯಾದ ಈ ಗಿಡವನ್ನು ನಾಶಗೊಳಿಸುವುದು ನ್ಯಾಯ ಸಮ್ಮತವಲ್ಲವೆ?"

"ಕುಮಾರ, ಹಾಗಾದರೆ ನಿನ್ನ ದುಷ್ಟತನವನ್ನೂ ನಾಶಗೊಳಿಸುವುದು ಧರ್ಮ ಸಮ್ಮತವಲ್ಲವೆ?"

"ಭಂತೇ, ಅದು ಹೇಗೆ?'

'ಕುಮಾರ, ನೀನು ಈ ಬೇವಿನ ಗಿಡದ ಬಗ್ಗೆ ವರ್ತಿಸಿದಂತೆಯೇ, ನಿನ್ನ ರಾಷ್ಟ್ರದ ಪ್ರಜೆಗಳೂ ಕೂಡ; ಈ ಕುಮಾರನು ಕೋಪಿಷ್ಠನಾಗಿದ್ದಾನೆ. ಕಠೋರ ಸ್ವಭಾವದವನಾಗಿದ್ದಾನೆ. ಈತ ದೊಡ್ಡವನಾಗಿ ರಾಜನಾದ ಮೇಲೆ ಇದೇ ಸ್ವಾಭಾವವು ಮುಂದುವರೆದರೆ ನಮ್ಮಗಳ ಗತಿ ಏನು? ಇವನಿಂದ ನಮ್ಮ ಉನ್ನತಿ ಸಾಧ್ಯವಿಲ್ಲವೆಂದು ಚಿಂತಿಸಿ ನಿನಗೆ ರಾಜ್ಯವನ್ನು ಕೊಡಲು ಬಿಡುವುದಿಲ್ಲ. ಒಂದು ಪಕ್ಷ ನೀನು ಶಸ್ತ್ರಗಳ ಬಲದಿಂದ ರಾಜನಾದರೂ ಕೂಡ ಬೇವಿನ ಗಿಡದಂತೆ ನಿನ್ನನ್ನು ಕಿತ್ತು ಹೊಸಕಿ ಹಾಕುತ್ತಾರೆ. ಆದುದರಿಂದ ಬೇವಿನ ಗಿಡದ ಸ್ವಭಾವವನ್ನು ಬಿಟ್ಟು ಶಾಂತಿ, ಮೈತ್ರಿ ಮತ್ತು ಕರುಣೆಯಿಂದ ಕೂಡಿದವನಾಗು. ಇದರಿಂದ ಮೊದಲನೆಯದಾಗಿ ನಿನ್ನನ್ನು ನೀನು ರಕ್ಷಿಸಿಕೊಳ್ಳುವೆ, ಎರಡನೆಯದಾಗಿ ನಿನ್ನನ್ನು ನಂಬಿದ ಪ್ರಜೆಗಳನ್ನು ರಕ್ಷಿಸುವ ಧರ್ಮರಾಜನಾಗುವೆ".

"ಕುಮಾರ, ಹಾಗಾದರೆ ಈಗ ಹೇಳು: ನೀನು ಬೇವಿನ ವನದಂತಾಗುವೆಯೋ?

ಅಥವಾ ಹೂವಿನ ವನದಂತಾಗುವೆಯೋ?!"

"ಭಂತೇ, ನಾನು ಹೂವಿನ ವನದಂತಾಗುದೆ...!!" ಎಂದ. ಆಗ ಬೋಧಿಸತ್ವರು ಪ್ರಸನ್ನರಾಗಿ:

"ಕುಮಾರ, ಹಾಗಾದರೆ ನನ್ನ ಮಾತನ್ನು ಏಕಾಗ್ರಚಿತ್ತದಿಂದ ಆಲಿಸು, ಮತ್ತು ಬದುಕಿನಲ್ಲಿ ಆಚರಣೆಗೆ ತಾ. ಸಕಲ ಪ್ರಾಣಿಗಳ ಬಗ್ಗೆ ಕ್ರೂರಿಯಾಗಬೇಡ. ದುಸ್ಸಾಹಸಿಯಾಗಬೇಡ, ಇತರರಿಗೆ ತೊಂದರೆ ಕೊಡಬೇಡ. ಕಠೋರವಾದ ಮಾತನ್ನಾಡಬೇಡ. ಅದು ಜನ್ಮವಿತ್ತ ತಂದೆ ತಾಯಿಗಳಿಗೂ ಅಪ್ರಿಯವಾದದ್ದು. ಆಗಿರುವಲ್ಲಿ ಬಂಧು ಮಿತ್ರರು ಸೋದರ ಸೋದರಿಯರು ಮತ್ತು ಹೆಂಡತಿ ಮಕ್ಕಳ ಪಾಡೇನು? ಅದು ಎಂದಿಗೂ ಸಂತೋಷವನ್ನು ತರಲಾರದು. ಕಚ್ಚಲು ಬಂದ ಸರ್ಪದಂತೆ, ಕಾಡಿನಲ್ಲಿ ಸುಲಿಗೆ ಮಾಡಲು ಸಿದ್ಧನಾಗಿರುವ ಕಳ್ಳನಂತೆ ಹಾಗೂ ತಿನ್ನಲು ಬರುವ ನರಭಕ್ಷಕನಂತೆ ಭಾವೋದ್ವೇಗಕ್ಕೆ ಒಳಗಾಗಬೇಡ. ಕೋಪಿಷ್ಠನಾದ ಮನುಷ್ಯನು ಪೂರ್ಣಚಂದ್ರನಂತೆ ಸುಂದರ ಮುಖವುಳ್ಳವನಾಗಿದ್ದರೂ ಬೆಂಕಿಯಿಂದ ಸುಟ್ಟ ಕಮಲದಂತೆ ಕಾಣುತ್ತಾನೆ. ಕೋಪದ ಕಾರಣದಿಂದಲೇ ಮನುಷ್ಯರು ಆಯುಧವನ್ನು ಹಿಡಿಯುತ್ತಾರೆ. ಒಬ್ಬರನ್ನೊಬ್ಬರು ಹಿರಿದು ಕೊಲ್ಲುತ್ತಾರೆ. ಸಂದಿಗ್ಧ ಪರಿಸ್ಥಿತಿಯನ್ನು ಶಾಂತರಾಗಿ ಪರಿಹರಿಸಿಕೊಳ್ಳುವಲ್ಲಿ ವಿಫಲರಾಗಿ ವಿಷವನ್ನು ತಿನ್ನುತ್ತಾರೆ. ನೇಣು ಹಾಕಿಕೊಳ್ಳುತ್ತಾರೆ. ಪ್ರಪಾತಕ್ಕೆ ಬೀಳುತ್ತಾರೆ. ಈ ರೀತಿ ಕೋಪಕ್ಕೆ ತುತ್ತಾಗಿ ಸತ್ತವರು ಮರುಜನ್ಮದಲ್ಲಿ ನರಕದ ಸ್ಥಿತಿಯಲ್ಲಿ ಜನಿಸುತ್ತಾರೆ. ಆಕಸ್ಮಾತು ಮನುಷ್ಯರಾಗಿ ಹುಟ್ಟಿದ್ದೇ ಆದರೆ ನಿತ್ಯ ನಿರಂತರ ದುಃಖಿಗಳಾಗಿರುತ್ತಾರೆ!"

"ಕುಮಾರ, ಆದುದರಿಂದ ಸಕಲ ಹಿತಚಿಂತಕನಾಗು. ಮೈತ್ರಿ ಭಾವವನ್ನು ಹೊಂದಿದವನಾಗು. ಕೋಮಲ ಮನವುಳ್ಳವನಾಗು. ಏಕೆಂದರೆ, ನರಕದ ಸ್ಥಿತಿಯಿಂದ ಮುಕ್ತನಾಗಲು ಇದಲ್ಲದೆ ಅನ್ಯ ಮಾರ್ಗವಿಲ್ಲ ನೀನು ಒಳ್ಳೆಯವನಾಗಬೇಕಾಗಿರುವುದು ಮೊದಲು ನಿನ್ನ ಒಳಿತಿಗಾಗಿ ಎಂಬ ಸತ್ಯವನ್ನು ಅರಿತುಕೋ!" ಎನ್ನಲು ಆ ಕುಮಾರನಿಗೆ ತನ್ನ ತಪ್ಪಿನ ಅರಿವು ಮೂಡಿತು.

'ಅಂದಿನಿಂದ ಆತ ನಿಜಕ್ಕೂ ಹೂವಿನ ತೋಟದಂತಾದ...!! □

> **"ಕುಮಾರ, ಹಾಗಾದರೆ ಈಗ ಹೇಳು: ನೀನು ಬೇವಿನ ವನದಂತಾಗುವೆಯೋ? ಅಥವಾ ಹೂವಿನ ವನದಂತಾಗುವೆಯೋ?!" "ಭಂತೇ, ನಾನು ಹೂವಿನ ವನದಂತಾಗುವೆ...!!" ಎಂದ. ಆಗ ಬೋಧಿಸತ್ವರು ಪ್ರಸನ್ನರಾಗಿ: "ಕುಮಾರ, ಹಾಗಾದರೆ ನನ್ನ ಮಾತನ್ನು ಏಕಾಗ್ರಚಿತ್ತದಿಂದ ಆಲಿಸು, ಮತ್ತು ಬದುಕಿನಲ್ಲಿ ಆಚರಣೆಗೆ ತಾ. ಸಕಲ ಪ್ರಾಣಿಗಳ ಬಗ್ಗೆ ಕ್ರೂರಿಯಾಗಬೇಡ. ದುಸ್ಸಾಹಸಿಯಾಗಬೇಡ, ಇತರರಿಗೆ ತೊಂದರೆ ಕೊಡಬೇಡ. ಕಠೋರವಾದ ಮಾತನ್ನಾಡಬೇಡ. ಅದು ಜನ್ಮವಿತ್ತ ತಂದೆ ತಾಯಿಗಳಿಗೂ ಅಪ್ರಿಯವಾದದ್ದು. ಆಗಿರುವಲ್ಲಿ ಬಂಧು ಮಿತ್ರರು ಸೋದರ ಸೋದರಿಯರು ಮತ್ತು ಹೆಂಡತಿ ಮಕ್ಕಳ ಪಾಡೇನು? ಅದು ಎಂದಿಗೂ ಸಂತೋಷವನ್ನು ತರಲಾರದು. ಕಚ್ಚಲು ಬಂದ ಸರ್ಪದಂತೆ, ಕಾಡಿನಲ್ಲಿ ಸುಲಿಗೆ ಮಾಡಲು ಸಿದ್ಧನಾಗಿರುವ ಕಳ್ಳನಂತೆ ಭಾವೋದ್ವೇಗಕ್ಕೆ ಒಳಗಾಗಬೇಡ. ಕೋಪಿಷ್ಠನಾದ ಮನುಷ್ಯನು ಪೂರ್ಣಚಂದ್ರನಂತೆ ಸುಂದರ ಮುಖವುಳ್ಳವನಾಗಿದ್ದರೂ ಬೆಂಕಿಯಿಂದ ಸುಟ್ಟ ಕಮಲದಂತೆ ಕಾಣುತ್ತಾನೆ. ಕೋಪದ ಕಾರಣದಿಂದಲೇ ಮನುಷ್ಯರು ಆಯುಧವನ್ನು ಹಿಡಿಯುತ್ತಾರೆ. ಒಬ್ಬರನ್ನೊಬ್ಬರು ಹಿರಿದು ಕೊಲ್ಲುತ್ತಾರೆ. ಸಂದಿಗ್ಧ ಪರಿಸ್ಥಿತಿಯನ್ನು ಶಾಂತರಾಗಿ ಪರಿಹರಿಸಿಕೊಳ್ಳುವಲ್ಲಿ ವಿಫಲರಾಗಿ ವಿಷವನ್ನು ತಿನ್ನುತ್ತಾರೆ. ನೇಣು ಹಾಕಿಕೊಳ್ಳುತ್ತಾರೆ. ಪ್ರಪಾತಕ್ಕೆ ಬೀಳುತ್ತಾರೆ. ಈ ರೀತಿ ಕೋಪಕ್ಕೆ ತುತ್ತಾಗಿ ಸತ್ತವರು ಮರುಜನ್ಮದಲ್ಲಿ ನರಕದ ಸ್ಥಿತಿಯಲ್ಲಿ ಜನಿಸುತ್ತಾರೆ. ಆಕಸ್ಮಾತು ಮನುಷ್ಯರಾಗಿ ಹುಟ್ಟಿದ್ದೇ ಆದರೆ ನಿತ್ಯ ನಿರಂತರ ದುಃಖಿಗಳಾಗಿರುತ್ತಾರೆ!"**

'SAMVADA' Kannada Monthly, MAY 2009 RNI-KAR KAN/2002/9246 CPMG/KA/BGW-706/2009-11
Office of Posting: RAJAJINAGAR HO, Date of Posting: 27-28 of Every Month

ಅಂಬೇಡ್ಕರ್ ಹಬ್ಬ



2009